
ಕೊನೆ ಇಲ್ಲದ ದುರಾಸೆಯಿಂದ ನಾವು ಮಾಡುತ್ತಿರುವ ಪರಿಸರ ನಾಶಕ್ಕೆ
ಮುಂದಿನ ತಲೆಮಾರು ಪ್ರಾಯಶ್ಚಿತ್ತ ಅನುಭವಿಸಬೇಕಾಗುವುದು ಖಂಡಿತ



ಮರುಭೂಮಿಯಾಣ

ಕೃಷ್ಣಾನಂದ ಕಾಮತ

ಕೃಷ್ಣಾನಂದ ಕಾಮತ ಅವರು ಹುಟ್ಟಿದ್ದು 1934ರಲ್ಲಿ, ಹೊನ್ನಾವರದಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಪದವೀಧರರಾದ ಅವರು ಸ್ವಲ್ಪ ಕಾಲ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ನಂತರ ಅಮೆರಿಕದ ಸಿರಾಕ್ಯೂಸ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು. 1965–1968ರ ಅವಧಿಯಲ್ಲಿ ಉದಯಪುರ ವಿಶ್ವವಿದ್ಯಾಲಯದ ಜೋಬನೇರ್ ಕೃಷಿ ಕಾಲೇಜಿನಲ್ಲಿ ಕೀಟಶಾಸ್ತ್ರದ ಸಂಶೋಧನಾಧಿಕಾರಿಯಾಗಿ, 1968–1970ರ ಅವಧಿಯಲ್ಲಿ ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ 'ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಬಯೊಲಾಜಿಕಲ್ ಕಂಟ್ರೋಲ್' ಸಂಸ್ಥೆಯಲ್ಲಿ ಕೀಟ ಸಂಶೋಧನಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1971ರಲ್ಲಿ ಬೆಂಗಳೂರಿನಲ್ಲಿ ತಮ್ಮದೇ ವೈಜ್ಞಾನಿಕ ಛಾಯಾಗ್ರಹಣದ ಲ್ಯಾಬೊರೆಟರಿಯನ್ನು ಪ್ರಾರಂಭಿಸಿದರು. ಅವರು ನಿಧನರಾದದ್ದು 2002ರಲ್ಲಿ.

ಅವರು ವಿಜ್ಞಾನ, ತತ್ವಶಾಸ್ತ್ರ, ಪ್ರವಾಸ ಸಾಹಿತ್ಯ, ಲಲಿತ ಕಲೆ, ಕಾದಂಬರಿ, ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಚಿಸಿರುವ ಮುಖ್ಯ ಕೃತಿಗಳಲ್ಲಿ ಕೆಲವು: **ನಾನೂ ಅಮೆರಿಕೆಗೆ ಹೋಗಿದ್ದೆ, ವಂಗದರ್ಶನ, ನಾ ರಾಜಾಸ್ಥಾನದಲ್ಲಿ, ಕಲಾರಂಗ, ಬಸ್ತರ ಪ್ರವಾಸ, ಮಧ್ಯ ಪ್ರದೇಶದ ಮಡಿಲಲ್ಲಿ, ಪ್ರವಾಸಿಯ ಪ್ರಬಂಧಗಳು** (ಪ್ರವಾಸ ಸಾಹಿತ್ಯ), **ಭಗ್ನ ಸ್ವಪ್ನ** (ಕಾದಂಬರಿ), **ಕಾವಿ ಕಲೆ** (ಕಲೆ), **ಅಕ್ಷತಾ** (ಪ್ರಬಂಧಗಳು), **ಪ್ರಾಣಿ ಪರಿಸರ, ಪಶು–ಪಕ್ಷಿ ಪ್ರಪಂಚ, ಕೀಟ ಜಗತ್ತು, ಇರುವೆಯ ಇರುವು, ಕಾಗೆಯ ಕಾಯಕ, ಸರ್ಪ ಸಂಕುಲ, ಸಸ್ಯ ಪ್ರಪಂಚ** ಮತ್ತು **ಸಸ್ಯ ಪರಿಸರ**. ಕಾಮತರ ನಿಧನಾನಂತರ ಅವರ ಪತ್ನಿ, ಪ್ರಸಿದ್ಧ ಲೇಖಕಿ ಡಾ. ಜ್ಯೋತ್ಸ್ನಾ ಕಾಮತರು ಸಂಪಾದಿಸಿ ಹೊರತಂದ ಗ್ರಂಥಗಳೆಂದರೆ **ಪತ್ರಪರಾಚಿ** (ಪತ್ರಗಳು), **ನಾ ಕಂಡ ಕರ್ನಾಟಕ** (ಪ್ರಬಂಧಗಳು), **ಪರಿಸರ ಪರ್ಯಟನ** (ನಾಲ್ಕು ದಶಕಗಳ ಆಯ್ದ ಲೇಖನಗಳು) ಮತ್ತು **ಕಾಮತರ ಕುಂಚ ಪ್ರಪಂಚ** (ಮಧ್ಯ ಪ್ರದೇಶದ ಆದಿವಾಸಿಗಳ ದೈನಂದಿನ ಜೀವನ ರೂಪಿಸುವ ರೇಖಾಚಿತ್ರಗಳ ಸಂಕಲನ).

ಕೃಷ್ಣಾನಂದ ಕಾಮತರು ಪಡೆದಿರುವ ಪ್ರಶಸ್ತಿ, ಪುರಸ್ಕಾರಗಳಲ್ಲಿ ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿ, ಟಿ.ಎಂ.ಎ. ಪೈ ಅಧಿಷ್ಠಾನದ ಪ್ರಶಸ್ತಿ, 2000ದಲ್ಲಿ ಅಮೆರಿಕದ ಶಿಕಾಗೊ ನಗರದಲ್ಲಿ ನಡೆದ ಕೊಂಕಣಿ ಸಮ್ಮೇಳನದ ವಿಶೇಷ ಪ್ರಶಸ್ತಿ, 1997ರಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಮುಖ್ಯವಾದವು.

ಮರುಪಯಣ

ಅನುಭವ ಕಥನ

ಡಾ. ಕೃಷ್ಣಾನಂದ ಕಾಮತ

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ
3ನೇ ಬ್ಲಾಕ್ ಜಯನಗರ, ಬೆಂಗಳೂರು–560 011

Marupayana - *Anubhava Kathana* (Kannada) : an experiential discourse
by Dr. Krishnanand Kamat ; published by
Vasantha Prakashana, No. 360, 10th 'B' Main, 3rd Block Jayanagar,
Bangalore-560 011, India Phone : 080-22443996
email : info@vasanthaprakashana.com
website : www.vasanthaprakashana.com

First print : 2001
Second print : 2013

ISBN : 978-93-83052-61-5

ಸಾಹಿತ್ಯ ಸಲಹೆಗಾರರು : ಎಸ್. ದಿವಾಕರ್

ಪ್ರಥಮ ಮುದ್ರಣ : 2001
ಎರಡನೆಯ ಮುದ್ರಣ : 2013
ಉಪಯೋಗಿಸಿದ ಕಾಗದ: 70 ಜಿಎಸ್‌ಎಂ ಮ್ಯಾಪ್‌ಲಿಥೊ
ಪುಟಗಳು: 124 ಬೆಲೆ : ರೂ. 80

ಮುಖಪುಟ ವಿನ್ಯಾಸ : ರಘು ಅಪಾರ
ಅಕ್ಷರ ಜೋಡಣೆ : ಶ್ರೀಧರ್
ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಉತ್ತರ ಕನ್ನಡ ಪರಿಸರ ಸಂರಕ್ಷಣೆಗಾಗಿ ತನ್ನ ಜೀವನವನ್ನೇ ತೇಯ್ದ
ಡಾ. ಕುಸುಮಾ ಸೊರಬ ಇವರ ಸ್ಮೃತಿಗೆ

ಅರ್ಪಣೆ



ಹಿನ್ನೆಲೆಯಾಗಿ

(ಮೊದಲ ಮುದ್ರಣದ್ದು)

ಪರಿಸರ ಪರಿಣತರೆನಿಸಿಕೊಂಡವರು "ನರ್ಮದಾ ಚಳವಳಿ", "ಅಪ್ಪಿಕೋ ಚಳುವಳಿ", ಗಿಡಮರಗಳನ್ನು ಉಳಿಸಿ ಆಂದೋಲನ ಮೊದಲಾದವುಗಳ ಮೂಲಕ ಸರಕಾರಿ ಯೋಜನೆಗಳಿಗೆ ಕಲ್ಲುತೂರುವದು, ಸ್ಥಗಿತಗೊಳಿಸುವದು ಇವೇ ಪರಿಸರ ರಕ್ಷಣೆಯ ಕ್ರಮಗಳು ಎಂದು ಜನಸಾಮಾನ್ಯರಲ್ಲಿ ತಪ್ಪು ಕಲ್ಪನೆ ಮೂಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಮಾನವನು ಕೇವಲ ಸ್ವಾರ್ಥಸಾಧನೆ, ಪ್ರಲೋಭನೆಗಳಿಂದ ಕೈಗೊಂಡ ಹೆಚ್ಚಿನ ಚಟುವಟಿಕೆಗಳಿಂದಾಗಿಯೇ ಪರಿಸರವಿಡೀ ಸರ್ವನಾಶದತ್ತ ಎಳೆಯುತ್ತಿದೆ ಎಂದು ಅರಿತವರು ಅದೆಷ್ಟು ಪ್ರಜೆಗಳಿದ್ದಾರೆ? ನನ್ನ ಅಮೇರಿಕೆಯ ನಾಲ್ಕು ವರ್ಷಗಳ ಪರಿಸರವಿಜ್ಞಾನದ ಅಧ್ಯಯನ ಹಾಗೂ ಸಂಶೋಧನೆಗಳ ಆಧಾರದ ಮೇಲೆ ಸ್ವಲ್ಪದರಲ್ಲಿ ಹೇಳಬೇಕೆಂದರೆ, ನಿಸರ್ಗದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಅರಿತು, ಅವುಗಳ ಸಮತೋಲನವನ್ನು ಕಾಯ್ದುಕೊಳ್ಳುವದು ಸರ್ವದೃಷ್ಟಿಯಿಂದಲೂ ಅಪೇಕ್ಷಣೀಯ. ಬಳಸಿದಷ್ಟು ಅರಣ್ಯ ಬೆಳೆಸಬೇಕು, ಮಳೆ ಬೀಳುವಷ್ಟೇ ನೀರನ್ನು ಬಳಸಬೇಕು. ಲಾಭಕ್ಕಾಗಿ ಸಹಜೀವಿಗಳ ಪಾಲನ್ನು ಕಸಿದುಕೊಳ್ಳಲೇಬಾರದು, ಪರಿಸರ ಸಂಹಾರಕನಾಗಿ ಪರಿಣಮಿಸಿದ ಮಾನವನು, ಅದರ ಸಂರಕ್ಷಕನಾಗಬೇಕು. ಅಂದರೇ ನಿಸರ್ಗದ ಸಮತೋಲ ಕಾಯ್ದುಕೊಳ್ಳಲು ಸಾಧ್ಯ.

ದಿ. ಜಿ.ಬಿ. ಜೋಶಿ ಅವರು ಜನರಲ್ಲಿ ಪರಿಸರ ಜಾಗೃತಿ ಮೂಡಿಸಬೇಕೆಂದು ಮೂರು ದಶಕಗಳ ಹಿಂದೆಯೇ ಯೋಚಿಸಿದ್ದರು. ನನ್ನ ಅಮೇರಿಕೆಯ ಪ್ರವಾಸ ಕಥನದ ಪ್ರಕಾಶನ ಕೈಗೆ ಎತ್ತಿಕೊಂಡಾಗ, ನಾನು ಆ ದೇಶದಲ್ಲಿ ಕೈಕೊಂಡ ಪರಿಸರ ಪರ್ಯಟನ, ಅಭ್ಯಾಸ, ಸಂಶೋಧನೆಗಳ ಕುರಿತು ಒಂದೆರಡು ಅಧ್ಯಾಯುಗಳನ್ನು ಬರೆದುಕೊಟ್ಟರೆ, ಓದುಗರ ಮಾತಿಗೆ ಸಹಾಯವಾಗುವುದೆಂದಿದ್ದರು. ಆದರೆ ಆಗ ನಾವಿನ್ನೂ ಅಮೇರಿಕನ್ನರಷ್ಟು ಪರಿಸರ ಹಾಳು ಮಾಡಿಕೊಂಡಿರಲಿಲ್ಲ! ಅಲ್ಲದೇ ಪರಿಸರ ವಿಜ್ಞಾನದ ತತ್ವಗಳು, ಸಾಮಾನ್ಯ ಓದುಗರಿಗೆ ಮನದಟ್ಟಾಗುವಂತೆ ಬರೆಯುವದು ಸುಲಭ ಸಾಧ್ಯವಾಗಿರಲಿಲ್ಲ. ಹೀಗಾಗಿ ಆ ಸಾಹಸಕ್ಕೆ ಕೈ ಹಾಕಿರಲಿಲ್ಲ. ಪಾಶ್ಚಾತ್ಯರನ್ನು ಅನುಕರಿಸುವದರಲ್ಲಿ ನಾವು ನಿಸ್ಸೀಮರಲ್ಲವೇ? ಅವರು ರೂಢಿಸಿಕೊಂಡ ಉತ್ತಮಾಂಶಗಳನ್ನು ನಮ್ಮವನ್ನಾಗಿಸುವದು ತುಂಬ ಕಷ್ಟಕರವಾದ್ದರಿಂದ ಅವರ ದೋಷಗಳನ್ನು ಅಂದರೆ ವಿಷಯಲೋಲುಪತೆಯನ್ನೆಲ್ಲ ಬಿಚ್ಚುಮನಸ್ಸಿನಿಂದ ಸ್ವಾಗತಿಸಲಾರಂಭಿಸಿದ್ದೇವೆ. ಇತ್ತೀಚಿನ ವರ್ಷಗಳಲ್ಲಂತೂ ನಮ್ಮ ಭರತಭೂಮಿ ಸ್ವತಂತ್ರ

ದೇಶವೇ ಅಥವಾ ಪಾಶ್ಚಾತ್ಯ ಜಗತ್ತಿನ ಅಮೇರಿಕೆಯ ಒಂದು ಭಾಗವೇ? ಎಂದು ಭ್ರಮೆ ಹುಟ್ಟಿಸುವಷ್ಟು ನಾವು 'ವಿದೇಶಿಗ'ರಾಗುತ್ತಿದ್ದೇವೆ! ಶತಮಾನಗಳಿಂದ ಬೆಳೆಸಿ, ಉಳಿಸಿಕೊಂಡು ಬಂದಿರುವ ಸ್ವಂತಿಕೆಯನ್ನು ಇತರ ಕ್ಷೇತ್ರಗಳಲ್ಲಿಯಂತೆ, ಸಾಂಸ್ಕೃತಿಕ ಪರಿಸರ ದೃಷ್ಟಿಯಿಂದಲೂ ರಕ್ಷಿಸಿಕೊಳ್ಳುವದು ಅತಿಮುಖ್ಯವಾಗಿದೆ.

ಈ ವಿಚಾರಗಳನ್ನು ಬಿಂಬಿಸುವ ಕೃತಿಯೊಂದನ್ನು ಬರೆಯಬೇಕೆಂದು ಅನೇಕ ವರ್ಷಗಳಿಂದ ಯೋಚಿಸುತ್ತಿದ್ದರೂ ಅದು ಕಾರ್ಯರೂಪಕ್ಕೆ ಇಳಿದಿರಲಿಲ್ಲ. ಎರಡು ವರ್ಷಗಳ ಹಿಂದೆ ಡಾ॥ ರಮಾಕಾಂತ ಜೋಶಿಯವರು ಅಂತಹ ಹಸ್ತಪ್ರತಿಯೊಂದನ್ನು ಬರೆದುಕೊಡಿ! ಎಂದು ಸೂಚಿಸಿದರೂ ಸಾಧ್ಯವಾಗಿರಲಿಲ್ಲ. ಈಗಲೂ ಈ ಕೃತಿಗೆ ಅವರ ಒತ್ತಾಯವೇ ಮೂಲಕಾರಣವೆಂದು ಬೇರೆ ಹೇಳಬೇಕೇ?

ಈ ಭೂಮಂಡಲದಲ್ಲಿ ಜೀವೋತ್ಪತ್ತಿಯಾಗಿ ೨೭೯,೦೦೦,೦೦೦ ವರ್ಷಗಳು ಜಾರಿಕೊಂಡವು. ಇದರಲ್ಲಿ ೧೧೦,೦೦೦,೦೦೦ ವರ್ಷಗಳ ಸುದೀರ್ಘಕಾಲ ಪೆಡಂಭೂತಗಳು ಮೆರೆದರೂ ಆ ಬಳಿಕ ಅವು ನಶಿಸಿ ಹೋದವು. ಇದಕ್ಕೆ ಹೋಲಿಸಿದಾಗ ಮಾನವನು ಮೊನ್ನೆ ಮೊನ್ನೆ ಅಂದರೆ ಕೇವಲ ಐವತ್ತು ಲಕ್ಷ ವರ್ಷಗಳ ಈಚೆಗೆ ಅವತರಿಸಿ ಬಂದವನು. ಆದರೆ ತನ್ನ ಅಪ್ರತಿಮ ಬುದ್ಧಿಮತ್ತೆಯಿಂದ ಅಸಾಧ್ಯವೆನಿಸಿದ್ದನ್ನೆಲ್ಲ ಸಾಧಿಸಿ ತೋರಿಸಿದ್ದಾನೆ. ಲೇಸರ್, ಸೆಟೆಲ್ಲ್ಯಾಟ್, ಬಾಹ್ಯಾಕಾಶ ಉಡ್ಡಾಣ ಜೊತೆಗೆ ತನ್ನ ಅಳಿಗಾಲಕ್ಕೂ ಎಡೆಮಾಡಿಕೊಳ್ಳುತ್ತಿದ್ದಾನೆ ಎಂಬುದನ್ನು ಮರೆಯುವಂತಿಲ್ಲ. ಮೋಜಿಗಾಗಿಯೇ ಕೈಕೊಳ್ಳುವ ಮಿತಿಮೀರಿದ ಮದ್ಯ ಹಾಗೂ ಧೂಮಪಾನ, ಮಾದಕ ದ್ರವ್ಯಗಳ ಸೇವನೆ, ಸ್ವಚ್ಛಂದ ಏಡ್ಸ್‌ಕಾಯಿಲೆ, ಕಿಕ್ಕಿರಿದು ತುಂಬುತ್ತಿರುವ ಜನಸಂಖ್ಯೆ, ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರಗಳೊಂದಿಗೆ ಪರಿಸರ ವಿನಾಶಗಳನ್ನು ಕೈಕೊಂಡು ಸರ್ವನಾಶದ ಹಾದಿಯನ್ನು ತುಳಿಯುತ್ತಿರುವದು ಒಂದು ಐತಿಹಾಸಿಕ ದುರಂತವೇ ಸೈ.

ಜಗತ್ತಿನಲ್ಲಿ ಅತಿ ಅತೃಪ್ತ ಜೀವಿಯೆಂದರೆ ಮಾನವನೊಬ್ಬನೇ ಏನೋ! ಆತನ ಸಕಲ ಸಮಸ್ಯೆಗಳು ತನ್ನ ಹಾಗೂ ತನ್ನ ಪೀಳಿಗೆಯ ಸುಖಲೋಲುಪತೆ ಮತ್ತು ವಿಶ್ವವನ್ನೇ ತನ್ನ ಸಂತತಿಯಿಂದ ತುಂಬಿಸುವ ಹೆಬ್ಬಯಕೆಯಿಂದ ಉತ್ಪನ್ನವಾದವುಗಳು. ಕಾಲು ನಡಿಗೆಯಿಂದ ಹೋಗಬಹುದಾದಲ್ಲಿ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾದಲ್ಲಿ, ವಾಹನಗಳ ಮೇಲೆ ಓಡಾಡುವ ಚಪಲ ಹೆಚ್ಚಿದೆ. ಅಧಿಕ ಧನದಾಸೆ, ಕಾರ್ಖಾನೆಗಳ ಕಲುಷಿತ ವಾತಾವರಣದಿಂದಾಗಿ ಪರಿಸರ ಮಾಲಿನ್ಯ ವಿಪರೀತ ಹರಡುತ್ತಿದೆ. ಇನ್ನು ಸಂತಾನ ಸಂಖ್ಯೆಯಂತೂ ದಿಗಿಲು ಪಡಿಸುವಂತೆ ವರ್ಷವರ್ಷ ಹೆಚ್ಚುತ್ತ ಹೋಗಿದೆ.

ಮನುಷ್ಯನು ಅಸ್ತಿತ್ವಕ್ಕೆ ಬಂದ ಪ್ರಪ್ರಥಮ ಒಂದೂವರೆ ಲಕ್ಷ ವರ್ಷಗಳಲ್ಲಿ, ಪೃಥ್ವಿಯ ಜನಸಂಖ್ಯೆ ಕೇವಲ ನೂರುಕೋಟಿ ಇತ್ತು. ಕ್ರಿ.ಶ. ೧೮೦೦ರಲ್ಲಿ ಅದು ಶತಕೋಟಿಗೇರಿತು. ಕ್ರಿ.ಶ. ೧೯೦೦ರಲ್ಲಿ ಒಂದುವರೆ ಶತಕೋಟಿ ಇದ್ದದ್ದು ಮುಂದಿನ ಕೇವಲ ೨೭ ವರ್ಷಗಳಲ್ಲಿ ಎರಡು ಶತಕೋಟಿಗೇರಿತು. ೧೯೬೦ರಲ್ಲಿ ಮೂರು, ೧೯೭೪ರಲ್ಲಿ ನಾಲ್ಕು, ೧೯೮೭ರಲ್ಲಿ

ಆರು ಶತಕೋಟಿಗೆ ಏರಿತು. ಇದೇ ವೇಗ ಮುಂದರಿದರೆ ೨೦೫೦ರಲ್ಲಿ ಹತ್ತು ಮತ್ತು ೨೧೦೦ನೇ ಇಸ್ವಿಯಲ್ಲಿ ಹದಿನೈದು ಶತಕೋಟಿಗೆ ಏರುವ ಅಂದಾಜಿದೆ.

ಅನೇಕ ಕ್ಷೇತ್ರಗಳಲ್ಲಿ ಮುಂದುವರಿದ ಪ್ರಾಣಿ, ಎನಿಸಿಕೊಂಡ ಮಾನವ, ಸಂತಾನೋತ್ಪತ್ತಿ ನಿಯಂತ್ರಣದಲ್ಲಿ ಸಕಲ ಜೀವಕೋಟಿಗಿಂತ ಹಿಂದುಳಿದವನೆನಿಸಿಕೊಂಡಿದ್ದಾನೆ! ಸ್ವಂತ ವಿಚಾರ ಶಕ್ತಿ, ಸಮಾಜಶಾಸ್ತ್ರಜ್ಞರ ಎಚ್ಚರಿಕೆ, ಸರಕಾರ ಕೊಡಮಾಡಿರುವ ಕುಟುಂಬಯೋಜನಾ ಸವಲತ್ತುಗಳು, ನಿರಾತಂಕವಾಗಿ ನಡೆದಿರುವ ಭ್ರೂಣಹತ್ಯೆ, ಏಕಪ್ರಕಾರವಾಗಿ ಜಾರಿಯಲ್ಲಿದ್ದರೂ ಪ್ರತಿಕ್ಷಣಕ್ಕೆ ಮೂರು ಶಿಶುಗಳು ಧರೆಗೆ ಇಳಿದು ಬರುತ್ತಲೇ ಇವೆ! ಅಂದರೆ ಪ್ರತಿಗಂಟೆಗೆ ಹನ್ನೊಂದು ಸಾವಿರ, ದಿನ ಒಂದಕ್ಕೆ ಎರಡುವರೆ ಲಕ್ಷ, ತಿಂಗಳಿಗೆ ಎಪ್ಪತ್ತೈದು ಲಕ್ಷ, ವರ್ಷಕ್ಕೆ ಒಂಬತ್ತು ಕೋಟಿ, ಜನಸಂಖ್ಯೆ ಏರುತ್ತಲಿದೆ. ಹನ್ನೆರಡು ವರ್ಷಗಳಲ್ಲಿ ಶತಕೋಟಿಯ ಅಭಿವೃದ್ಧಿ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಹಾರ, ಆಚ್ಛಾದನೆ, ಆಶ್ರಯಗಳಿಗಾಗಿ ನೇರ ಅಥವಾ ಪರೋಕ್ಷವಾಗಿ ನಿಸರ್ಗಮಾತೆಯು ಉದಾರವಾಗಿ ಕೊಡಮಾಡುವ ಸಂಪತ್ ಮೂಲಗಳನ್ನೇ ಅವಲಂಬಿಸಬೇಕಾಗುತ್ತದೆ. ನಿಸರ್ಗದ ಈ ಕೊಡುಗೆಗಳಿಂದ ಅತಿ ಹೆಚ್ಚೆಂದರೆ, ಎಂಟೂವರೆ ಶತಕೋಟಿ ಜನರನ್ನಷ್ಟೆ ಸಾಕಿ ಸಲಹಬಹುದಾಗಿದೆ, ಎಂದು ಪರಿಣತರು ಲೆಕ್ಕಾಚಾರ ಹಾಕಿದ್ದಾರೆ. ಆದ್ದರಿಂದ ಜನಸಂಖ್ಯೆ ಬೆಳೆದಂತೆ, ಅನೇಕಾನೇಕ ಕೊರತೆಗಳನ್ನು ಅನುಭವಿಸದೇ ಬೇರೆ ಮಾರ್ಗವೇ ಇಲ್ಲ.

ಅತ್ಯಾಧುನಿಕರ ಆಸೆ-ಆಕಾಂಕ್ಷೆ ಬೇಡಿಕೆಗಳಿಗೆ ಕೊನೆ ಮೊದಲೇ ಇಲ್ಲ, ಅಪ್ಪ-ಅಜ್ಜರಿಗೆ ವರ್ಷಕ್ಕೆ ಒಂದೆರಡು ಜೋಡಿ ಧೋತರ ಅಂಗಿ ಬೇಕಿದ್ದರೆ, ಮೊಮ್ಮಗನಿಗೆ ಕೊನೆಯ ಪಕ್ಷ ಇಪ್ಪತ್ತು ಜೋಡಿ ಬಟ್ಟೆಗಳಾದರೂ ಬೇಕೇ ಬೇಕು. ಹಿರಿಯರೆಲ್ಲ ನಲವತ್ತು ಜನ, ಒಂದೇ ಸೂರಿನಡಿ ಪ್ರೀತಿ-ವಿಶ್ವಾಸಗಳಿಂದ ಬದುಕಲು ಹವಣಿಸಿದರೆ, ಆಧುನಿಕ ಪತಿ-ಪತ್ನಿಯರಿಗೆ ಸಕಲ ಸೌಕರ್ಯಗಳಿರುವ ಪ್ರತ್ಯೇಕ ಸ್ವತಂತ್ರ ಮನೆಯೇ ಬೇಕು. ಪೂರ್ವಜರು ಕಾಲುನಡಿಗೆಯಿಂದಲೇ ಊರೆಲ್ಲ ಸುತ್ತಾಡಿಕೊಂಡಿದ್ದರೆ, ಎಳೆಯರಿಗೆ ಮನೆ ಹೊರಗೆ ಬೀಳಲು ಕಾರು, ಅದಿಲ್ಲದಿದ್ದರೆ ಸ್ಕೂಟರ್ ಆದರೂ ಬೇಕೇ ಬೇಕು. ಈ ಬಗೆಯ ಪ್ರವೃತ್ತಿಯಿಂದ ಮಾನವ ಮತ್ತು ಅವನ ಸಹಚರ ಜೀವಿಗಳು ಅಳಿವಿನ ಅಂಚಿನಲ್ಲಿ ಸಾಗಿದ್ದಾರೆ. ಈ ಸಾಧ್ಯತೆಯನ್ನು ಓದುಗರ ಗಮನಕ್ಕೆ ತರುವದೇ ಈ ಪುಸ್ತಕದ ಮುಖ್ಯ ಉದ್ದೇಶ.

ಕಣ್ಣಿಗೆ ಸುಲಭವಾಗಿ ಗೋಚರಿಸದ, ಪರಿಸರದ ಅಳಿವುಳಿವುಗಳನ್ನು, ಮನಸ್ಸಿಗೆ ತಟ್ಟುವಂತೆ ವಿವರಿಸುವದು ಸುಲಭವಲ್ಲ. ಆದ್ದರಿಂದ ಪ್ರಾತಿನಿಧಿಕವಾಗಿ ಒಂದು ಊರಿನಲ್ಲಿ ನಡೆಯುವ ವಿವಿಧ ಚಟುವಟಿಕೆಗಳಿಂದಾಗಿ, ಪರಿಸರದ ಗಂಡಾಂತರ ಹೇಗೆ ಹೆಚ್ಚುತ್ತ ಹೋಗುತ್ತದೆ? ಎಂದು ತಿಳಿಯಾಗಿ ಹೇಳಲು ಯತ್ನಿಸಿದ್ದೇನೆ. ನಾನು ಹುಟ್ಟಿ ಬೆಳೆದ ಊರು, ಕೇವಲ ಅರ್ಧ ಶತಮಾನದ ಹಿಂದಿನವರೆಗೂ ನಿಸರ್ಗ ಸಂಪತ್ತಿನಿಂದ ನಳನಳಿಸುತ್ತಿತ್ತು. ಅರಣ್ಯ, ನದಿ, ಸಮುದ್ರ, ಪರ್ವತಗಳನ್ನು ಒಂದೇ ಎಡೆಯಲ್ಲಿ ಪಡೆದ ಅಪೂರ್ವ ಬೀಡಾಗಿತ್ತು.

ಅಲ್ಲದೇ ಶತಮಾನಗಳಲ್ಲಿ ಭಾರತಕ್ಕೆ ಬಂದಿದ್ದ ಅನೇಕ ವಿದೇಶಿ ಪ್ರವಾಸಿಗರು ಹೊನ್ನಾವರವನ್ನು ಕುರಿತು ಬರೆದ ದಾಖಲೆಗಳಿವೆ. ಕಳೆದ ಆರು ದಶಕಗಳಿಂದ ಅಲ್ಲಿ ನಡೆದ ಅನೇಕಾನೇಕ ಚಟುವಟಿಕೆಗಳ ಆಳವಾದ ಪರಿಚಯವೂ ಇದೆ. ಹೀಗಾಗಿ ನಮ್ಮೂರಿನ ಘಟನಾವಳಿಗಳನ್ನೇ ವಿವರಿಸಿದರೆ, ಅವುಗಳೆಲ್ಲ ಒಂದನ್ನೊಂದು ಹೇಗೆ ಹೆಣೆದುಕೊಂಡಿರುತ್ತವೆ, ಎಂಬುದನ್ನು ವಿಶದೀಕರಿಸುವದು ಸುಲಭ. ಹೀಗಾಗಿ ಈ ಅಧ್ಯಯನಕ್ಕೆ ಹೊನ್ನಾವರವನ್ನೇ ಕೇಂದ್ರಬಿಂದುವಾಗಿಸಿದೆ. ಆದರೆ ಈ ಊರು ನಮ್ಮ ರಾಜ್ಯ, ನೆರೆರಾಜ್ಯ, ದೇಶದ ಯಾವ ಪ್ರದೇಶದ ಒಂದು ಊರಿರಬಹುದು. ಎಲ್ಲೆಡೆ, ಹೆಚ್ಚು ಕಡಿಮೆ ಇಂತಹ ಸನ್ನಿವೇಶಗಳು ಕಂಡುಬರುತ್ತವೆ.

ಸ್ವಾತಂತ್ರ್ಯಪಡೆದು, ದೇಶವನ್ನು ರಾಮರಾಜ್ಯ ಮಾಡಲು ಹೊರಟ ನಾವು ಸಮಸ್ಯೆಗಳ ರಾಷ್ಟ್ರವಾಗಿ ರೂಪಗೊಂಡಿದ್ದೇವೆ. ಬ್ರಿಟೀಷ್ ವಸಾಹತುಗಾರರನ್ನು ತೊಲಗಿಸಿ ಅವರ ಸ್ಥಾನದಲ್ಲಿ ಅಮೇರಿಕೆಯ ಆರ್ಥಿಕ ದಬ್ಬಾಳಿಕೆಗೆ ಒಡ್ಡಿಕೊಂಡಿದ್ದೇವೆ. ಅಂತೆಯೇ ನಮಗೆಲ್ಲ ದುಡ್ಡೇ ದೊಡ್ಡಪ್ಪನಾಗಿದ್ದಾನೆ. ಸಕಲರೂ ಅತ್ಯಲ್ಪ ಅವಧಿಯಲ್ಲಿ ಆಗರ್ಭ ಶ್ರೀಮಂತರಾಗಲು ಪೈಪೋಟಿ ನಡೆಸುತ್ತಿದ್ದಾರೆ. ಇದರ ಫಲಿತಾಂಶವಾಗಿ ಶತಮಾನಗಳಿಂದ ನಡೆದು ಬಂದ ಸಮಾಜವ್ಯವಸ್ಥೆ ಮಣ್ಣು ಮುಕ್ಕುವಂತೆ ಆಗಿದೆ. ಹಿಂದೊಮ್ಮೆ ತೀರ ಕಡಿಮೆ ಜೀವನಾವಶ್ಯಕತೆಯ ಸಾಮಗ್ರಿಗಳಿಂದ ಬದುಕನ್ನು ನಡೆಸುತ್ತಿದ್ದ ನಮಗೆ ಇಂದು ಆಯಾತ ಮಾಡಿದ ಸಕಲವಸ್ತುಗಳೂ ಬೇಕಾಗಿವೆ. ಬಾಯಾರಿಕೆಯಾದವನಿಗೆ ಕೂಡ ಅಮೇರಿಕನ್ನರು ಸೇವಿಸುವ ಕೋಲಾ ಪ್ರಕಾರಗಳೇ ಬೇಕು. ಪಾಶ್ಚಾತ್ಯ ದೇಶಗಳಲ್ಲೆಲ್ಲ, ಅತ್ಯಂತ ಗಂಡಾಂತರಕಾರಿ! ಎಂದು ನಿರ್ಬಂಧಿಸಿದ ಸಾಮಾನುಗಳನ್ನೆಲ್ಲ ಇಲ್ಲಿ ನಾವು ಆದರದಿಂದ ಕೊಂಡು ಬಳಸುತ್ತೇವೆ. ಬಟ್ಟೆ, ಪಾತ್ರೆ, ಗೃಹಸ್ವಚ್ಛತೆಗಾಗಿ ಬಳಸುವ ಹಲವು ಮಾರಕ ರಾಸಾಯನಿಕಗಳು ಕ್ಯಾನ್ಸರ್ ರೋಗಕ್ಕೆ ಮೂಲವಾಗಿವೆ! ಎಂದು ಕೆಲವು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಇವುಗಳ ಜೊತೆಗೆ ಕುಡಿತ, ಧೂಮ್ರಪಾನ, ತಂಬಾಕು ಸೇವನೆ, ಮಾದಕವಸ್ತುಗಳ ಚಟ, ಬಾಯಿ ಚಪಲದ ಆಹಾರವನ್ನೇ ಸೇವಿಸುವದು, ವ್ಯಾಯಾಮದ ಕೊರತೆ ಇವುಗಳಿಂದಾಗಿ ಚಿಕ್ಕವಯಸ್ಸಿನಲ್ಲೇ ರಕ್ತದೊತ್ತಡ, ಸಿಹಿಮೂತ್ರ, ಕ್ಯಾನ್ಸರ್, ಕ್ಷಯರೋಗಗಳು ಕಾಣಿಸಿಕೊಳ್ಳುತ್ತಿರುವುದು ತುಂಬ ಹೆಚ್ಚಾಗಿದೆ.

ಈ ಕೃತಿ ಕೇವಲ ನಡೆದ ಘಟನೆಗಳ ವರದಿಯಲ್ಲ. ಕಾಲ್ಪನಿಕ ಕಥನವೂ ಅಲ್ಲ. ನಡೆಯುತ್ತಲೇ ಇರುವ ಜೀವನ-ವ್ಯಾಪಾರಗಳ ಮೌಲ್ಯಮಾಪನದ ಪ್ರಯತ್ನವಾಗಿದೆ. ಮುಂದೆ ನಾವೆಲ್ಲ ಎದುರಿಸಬೇಕಾಗಿ ಬರಲಿರುವ ಪೇಚುಗಳ ಎಚ್ಚರಿಕೆಯ ಮಾತಾಗಿದೆ. ಇವನ್ನು ಗಮನದಲ್ಲಿಟ್ಟುಕೊಂಡು ವ್ಯಕ್ತಿಗಳು, ಸಮಾಜ, ಸರಕಾರಗಳೆಲ್ಲ ಒಟ್ಟಾಗಿಯೇ ಯೋಚಿಸಿ ನಿವಾರಣೋಪಾಯಗಳನ್ನು ಕೈಕೊಳ್ಳದಿದ್ದರೆ, ತಕ್ಷಣವಲ್ಲದಿದ್ದರೂ ಮುಂಬರುವ ತಲೆಮಾರಿನವರು, ಎಡೆಬಿಡದೇ ನಡೆದು ಬಂದಿರುವ ಪರಿಸರನಾಶಕ್ಕಾಗಿ ಪ್ರಾಯಶ್ಚಿತ್ತ ಅನುಭವಿಸಲೇಬೇಕಾಗಿ ಬರಬಹುದು.

ಇದೊಂದು ವಸ್ತುಸ್ಥಿತಿಯ ಅಧ್ಯಯನವಾಗಿದ್ದರಿಂದ ಬರವಣಿಗೆಯಲ್ಲಿ ಬರುವ ಪಾತ್ರಗಳು ಕಥೆ ಕಾದಂಬರಿಯಲ್ಲಿಯಂತೆ ಕಾಲ್ಪನಿಕವಾಗಿಲ್ಲ. ನನ್ನ ಕುಟುಂಬದ ಐವರು ಸದಸ್ಯರುಗಳನ್ನೇ

ಬಳಸಿಕೊಂಡಿದ್ದೇನೆ. ಬರಹಗಾರ, ಪರಿಸರಪ್ರೇಮಿ, ಕ್ರಿಶ್ (ಕೃಷ್ಣಾನಂದ ಕಾಮತ) ಪ್ರತ್ಯಕ್ಷದರ್ಶಿಯಾಗಿದ್ದವರು. ಪತ್ನಿ ಜೋ (ಜ್ಯೋತ್ಸ್ನಾ) ಇತಿಹಾಸದಲ್ಲಿ ಆಸಕ್ತೆ, ಮಗ ವಿಕಾಸನು 'ವಿಕ್' ಹಾಗೂ ಆತನ ಪತ್ನಿ ದಕ್ಷಿಣ ಕೊರಿಯದ ಹಿರ್‍ಯೊಂಗ್ ಕಿಮ್ (ಕಿಮ್) ಕಂಪ್ಯೂಟರ್ ವಿಜ್ಞಾನಿಗಳು ಅಮೆರಿಕೆಯಲ್ಲಿದ್ದಾರೆ. 'ಕ್ರಿಶ್' ತಮ್ಮ ತುಳಸು, (ತುಳಸೀದಾಸ ಕಾಮತ) ಹೊನ್ನಾವರದಲ್ಲಿ ಜವಳಿ ವ್ಯಾಪಾರಿಯಾಗಿದ್ದಾನೆ. ನನ್ನ ಸಾಹಿತ್ಯ-ಮಾಧ್ಯಮವಾದ ಪ್ರವಾಸಕಥನದ ತಂತ್ರವನ್ನು ಬಳಸಿ, ಪ್ರಶ್ನೋತ್ತರಗಳ ಮೂಲಕ, ಜೀವ-ವ್ಯಾಪಾರದ ಪರಿಚಯದೊಂದಿಗೆ, ಬಿರುಕು ಬಿಡುತ್ತಿರುವ ಸಮಾಜದ ಕೆಲ ಆಗು-ಹೋಗುಗಳನ್ನು ವಿವರಿಸಲು ಯತ್ನಿಸಿದ್ದೇನೆ.

ಮೊದಲು ಶ್ರೀ ಜಿ.ಬಿ. ಜೋಶಿ ಅವರು, ಬಳಿಕ ಡಾ॥ ರಮಾಕಾಂತ ಜೋಶಿ ಅವರು ಈ ಹಸ್ತಪ್ರತಿಗಾಗಿ ಒತ್ತಾಯಿಸದಿದ್ದರೆ, ನಾನಾಗಿ ಇಂಥ ಕೃತಿಯೊಂದನ್ನು ರಚಿಸುತ್ತಲೇ ಇರಲಿಲ್ಲ. ಆದ್ದರಿಂದ ಇದರ ಸಂಪೂರ್ಣಶ್ರೇಯಸ್ಸು ಮನೋಹರ ಗ್ರಂಥಮಾಲೆಗೆ ಸಲ್ಲುತ್ತದೆ. ಅಲ್ಪ ಸಮಯದಲ್ಲಿ ಅಂದವಾಗಿ ಮುದ್ರಿಸಿ ಪ್ರಕಟಿಸಿದ್ದಕ್ಕಾಗಿ ಡಾ. ರಮಾಕಾಂತ ಮತ್ತು ಶ್ರೀ ಸಮೀರ ಜೋಶಿಯವರಿಗೆ ಕೃತಜ್ಞನಾಗಿದ್ದೇನೆ.

ಯುಗಾದಿ ೨೦೦೧ — ಕೃಷ್ಣಾನಂದ ಕಾಮತ

ಪರಿವಿಡಿ

೧. ನಾಂದಿ ೧

೨. ಒಮ್ಮತ.. ೫

೩. ಅನಾಥರಾದಾಗ...೧೦

೪. ಕಾರ್ಯವಿಧಾನ.. ೧೫

೫. ಅನ್ಯಾಯ..೨೦

೬. ರಾಣಿಯ ರಾಜ್ಯದಲ್ಲಿ...೨೪

೭. ಬೆಕ್ಕಿನ ಬೇರೆ ಬಿಡಾರ!.. ೨೯

೮. ಕಣ್ಮರೆಯಾದ ಕೆರೆ...೩೪

೯. ಕರ್ನಲ್ ಹಿಲ್ ೪೦

೧೦. ಹಿರೇಹಳ್ಳಿ...೪೫

೧೧. ಕಲೆಗಳ ಆಗರ..೫೦

೧೨. ಶರಾವತಿಯ ಸಾನ್ನಿಧ್ಯ.. ೫೫

೧೩. ದ್ವೀಪಗಳ ರಾಣಿ.. ೫೯

೧೪. ಹೊಸತು, ಹೊಸತು.. ೬೪

೧೫. ಊರ ಹೊಲಸು...೭೦

೧೬. ಪರ್ಣ ಸಂಸ್ಕೃತಿ...೭೫

೧೭. ಮಾಯವಾದ ವನರಾಜಿ.. ೮೨

೧೮. ವೃತ್ತಿಜೀವನ..೮೭

೧೯. ಮತ್ಸ್ಯಾವತಾರ...೯೨

೨೦. ಉದ್ಯೋಗ ಪರ್ವ ೯೮

೨೧. ಮರುಪಯಣ... ೧೦೩

೧. ನಾಂದಿ

"ಯಾಕೋ ಅಮೇರಿಕೆಗೆ ಹಿಂತಿರುಗಿ ಹೋಗುವದೇ ಬೇಡ! ಅನಿಸುತ್ತದೆ. ಕಳೆದ ಒಂದು ತಿಂಗಳು, ನಿಮ್ಮೆಲ್ಲರೊಂದಿಗಿದ್ದು ನನ್ನ ತವರೂರಾದ ದಕ್ಷಿಣ ಕೋರಿಯದಲ್ಲಿ ಇದ್ದಂತೆಯೇ ಭಾಸವಾಗುತ್ತಿದೆ. ಆದರೆ ಸೋಲ್‌ದ ನನ್ನ ತವರು ಮನೆಗಿಂತ ಭಾರತವೇ ಹೆಚ್ಚು ಹಿಡಿಸಿದೆ! ನೋಡಿದಲ್ಲೆಲ್ಲ ಹಚ್ಚ ಹಸಿರು. ಗಿಡಮರಗಳು... ವಾರಗಟ್ಟಲೆ ರಿಫ್ರಿಜಿರೇಟರ್‌ದಲ್ಲಿಷ್ಟು ತಂಗಳು ಅಥವಾ ಸಿದ್ಧ ಅಡಿಗೆ, ಹಣ್ಣು, ತರಕಾರಿ ತಿಂದು, ಹಾಲು ಕುಡಿದು ಜಿಗುಪ್ಸೆ ಬಂದುಬಿಟ್ಟಿದೆ! ಹೋಟೆಲಿಗೆ ಹೋಗಿ ಜೇಬುಬರಿದು ಮಾಡಿಕೊಂಡರೂ ಅಲ್ಲಿ ಉಣಬಡಿಸುವದೂ ಇಂಥವೇ ತಿಂಡಿ-ತೀರ್ಥಗಳನ್ನು! ಅದೇ ಇಲ್ಲಿ ನೋಡಿ! ಹೊಲ-ತೋಟಗಳಲ್ಲಿ ಬೆಳೆದ ಧಾನ್ಯ, ಸೊಪ್ಪು, ತರಕಾರಿ, ಹಣ್ಣುಗಳು, ಮನೆಬಾಗಿಲಿಗೇ ತಂದುಕೊಡುವ ಹಣ್ಣು, ಹೂ, ಪತ್ರಿಕೆ ಇತರ ವಸ್ತುಗಳು, ಮನೆಯಿಂದಲೇ ಬಟ್ಟೆ ಒಯ್ದು ಇಸ್ತ್ರಿ ಮಾಡಿ ತಂದುಕೊಡುವ ಧೋಬಿ, ದಿನದಿನ ಬಂದು ಮನೆಯ ಸ್ವಚ್ಛತೆ ಮಾಡಿಕೊಡುವ ಕೆಲಸದಾಕೆ. ಇವೆಲ್ಲ ಸೇವೆಗಳು ಜನಸಾಮಾನ್ಯರಿಗೆಲ್ಲ ಎಟುಕುವಂಥ ದೇಶ!... ಪ್ರತಿ ಡಾಲರಿಗೆ ಏನೆಲ್ಲ ಕೊಳ್ಳಬಹುದೆಂದು ನೆನೆದಾಗ ಮೈನವಿರೇಳುತ್ತದೆ. ಐದು ಕಿಲೋ ಗೋದಿ, ಮೂರು ಕಿಲೊ ಅಕ್ಕಿ, ಆರು ತಾಜಾ ಬ್ರೆಡ್‌ಗಳು, ಹತ್ತು ಕಿಲೊ ಟೊಮ್ಯಾಟೊ ಹಣ್ಣು, ಆರು ಕಿಲೊ ಆಲೂಗಡ್ಡೆ, ಎಂಟು ಕಿಲೊ ಈರುಳ್ಳಿ, ಐವತ್ತು ಸೌತೆಕಾಯಿ, ಐದು ಡಝನ್ ಬಾಳೆಹಣ್ಣು... ಐದು ಕಿಲೊ ನನ್ನ ಪ್ರೀತಿಯ ಪಪಾಯ! ಅಬ್ಬಬ್ಬಾ ಇಲ್ಲಿಯ ಅಗ್ಗ ಸಾಮಾನುಗಳ ಯಾದಿಗೆ ಕೊನೆಮೊದಲಿಲ್ಲ!" ಡಾಲರ್ ರೂಪೈಗಳ ರೂಪಾಂತರವನ್ನು ಸಿದ್ಧಿಸಿಕೊಂಡ ಸೊಸೆ ಕಿಮ್ ಹಿರ್‍ಯೊಂಗ್ ನಿಟ್ಟುಸಿರುಬಿಟ್ಟಳು.

ಸೊಸೆಯೊಂದಿಗಿನ ಸುಪರ್ ಮಾರ್ಕೆಟಿನ ಡಾಲರಿಗೆ ಒಂದರ ಸಪ್ಪಗಿನ ಎಲೆಕೋಸು ಖರೀದಿಯ ಅನುಭವ ಅತ್ತೆಗಿತ್ತು. ಉತ್ಸಾಹದಿಂದ ಸೊಸೆಯ ಮಾತನ್ನು ಅನುಮೋದಿಸುತ್ತ "ಈ ಸಕಲ ಸವಲತ್ತುಗಳನ್ನೆಲ್ಲ ಸುಲಭದಲ್ಲಿ ನಿಮ್ಮ ವನ್ನಾಗಿಸಿಕೊಳ್ಳಬಹುದಾಗಿದೆ. ಅತ್ಯಾಧುನಿಕ ಕಂಪ್ಯೂಟರ್ ವಿಜ್ಞಾನದಲ್ಲಿ ನೀವಿಬ್ಬರೂ ಅತ್ಯುಚ್ಚ ಶಿಕ್ಷಣ, ತರಬೇತಿ, ಅನುಭವ ಪಡೆದಿದ್ದೀರಿ! ಭಾರತದಲ್ಲಿ ನೀವು ಇಷ್ಟಪಡುವ ಸ್ಥಳದಲ್ಲಿ ನೌಕರಿ ದೊರಕಿಸಲು ಯಾವ ಅಡ್ಡಿ ಆತಂಕಗಳೂ ಇಲ್ಲ. ಅಷ್ಟೇ ಏಕೆ? ಕೆಲವು ಕಂಪನಿಗಳಾದರೂ ಸ್ವಯಂ ಆಮಂತ್ರಿಸಿ, ತಮ್ಮಲ್ಲಿ ಸೇರಿಸಿಕೊಳ್ಳದೇ ಇರಲಾರರು. ಕೇವಲ ಕಂಪ್ಯೂಟರ್ ಕೀ ಒತ್ತಲು ಕಲಿತ ಸಾಫ್ಟ್‌ವೇರ್ 'ತಜ್ಞ'ರಿಗೆ ಇಪ್ಪತ್ತು ಮೂವತ್ತು ಸಹಸ್ರ ರೂಪಾಯಿಗಳ ಮಾಸಿಕ ವೇತನ ಲಭ್ಯವಿರುವಾಗ, ನಿಮಗೆ ತಲಾ ಅರ್ಧ

ಲಕ್ಷವಾದರೂ ಕೊಟ್ಟೇ ಕೊಡುತ್ತಾರೆ. ವಾಸಕ್ಕೆ ವಿಶಾಲವಾದ ಫ್ಲ್ಯಾಟ್ ಇದ್ದೇ ಇದೆ. ಇಲ್ಲಿಯೇ ಮಹಾರಾಜಾ ಮಹಾರಾಣಿಯಂತೆ ಇರಬಹುದು!" ಈಗಾಗಲೇ ಕಂಠಪಾಠವಾದ ಭಾಷಣವನ್ನು ಬಿಗಿದಳು ಜೋ.

"ಅಮ್ಮಾ ನೀನು ವೈಭವೀಕರಿಸಿ ಹೇಳಿದ ರೂಪಾಯಿಗಳ ಸಂಬಳವೆಲ್ಲಾ ಒಟ್ಟುಗೂಡಿಸಿದಾಗ ಕೇವಲ ಒಂದು ಸಾವಿರ ಡಾಲರ್‌ಗಳಾಗುತ್ತವೆ! ಅಮೇರಿಕೆಯ ಉತ್ಪನ್ನ ಮಾನದಿಂದ ಈ ಮೊತ್ತ ಕೇವಲ ಕಡ್ಲೆಪುರಿ ತಿಂದಂತೆ! ಈಗ ನನ್ನೊಬ್ಬನ ಮಾಸಿಕ ಉತ್ಪನ್ನ ಐದು ಲಕ್ಷ ರೂಪಾಯಿಗೆ ಸರಿಹೋಗುತ್ತದೆ. ಗೊತ್ತಾ? ಆಕಾಶವಾಣಿಯಲ್ಲಿ ಮೂವತ್ತು ವರ್ಷಗಳ ಸುದೀರ್ಘ ಸೇವೆಯ ನಂತರ ನಿನಗೆ ಎಟುಕಿದ ಮೊತ್ತ ನೆನಪಿದೆಯೇ? ಹತ್ತು ಸಾವಿರ ಡಾಲರಗಳಷ್ಟು ಮಾತ್ರವಲ್ಲವೇ? ಮನಸ್ಸು ಮಾಡಿದರೆ ನಾನು ಕೇವಲ ಎರಡು ವರ್ಷಗಳಲ್ಲಿ ಅಷ್ಟು ಹಣವನ್ನು ಉಳಿತಾಯ ಮಾಡಬಲ್ಲೆ" ಎಂದು ತನ್ನ ಯಶೋಗಾಥೆಯ ಜಂಬ ತೋರಿದ ಚಿರಂಜೀವ.

"ಜೀವನವಿರುವದು ಕೇವಲ ಹಣಗಳಿಕೆಗಾಗಿ ಅಲ್ಲವಲ್ಲ? ಅದೊಂದನ್ನೇ ಉದ್ದೇಶವಾಗಿಟ್ಟುಕೊಂಡರೆ ಮೂವತ್ತೈದು ವರ್ಷಗಳ ಹಿಂದೆ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಪರಿಸರ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದ ನಿಮ್ಮಪ್ಪ ಭಾರತಕ್ಕೆ ಮರಳಿ ಬರುತ್ತಿರಲಿಲ್ಲ. ಎಲ್ಲ ಬಗೆಯ ಕಷ್ಟ-ನಷ್ಟ ಅನುಭವಿಸುತ್ತಿರಲಿಲ್ಲ... ಮಾನವೀಯತೆ, ಜೀವನದ ಚಿಕ್ಕಪುಟ್ಟ ಮೌಲ್ಯಗಳನ್ನೂ ಸರಿಯಾಗಿ ಅರಿತುಕೊಂಡು ಬಾಳುವದು ಮುಖ್ಯ. ಧನವೇ ಮಾನದಂಡವಾದ ನಿನ್ನ ಅಮೇರಿಕೆಯಲ್ಲಿ ಮಾನವೀಯತೆಗೆ ಬೆಲೆ ಉಂಟೇನಯ್ಯ?" ಮರುಸವಾಲು ಒಡ್ಡಿದಳು, ಜೋ.

"ನಿನ್ನ-ನಮ್ಮದಾಗಿದ್ದ ಬೆಂಗಳೂರಿನಲ್ಲಿ ಏನು ಮಾನವೀಯತೆ ಇದೆ ಮಹಾ? ಕಣ್ಣುಹಾಯಿಸಿದಲ್ಲೆಲ್ಲ ಕೈ ಮುಂದೆ ಚಾಚುವ ಬಡಬಗ್ಗರು. ತಮ್ಮ ನಿಗದಿತ ಕೆಲಸಕ್ಕೇ ಲಂಚಕ್ಕೆ ಕೈಯೊಡ್ಡುವ ಬಗೆ ಬಗೆಯ ಸಿಬ್ಬಂದಿ. ಸಾರ್ವಜನಿಕ ಹಣ ಕೊಳ್ಳೆ ಹೊಡೆಯುವ ಲಾಭಬಡಕರು, ಕೊಳಚೆ, ಕಲುಷಿತ ವಾತಾವರಣ. ಎಲ್ಲದಕ್ಕೂ ಕಲ್ಲುಹಾಕುವ ಪ್ರವೃತ್ತಿ, ಇವನ್ನೆಲ್ಲ ಹೆಜ್ಜೆ ಹೆಜ್ಜೆಗೆ ಎದುರಿಸುತ್ತ ಜೀವನ ನಡೆಸುವ ತಾಳ್ಮೆ ಉಳಿದಿಲ್ಲ, ಅಮ್ಮ!" ಮಗ ತನ್ನ ನಿರ್ಧಾರ ತಿಳಿಸಿದ.

"ನೂರು ಕೋಟಿ ಜನರು ಜೀವಿಸುವ ಭಾರತದಲ್ಲಿ ನಿನ್ನೊಬ್ಬನಿಗೆ ಹೊಂದಿಕೊಳ್ಳಲಾಗದು! ಎಂಬ ವಿಚಾರ ಹಾಸ್ಯಾಸ್ಪದವಾಗಿದೆ. ನಾವು ಹೆಚ್ಚಿನ ಅಧಿಕಾರ, ವರ್ಚಸ್ಸಿನ ಲಾಲಸೆ, ಅಥವಾ ಅತಿ ಆಸೆ-ಲೋಭಗಳಿಗೆ ಎಳಸದೇ ಇದ್ದುದರಲ್ಲೇ ನೆಮ್ಮದಿಯಿಂದ ಬಾಳಲು ಕಲಿತರೆ, ನಮ್ಮ ಚಿತ್ತ-ಶಾಂತಿಯನ್ನು ಯಾರಿಂದಲೂ ಅಪಹರಿಸಲು ಆಗುವುದಿಲ್ಲ ಕಣೋ!... ಹೋಗಲಿ ನಿನಗೆ ಬೆಂಗಳೂರು ಸರಿ ಹೋಗದಿದ್ದರೆ ಚಿಕ್ಕ ಊರಿನಲ್ಲಿ, ಅಥವಾ ಪ್ರಶಾಂತವಾದ ಪರಿಸರದ ಹಳ್ಳಿಯಲ್ಲಿ ಬೀಡುಬಿಡಬಹುದಲ್ಲ? ಅರ್ಥಾತ್, ಪ್ರಾಯೋಗಿಕವಾಗಿ ನೆಲೆಸಬಹುದೆಲ್ಲ?" ಕ್ರಿಶ್‌ರಿಂದ ಹಿತವಾದ ಉಕ್ಕಿತು.

"ಇದೀಗ ಸರಿಯಾದ ಸೂಚನೆ! ಇಂದು ಕಂಪ್ಯೂಟರ್ ತಂತ್ರಜ್ಞಾನ ಎಷ್ಟೊಂದು

ಬೆಳೆದುಬಿಟ್ಟಿದೆ, ಎಂದರೆ ಹಿಂದಿನಂತೆ ಆಫೀಸು ಸಿಬ್ಬಂದಿ, ಫರ್ನಿಚರ, ಸರಂಜಾಮುಗಳಿಗೆ ಹಣದ ಹೊಳೆ ಹರಿಸಬೇಕಾಗಿಲ್ಲ. ಮನೆಯಲ್ಲಿದ್ದುಕೊಂಡೇ, ಕೇವಲ ಕಂಪ್ಯೂಟರ್ ಒಂದರಿಂದ ವಿಶ್ವದೊಂದಿಗೇ ನೇರ ವ್ಯವಹಾರ ಮಾಡಬಹುದಾದಂತಹ ಕಾಲ ಬಂದಿದೆ... ನಮ್ಮ ಪೂರ್ವಜರ ಊರಾದ ಭಾಸ್ಕೇರಿ ಹಳ್ಳಿಯ ಮನೆಯಲ್ಲಿ ವಾಸವಾಗಿದ್ದು ನಮ್ಮ ವೃತ್ತಿಯನ್ನು ಮುಂದುವರಿಸಬಹುದಾಗಿದೆ! ಆದರೆ ಬೆಂಗಳೂರಿಗನಾದ ನೀನು ಅಲ್ಲಿ ಇದ್ದು ನಿನ್ನ ಕ್ರಿಯಾಶೀಲ ಚಟುವಟಿಕೆಗಳನ್ನು ಮೊದಲಿನಂತೆಯೇ ಮುಂದುವರಿಸಿಕೊಂಡು ಹೋಗಲು ಸಾಧ್ಯವೇ? ಎಂದು ಪ್ರಪ್ರಥಮವಾಗಿ ವಿಚಾರಿಸಬೇಕಾಗಿದೆ!" ಎಂದು ವಿಕ್, ಗಂಭೀರನಾಗಿ ನುಡಿದ.

"ನೀನು ನನ್ನನ್ನು ಸರಿಯಾಗಿ ಅರಿತುಕೊಂಡಂತಿಲ್ಲ. ನಾನು ಅಮೇರಿಕೆಯ ಅತಿ ಮುಂದುವರಿದ ರಾಜ್ಯವೆನಿಸಿಕೊಂಡ ನ್ಯೂಯಾರ್ಕ್‌ನ ನಾಲ್ಕು ವರ್ಷಗಳ ವಾಸ್ತವ್ಯದ ಬಳಿಕ ಭಾರತಕ್ಕೆ ಮರಳಿ, ಮರಳುಗಾಡಿನ ರಾಜ್ಯವಾದ ರಾಜಸ್ಥಾನದ ತೀರ ಹಿಂದುಳಿದ ಹಳ್ಳಿಯಾದ ಜೋಬನೇರದಲ್ಲಿ ಮೂರು ವರ್ಷಕಾಲ ನೆಮ್ಮದಿಯಾಗೇ ಇದ್ದೆ. ನಂತರ ನಕ್ಸಲೈಟ್ ಹಾವಳಿಗೆ ಹೆಸರುವಾಸಿಯಾಗಿದ್ದ ಪಶ್ಚಿಮ ಬಂಗಾಲದ ಪ್ಲಾಸಿಯ ಹಳ್ಳಿಗಾಡಿನಲ್ಲಿ ಎರಡು ವರ್ಷ ನೆಲೆಸಿದ್ದೆ. ಮಧ್ಯಪ್ರದೇಶದ, ಯಾವ ನಾಗರಿಕ ಸವಲತ್ತೂ ಇಲ್ಲದ ಛಿಂದವಾಡದ ಆದಿವಾಸಿಗಳ ನಡುವೆ ಒಂದು ವರ್ಷ ಗೆಲುವಾಗಿಯೇ ಇದ್ದೆ. ಕಳೆದ ಹದಿನೆಂಟು ವರ್ಷಗಳಿಂದ ಮಲ್ಲೇಶ್ವರಂದ ವಿಸ್ತಾರವಾದ ಮನೆಯಲ್ಲಿ ಹಾಯಾಗಿದ್ದರೂ, ಬೇರೆ ಯಾವ ಕಡೆಯಲ್ಲೂ ಹೊಂದಾಣಿಕೆ ಮಾಡಿಕೊಂಡು ಇರಲಾರೆನೆಂಬ ನಿನ್ನ ಗ್ರಹಿಕೆ ಹುರುಳಿಲ್ಲದ್ದು! ನನ್ನ ಹುಟ್ಟೂರಾದ ಹೊನ್ನಾವರ, ಇಂದಿಗೂ ನನಗೆ ಅತ್ಯಂತ ಪ್ರಿಯವಾದ ಕನಸಿನ ಮನೆ. ನನ್ನ ಇಳಿವಯಸ್ಸನ್ನು ಅಲ್ಲಿ ಕಳೆಯುವಂತಾದರೆ ಅದಕ್ಕಿಂತ ಹೆಚ್ಚಿನ ಭಾಗ್ಯ ಇನ್ನೊಂದಿಲ್ಲ! ಎಂದು ಪರಿಗಣಿಸುತ್ತೇನೆ" ಮಾತಿನಲ್ಲಿ ಮಗನನ್ನು ಮೀರಿಸಿದ ಖುಷಿಯಿಂದ ಕ್ರಿಶ್ ಮುಖ ಅರಳಿಸಿದರು.

"ನನಗೋ! ಕೆಲಸದವರ ಕಿರುಕುಳದಿಂದ ಬೆಂಗಳೂರು ಜೀವನ ಕಷ್ಟಕ್ಕಿಟ್ಟುಕೊಂಡಿದೆ. ಊರಲ್ಲಿರುವ ವಾರಗಿತ್ತಿಯರು, ಹೊರಕೆಲಸದಾಕೆ, ಒಳಕೆಲಸದಾಕೆ, ಅಡಿಗೆಯವಳು, ಮಕ್ಕಳನ್ನು ನೋಡಿಕೊಳ್ಳುವವಳು ಎಂದು ಮೂರು ನಾಲ್ಕು ಸಹಾಯಕಿಯರನ್ನು ಹೊಂದಿ, ಸುಖ ಸಂಸಾರ ನಡೆಸುತ್ತಿರುವಾಗ, ಓರ್ವಳ ಸಹಾಯವೂ ದಕ್ಕದ ನನಗೆ ಹೊಟ್ಟೆಯುರಿ ಆಗದೇ ಇದ್ದೀತೇ? ಬೇರೆಲ್ಲ ಅನುಕೂಲಗಳು ಬೆಂಗಳೂರಿನಲ್ಲಿ ಇದ್ದಿರಬಹುದು. ಮನೆಗೆಲಸಗಳ ಬಿಡುವು ಎಂಬುದು ಇಲ್ಲ!... ಬೇರೆ ಯಾರ ನೆರವು ಸಿಗದಿದ್ದರೂ ರಾಜಸ್ಥಾನದಲ್ಲಿ ನಮ್ಮೊಂದಿಗಿದ್ದ ತಾರಾ, ಊರಲ್ಲಿದ್ದಾಳೆ. ಅಲ್ಲಿ ಪರಿಚಿತರೆಲ್ಲ 'ತಾರಾಕಿ ಮಮ್ಮಿ' ಎಂದೇ ನನ್ನನ್ನು ಗುರುತಿಸುವಷ್ಟು ಖಾಸಾ ಮನೆಯವಳಾಗಿ ಹೋಗಿದ್ದಳು. ಪ್ರತಿ ಸಲ ಊರಿಗೆ ಹೋದಾಗ ಅವಳನ್ನು ಕಂಡು, ಮಾತನಾಡಿಸಿ, ನಾಲ್ಕು ಕಾಸು ಕೈಯಲ್ಲಿ ಹಾಕಿಯೇ ಬರುತ್ತೇನೆ. ಪಾಪ! ಈಗಲೂ ಹಿಂದಿನ ಪ್ರೀತಿ-ಅಕ್ಕರೆಗಳನ್ನು ಇಟ್ಟುಕೊಂಡಿದ್ದಾಳೆ. ನನಗೆ ಸಹಾಯ ಮಾಡಲು ಹಿಂದೇಟು ಹಾಕಲಿಕ್ಕಿಲ್ಲ. ಅವಳಿಗೆ ನಾಲ್ಕು ಹೆಣ್ಣುಮಕ್ಕಳಂತೆ! ಅವರಲ್ಲಿ ಒಬ್ಬಳಾದರೂ ನನ್ನ ಸಹಾಯಕ್ಕೆ ಬರಬಹುದು!" ಎಂದು ತನ್ನ ಕನಸು ನನಸಾದೀತೇ? ಎಂದು ಜೋ ವಿಸ್ಮಯಪಟ್ಟಳು.

"ನನಗಂತೂ ಬುದ್ಧನ ನಾಡಾದ ಭಾರತ, ಪುಣ್ಯಭೂಮಿ, ಭಾರತೀಯನನ್ನು ಮದುವೆಯಾದೆನೆಂದು ನನ್ನ ದೇಶವಾಸಿನಿಯರು ಹಲವರು ಸಂಭ್ರಮಪಟ್ಟಿದ್ದಾರೆ. ! ರಾಮ-ಸೀತಾ-ಲಕ್ಷ್ಮಣ ಇರುವಲ್ಲಿ ನಾನೂ..." ಕಿಮ್ ನುಡಿಯುತ್ತಿದ್ದಂತೆ "ಹನುಮಾನ್!" ಎಂದು ವಿಕ್, ವಾಕ್ಯವನ್ನು ಪೂರ್ತಿಗೊಳಿಸಿದ. ಎಲ್ಲರೂ ನಕ್ಕೆವು.

"ಹಾಗಾದರೆ ಸರಿ! ನಾವು ನಾಲ್ವರೂ ಹೊನ್ನಾವರಕ್ಕೆ ಹೋಗೋಣ. ಅಲ್ಲಿ ಅಕ್ಕ ಪಕ್ಕದಲ್ಲಿ ನೆಲೆಸುವ ಸಾಧ್ಯತೆಯನ್ನು ಚೆನ್ನಾಗಿ ಪರಿಶೀಲಿಸೋಣ. ಬೇಗನೇ ಇಂಥ ಅವಲೋಕನ ಕೈಕೊಂಡರೆ ಚೆನ್ನಾಗಿರುತ್ತದಲ್ಲವೇ?" ಕ್ರಿಶ್‌ರ ಮಂಡನೆ, ಸರ್ವಾನುಮತದಿಂದ ಪಾಸಾಯಿತು.

೨. ಒಮ್ಮತ

ರಾಜ್ಯದ ರಾಜಧಾನಿಯಿಂದ ಹುಟ್ಟೂರಿಗೆ ಪಯಣಿಸಲು ವೇಗದ ವಿಮಾನ ಸಾರಿಗೆಯಾಗಲಿ, ಸುಖದ ರೇಲು ಪ್ರಯಾಣದ ಸೌಕರ್ಯವಾಗಲೀ ಇಲ್ಲ. ಅಂತೆಯೇ ಪುತ್ರನು, ನಿವೃತ್ತರಾದ ಮಾತಾ-ಪಿತರಿಗೆ ಸುದೀರ್ಘ ಪ್ರಯಾಣವು ಪ್ರಯಾಸಕಾರಿ ಆಗದಿರಲಿ ಎಂದು ಹವಾನಿಯಂತ್ರಿತ ಟ್ಯಾಕ್ಸಿಯನ್ನು ಗೊತ್ತುಪಡಿಸುವೆನೆಂದ. ಆದರೆ ಊರೂರುಗಳ ಮಧ್ಯಂತರದ ಆಗುಹೋಗುಗಳನ್ನು ಬಸ್ ನಿಲ್ದಾಣದಿಂದಲೇ ಅರಿಯಲು ಸಾಧ್ಯ! ಅಂತೆಯೇ ಜನ ಸಾಮಾನ್ಯರೊಂದಿಗೇ ನಾವು ಬಸ್ಸಿನಿಂದ ಪಯಣಿಸಬೇಕೆಂದು ಕ್ರಿಶ್ ಪಟ್ಟುಹಿಡಿದರು. ಎಂದಿನಂತೆ ಅವರ ಅಂಬೋಣವೇ ಗೆದ್ದಿತು.

ಬಸ್ಸು ಹೊರಡಲು ನಿಗದಿತವಾದ ವೇಳೆ ಜಾರಿಕೊಂಡು ಅರ್ಧ, ಮುಕ್ಕಾಲು ಗಂಟೆ ಕಳೆದರೂ ವಾಹನದ ಸುಳಿವೇ ಇಲ್ಲ. ಒಂದರ ಹಿಂದೊಂದು ಬರುತ್ತಿದ್ದ ಆಕಳಿಕೆಗಳನ್ನು ಅದುಮಿ ಹಿಡಿಯುವ ಸರ್ವಪ್ರಯತ್ನ ನಡೆಸಿ ವಿಫಲನಾದ ವಿಕ್, "ಕಾರೊಂದನ್ನು ಮೊರೆಹೊಕ್ಕರೆ ಈ ಯಾವ ಜಂಜಾಟವನ್ನು ಎದುರಿಸಬೇಕಾಗಿರಲಿಲ್ಲ. ಅದು ನಮಗೆ ಬೇಕಾದಲ್ಲಿ ಬೇಕಾದಾಗ ಓಡುತ್ತಿದ್ದರೆ, ಇದು ನಡೆದಾಡಲಾರಂಭಿಸಿದರೂ ಕುಕ್ಕರಿಸಬೇಕು. ಗಕ್ಕನೆ ನಿಂತು ಬಿಟ್ಟರೂ ಸುಮ್ಮನಿರಬೇಕು..." ಎಂದು ಅಸಹನೆ ತೋರಿದ. "ತಾಳ್ಮೆ ಬೇಕಪ್ಪ! ತಾಳ್ಮೆ ಇದ್ದವನೇ ಅರ್ಥಪೂರ್ಣ ಬಾಳ್ವೆ ಮಾಡಬಲ್ಲ. ನಮ್ಮದೇ ಒಂದು ಹೆಲಿಕ್ಯಾಪ್ಟರ್ ಇದ್ದಿದ್ದರೆ ಒಂದೇ ಗಳಿಗೆಯಲ್ಲಿ ನಮ್ಮೂರು ಸೇರಬಹುದಿತ್ತು ಎಂದು ನನಗೂ ಗೊತ್ತು. ಆದರೆ ಪ್ರಯಾಣದ ಕಷ್ಟ-ನಷ್ಟಗಳನ್ನು ಅರಿತಾಗಲೇ ಬಾಳ ಪಯಣವನ್ನು ಸುಸೂತ್ರವಾಗಿ ನಡೆಸಲು ಸಾಧ್ಯ! ಎಂಬುದು ಸ್ವಅನುಭವದ ಮಾತು. ಯಾರೇ ಆಗಲಿ, ಅಂಗಳ ಹಾರಿ ಗಗನದತ್ತ ಧುಮುಕಬೇಕು. ನನ್ನ ಬಾಲ್ಯದಲ್ಲಿ ಇದ್ದ ಸಾರಿಗೆಯ ವ್ಯವಸ್ಥೆಯನ್ನು ಅವಲಂಬಿಸಬೇಕಾಗಿ ಬಂದಿದ್ದರೆ ನೀನು ಹೇಗೆ ಪ್ರತಿಕ್ರಿಯಿಸುತ್ತಿದ್ದಿ ಎಂದು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ..." ಎಂದು ಕ್ರಿಶ್ ನೆನಪಿಸಿಕೊಳ್ಳುತ್ತಿದ್ದಾಗ, "ಗೊತ್ತು! ಆಗ ಕತ್ತೆಯ ಮೇಲೆ ಪ್ರವಾಸ ಮಾಡುತ್ತಿದ್ದರಲ್ಲವೇ ?" ಪರಿಹಾಸ ಮಾಡಲು ಪುತ್ರನು ಹವಣಿಸಿದ.

"ನಮ್ಮ ಜಿಲ್ಲೆಯಲ್ಲಿ ಕತ್ತೆಗಳಿಗೂ, ಮಾನವ ಕತ್ತೆಗಳಿಗೂ ಸ್ಥಾನವಿಲ್ಲವೆಂದು ಗೊತ್ತಿಲ್ಲವೇ ? ಅಂತೆಯೇ ಗೋವುಗಳಂತೆಯೇ ಹೋರಿ, ಎತ್ತುಗಳು ನಮಗೆ ಅತ್ಯಂತ ಆತ್ಮೀಯವಾದ

ಜಾನವಾರು. ಹೊಲ ಉಳಲು, ಭಾರ ಹೊರಲು, ಊರಿನಿಂದೂರಿಗೆ ಪಯಣಿಸಲು ಕೂಡ ಎತ್ತು ಎಳೆಯುವ ಬಂಡಿಗಳನ್ನೆ ಬಳಸುತ್ತಿದ್ದರು. ಬಿಸಿಲು, ಮಳೆ-ಗಾಳಿಗಳಿಂದ ಸಂರಕ್ಷಿಸಲು ಬಿದಿರಿನ ಚಾಪೆಯ ಆಚ್ಛಾದನೆ ಬಂಡಿಗೆ ಜೋಡಿಸಿ, ಮೆತ್ತಗಿನ ಹಾಸನ್ನು ಹೊಂದಿಸಿ, ಪಾತ್ರೆಪರಗಣೆ ಅಳವಡಿಸಿ, ದೂರದ ಪ್ರವಾಸ ಕೈಕೊಳ್ಳುತ್ತಿದ್ದರು. ಎತ್ತುಗಳು ದಣಿದಾಗ, ನೆರಳಿನಲ್ಲಿ ತಂಗಿ, ಅವಕ್ಕೆ ಹುಲ್ಲು-ಹಿಂಡಿ, ಮೇವು ತಿನ್ನಿಸಿ, ತಾವೂ ಅಡಿಗೆ ಮಾಡಿ, ಊಟ-ವಿಶ್ರಾಂತಿ ಮುಗಿಸಿ ಮುಂದಿನ ಪ್ರಯಾಣ ಕೈಕೊಳ್ಳುತ್ತಿದ್ದರು" ಎಂದು ಕ್ರಿಶ್ ಕಣ್ಣು ಮುಚ್ಚಿ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದಾಗ, ಕಿಮ್, "ಅದೆಂತಹ ರಮ್ಯ ಪ್ರಯಾಣವಿದ್ದಿರಬೇಕು. ಎತ್ತುಗಳ ಕೊರಳಿನ ಗಿಣಿಗಿಣಿ, ತಂಪಾದ ನೆರಳು, ನೆಂಟರಿಷ್ಟರ ಮಾತು-ಹಾಡು..." ಎಂದು ಮಾತು ಜೋಡಿಸಿದಳು. "ಕಾಡಾನೆ-ಹುಲಿ ಇತರ ಕಾಡುಮೃಗಗಳ ಆತಂಕ ಇದ್ದೇ ಇರುತ್ತಿತ್ತು. ಒಮ್ಮೆ ದೊಡ್ಡಪ್ಪನವರ ನೇತೃತ್ವದಲ್ಲಿ ಪಯಣ ಹೊರಟಿತ್ತು. ವಿಶ್ರಾಂತಿ ಪಡೆಯುತ್ತಿದ್ದಾಗ, ದೂರದಲ್ಲೆಲ್ಲೊ ಪಟ್ಟೆ ಹುಲಿ, ನಿಶ್ಚಿಂತೆಯಿಂದ ಸುಳಿದು ಹೋಯಿತಂತೆ. ಕಿರಿಯರು ಹೆದರಿದರು: "ಹುಲಿ ಬಂದು ಆಕ್ರಮಿಸಿದರೆ ಏನು ಮಾಡುವದು ?" ಎಂದರು. ಚಿಕ್ಕಪ್ಪ "ದೊಡ್ಡಣ್ಣ ಜೋರಾಗಿ ಒಂದು ಡುರುಕಿ ಹೊಡೆದರೆ, ಎಂಥ ದೊಡ್ಡ ಹುಲಿಯಾದರೂ ಹೆದರಿ ಕಾಲಿಗೆ ಬುದ್ಧಿ ಹೇಳದೇ ಇರುತ್ತದೆಯೇ ?" ಎಂದರಂತೆ. ಆಗಲೇ ಆ ಹುಲಿ ಹಿಂತಿರುಗಿ ಇವರನ್ನು ನೋಡಿ, ಆಕಳಿಸಿ, ತಿರಸ್ಕಾರದಿಂದ ಹೊರಟು ಹೋಯಿತಂತೆ! ಆ ಬಳಿಕ ಎಲ್ಲರೂ ಬೊಬ್ಬೆ-ಕೂಗಾಟ, ಪಾತ್ರೆ ಬಡಿದು ಗದ್ದಲ ಹಾಕುತ್ತ ಪ್ರಯಾಣ ಮುಂದುವರಿಸಿದರಂತೆ." ಕ್ರಿಶ್ ಬಾಲ್ಯದ ಒಂದು ಘಟನೆಯನ್ನು ನೆನಪಿಸಿಕೊಂಡರು.

ಹೊರಡುವ ವೇಳೆ ದಾಟಿದ ಒಂದು ಗಂಟೆಯ ಬಳಿಕ ಕೆಸರಿನಿಂದ ಎದ್ದು ಬಂದ ಹಂದಿಯನ್ನು ಹೋಲುವ ಬಸ್ಸೊಂದು ಧಾವಿಸಿ ಬಂದು ಪ್ರಯಾಣಿಕರ ಎದುರಿಗೇ ಗಕ್! ಎಂದು ನಿಂತಿತು. ದೂರದ ಮಳೆ ಕೊಚ್ಚೆ ನೀರಿನ ಪ್ರವಾಸ ಮುಗಿಸಿ ತಡವಾಗಿಯೇ ಬಂದು ಸೇರಿದ ವಾಹನವಂತೆ. ಆದರೆ ಹೆಚ್ಚು ಪ್ರಯಾಣಿಕರು ಇರದೇ ತಮಗೆ ಅನುಕೂಲವಿರುವ ಆಸನಗಳನ್ನು ಹುಡುಕಿ ಕುಳಿತುಕೊಳ್ಳಲು ಅನುಕೂಲವಾಯಿತು. "ಬಾಪ್ಪಾ, ನಿಮ್ಮ ಬಾಲ್ಯದ ಅನುಭವಗಳು ಕನಸಿನಲೋಕಕ್ಕೆ ಕರೆದೊಯ್ಯುತ್ತವೆ! ಅಂದಿನ ಸಾರಿಗೆ ವ್ಯವಸ್ಥೆ ಕುರಿತು ಇನ್ನಷ್ಟು ಹೇಳಬಾರದೇ ?" ಎಂದಳು ಸೊಸೆ.

"ಆ ಬಳಿಕ ಕೆಲವು ಸಾಹಸಿಗಳು 'ಮೋಟಾರ್' ಎಂಬ ಹೊಸ ವಾಹನ ಖರೀದಿಸಿ ನಡೆಸಲಾರಂಭಿಸಿದರು. ಹೊನ್ನಾವರದಿಂದ ಕೇವಲ ಹನ್ನೆರಡು ಮೈಲು ದೂರದ ಕುಮಟೆಯನ್ನು ಸೇರಲು ಅರ್ಧದಿನವೇ ಬೇಕಿತ್ತು. ಆ ಮಾತು ಬೇರೆ! ಆದರೆ ಎತ್ತಿನಗಾಡಿಗಿಂತ ವಾಸಿ! ಈ ಹೊಸ ಸಾಹಸದಿಂದಾಗಿ 'ಚಿತ್ರಾಪುರ' 'ಹನುಮಾನ್' ಎಂಬ ಮೋಟಾರು ಕಂಪನಿಗಳು ಅಸ್ತಿತ್ವಕ್ಕೆ ಬಂದವು. ಇಷ್ಟಾದರೂ ಕಾಲ್ನಡೆಯವರು ಪಯಣ (ಎತ್ತಿನ ಗಾಡಿ ಪ್ರಯಾಣ) ಹೊರಡುವವರು ಇದ್ದೇ ಇದ್ದರು. ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಗಿ, ಪೆಟ್ರೋಲನ್ನು ಯುದ್ಧ ವ್ಯವಸ್ಥೆಗೆ ಬ್ರಿಟಿಷರು ಬಳಸಲಾರಂಭಿಸಿದರು. ವಾಹನಗಳೆಲ್ಲ ಉಗಿಯ ಶಕ್ತಿಯಿಂದ ನಡೆಯಲಾರಂಭಿಸಿದವು! ಬೃಹದಾಕಾರದ ಹಂಡೆ ನೀರನ್ನು ಕಾಸಲು ಬೇಕಾದ

ಇದ್ದಲು ಹೊತ್ತು ಕೊಂಚವೇ ಸ್ಥಳದಲ್ಲಿ ಕಿಕ್ಕಿರಿದು ತುಂಬಿದ ಪ್ರಯಾಣಿಕರಿಂದ ಈ ಬಸ್ಸುಗಳು ಭಯಾನಕವಾಗಿ ಕಾಣುತ್ತಿದ್ದವು. ಇಂದಿನ ಪೀಳಿಗೆಗೆ ಎಷ್ಟು ಸವಲತ್ತುಗಳಿದ್ದರೂ ಸಾಲವು. ಹೈಟೆಕ್! ಏಯರ್ ಬಸ್!! ಸುಪರ್ ಡಿಲಕ್ಸ್!!" ಕ್ರಿಶ್ ನೊಂದು ನುಡಿದರು.

ತುಮಕೂರನ್ನು ಹಿಂದೆ ಹಾಕಿದ ಬಸ್ಸು ಬೆಂಗಳೂರು ಹೊನ್ನಾವರ ರಸ್ತೆಯಲ್ಲಿರುವ ತಿಪಟೂರಿನ ಬಯಲ ಬಳಿ ಗಕ್ಕನೆ ನಿಂತಿತು. ನಡುರಾತ್ರೆಯ ಭೋಜನದಲ್ಲಿ ವಿಶ್ವಾಸವಿಟ್ಟವರಿಗೆ ಅನುವು ಮಾಡಿಕೊಟ್ಟಿತು. ಎಳನೀರು ಕಂಡರಿಯದ ಸೊಸೆಗೆ ಅದನ್ನು ಪರಿಚಯಿಸಲಾಯಿತು. ತುಂಬ ಸಂಭ್ರಮದಿಂದ ಅದನ್ನು ಆಸ್ವಾದಿಸುತ್ತ "ಕೊಕೊ ಕೋಲಾ, ಪೆಪ್ಸಿ ಕೋಲಾಗಳು ಇದಕ್ಕೆಲ್ಲಿ ಸಾಟಿ? ನಿಜಕ್ಕೂ ಅಮೃತದಂತಿದೆ!" ಎಂದು ಬಾಯಿ ಚಪ್ಪರಿಸಿದಳು.

"ಹೊನ್ನಾವರದಲ್ಲಿ ನಮ್ಮದೇ ತೆಂಗಿನ ತೋಟವಿದೆ. ತೋಟದ ಮನೆಯೂ ಇದೆ. ನಾವೆಲ್ಲ ಅಲ್ಲಿಯೇ ವಾಸಿಸುವಂತಾದರೆ ಬೆಳಗಿನಿಂದ ಸಂಜೆಯವರೆಗೆ ಬೇಕಾದಷ್ಟು ಎಳನೀರು ಕುಡಿಯಬಹುದು" ಎಂದಾಗ "ಈ ಒಂದು ಕಾರಣಕ್ಕಾಗಿಯೇ ನಮ್ಮೂರಿನಲ್ಲಿ ಇರುವಂತಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಕಿಮ್ ಕಿರುಗುಟ್ಟಿದಳು.

ಮುಂದಿನ ಊರಾದ ಕಡೂರಿನಲ್ಲಿ ಈರ್ವರು ಸಮವಸ್ತ್ರಧಾರಿ ಪೋಲಿಸರು ಅಧಿಕಾರಯುತರಾಗಿ ಬಸ್ ಹತ್ತಿದಾಗ ಮಗನು ಪ್ರಶ್ನಾರ್ಥಕವಾಗಿ ತಂದೆಯತ್ತ ನೋಡಿದ. "ಮುಂಬರುವ ರಸ್ತೆ ದಟ್ಟವಾದ ಕಾಡಿನೊಳಗಿಂದ ಓಡುವದರಿಂದ ಹಿಂಸಾರತ ಯುವಕರಿಗೆ ಪ್ರಯಾಣಿಕರನ್ನು ದೋಚಲು ಅನುಕೂಲವಾಗಿದೆ. ಇದಾಗಲೇ ಈ ಮಾರ್ಗದಲ್ಲಿ ಹಲವಾರು ದರೋಡೆಗಳಾಗಿದ್ದರಿಂದ ಸರಕಾರ, ಹೆಚ್ಚಿನ ಸಂರಕ್ಷಣೆ ಕೊಡಮಾಡಿದೆ. ಇದರಂತೆ 'ಜೋಗ ಫಾಲ್ಸ್' ಕಳೆದ ನಂತರ ಮಾವಿನಗುಂಡಿ ದಾಟಿ ಬಸ್ಸು 'ಅರಬೈಲ' ಘಟ್ಟ ಹತ್ತುತ್ತದೆ. ಅಲ್ಲಿಯೂ ವಾಹನಗಳನ್ನು ಸುಲಿಯುವ ಚಟುವಟಿಕೆಗಳು ಏಕಪ್ರಕಾರವಾಗಿ ನಡೆದೇ ಇರುತ್ತವೆ. ಈ ಕೃತ್ಯಗಳಲ್ಲಿ ತೊಡಗಿರುವವರೆಲ್ಲ ಸ್ಥಾನೀಯರ ಮಕ್ಕಳೇ! ಹದಿಹರೆಯದವರು. ಶಾಲಾ-ಕಾಲೇಜು ಶಿಕ್ಷಣ ಮುಗಿಸಲಾಗದೇ ಒಂದಾನು ವೇಳೆ ಮುಗಿಸಿದರೂ ನೌಕರಿ ದೊರಕಿಸಲಾಗದೇ, ಹಿರಿಯರಂತೆ ಪರಿಶ್ರಮದ ದುಡಿತವಾಗದೇ ಈ ಸುಲಭ ಹಣದ ವೃತ್ತಿಗಳನ್ನು ತಮ್ಮವನ್ನಾಗಿಸಿದ್ದಾರೆ." ಕ್ರಿಶ್ ನುಡಿದಾಗ, "ಈ ಕ್ರಮ ಅಮೇರಿಕೆಯಲ್ಲೂ ಸಾಮಾನ್ಯವಾಗಿ ಬಿಟ್ಟಿದೆ! ಅನೇಕ ಕರಿಯರು ಇದೇ ಮಾರ್ಗವನ್ನು ಅನುಸರಿಸುತ್ತಾರೆ" ಎಂದು ಸಂತೈಸಲು ವಿಕ್, ಯತ್ನಿಸಿದ.

ಚಲಿಸುವ ವಾಹನಕ್ಕಿಂತ ವೇಗವಾಗಿ ಅವರೆಲ್ಲರ ವಿಚಾರ ಲಹರಿ ಓಡುತ್ತಿದ್ದಂತೆ, ದಟ್ಟಕಾಡಿನ ನಡುವೆ ಬಸ್ಸಿನ ಗಾಲಿಯೊಂದು 'ಠುಸ್!' ಎಂದು ಕೊನೆಯುಸುರು ಎಳೆಯಿತು. ಗಾಡಿ ಸ್ತಬ್ಧವಾಯಿತು. ಕೆಳಗಿಳಿದು ನಸುಬೆಳಕಿನಲ್ಲಿ ಸುತ್ತಲ ಪರಿಸರ ವೀಕ್ಷಿಸುತ್ತಿದ್ದಂತೆ ಕ್ರಿಶ್ ಅವರಿಗೆ ೧೯೫೦ರಷ್ಟು ಹಿಂದಿನ ತಮ್ಮ ಯೌವನದ ದಿನಗಳು ನೆನಪಾದವು. "ಯಾವ ಸುಖಜೀವನದ ಸೌಕರ್ಯಗಳೂ ಇಲ್ಲದ ಅಂದಿನ ದಿನಗಳಲ್ಲಿ ನಾವುಗಳು ಸಾಹಸಕ್ಕೇನೂ ಕಡಿಮೆ ಮಾಡಿಕೊಂಡಿರಲಿಲ್ಲ. ಶರಾವತಿ ನದಿ ತೀರದ ಹೊನ್ನಾವರದಲ್ಲಿ ಹುಟ್ಟಿ ಬೆಳೆದರೂ ಆ

ನದಿ ಆರ್ಭಟಿಸುತ್ತ ಪಾತಾಳಕ್ಕೆ ಧುಮುಕುವ ಗೇರಸಪ್ಪಾ ಧಬಧಬೆ (ಜೋಗ್ ಫಾಲ್ಸ್)ಯ ದರ್ಶನ ಲಾಭ ಪಡೆಯದಿದ್ದರೆ ಅವಮಾನವಲ್ಲವೇ? ಅಂತೆಯೇ ಮ್ಯಾಟ್ರಿಕ್ (S.S.L.C.) ಪರೀಕ್ಷೆಯ ನಂತರ ಪರಿಣಾಮ ಕಾಯುವ ದಿನಗಳಲ್ಲಿ ನಾವು ಆರುಜನ ಸ್ನೇಹಿತರು ಸೇರಿಕೊಂಡು ಕಾಲುನಡಿಗೆಯಲ್ಲೇ ದೂರದ ದಾರಿಯನ್ನು ಸವೆಸಲಾರಂಭಿಸಿದ್ದೆವು. ಮೇ ತಿಂಗಳ ಸೆಕೆ, ದಣಿವು ಹಸಿವು ಬಾಯಾರಿಕೆಗಳನ್ನು ಲೆಕ್ಕಿಸದೇ ನಡೆದಿದ್ದೆವು. ಆಗ ಅತಿ ಹೆಚ್ಚಿನ ಅಬ್ಬರದಿಂದ ಕೆಳಕ್ಕೆ ಧುಮುಕುವ ಜಲರಾಶಿಯ ದರ್ಶನ ಮಾತ್ರದಿಂದಲೇ ಜೀವನ ಸಾರ್ಥಕವೆನಿಸಿತ್ತು. 'ಅಬ್ಬರ' ಧಬಧಬೆ, ಬ್ರಿಟಿಷ್ ಬಂಗಲೆಯ ತೀರ ಸನಿಯದಿಂದಲೇ ಹಾದು ಹೋಗಿ ಧುಮುಕುತ್ತಿತ್ತಾದ್ದರಿಂದ ಬಂಡೆಗಲ್ಲಿನ ಮೇಲೆ ಮಲಗಿಯೇ ಅದನ್ನು ವೀಕ್ಷಿಸಬೇಕಾಗಿತ್ತು. ಹಾಗೆ ಮಾಡಿದಾಗ ಮನಸ್ಸಿನಲ್ಲಿ ಉಕ್ಕಿ ಬರುವ ಭಾವನೆಗಳನ್ನು ವ್ಯಕ್ತಗೊಳಿಸುವದು ಅಸಾಧ್ಯ! ಅನಂತತೆಯ ಅನುಭವ, ಹಿಗ್ಗು, ಭೀತಿಗಳು ಏಕಕಾಲದಲ್ಲಿ ಮೂಡಿಬರುತ್ತವೆ. ನೋಡಿದಷ್ಟೂ, ಇನ್ನಷ್ಟು ಮತ್ತಷ್ಟು ಮಗದಷ್ಟು ನೋಡಬೇಕೆನಿಸುತ್ತದೆ. ಮೈಸೂರು ಬಂಗಲೆಯಿಂದ ಗೋಚರಿಸುವ ದೃಶ್ಯವೇ ಬೇರೆ. ವರ್ಣಮಯ ವಿದ್ಯುತ್ ಬೆಳಕಿನಲ್ಲಿ ಇನ್ನುಳಿದ ನಾಲ್ಕು ತಡಸಲುಗಳು ಥಕಥೈ! ಎಂದು ಬೇರೆ ಬೇರೆ ವಿನ್ಯಾಸಗಳಲ್ಲಿ ನರ್ತಿಸುತ್ತ ಧುಮುಕುವ ಭಾಸವಾಗುತ್ತದೆ. ಕಾಡು ಬೆಟ್ಟಗಳನ್ನು ಸೀಳಿ, ನುಸುಳಿ ಬರುವ ಶರಾವತಿ, ಸೊಬಗಿನಲ್ಲಿ ಗಂಗಾ ನದಿಗೆ ಏನೇನೂ ಕಡಿಮೆ ಇಲ್ಲ ಅನಿಸಿತ್ತು"..... ಎಂದು ವಿವರಿಸುತ್ತಿದ್ದಂತೆ ಹೊಸ ಟಾಯರ್ ಹೊಂದಿಸಿ, ಹಾರ್ನ್‌ಮಾಡಿ ಡ್ರಾಯವರನು ಪ್ರಯಾಣಿಕರಿಗೆ ಬಸ್ ಸೇರಿಕೊಳ್ಳುವಂತೆ ಆಜ್ಞಾಪಿಸಿದ.

"ನನಗೆ ಭಾರತದ ಇತಿಹಾಸ ತಿಳಿದುಕೊಳ್ಳಲು ತುಂಬ ಆಸಕ್ತಿ! ಆದರೆ ಈ ಮೈಸೂರು, ಈ ಬ್ರಿಟಿಷ್ ಬೇರೆ ಬೇರೆ ಆಡಳಿತವೇನೋ ಸರಿ! ಬಂಗ್ಲೆಗಳೂ ಮೈಸೂರು ಹಾಗೂ ಬ್ರಿಟಿಷ್ ಎಂದು ಬೇರೆಯಾಗಿರುತ್ತವೆಯೇ? ಅದರ ಅರ್ಥವೇ ಆಗಲಿಲ್ಲ!" ಬಸ್ ಹತ್ತಿದ ಬಳಿಕ ಕಿಮ್ ದನಿಯೆಳೆದಳು.

"ಹೌದಲ್ಲ! ನೋಡು, ಈ ಶರಾವತಿ ನದಿ ಆಗ ಬ್ರಿಟಿಷ್‌ರ ಅಧೀನದಲ್ಲಿದ್ದ ಮುಂಬಯಿ ಪ್ರಾಂತವನ್ನು ಹಾಗೂ ಮಹಾರಾಜರ ಅಧೀನದಲ್ಲಿದ್ದ ಮೈಸೂರು ಸಂಸ್ಥಾನವನ್ನು ಬೇರ್ಪಡಿಸಿತ್ತು. ವಿಶ್ವಖ್ಯಾತಿಯ ಇಂಜಿನಿಯರ್ ಸರ್ ವಿಶ್ವೇಶ್ವರಯ್ಯನವರ ಮುಂದಾಲೋಚನೆಯಿಂದಾಗಿ 'ಮೈಸೂರು ಬಂಗ್ಲೆ, ವಿದ್ಯುತ್ ದೀಪಗಳಿಂದ ಝಗಝಗಿಸುತ್ತಿತ್ತು. ಆಗ ಬ್ರಿಟಿಷರ ಆಧೀನದಲ್ಲಿದ್ದ ಉತ್ತರ ಕನ್ನಡ ಜಿಲ್ಲೆ ವಿದ್ಯುತ್ತನ್ನೇ ಕಂಡಿರಲಿಲ್ಲ. ಚಿಮಣಿ ಎಣ್ಣೆಯ ದೀಪಗಳೇ ಗತಿ! ಬ್ರಿಟಿಷ್ ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೆ ಹೋಗಲು ಶರಾವತಿ ಅಡ್ಡ ಹರಿಯುತ್ತಿದ್ದು ನದಿಗೆ ಸೇತುವೆಯ ಸೌಕರ್ಯ ಇರಲಿಲ್ಲ. ಬಿದಿರುಹುಲ್ಲಿನಿಂದ ನಿರ್ಮಿಸಿದ 'ಹರಗೋಲು' ತೆಪ್ಪಕ್ಕೆ ಶರಣು ಹೋಗಬೇಕಾಗಿತ್ತು. ನದಿಯ ಈಚೆಗೆ ಇದ್ದಾಗ ಅಮವಾಸ್ಯೆಯ ರಾತ್ರಿ. ನದಿ ದಾಟಿದಾ ಕ್ಷಣ ಹುಣ್ಣಿಮೆಯ ರಾತ್ರಿಯ ನೆನಪಾಗುತ್ತಿತ್ತು. ರಾಜ್ಯ ಪುನರ್ಘಟನೆಯ ನಂತರ ಕರ್ನಾಟಕ ಒಂದಾಗಿ ಮೈಸೂರನ್ನೂ ಸೇರಿಕೊಂಡು, ಈ ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಯಿತು." ಕ್ರಿಶ್, ಒಂದಿಷ್ಟು ಇತಿಹಾಸವನ್ನು ಸೊಸೆಗೆ ಬೋಧಿಸಿದರು.

ಬಸ್ಸಿನಲ್ಲಿದ್ದ ಯಾವನೋ ರಾಜಕಾರಣಿ ಮತ್ತು ತಂಡ, ಜೋಗ್ ಫಾಲ್ಸ್ ನೋಡಲು ಕಾತರವಾಗಿತ್ತು. ಡ್ರಾಯವರ ಕಂಡಕ್ಟರರು ಅವರ ಮಾತಿಗೆ ಮಣಿದು, ಒಳರಸ್ತೆಯಿಂದ ತಡಸಲ ಬಳಿ ತಲುಪಿಸಿದರು. ದೀಪಗಳ ಪ್ರಖರವಾದ ಬೆಳಕಿನಲ್ಲಿ ಅದೇ ಪರಿಸರವನ್ನು ಮತ್ತೆ ವೀಕ್ಷಿಸಿದಾಗ ಕರುಳುಕಿತ್ತು ಬಂದಿತು. ಸಸ್ಯಶಾಮಲೆಯಾಗಿದ್ದ ಪ್ರದೇಶ, ಹಸಿರು ನಳನಳಿಸುತ್ತಿದ್ದ ಬಂಡೆಗಲ್ಲುಗಳ ತಾಣ ಸುಟ್ಟು ಹೋಗಿ ಕರಕಲಾಗಿದ್ದವು. ಹೃದಯದಲ್ಲಿ ತಲ್ಲಣ, ಹರ್ಷ, ಉದ್ವೇಗಗಳನ್ನು ಹುಟ್ಟಿಸುತ್ತಿದ್ದ ಜಲಧಾರೆ, ಕೇವಲ ಕಿರುಬೆರಳ ಗಾತ್ರದಲ್ಲಿ ಕಣ್ಣೀರು ಸುರಿಸುತ್ತ ಹರಿಯುತ್ತಿದ್ದ ಭಾಸವಾಯಿತು. ನೋಡುಗರೆಲ್ಲ "ಸಾಕಪ್ಪಾ ಸಾಕು! ವಿಶ್ವಖ್ಯಾತ ಜೋಗ್ ಫಾಲ್ಸ್ ದರ್ಶನ! ಆದಷ್ಟುಬೇಗ ಕಂಬಿಕೀಳುವದು ಮೇಲು!" ಎಂದು ಉದ್ಗರಿಸಿದಾಗ ಡ್ರಾಯವರನು ವಾಹನವನ್ನು ವೇಗವಾಗಿ ಓಡಿಸಿದ.

೩. ಅನಾಥರಾದಾಗ

ನಡುರಸ್ತೆಯಲ್ಲಿ ಟಾಯರ್ ಪಂಕ್ಚರ್ ಪ್ರಕರಣದಿಂದ ಕಳೆದುಕೊಂಡ ವೇಳೆಯನ್ನು ಭರ್ತಿ ಮಾಡಲು ಬಸ್ಸು ವಾಯುವೇಗದಿಂದ ಓಡುತ್ತಿತ್ತು. ಇದ್ದಕ್ಕಿದ್ದಂತೆ ತನ್ನ ವೇಗವನ್ನು ಕಳೆದುಕೊಂಡು ರಸ್ತೆಯ ಎಡಗಡೆ ಹೊರಟಾಗ ಏನೋ ಅನಾಹುತ ಕಾದಿದೆ! ಅನಿಸದೇ ಇರಲಿಲ್ಲ. ರಸ್ತೆಯ ಅಂಚಿನಲ್ಲಿ ತುಂಬು ಯೌವನದ ಒಂದು ಗಂಡು ಚಿಗರೆ, ಸುಂದರವಾದ ಕೊಂಬುಗಳನ್ನು ಹೊತ್ತು, ವಾಹನದ ಪ್ರಖರ ದೀಪಗಳಿಂದ ಕುರುಡಾಗಿ ದಿಕ್ಕು ತೋಚದೆ ನಿಂತದ್ದು ಕಂಡಿತು. ನೋಡುತ್ತಿದ್ದಂತೆ ಬಸ್ ಅದಕ್ಕೆ ಹೋಗಿ ಅಪ್ಪಳಿಸಿ ನೆಲಕ್ಕುರುಳಿಸಿತು. ವೇದನೆ ತಾಳಲಾರದೇ ಆ ಮೂಕ ಜೀವಿ, ಹೊರಳಾಡುವದನ್ನು ನೋಡಿದಾಗ ಕರುಳು ಕಿತ್ತು ಬರುವಂತೆ ಆಯಿತು. "ಅರರೇ! ಇದೇನು ಮಾಡಿ ಬಿಟ್ಟೆಯಯ್ಯಾ!" ಎಂದು ಎಂದೂ ಸ್ತಿಮಿತ ಕಳೆದುಕೊಳ್ಳದ ಕ್ರಿಶ್, ಡ್ರಾಯವರನನ್ನು ತರಾಟೆಗೆ ತೆಗೆದುಕೊಳ್ಳುವದರಲ್ಲಿ ಇದ್ದಾಗ, ಬಹುಶಃ ಎಲ್ಲ ಸಹಪ್ರಯಾಣಿಕರು ಡ್ರಾಯವರ ಕಂಡಕ್ಟರ ಪರ ವಕಾಲತ್ತು ವಹಿಸಿ ಏಕಕಾಲಕ್ಕೆ ಮಾತನಾಡಲಾರಂಭಿಸಿದರು. ಪ್ರಾಣಿ-ಜೀವಿಗಳ ಅಧಿಕಾರದ ಬಗ್ಗೆ ಅಮೇರಿಕೆಯಲ್ಲಿ ಅರಿತುಕೊಂಡ ವಿಕ್ ಕೋಪದಿಂದ ಕಿಡಿಕಿಡಿಯಾದ. "ಭಾರತದಲ್ಲಿಯೂ ಇಂಥ ಕಾನೂನುಗಳಿವೆ! ಆದರೆ ಅವಾವವೂ ಪ್ರಾಣಿ-ಪ್ರೇಮಿಗಳ ಸಹಾಯಕ್ಕೆ ಸಕಾಲದಲ್ಲಿ ಒದಗಿ ಬರುವದೇ ಇಲ್ಲ!" ಎಂದು ಈಗ ಮೊದಲಿನ ಸಂಯಮವನ್ನು ತಂದುಕೊಂಡ ಕ್ರಿಶ್ ಮಗನಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು. ಚಿಗರೆಯ ಮಾಂಸಕ್ಕೆ ಬಾಯಿಬಿಡುತ್ತಿದ್ದ ಬಸ್ ಪ್ರಯಾಣಿಕರನ್ನೆಲ್ಲ ಅವರ ಪಾಡಿಗೆ ಬಿಟ್ಟು, ಆ ತಾಣದ ದುರಂತ ದೃಶ್ಯವನ್ನು ತಪ್ಪಿಸಲು ಕ್ರಿಶ್, ಕುಟುಂಬದವರನ್ನು ಕರೆದುಕೊಂಡು ಎರಡು ಫರ್ಲಾಂಗ್ ದೂರದ 'ಶರಾವತಿ ದರ್ಶನ'ದ ಸ್ಥಳಕ್ಕೆ ಕರೆದೊಯ್ದರು. ಅಲ್ಲಿಂದ ತಮ್ಮನ್ನು ಬಸ್ಸಿನಲ್ಲಿ ಹತ್ತಿಸಿಕೊಳ್ಳುವಂತೆ ಕಂಡಕ್ಟರನಿಗೆ, ಸಹ ಪ್ರಯಾಣಿಕರಿಗೆ ಹೇಳಲು ಮರೆಯಲಿಲ್ಲ.

ಮಂದ ಬೆಳದಿಂಗಳಲ್ಲಿ ಎತ್ತರದ ಬಂಡೆಯೊಂದನ್ನೇರಿ, ಶರಾವತಿಯ ಕೊಳ್ಳವನ್ನು ವೀಕ್ಷಿಸುತ್ತಿದ್ದಾಗ, ಕ್ರಿಶ್ ಪುನಃ ಭಾವನಾವಶರಾದರು. ಆ ಜಾಗದೊಂದಿಗಿನ ತನ್ನ ನಂಟನ್ನು ಸ್ವಗತವೆಂಬಂತೆ ನೆನಪಿಸಿಕೊಳ್ಳಲಾರಂಭಿಸಿದರು, "ಅನಾದಿ ಕಾಲದಿಂದ ತೀರ ಇತ್ತೀಚಿನವರೆಗೆ ಇದು ದೇವ ಭೂಮಿಯಂತಿತ್ತು. ಮಾನವನ ದೋಚುವ ಕೈಗಳಿಂದ ಸುರಕ್ಷಿತವಾಗಿತ್ತು. ಇಲ್ಲಿ ಬಂದು ಕೊಳ್ಳೆ ಹೊಡೆಯಲು ಯಾವ ರಸ್ತೆ ಕಚ್ಚಾದಾರಿ, ಕಾಲುದಾರಿ ಕೂಡ ಇಲ್ಲದ್ದರಿಂದ

ದೇವನಿರ್ಮಿತ ಜೀವಕೋಟಿ ಅತ್ಯಂತ ನಿರಂಬಳವಾಗಿ ಜೀವಿಸುತ್ತ ಬಂದಿತ್ತು. ಅಲ್ಲಿರುವ ಸಸ್ಯ ವೈವಿಧ್ಯಗಳ ಪ್ರಾಥಮಿಕ ಅಧ್ಯಯನ ಕೂಡ ನಡೆದಿರಲಿಲ್ಲ. ಎಷ್ಟು ಪ್ರಕಾರದ ಪಶು-ಪಕ್ಷಿಗಳು ಅಲ್ಲಿ ಜೀವಿಸುತ್ತಿದ್ದವು? ಎಂದು ಅವನ್ನು ಸೃಷ್ಟಿಸಿದ ಬ್ರಹ್ಮದೇವನಿಗೂ ಲೆಕ್ಕಾಚಾರ ಇತ್ತೋ ಇಲ್ಲವೋ? ಅದೆಲ್ಲವನ್ನು ಈ ನರರಾಕ್ಷಸರು, ಜಲಸಮಾಧಿ ಮಾಡಿಬಿಟ್ಟರು..." ಎಂದು ಬಿಕ್ಕಳಿಸಲಾರಂಭಿಸಿದರು. ಅವರ ನೋವಿನ ಆಳದ ಆಕಸ್ಮಿಕ ಪರಿಚಯದಿಂದ ಅವಾಕ್ಕಾದ ಮಗನು ಸಂತೈಸಲು ಹವಣಿಸಿ ಸೋತನು. ಸ್ವಲ್ಪ ಸುಧಾರಿಸಿಕೊಂಡು ಶಬ್ದಗಳಿಗೆ ತಡಕಾಡುತ್ತ ಕ್ರಿಶ್ ಮುಂದುವರಿಸಿದರು. "ಶರಾವತಿ ನದಿಯೆಂದರೆ ನನಗೆ ತಾಯಿ ಇದ್ದಂತೆ! ಅತ್ಯಂತ ಆತ್ಮೀಯಳಾಗಿದ್ದಾಳೆ. ಅವಳ ಮೇಲೆ ಎಸಗಿದ ಕ್ರೌರ್ಯವನ್ನು ಅದರ ಅಮಾನುಷ ರೂಪಗಳನ್ನು ನೆನೆಸಿಕೊಂಡಾಗೆಲ್ಲ ಕ್ರೋಧ ಉಕ್ಕೇರಿ ಬರುತ್ತದೆ. ತನ್ನ ಅಪರಿಮಿತ ಸ್ವಾರ್ಥಕ್ಕಾಗಿ ನಮ್ಮ ಜನ ಈ ಜೋಟುದ್ದ ನದಿಯ ಮೇಲೆ ಎಷ್ಟೊಂದು ಆಕ್ರಮಣ ಮಾಡಬಹುದು? ೧೯೪೮ರಷ್ಟು ಹಿಂದೆಯೇ 'ಮಹಾತ್ಮಾಗಾಂಧಿ ವಿದ್ಯುದಾಗರ'ವನ್ನು ಸ್ಥಾಪಿಸಿ, ೧೨೦ ಮೆಗಾವ್ಯಾಟ್ಸ್ ವಿದ್ಯುತ್ತನ್ನು ಕಬಳಿಸಲಾರಂಭಿಸಿದರು. ಜಲಮಾತೆಯನ್ನು ಇಪ್ಪತ್ತುನಾಲ್ಕು ತಾಸೂ ದುಡಿಯಲು ಹಚ್ಚಿ ಪುಕ್ಕಟೆ ವಿದ್ಯುತ್ ಶಕ್ತಿಯನ್ನು ಪಡೆಯುವ ಈ ತಂತ್ರವನ್ನು ನಮ್ಮವರು ಬಲುಬೇಗ ರೂಢಿಸಿಕೊಂಡರು. ಎರಡನೆಯ 'ಶರಾವತಿ ವಿದ್ಯುದಾಗರ' ಸ್ಥಾಪಿತವಾದಾಗ ಉದ್ದಿಮೆದಾರರಿಗೆಲ್ಲ ದಿನಂಪ್ರತಿ ಹಬ್ಬದೂಟದ ಅನುಭವವಾಯ್ತು. ನಂತರ ಅತಿ ಶೀಘ್ರದಲ್ಲಿ 'ಲಿಂಗನಮಕ್ಕಿ ವಿದ್ಯುದಾಗರ' ಪ್ರಾರಂಭವಾದಾಗ, ರಾಜ್ಯದ ಆಗಿನ ಮುಖ್ಯಮಂತ್ರಿಗಳು 'ಸಕಲ ದಕ್ಷಿಣ ಭಾರತದೊಂದಿಗೆ ಉತ್ತರದ ರಾಜ್ಯಗಳಿಗೂ ನಾವು ತೀರ ಅಗ್ಗದಲ್ಲಿ ವಿದ್ಯುತ್ತು ಪೂರೈಸುವ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ್ದೇವೆ! ಎಂದು ಜಂಬ ಕೊಚ್ಚಿಕೊಂಡಿದ್ದರು. ಅದು ನಿಜವಿದ್ದರೆ, ಇಷ್ಟು ಬೇಗ ವಿದ್ಯುತ್ ಖೋತಾ ಆಗಿ 'ಟೈಲ್ ರೇಸ್ ಯೋಜನೆ' ರೂಪಿಸಿಕೊಳ್ಳುವ ಅವಶ್ಯಕತೆಯಾದರೂ ಎಲ್ಲಿತ್ತು?" ಎಂದು ಕೇಳಿದರು. ಈ ಸವಾಲಿಗೆ ಉತ್ತರಿಸುವವರು ಯಾರೂ ಇಲ್ಲದ್ದರಿಂದ ಮತ್ತೆ ತಾನೇ ವಿವರಣೆ ನೀಡಲಾರಂಭಿಸಿದರು.

"ಈ ಶರಾವತಿ, ಸಣ್ಣ ನದಿಯಾದರೂ ಮಹಾದಾನಿ! ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಸಮೀಪದ ಅಂಬುತೀರ್ಥದಲ್ಲಿ ಹುಟ್ಟುವ ಈ ನದಿ, ನೂರಾರು ಝರಿಗಳ ನೀರನ್ನು ಸ್ವಾದಿಸಿ, ಗುಡ್ಡ-ಬೆಟ್ಟಗಳ ಅಡಿಯಿಂದ ಹಾದು, ಹಲವೆಡೆ ಸಣ್ಣ ದೊಡ್ಡ ಜಲಪಾತಗಳ ರೂಪದಲ್ಲಿ ಪಾತಾಳಕ್ಕೆ ಧುಮುಕಿ, ಕೇವಲ ನೂರ ಅರವತ್ತು ಕಿಲೋ ಮೀಟರ್ ದೂರದ ಅರಬೀ ಸಮುದ್ರಕ್ಕೆ ಸೇರಿಕೊಳ್ಳುತ್ತದೆ. ಸಿಂಧು, ಗಂಗಾ, ಕಾವೇರಿ ನದಿಗಳ ಉದ್ದಗಲಳತೆಗೆ ಹೋಲಿಸಿದಾಗ, ಇದೊಂದು 'ಪುಟಾಣಿ ಪ್ರವಾಹ' ಎಂದು ಅನಿಸದೇ ಇರದು! ಇಷ್ಟಿದ್ದರೂ ಅದರ ಪಾಡಿಗೆ ಅದನ್ನು ಹರಿಯಲು ಬಿಡದೇ ಹೆಜ್ಜೆ ಹೆಜ್ಜೆಗೆ ಅದನ್ನು ಹಿಂಡುತ್ತಲೇ ಹೊರಟಿದ್ದಾರೆ, ನಮ್ಮ ಜನ ಹಾಗೂ ನಮ್ಮ ಸರಕಾರ! ಈ ಮಾತಿಗೆ ಶರಾವತಿ 'ಟೈಲ್ ರೇಸ್' ಅತ್ಯುತ್ತಮ ಉದಾಹರಣೆ ಆಗಿದೆ. ಮೊದಲ ಮೂರು ವಿದ್ಯುದಾಗರಗಳಿಂದ ನದಿಗೆ ಬಿಟ್ಟ ೬೦೦೦ ಕ್ಯುಸೆಕ್ಸ್ ನೀರನ್ನು ಬಳಸಿ, ಪ್ರತಿ ಸೆಕೆಂಡಿಗೆ ೨೪೦ ಮೆಗಾವಾಟ್ಸ್ ವಿದ್ಯುತ್ತನ್ನು

ಉತ್ಪಾದಿಸುವ ಬೃಹದ್ ಯೋಜನೆ ಇದು. ಈ ಬೆಂಗಳೂರು-ಹೊನ್ನಾವರ ರಸ್ತೆಯ ಎಡಭಾಗದಲ್ಲಿ ಗೇರಸೊಪ್ಪೆಯ ಬಳಿ 'ಕಲ್ಲು ಕಟ್ಟೆ' ಯಲ್ಲಿ ಸಿಮೆಂಟ್ ಮತ್ತು ಮಣ್ಣಿನ ೨೪೦೦೦ ಅಡಿ ಉದ್ದ ಹಾಗೂ ೧೮೪ ಅಡಿ ಎತ್ತರ ಆಣೆಕಟ್ಟನ್ನು ನಿರ್ಮಿಸಿದ್ದಾರೆ. ಈ ಜಲಾಶಯದಲ್ಲಿ ೧೫೬ ಕ್ಯುಬಿಕ್ಸ್ ಮೀಟರ್ ನೀರನ್ನು ಸಂಚಯ ಮಾಡಲಿದ್ದಾರೆ..." ಎಂದು ಹೇಳುತ್ತಿದ್ದಂತೆ "ಈ ಗಣಿತ, ಅಂಕಿ-ಸಂಖ್ಯೆಗಳು ನನ್ನ ತಲೆಗೆ ಹೋಗುವುದಿಲ್ಲ ರೀ! ಇದರಿಂದ ಆಗುವ ಹಾನಿ ಹಾಗೂ ಉಂಟಾದ ದುಷ್ಪರಿಣಾಮಗಳನ್ನು ತಿಳಿಸಿದರೆ ಸಾಕು!" ಎಂದಳು ಜೋ.

"ಅದಾವವೊ ಕಾರಣಗಳಿಗಾಗಿ ಪ್ರಕೃತಿಯು, ಸರ್ವವ್ಯಾಪಾರಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿರುತ್ತದೆ. ಚಳಿ, ಬೇಸಿಗೆ ಮಳೆಗಾಲಗಳು ಬಂದು ಹಿಂದೆ ಸರಿಯುತ್ತವೆ. ಮಳೆಯ ನೀರು ಹರಿದು ಸಂಚಯವಾಗಿ ನದಿ-ಸರೋವರಗಳಾಗುತ್ತವೆ. ಭೂಮಿಯಲ್ಲಿ ಇಂಗಿದ ನೀರು, ಸಕಲ ಚರಾಚರ ಜೀವಿಗಳನ್ನೆಲ್ಲ ಜೀವಂತವಾಗಿರಿಸುತ್ತದೆ. ಸಸ್ಯಗಳು, ನೀರು, ಇಂಗಾಲ, ಅಮ್ಲ ವಾಯುಗಳಂತಹ ಕಚ್ಚಾ ಸಾಮಗ್ರಿಗಳನ್ನು ತನ್ನವನ್ನಾಗಿ ಮಾಡಿಕೊಂಡು ಎಲ್ಲ ತರದ ಆಹಾರ ಪದಾರ್ಥಗಳನ್ನು ಪಶು-ಪಕ್ಷಿಗಳಿಗೆ ನೀಡುತ್ತವೆ. ಹೀಗಾಗಿ ಸಕಲ ಜೀವಿಗಳಿಗೂ ಆಹಾರ, ಆಶ್ರಯ, ಆಚ್ಛಾದನದ ಕೊರತೆ ಆಗದಂತಹ ಏರ್ಪಾಡು ಉಂಟಾಗುತ್ತದೆ. ಆದರೆ ಅತಿ ಸ್ವಾರ್ಥಿ ಮಾನವನು ಈ ಜೀವವ್ಯಾಪಾರದಲ್ಲಿ ಹಸ್ತಕ್ಷೇಪ ಮಾಡಿದಾಗ, ಸಕಲವೂ ಬುಡಮೇಲು ಆಗಲಾರಂಭಿಸುವದು. ಶರಾವತಿ ನದಿಯ ಆಸುಪಾಸಿನಲ್ಲಿ ಸಕಲ ವರ್ಗದ ಜೀವಿಗಳು, ಸಹಸ್ರಾರು ವರ್ಷಗಳಿಂದ ನೆಮ್ಮದಿಯ ಜೀವನವನ್ನು ನಡೆಸಿಕೊಂಡು ಬಂದಿದ್ದವು. ಲಿಂಗನಮಕ್ಕಿ ವಿದ್ಯುದಾಗರದ ಒಂದು ಯೋಜನೆಯಿಂದಲೇ ನೂರಎಂಬತ್ತು ಹಳ್ಳಿಗಳು ಜಲಸಮಾಧಿ ಹೊಂದಿದವು. ಅದರೊಂದಿಗೆ ೩೨,೨೦೦ ಹೆಕ್ಟೇರು ಭೂಪ್ರದೇಶ ನೀರುಪಾಲಾಯಿತು. ಈ ಪ್ರದೇಶದ ೧೫೦೦೦ ಹೆಕ್ಟೇರು ಕ್ಷೇತ್ರ, ನಿತ್ಯಹರಿತ್ ಅರಣ್ಯವಾಗಿತ್ತು. ಸಕಲವನ್ನು ಲಾಭ-ಹಾನಿಗಳ ಲೆಕ್ಕಾಚಾರದಲ್ಲಿ ಎಣಿಸುವ ಸರಕಾರಿ ಅಧಿಕಾರಿಗಳಿಗೆ ಹಾಗೂ ತಂತ್ರಜ್ಞರಿಗೆ, ಜೀವಕೋಟಿಗಾದ ಅಪಾರ ಅನ್ಯಾಯದ ಕಲ್ಪನೆಯೇ ಇಲ್ಲ! ನದೀತಟದ ಜೀವಿ ವ್ಯಾಪಾರವನ್ನು ಸಂಕ್ಷಿಪ್ತವಾಗಿ ವಿವರಿಸಲು ಕ್ರಿಶ್ ಹವಣಿಸಿದರು.

"ಇದೆಲ್ಲ ಈಗ ನಿಮಗೆ ನೆನಪಾಗಲು ಕಾರಣವೇನು?" ಶಾಲಾ ವಿದ್ಯಾರ್ಥಿನಿಯಂತೆ ಬೆರಗಾಗಿ ವಿಚಾರಿಸಿದಳು ಕಿಮ್.

"ಏಕೆಂದರೆ ಈಗಷ್ಟೆ ನಡೆದ ಹತ್ಯಾಕಾಂಡ ನಾನು ನಮೂದಿಸಿದ ತಾಣದಿಂದ ಕೇವಲ ಹದಿನೆಂಟು ಮೈಲು ದೂರದಲ್ಲಿದೆ. ಅಲ್ಪಾವಧಿಯ ಲಾಭಕ್ಕಾಗಿ ನಮ್ಮ ಜನ ಹೆಚ್ಚಿನ ಪ್ರಾಯಶ್ಚಿತ್ತ ಅನುಭವಿಸಬೇಕಾಗಿ ಬಂದಿದೆ! ಪೃಥ್ವಿಯು ಅಸ್ತಿತ್ವದಲ್ಲಿ ಬಂದಂದಿನಿಂದ ನಿಸರ್ಗಮಾತೆ, ತನ್ನ ನಿತ್ಯಸಿರಿವಂತಿಕೆಯ ಸಕಲ ಗುಟ್ಟನ್ನು ಈ ಕಣಿವೆಯಲ್ಲಿ ಬಚ್ಚಿಟ್ಟುಕೊಂಡು ಬಂದಿದ್ದಳು. ಅದನ್ನೆಲ್ಲ ಅಭ್ಯಸಿಸದೇ, ಅರ್ಥೈಸಿಕೊಳ್ಳದೇ ಇದ್ದಕ್ಕಿದ್ದಂತೆ ನಾಶ ಪಡಿಸುವದು ಸರಿಯೇ? ಜೀವಿಗಳ ವಿಕಾಸದ ಎಷ್ಟೊಂದು ಹಂತಗಳು ಅಲ್ಲಿ ಲಭ್ಯ ಇದ್ದವೋ ಏನೋ? ಅದೆಷ್ಟು ಅಮೂಲ್ಯ ಔಷಧಿ ಗಿಡ-ಮೂಲಿಕೆಗಳು ಅಲ್ಲಿ ಬೆಳೆಯುತ್ತಿದ್ದವುಗಳು, ನಿರ್ನಾಮವಾಗಿ ಹೋದವೋ ಏನೋ!

ಈವರೆಗೆ ನಮ್ಮ ಗಮನಕ್ಕೆ ಬಾರದ ಅದೆಷ್ಟು ಕೀಟವರ್ಗ, ಪಶು-ಪಕ್ಷಿ ಜಾತಿಗಳು ಅಲ್ಲಿ ಬೀಡು ಬಿಟ್ಟಿದ್ದವೋ! ಇಂದು ಅದೆಲ್ಲ ಅಪೂರ್ವ ಜೀವಿ ಭಂಡಾರ ಸರ್ವಕಾಲಕ್ಕೂ ನಾಶವಾಗಿ ಹೋಯಿತು. ಅಲ್ಲಿ ಸಂಚಯವಾದ ನೀರಿನಿಂದ ಸುತ್ತಲ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಯಾವೊಂದು ಪಿಳ್ಳೆಯೂ ಅಭ್ಯಸಿಸಿಲ್ಲ. ಅಪರೂಪದ ಆಳವಾದ ಕಣಿವೆ ಈಗ ೧೬೫೦ ಮಿಲಿಯನ್ ಕ್ಯೂಬಿಕ್ಸ್ ಮೀಟರ್ ನೀರು ಹೊತ್ತ ಸರೋವರವಾಗಿ ಪರಿವರ್ತನೆಗೊಂಡಿದೆ. ಇದ್ದುದನ್ನು ಹಾಳುಗೆಡವಿ, ಅಲ್ಲಿ ಈಗ ನೌಕಾವಿಹಾರಕ್ಕೆ, ಮೀನುಗಾರಿಕೆ-ಅಲ್ಲ-'ಮತ್ಸ್ಯ ವಿಹಾರ'ಕ್ಕೆ ಅನುಕೂಲ ಮಾಡಿಕೊಡಲಿದ್ದಾರಂತೆ! ಏಳು ನೂರು ಹೆಕ್ಟೇರು ಜಮೀನು ಮುಳುಗಡೆಯಾಗಿದೆ. ಅದರಲ್ಲಿ ೩೩೦ ಹೆಕ್ಟೇರಿನಲ್ಲಿ ಉತ್ತಮ ವೃಕ್ಷಗಳಿದ್ದವು. ಉಳಿದ ಪ್ರದೇಶದಲ್ಲಿ ಕುರುಚಲು ಗಿಡಗಳಿದ್ದವು" ಒಂದೇ ಸಮ ಮಾತನಾಡಿದ ಕ್ರಿಶ್ ಈಗ ಮೌನತಾಳಿದರು.

"ತಜ್ಞರೆಂಬುವರು, ಮುಂಬರಲಿರುವ ಸಮಸ್ಯೆಗಳ ಕುರಿತು ಮುಂಚಿತವಾಗಿ ಪರಿಹಾರ ಯೋಚಿಸಿಯೇ ಕಾರ್ಯೋನ್ಮುಖರಾಗುತ್ತಾರೆ. ಅಲ್ಲವೇನಪ್ಪ?" ಮಗನು ಒಗ್ಗರಣೆ ಹಾಕಿದ.

"ನೀನು ಹೇಳುವ ಮಾತು ಅಮೇರಿಕೆಯಂಥ ದೇಶಕ್ಕೆ ಅನ್ವಯಿಸುತ್ತಿರಬಹುದು. ನಮ್ಮಲ್ಲಿ ಅದಕ್ಕೆಲ್ಲ, ಅಂದರೆ ಮಾನವಕೋಟಿಯ ಭವಿಷ್ಯಕ್ಕೆ ಸಂಬಂಧಿಸಿದ ಯೋಜನೆಗೆ ಆಸ್ಪದವೇ ಇಲ್ಲ! ಮುಳುಗಡೆಯಾದ ಎರಡು ಪಟ್ಟು ಅರಣ್ಯವನ್ನು ಬೆಳೆಸಿಕೊಡುತ್ತೇವೆ, ಎಂದು ಅರಣ್ಯಖಾತೆಯವರು ಆಶ್ವಾಸನ ನೀಡಿ ಹಣ ಪಡೆದರು. ಅವರು ಬೆಳೆಯಲಿರುವ ವೃಕ್ಷರಾಜಿಯ ವಿವರಗಳೆಲ್ಲ ವರದಿಗಳಲ್ಲಿ ಮಾತ್ರ ಇರುತ್ತವೆ! ಎಂಬುದು ಸರ್ವವಿದಿತ. ಅಲ್ಲದೇ ಕೋಟಿಗಟ್ಲೆ ರೂಪಾಯಿಗಳನ್ನು ವ್ಯಯಿಸಿ ತೇಗು, ನಂದಿ, ಮತ್ತಿ, ಹೊನ್ನೆ ಗಿಡಮರಗಳನ್ನು ಅರಣ್ಯ ಇಲಾಖೆಯವರು ಆಗೀಗ ನೆಡುವದು, ನಂತರ ವಿದ್ಯುತ್ ಖಾತೆಯವರು, ಅವನ್ನು ಬೋಳಿಸಿ ಕಂಬ, ತಂತಿಗಳನ್ನು ಜೋಡಿಸುವದು, ಈ ಕೆಲಸ ಸತತವಾಗಿ ನಡೆದಿರುತ್ತದೆ. ಇದಕ್ಕೆಲ್ಲ ಸಾರ್ವಜನಿಕ ಹಣವನ್ನು ಪೋಲು ಮಾಡಿದ್ದಕ್ಕೆ ಒಂದು ಪಿಳ್ಳೆಯೂ ಪರಿತಪಿಸುವುದಿಲ್ಲ. ೧೬-೨-೨೦೦೧ ದಿನಾಂಕದಂದು, ಶರಾವತಿ 'ಟೇಲ್ ರೇಸ್' ಯೋಜನೆಯ ಮೊದಲ ಘಟಕದ, ಪ್ರಾರಂಭೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಆಗ ಅದರ ಇಂಜಿನಿಯರುಗಳು, ನಿಗದಿತ ದಿನಾಂಕಕ್ಕಿಂತ ಆರು ತಿಂಗಳು ಮೊದಲೇ ಕೈಕೊಂಡ ಕಾರ್ಯವನ್ನು ಮುಗಿಸಿದ್ದೇವೆಂದು ಬೆನ್ನು ಚಪ್ಪರಿಸಿಕೊಂಡರು! ನಿಜವಾದ ಸಂಗತಿಯೆಂದರೆ, ಕಳೆದ ೫೫ ವರ್ಷಗಳಿಂದ ಈ ಯೋಜನೆ ನಡೆಯುತ್ತಲೇ ಇದೆ. ಹೆಸರುಗಳು ಮಾತ್ರ ಬದಲಾಗುತ್ತಿವೆ. ಮೂರು ದಶಕಗಳ ಹಿಂದೆ ಅದರ ವೆಚ್ಚ ೪೪ ಕೋಟಿ ರೂಪಾಯಿಗಳೆಂದು ನಿರ್ಧರಿಸಲಾಗಿತ್ತು. ಕೇವಲ ಹದಿನೈದು ವರ್ಷಗಳಲ್ಲಿ ಅದು ಮೂರು ನೂರು ಕೋಟಿ ರೂಪಾಯಿಗಳಿಗೆ ಏರಿತು. ಸಧ್ಯಕ್ಕೆ ಅದರ ವೆಚ್ಚ ಐದುನೂರು ಕೋಟಿ ಎಂದು ಘಂಟಾ ಘೋಷವಾಗಿ ಸಾರಿದ್ದಾರೆ! ಆದರೆ ನಾಲ್ಕನೆಯ ಘಟಕವೂ ಪ್ರಾರಂಭವಾಗುವುದರಲ್ಲಿ ಅದರ ಮಿತಿ, ಸಹಸ್ರಕೋಟಿ ರೂಪಾಯಿ ದಾಟಿದರೆ ಅಚ್ಚರಿಯಿಲ್ಲ. ಎರಡನೆಯ ಘಟಕ ಡಿಸೆಂಬರ್ ೨೦೦೧ ಹಾಗೂ ನಾಲ್ಕನೆಯ ಘಟಕ, ಮಾರ್ಚ್ ೨೦೦೨ನೇ ವರ್ಷದೊಳಗಾಗಿ

ಪೂರ್ತಿಗೊಳಿಸಬೇಕೆಂಬ ಗುರಿ ಏನೋ ಇದೆ. ಆದರೆ ಸರಕಾರಿ ಕೆಲಸ ದೇವರ ಕೆಲಸವಲ್ಲವೇ? ಅದನ್ನು ಸಕಾಲದಲ್ಲಿ ಮಾಡಿ ಮುಕ್ತಾಯಗೊಳಿಸುವ ಹೊಣೆ ದೇವರಿಗೇ ಬಿಟ್ಟದ್ದು!" ಎಂದು ಕ್ರಿಶ್‌ರ ಶರಾವತಿ-ಶೋಷಣೋಪಾಖ್ಯಾನ ಮುಗಿಯುತ್ತಿದ್ದಂತೆ ಹಿಂದೆ ಬಿಟ್ಟು ಬಂದ, ಬಸ್, ಹಾರ್ನ್‌ನಿಂದ ಸೂಚನೆಯಿತ್ತು ನಿಲ್ಲಿಸಿ, ಈ ಯಾತ್ರಿಕರನ್ನು ಹತ್ತಿಸಿಕೊಂಡಿತು. ಆ ಬಳಿಕ ಯಾರೂ ಯಾವ ಮಾತನ್ನೂ ಎತ್ತದೇ ಸ್ವಸ್ಥಾನದಲ್ಲಿ ಆಸೀನರಾಗಿ ವಿಚಾರಗಳ ತುಮುಲದಲ್ಲಿ ಮೈಮರೆತರು.

೪. ಕಾರ್ಯವಿಧಾನ

"ಮಾವಾ, ಈವರೆಗಿನ ನಿಮ್ಮ ವಿವರಣೆಯಿಂದ ಇಂಥ ಜಲವಿದ್ಯುದಾಗರಗಳಿಂದ ಆಗುವ ಲಾಭಕ್ಕಿಂತ ನಷ್ಟವೇ ಹತ್ತು ಪಟ್ಟು ಇರುವಾಗ ಇವುಗಳು ಹೇಗೆ ಕಾರ್ಯಾಚರಣೆಯಲ್ಲಿ ಬರುತ್ತವೆ?" ಕುತೂಹಲದಿಂದ ಸೊಸೆ ಕಿಮ್ ಪ್ರಶ್ನಿಸಿದಳು.

"ಈ ದೇಶದಲ್ಲಿ ಮೊದಲಿದ್ದ ರಾಜ ಮಹಾರಾಜರುಗಳು ಸ್ವಹಿತದಲ್ಲಿಯೇ ಮುಳುಗಿ, ಜನಹಿತವನ್ನು ಕಡೆಗಣಿಸುತ್ತಾರೆಂದು ಬಗೆದು ಧೀಮಂತರು, ಶಿಕ್ಷಿತರು, ರಾಜಕಾರಣಿಗಳು, ಪ್ರಜಾತಂತ್ರವೇ ಸರ್ವಜನ ಹಿತಕಾರಿ! ಎಂದು ಮನಗಂಡರು. ಅದನ್ನು ನಮ್ಮದನ್ನಾಗಿಸಿದೆವು. ಎಲ್ಲ ಧರ್ಮಗಳಂತೆ, ರಾಜನೀತಿಯ ಪ್ರಣಾಲಿಗಳು ಸಹ ತತ್ವಗಳ ರೂಪದಲ್ಲಿ ಕಾಗದದ ಮೇಲೆ ಅತ್ಯಾಕರ್ಷಕವಾಗಿರುತ್ತವೆ. ಅವು ಕಾರ್ಯರೂಪದಲ್ಲಿ ಬಂದಾಗ ಮಾತ್ರ ಅವುಗಳಲ್ಲಿಯ ದೋಷಗಳು, ಊನಗಳು ಎದ್ದು ಕಾಣಲಾರಂಭಿಸುತ್ತವೆ. ದೇಶದ ಪ್ರಜೆಗಳೇ ಮುಂದಾಗಿ ತಮ್ಮನ್ನು ತಾವೇ ಆಳಿಕೊಳ್ಳುವ ವಿಚಾರ, ಅದೆಷ್ಟು ಆಕರ್ಷಕವಾಗಿದೆಯಲ್ಲವೇ? ಆದರೆ ಕಳೆದ ಅರ್ಧ ಶತಮಾನದಲ್ಲಿ ಜಗತ್ತಿನ ಶ್ರೇಷ್ಠ ಪ್ರಜಾತಂತ್ರ ಪದ್ಧತಿಗನುಸಾರವಾಗಿಯೇ ರೂಪಿತವಾದ ನಮ್ಮ ದೇಶದ ಸಂವಿಧಾನಾತ್ಮಕವಾಗಿಯೇ ಇರುವ ಆಡಳಿತವನ್ನು ಪರಾಮರ್ಶಿಸಿದಾಗ, ಇದು ನಮ್ಮ ಕಡುವೈರಿಗಳಿಗೂ ಬೇಡ! ಅನಿಸಿಬಿಡುತ್ತದೆ. ನಮ್ಮಲ್ಲಿ ರಾಜಕಾರಣವೆಂಬುದು ಯಶಸ್ಸಿನ, ಸಿರಿವಂತಿಕೆಯ, ಪ್ರತಿಷ್ಠೆಯ ವೃತ್ತಿಯೆನಿಸಿಕೊಂಡಿದ್ದು ಅತ್ಯಂತ ಶೋಚನೀಯ! ಅಂತೆಯೇ ಕಪಟಿಗಳು, ವಂಚಕರು, ದರೋಡೆಖೋರರೆಲ್ಲ ಈ ಕ್ಷೇತ್ರಗಳಲ್ಲಿ ತುಂಬಿತುಳುಕುತ್ತಿದ್ದಾರೆ. ಅವರೆಲ್ಲರ ಏಕಮೇವ ಉದ್ದೇಶವೆಂದರೆ, ಏನಕೇನ ಪ್ರಕಾರೇಣ ಚುನಾವಣೆಯಲ್ಲಿ ಗೆದ್ದು ಬರುವದು, ಅಧಿಕಾರ ಲಪಟಾಯಿಸುವದು. ತಮ್ಮ ಅಕ್ರಮ ವ್ಯವಹಾರಗಳಿಗೆಲ್ಲ ಗೌರವಯುತ ರೂಪ ಕೊಡಲು ಹವಣಿಸುವದು. ಹತ್ತು ತಲೆಮಾರಿಗಾಗುವಷ್ಟು ಧನಸಂಗ್ರಹ ಮಾಡುವದು..." ಎಂದು ಕ್ರಿಶ್ ಪೀಠಿಕೆ ಹಾಕಿದಾಗ "ವಿದ್ಯುತ್ ಉತ್ಪಾದನೆಯಲ್ಲಿ ಧನಲಾಭ ಹೇಗೆ ಆಗಲು ಸಾಧ್ಯ?" ಎಂದು ಕಿಮ್, ಪ್ರಸ್ತುತ ಸಮಸ್ಯೆಯತ್ತ ಕ್ರಿಶ್‌ರ ಗಮನ ಸೆಳೆದಳು.

"ನಮ್ಮ ರಾಜಕಾರಣಿಗಳೆಲ್ಲ ಬೃಹದ್ ಉದ್ದಿಮೆದಾರರ ಕೈಗೊಂಬೆಗಳು. ಕಾಸಿಗಾಗಿ ಅವರನ್ನು ಕೊಳ್ಳಬಹುದು! ಎಂದು ಉದ್ದಿಮೆದಾರರಿಗೆ ಮನವರಿಕೆ ಆಗಿದೆ. ಪ್ರಾರಂಭದಲ್ಲಿ ಅವರಿಗೆಲ್ಲ ಉದ್ದಿಮೆಗಳನ್ನು ನಡೆಸಲು ತೀರಾ ಅಗ್ಗದಲ್ಲಿ ವಿದ್ಯುತ್ತನ್ನು ಕೊಡಮಾಡಿದ ಕೀರ್ತಿ ನಮ್ಮದು! ಪರಮಾಣು ಶಕ್ತಿಯಿಂದ ಉತ್ಪನ್ನವಾಗುವ ವಿದ್ಯುತ್ತು ವಿಪರೀತ ಖರ್ಚಿನದು!

ಎಂದು ಆ ಬಳಿಕ ದೃಢ ಪಟ್ಟಿತು. ನದಿ ನೀರನ್ನು-ಎತ್ತರದಿಂದ ಧುಮುಕಿದ್ದನ್ನು ಬಳಸಿ ಉತ್ಪಾದಿಸಿದ ವಿದ್ಯುತ್, ಆ ಮಾನದಿಂದ ತುಂಬ ಅಗ್ಗ. ಅಂತೆಯೇ ಯಾವ ಕಣಿವೆಯಲ್ಲಿ ಇಂತಹ ಯೋಜನೆಯನ್ನು ಕೈಗೊಳ್ಳಬಹುದು? ಎಂದು ಉದ್ದಿಮೆದಾರರೇ ಸರಕಾರಕ್ಕೆ ಸಲಹೆ ನೀಡುತ್ತಾರೆ. ಸಾರ್ವಜನಿಕರಿಗೆ ಮೋಸ ಮಾಡುವ ಅಂಕಿ ಸಂಖ್ಯೆಗಳು ಮಂತ್ರಿಮಹೋದಯರಿಗೆ ಅರ್ಥವಾಗದ್ದರಿಂದ ಉಚ್ಚ ಸರಕಾರಿ ಅಧಿಕಾರಿಗಳಿಗೆ ಈ ಕೆಲಸವನ್ನು ಒಪ್ಪಿಸಿಕೊಡಲಾಗುತ್ತದೆ. ರಾಜ್ಯದಲ್ಲಿ, ದೇಶದಲ್ಲಿ ನಿರುದ್ಯೋಗ ಹೇಗೆ ಭರದಿಂದ ಬೆಳೆಯುತ್ತಾ ಇದೆ, ಅದನ್ನು ಹೋಗಲಾಡಿಸಲು ಹೊಸ ಹೊಸ ಉದ್ದಿಮೆಗಳು ಹೇಗೆ ಅವಶ್ಯವಾಗಿವೆ, ಅವಕ್ಕೆಲ್ಲ ವಿದ್ಯುತ್ ಪೂರೈಕೆ ಎಷ್ಟೊಂದು ಅತ್ಯವಶ್ಯವಾಗಿದೆ, ಅದು ಸುಲಭ ಬೆಲೆಗೆ ಸಿಗುವಂತಿದ್ದರೆ ಮಾತ್ರ ತಲಾ ಉತ್ಪನ್ನದಲ್ಲಿ ಹೆಚ್ಚಳ ಮಾಡುವದು ಸಾಧ್ಯವಿದೆ! ಎಂದೆಲ್ಲ ಉದ್ದಿಮೆ ಲಾಬಿಯ ತಜ್ಞರು ಆಯಾ ಅಧಿಕಾರಿಗಳಿಗೆ ಗಿಳಿ ಪಾಠ ಮಾಡಿಸುತ್ತಾರೆ. ಈ ವಿವರವಾದ ವರದಿಯನ್ನು ಯೋಜನಾ ಆಯೋಗದ ಮುಂದೆ ಇಡಲಾಗುತ್ತದೆ. ಅವರು ಪರಿಣತರ ಸಮಿತಿಯೊಂದನ್ನು ನೇಮಿಸಿ ವಿವರವಾದ ಅಧ್ಯಯನಕ್ಕೆ ಅಟ್ಟುತ್ತಾರೆ. ಅವರೋ! ಹಣದ ಹೊಳೆ ಹರಿಸಿದರೆ ವಿದ್ಯುತ್ತನ್ನು ಬೇಕಾದಂತೆ ಉತ್ಪಾದಿಸಿ ಉದ್ದಿಮೆಗಳಿಗೆ ಹರಿಸಬಹುದು ಎಂಬ ವರದಿಯನ್ನು ಒಪ್ಪಿಸುತ್ತಾರೆ. ಕೇಂದ್ರ ಸರಕಾರ, ಏಶಿಯನ್ ಪ್ರಗತಿ ಬ್ಯಾಂಕ್, ಜಾಗತಿಕ ಬ್ಯಾಂಕ್‌ಗಳೊಡನೆ ಸಾಲಕ್ಕಾಗಿ ಪತ್ರವ್ಯವಹಾರ ನಡೆಯುತ್ತದೆ. ಈ ಯೋಜನೆ ಕಾರ್ಯರೂಪಕ್ಕೆ ಇಳಿದರೆ ಅಸಂಖ್ಯ ಬಡಬಗ್ಗರ ಕಷ್ಟಗಳಲ್ಲಿ ಕಡಿತವುಂಟಾಗಬಹುದು! ಎಂಬ ಭ್ರಮೆಯಿಂದ ಪಾಪ-ಪುಣ್ಯಗಳ ಪರಿವೆ ಇದ್ದ ಸಂಸ್ಥೆಗಳು ಸುಲಭವಾಗಿ ಸಾಲಕೊಡಲು ಮುಂದಾಗುತ್ತವೆ." ರಾಜಕಾರಣಿಗಳ ಕಾರ್ಯ ವೈಖರಿಯನ್ನು ಕ್ರಿಶ್, ಕ್ರಿಮ್‌ಗೆ ಪರಿಚಯಿಸಿದರು.

"ಇದನ್ನೆಲ್ಲ ಯೋಜಿಸುವಾಗ ಈ ಕಾರ್ಯಾಚರಣೆಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಪೂರ್ವಭಾವೀ ಅಧ್ಯಯನ ಮಾಡುವ ಪರಿಹಾರ ಭಾರತದಲ್ಲಿ ಇಲ್ಲವೇ?" ಸರಳವಾದ ಪ್ರಶ್ನೆ ಸೊಸೆಯಿಂದ ಬಂದಿತು.

"ಇಂತಹ ಸಮಸ್ಯೆಗಳಿಗೆಲ್ಲ ಉತ್ತರಗಳನ್ನು ಮೊದಲೇ ಸಿದ್ಧವಾಗಿಡುವ ಪದ್ಧತಿಯಿದೆ! ಯೋಜನೆಯಿಂದ ಹೊಲ ಮನೆ ಕಳೆದುಕೊಂಡವರಿಗೆಲ್ಲ ಬೇರೆಡೆಯಲ್ಲಿ ವಾಸದ ಸಕಲ ಸವಲತ್ತುಗಳನ್ನು ಮಾಡಿಕೊಡುತ್ತಾರೆ! ಮುಳುಗಡೆಯಾಗುವ ಪ್ರತಿ ಮರದ ಬದಲಿಗೆ ಅರಣ್ಯ ಇಲಾಖೆಯವರು ಎರಡು ಮರಗಳನ್ನು ಬೆಳೆಸುತ್ತಾರೆ! ಹಳ್ಳಿ ಪಟ್ಟಣಗಳು ಮುಳುಗಿದರೆ ಅವನ್ನು ಬೇರೆಡೆ ವರ್ಗಾಯಿಸಲಾಗುತ್ತದೆ!" ಎಂದೆಲ್ಲ ಆಶ್ವಾಸನೆಗಳು ಹುಟ್ಟಿಕೊಳ್ಳುತ್ತವೆ. ಮಂತ್ರಿಗಳ ಭಾಷಣದಲ್ಲಿ ಮೂಡಿಬರುತ್ತವೆ. ಫೈಲುಗಳಲ್ಲೂ ಕಾಣಿಸಿಕೊಳ್ಳುತ್ತವೆ. ಇಂಥ ಸದವಕಾಶಗಳಿಗೆ ಕಾಯುತ್ತಲೇ ಇರುವ ಬಡಜನರ, ದಲಿತರ 'ಮುಖಂಡ'ರು, ಪರ-ವಿರೋಧಿ ಬಣ ಕಟ್ಟಿಕೊಂಡು ಹೋರಾಟಕ್ಕೆ ಇಳಿಯುತ್ತಾರೆ. ಹೆಣ್ಣು-ಮಕ್ಕಳು, ಚಿಕ್ಕಮಕ್ಕಳು ಇವರಿಂದ ಮರಗಳನ್ನು ಗುತ್ತಿಗೆದಾರರು ಕಡಿಯದಂತೆ ಮಾಡುವ 'ಅಪ್ಪಿಕೋ' ಚಳವಳಿಯಂತಹದನ್ನು ಪ್ರಾರಂಭಿಸುತ್ತಾರೆ. ಯಂತ್ರೋಪಕರಣಗಳನ್ನು ನಡೆಸದಂತೆ ಅಡ್ಡಿ-ಆತಂಕಗಳನ್ನು ಒಡ್ಡುತ್ತಾರೆ.

ಇವೆಲ್ಲ ಫಲಕಾರಿಯಾಗದೇ ಇದ್ದಾಗ ಆಮರಣ ಉಪವಾಸದ ಬೆದರಿಕೆ ಹಾಕುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಉದ್ದುದ್ದ ಭಾಷಣಗಳನ್ನು ಬಿಗಿಯುತ್ತಾರೆ. ವೃತ್ತಪತ್ರಿಕೆ, ರೇಡಿಯೋ, ದೂರದರ್ಶನದವರು ಮುದ್ರಿಸಿಕೊಂಡು, ಬಿತ್ತರಿಸುತ್ತಾರೆ. ಹಣ್ಣಾದ ಸರಕಾರ, ಈ ಮುಖಂಡರು ಸೂಚಿಸಿದವರಿಗೆಲ್ಲ ಕೈತುಂಬ ಹಣ ಹಾಗೂ ಸರಕಾರಿ ನೌಕರಿಗಳನ್ನು ಮಂಜೂರ ಮಾಡಿದಾಗ, ಸಕಲ ವಿರೋಧವೂ ತಣ್ಣಗಾಗಿ ಬಿಡುತ್ತದೆ. ಜನಹಿತಕ್ಕಾಗಿಯೇ ಇಂಥ ಆಂದೋಲನಗಳಲ್ಲಿ ಪಾಲುಗೊಂಡವರಿಗೆ ತಾವು ಮೋಸ ಹೋದದ್ದು ಅರಿವಾಗಲು ತುಂಬ ತಡವಾಗುತ್ತದೆ. ಅಷ್ಟರಲ್ಲಿ ಸರಕಾರದ ಕೆಲಸ ಮುಕ್ಕಾಲು ಮುಗಿದಿರುತ್ತದೆ" ಅನೇಕ ವಿವರಗಳನ್ನು ಕ್ರಿಶ್ ನೀಡಿದರು.

"ಇದೆಲ್ಲ ನಮ್ಮಲ್ಲಿ ತುಂಬಾ ಸಾಮಾನ್ಯ. ನಿಜ! ಆದರೆ ನಿಜವಾಗಿಯೂ ಪ್ರಜೆಗಳ ಅಭ್ಯುದಯದಲ್ಲಿ ಆಸಕ್ತಿ ಇದ್ದ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಇಂತಹ ಯೋಜನೆಗಳನ್ನು ರೂಪಿಸಿ ಹೇಗೆ ಕಾರ್ಯರೂಪಕ್ಕೆ ತರುತ್ತಾರೆ?" ಈವರೆಗೆ ತೂಕಡಿಸುತ್ತಿದ್ದ ಜೋ, ಒಮ್ಮಿಂದೊಮ್ಮೆಲೇ ಎಚ್ಚತ್ತು ಉತ್ತರ ಪಡೆಯುವ ಆತುರ ತೋರಿದಳು.

'ಅಮೇರಿಕೆಯಂಥ ಮುಂದುವರಿದ, ಬಲಿಷ್ಠ ರಾಷ್ಟ್ರಗಳಲ್ಲಿಯೂ ರಾಜಕಾರಣಿಗಳು ಸ್ವಾರ್ಥ ಹಾಗೂ ಸಂಕುಚಿತ ದೃಷ್ಟಿಕೋನದವರೇ ಆಗಿರುತ್ತಾರೆ. ಆದರೆ ಆ ದೇಶದಲ್ಲಿ ರಾಷ್ಟ್ರಾಧ್ಯಕ್ಷರ ಸಲಹಾ ಸಮಿತಿಯಲ್ಲಿ ತಮ್ಮ ದೇಶ ಹಾಗೂ ಜನತೆಯ ಪ್ರಗತಿಯ ಕುರಿತಾದ ಅತ್ಯುತ್ತಮ ಅರಿವುಳ್ಳ, ತರಬೇತಿಯಿದ್ದ ಪರಿಣತರು ಇರುತ್ತಾರೆ. ಇಲ್ಲಿಯ ಹಾಗೆ ರಾಜಕಾರಣಿಗಳು ಇಷ್ಟಪಡುವ "ತಜ್ಞ"ರು ಅಲ್ಲ. ಅಲ್ಲಿಯವರು, ರಾಜಕಾರಣದ ಸೋಂಕು ಹತ್ತದ ನಿಜವಾದ ವಿದ್ವಾಂಸರು ಹಾಗೂ ತಂತ್ರಜ್ಞರು. ಸರಕಾರ ಕೈಗೊಳ್ಳುವ ಪ್ರತಿ ಯೋಜನೆಯನ್ನು ಜನರ ಹಿತ, ದೇಶದ ಹಿತಗಳ ವೈಯಕ್ತಿಕ ಸ್ತರಗಳಲ್ಲಿ, ಲಾಭ-ಹಾನಿಗಳನ್ನು ತೂಗಿ, ತೂಗಿ, ನೋಡಿ, ಅತ್ಯಂತ ಸೂಕ್ತ ಸಲಹೆಗಳನ್ನು ನೀಡುತ್ತಾರೆ. ರಾಜಕಾರಣಿಯಾದವನು, ಅವರು ನೀಡುವ ಹಲವಾರು ಸೂಚನೆಗಳಲ್ಲಿ ಒಂದನ್ನು ಆರಿಸಬೇಕೇ ಹೊರತು, ತನಗೆ, ತನ್ನವರಿಗೆ, ತನ್ನ ಪಕ್ಷಕ್ಕೆ ಅನುಕೂಲವಾದದ್ದನ್ನು ದೇಶದ ಮೇಲೆ ಹೇರುವಂತೆ ಇಲ್ಲ! ಹೀಗಾಗಿ, ಪಾಶ್ಚಾತ್ಯ ದೇಶಗಳಲ್ಲೆಲ್ಲ ಈಗಿರುವಂತೆ ಹಾಗೂ ಒಂದು ಶತಮಾನದ ಬಳಿಕವೂ ಬರಬಹುದಾದ ಸಮಸ್ಯೆಗಳನ್ನು ತುಂಬ ಮುಂಚಿತವಾಗಿಯೇ ಯೋಚಿಸಿ ಪರಿಹಾರವನ್ನು ಕೈಗೊಳ್ಳಲಾಗುತ್ತಿದೆ. ಅಂತೆಯೇ ಅಮೇರಿಕೆಯ ಅರಣ್ಯಯೋಜನೆಯೇ ಆಗಲಿ, ಕೃಷಿ ಉತ್ಪಾದನೆಯೇ ಆಗಲಿ, ಹೆದ್ದಾರಿಗಳ ಜಾಲ ನಿರ್ಮಾಣವೇ ಆಗಲಿ ವಿಶ್ವದಲ್ಲಿಯೇ ಹೆಸರುವಾಸಿಯಾಗಿವೆ. ಇದರಿಂದಲೇ ಅವರ ರಾಷ್ಟ್ರೀಯ ಸಂಪತ್ತು ಬೆಳೆಯುತ್ತ ಬಂದು ಅದು ಜಗತ್ತಿನಲ್ಲಿಯೇ ಪ್ರಬಲ ರಾಷ್ಟ್ರ ಅನಿಸಿಕೊಂಡಿದೆ!" ಎಂದು ವಾದಕ್ಕೆ ಪೀಠಿಕೆ ಹಾಕಿದರು ಕ್ರಿಶ್.

"ನಮ್ಮ ದೇಶ ವಿಶ್ವದ ಬಡ ರಾಷ್ಟ್ರಗಳಲ್ಲಿಯೇ ಒಂದಾಗಿದೆ, ಎಂಬ ಕಟು ಸತ್ಯವನ್ನು ಮರೆಯುವಂತೆ ಇಲ್ಲವಲ್ಲ!" ವಿಕ್ ತನ್ನ ತೀರ್ಪನ್ನಿತ್ತ.

"ನಮ್ಮದು ಬಡ ದೇಶವೇ? ಭೂಮಾತೆ ನಮಗೆ ಅಪರಿಮಿತ ಸಂಪತ್ತನ್ನು ನೀಡಿದ್ದಾಳೆ.

ಭೂ, ಜಲ, ವನ, ಖನಿಜಸಂಪತ್ತು, ಜನಬಲ, ಬುದ್ಧಿಬಲ, ಯಾವುದಕ್ಕೆ ಕೊರತೆ ಇದೆ? ಆದರೆ ಇವನ್ನೆಲ್ಲ ಚಿಕಿತ್ಸಕ ಬುದ್ಧಿಯಿಂದ ವಿಂಗಡಿಸಿ, ಬಳಸಲು ಬೇಕಾದ ಮುಂದಾಳುತನ, ಸಂಘಟನೆಗಳೇ ನಮ್ಮಲ್ಲಿಲ್ಲ! ನಮ್ಮ ರಾಜ್ಯ ಹಾಗೂ ದೇಶದ ಧುರೀಣರು ಬೆಳೆದು ನಮ್ಮನ್ನಾಳುವ ರೀತಿಯನ್ನು ನೋಡುತ್ತ ಬಂದಿದ್ದೇನೆ. ಶಾಲೆ-ಕಾಲೇಜುಗಳ ಓದನ್ನು ತನ್ನದನ್ನಾಗಿ ಮಾಡಿಕೊಳ್ಳದೇ ಪುಂಡರ ತಂಡ ಕಟ್ಟಿಕೊಂಡಾತ, ಶಿಕ್ಷಕ ಪ್ರಾಧ್ಯಾಪಕರಿಗೆಲ್ಲ ಹೆದರಿಸಿಯೋ, ಹೊಡೆದೋ ಮೆರೆದಾತ, ಒಂದು ದಿನ ಧುರೀಣನಾಗುತ್ತಾನೆ. ಯಾವುದೋ ಕಾನೂನು ಅಥವಾ ಇನ್ನೊಂದರ ಡಿಗ್ರಿಯನ್ನು ಹೇಗೋ ತನ್ನದನ್ನಾಗಿಸಿಕೊಂಡಿರುತ್ತಾನೆ. ಸರಿ, ಬಂಡವಲು ಬೇಕಿಲ್ಲದ ರಾಜಕಾರಣದ ಉದ್ಯೋಗ, ಈ ನಿರುದ್ಯೋಗಿಯನ್ನು ಬಲವಾಗಿ ಆಕರ್ಷಿಸುತ್ತದೆ. ಊರ ಪೋಲಿಗಳ ನಾಯಕನಾಗುತ್ತಾನೆ. ಹಣವಸೂಲಿ, ಹಫ್ತಾ, ಮನೆ-ಅಂಗಡಿಗಳನ್ನು ತೆರವು ಮಾಡಿಸುವದು, ಹೊಡೆತ-ಬಡಿತಗಳನ್ನು ನೇಪಥ್ಯದಿಂದ ನಡೆಸುತ್ತಾನೆ. ಈ ಶಕ್ತಿ-ಸಾಮರ್ಥ್ಯಗಳಿಂದ, ಸುಲಭವಾಗಿ ಮತಗಳನ್ನು ತನ್ನವನ್ನಾಗಿ ಮಾಡಿಕೊಳ್ಳಬಹುದಾದ್ದರಿಂದ ಗ್ರಾಮೀಣ ಬ್ಯಾಂಕ್, ನಗರ ಪಾಲಿಕೆಗಳಿಗೆ ಚುನಾಯಿತನಾಗಿ, ಪ್ರತಿಷ್ಠೆ ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಇದರಿಂದ ಅವನ ಪ್ರಾಬಲ್ಯವನ್ನು ಅರಿತ, ರಾಜ್ಯದ, ದೇಶದ ರಾಜಕೀಯ ಪಕ್ಷಗಳು, ಚುನಾವಣೆಯಲ್ಲಿ ಹುರಿಯಾಳಾಗಿ ಸ್ಪರ್ಧಿಸುವಂತೆ ಬೆಂಬಲಿಸುತ್ತವೆ. ಹಣ ಮತ್ತು ಮತಗಳನ್ನು ಕಲೆಹಾಕುವ ಅವನ ಸಾಮರ್ಥ್ಯದ ಮೇಲೆ ಅವನ ರಾಜಕೀಯ ಭವಿಷ್ಯ ಅವಲಂಬಿಸಿರುತ್ತದೆ. ಅವನು ನಿರ್ದಯಿಯಿಯಾದಷ್ಟೂ ಅವನ ಕಾರ್ಯಕಲಾಪಗಳು ಸುಲಭವಾಗಿ ಸಾಗುತ್ತವೆ. ಯಾವದೊಂದೇ ತತ್ವ ಪ್ರಣಾಲಿಗೆ ಜೋತು ಬೀಳುವ ಸಂಕುಚಿತ ಬುದ್ಧಿ ಅವನದಲ್ಲ! ತನ್ನ ಸ್ವಾರ್ಥ, ಧನಬಲ, ನಾಯಕತ್ವ ಲಭಿಸಬಹುದಾದಂತಹ ಮಾರ್ಗ ಹುಡುಕುತ್ತ ಆ ಪಕ್ಷ, ಈ ಪಕ್ಷ ಸೇರಲು, ರಾಜ್ಯ, ಕೇಂದ್ರ ಸರಕಾರದ ಆಡಳಿತದಲ್ಲಿ ಪಾಲ್ಗೊಳ್ಳಲು ಷಡ್‌ಯಂತ್ರ ರೂಪಿಸುವಲ್ಲಿ ಈತನಿಗೆ ದಿನದ ಇಪ್ಪತ್ತುನಾಲ್ಕು ಗಂಟೆಗಳೂ ಸಾಲದಾಗುತ್ತವೆ!” ಭಾರತದ ಹಲವಾರು ರಾಜಕೀಯ ಮುಖಂಡರ ಕಾರ್ಯವೈಖರಿಯ ಮಾದರಿಗಳನ್ನು ಕ್ರಿಶ್ ನೆನಪಿಸಿಕೊಂಡರು.

“ಇಂಥ ಕಾರ್ಯ ವಿಧಾನಗಳಿಂದ ಅಧಿಕಾರ ಬರಬಹುದು. ಧನಿಕನಾಗಲು ಹೇಗೆ ಸಾಧ್ಯ?” ಪತ್ನಿಯ ಪ್ರಶ್ನೆ ಎದುರಾಯಿತು.

“ನಮ್ಮ ರಾಜಕಾರಣಿಗಳಿಗೆ ಯಾವ ವೈಜ್ಞಾನಿಕ, ತಾಂತ್ರಿಕ ಹಣಕಾಸಿನ ವ್ಯವಸ್ಥೆ ಇತ್ಯಾದಿಗಳ ಜ್ಞಾನ ಇರಬೇಕಾದ ಅವಶ್ಯಕತೆ ಇಲ್ಲ! ತಮ್ಮಲ್ಲಿದ್ದ ಹಣ ದ್ವಿಗುಣಗೊಳಿಸುವ ಕಲೆ ಗೊತ್ತಿದ್ದರಾಯ್ತು. ನಮ್ಮ ಸರಕಾರಿ ಉಚ್ಚ ಅಧಿಕಾರಿಗಳೂ ಅಷ್ಟೆ! ಸದಾಕಾಲ ಮಂತ್ರಿಮಹೋದಯರ ಮರ್ಜಿ ಕಾಯುತ್ತ ಅವರನ್ನು ಗೆಲುವಾಗಿ ಇಡುವದರಲ್ಲಿಯೇ ಮುಳುಗಿರುತ್ತಾರೆ. ಬರಲಿರುವ ಕಮಿಷನ್ ಆಧಾರದ ಮೇಲೆಯೇ ಹೆಸರೇ ಕೇಳದ ಕಂಪನಿಯ ಕಂಪ್ಯೂಟರ್‌ಗಳು, ಮಾನ್ಯ ಮಂತ್ರಿಗಳಿಗೆ ಕೊಳ್ಳುವದಿದ್ದರೆ, ಆ ಬ್ರಾಂಡ್ ಜಗತ್ತಿನಲ್ಲಿಯೇ ಅತ್ಯುತ್ತಮವಾದದ್ದು! ಎಂದು ಶಿಫಾರಸು ಪಡೆಯುತ್ತದೆ. ಕಾಡು-ಕಡಿತದಿಂದ ಜೇಬು ತುಂಬಿಸಿಕೊಳ್ಳುವದಿದ್ದರೆ ಕಾಡು ಕಿಚ್ಚಿನ

ಭಯ ಸೃಷ್ಟಿಸಿ, ಒಣಗಿದ ಮರಗಳು ಮುದಿಯಾದ ವೃಕ್ಷಗಳನ್ನು ಕಡಿಯಬಹುದೆಂಬ ತಜ್ಞ ಅಭಿಪ್ರಾಯ ಬಂದೇ ಬರುತ್ತದೆ! ಪಾಶ್ಚಾತ್ಯ ದೇಶಗಳಲ್ಲಿ ತಿರಸ್ಕೃತವಾದ ದೂರವಾಣಿ ಯಂತ್ರೋಪಕರಣಗಳು, ನಿಷೇಧಿಸಲ್ಪಟ್ಟ ಅತ್ಯಂತ ಗಂಡಾಂತರಕಾರಿ ಕೀಟನಾಶಕಗಳು, ಜನರ ಏಳ್ಗೆಗಾಗಿ ಅವಶ್ಯವೆಂದು ದುಬಾರಿ ಬೆಲೆಗೆ ಆಯಾತ ಮಾಡುವ ಸಚಿವೋತ್ತಮರು ನಮ್ಮಲ್ಲಿದ್ದಾರೆ. ನಿಜ ಹೇಳಬೇಕೆಂದರೆ ಯಾವ ವಿಷಯದ ಕುರಿತೂ ಅವರಿಗೆ ಮಾಹಿತಿ ಇರುವುದಿಲ್ಲ. ಕೇವಲ ಅಧಿಕಾರ ಬಲದಿಂದ ಅವರು ಜ್ಞಾನಿಗಳೂ, ಎಲ್ಲವನ್ನೂ ಬಲ್ಲವರೆಂದೂ ಜನರು ಎಣಿಸುತ್ತಾರೆ. ಖುದ್ದಾಗಿ ತಾವೂ ನಂಬಲಾರಂಭಿಸುತ್ತಾರೆ! ಇದೇ ನಮ್ಮ ದೇಶದ ದುರದೃಷ್ಟ!' ತುಂಬ ನೊಂದುಕೊಂಡು ಕ್ರಿಶ್ ಹೇಳಿದರು.

"ಈ ಟೇಲ್ ರೇಸ್ ಯೋಜನೆ ಹೇಗೆ ಅಸ್ತಿತ್ವದಲ್ಲಿ ಬಂತು?" ಹೆಚ್ಚಿನ ವಿವರಗಳನ್ನು ಅರಿಯಲು ವಿಕ್ ಹವಣಿಸಿದ. "ಈ ಯೋಜನೆಯಲ್ಲಿ ವಿಶ್ವಾಸವಿಟ್ಟ ಜಾಗತಿಕ ಬ್ಯಾಂಕ್, ಇನ್ನೂರ ಹನ್ನೆರಡು ಕೋಟಿ ರೂಪಾಯಿಗಳ ಸಾಲ ನೀಡಲು ಮುಂದಾದದ್ದೇ ನಾಂದಿಯಾಯಿತು. ಶರಾವತಿ ಕೊಳ್ಳದ ಮುಳುಗಡೆಗೆ ಮುಖ್ಯಕಾರಣವಾಯಿತು. ನಮ್ಮ ಹೆಚ್ಚಿನ ಮುಖಂಡರು 'ಸಂಕ ಮುರಿದಲ್ಲಿ ಸ್ನಾನ' ಮುಗಿಸುವ ವರ್ಗಕ್ಕೆ ಸೇರಿದವರು. ಬರಲಿರುವ ಸಾಲದ ಮೊತ್ತದಲ್ಲಿ ಶೇಕಡಾ ಎಷ್ಟು ಹಣ ತಮ್ಮ ಜೇಬಿಗೆ ಇಳಿಯಲು ಸಾಧ್ಯ? ಎಂಬ ಅಂಕಿ ಸಂಖ್ಯೆಗಳ ಪರಾಮರ್ಶೆ ಮೊದಲಾಗಿ ಬಿಡುತ್ತದೆ. ಈ ಸಾಲ ಮರು ಪಾವತಿ ಮಾಡುವ ಬಗ್ಗೆ ಅವರು ತಲೆ ಕೆಡಿಸಿಕೊಳ್ಳಬೇಕಾಗಿಯೇ ಇಲ್ಲ! ಕೇಂದ್ರ ಸರಕಾರಕ್ಕೆ ಜಾಮೀನು ನಿಲ್ಲುವಂತೆ ವಿನಂತಿಸಿಕೊಳ್ಳುವದು. ಈ ಸಾಲ ಹಿಂದಿರುಗಿಸಲು, ಮತ್ತೊಂದು ಬೃಹತ್ ಸಾಲವನ್ನು ಪಡೆಯಲು ಯೋಜಿಸುವದು, ಬೇರೇನೂ ಮಾಡಲಾಗದಿದ್ದರೆ ಜನ ಸಾಮಾನ್ಯರ ಮೇಲೆ ವಿವಿಧ ರೂಪಗಳಲ್ಲಿ ಕರಭಾರ ಹೇರಿ ಸಾಲ ತೀರಿಸಲು ಯತ್ನಿಸುವದು, ಅಧಿಕಾರದ ಐದು ವರ್ಷಕ್ಕಿಂತ ಮುಂದೆ ನಮ್ಮ ಮುಖಂಡರ ಬುದ್ಧಿ ಓಡುವದೇ ಇಲ್ಲ!" ನಿಟ್ಟುಸುರಿನೊಂದಿಗೆ ಕ್ರಿಶ್ ಮಾತು ಮುಗಿಸಿದರು.

೫. ಅನ್ಯಾಯ

ಅನ್ಯಾಯವಾಗಿ ಚಿಗರೆಯನ್ನು ಆಹುತಿ ತೆಗೆದುಕೊಂಡದ್ದಕ್ಕೆ ಡ್ರಾಯವರನನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದು ಈ ಬಾರಿ ವಿಕ್, ಯತ್ನಿಸಿದಾಗ, ಕಣ್‌ಸನ್ನೆಯಿಂದಲೇ ಸುಮ್ಮನಿರುವಂತೆ ಕ್ರಿಶ್ ಸೂಚಿಸಿದರು. ಏಕೆಂದು ಆತ ಪ್ರಶ್ನಾರ್ಥಕವಾಗಿ ನೋಡಿದಾಗ "ನೋಡಯ್ಯ ನಾವು ಪೋಲಿಸ್ ಸಿಬ್ಬಂದಿಯಾಗಿ ಹೊರಟಿಲ್ಲ! ಚಿಕಿತ್ಸಕ ಮತಿಯಿಂದ ನಮ್ಮ ಜಿಲ್ಲೆಯ ಅನುಕೂಲ ಪ್ರತಿಕೂಲಗಳನ್ನು ಗಮನಿಸಿ, ಅವುಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇಲ್ಲಿ ಶಾಶ್ವತವಾಗಿ ನೆಲೆಸಲು ಸಾಧ್ಯವೇ? ಎಂದು ನಿರ್ಧರಿಸುವದು ನಮ್ಮ ಏಕಮಾತ್ರ ಧ್ಯೇಯ. ಅಂತೆಯೇ ಇಲ್ಲಿಯ ಆಗು-ಹೋಗುಗಳನ್ನು ಪರಿಚಯಿಸಿಕೊಳ್ಳುವದೂ ಅತಿ ಮುಖ್ಯವಾದದ್ದು. ಈಗ ನಾವು ಕಣ್ಣಾರೆ ಕಂಡ ಹತ್ಯೆ, ಅಪವಾದವಲ್ಲ. ಅವಕಾಶ ಸಿಕ್ಕಾಗಲೆಲ್ಲ ನಡೆಯುತ್ತಲೇ ಇರುತ್ತದೆ." ಕ್ರಿಶ್, ಸಮಾಧಾನದಿಂದ ನುಡಿದರು. "ನಿಜವೇ?" ಎಂದು ಮಗನು ಹುಬ್ಬೇರಿಸಿದಾಗ, ಒಂದು ನಿಮಿಷ ಮೌನವಾಗಿದ್ದ ಕ್ರಿಶ್, ತಾವು ನೋಡಿದ್ದನ್ನು, ಅರಿತದ್ದನ್ನು ಒಂದೊಂದಾಗಿ ವಿವರಿಸಲಾರಂಭಿಸಿದರು.

"ನನ್ನ ಬಾಲ್ಯದಲ್ಲಿ ಶರಾವತಿ ಕೊಳ್ಳ, ಕಾಡು ಪ್ರಾಣಿಗಳಿಂದ ಕಿಕ್ಕಿರಿದು ತುಂಬಿತ್ತು. ಗೇರಸೊಪ್ಪೆಯ ನಗರಬಸದಿಯ ಪ್ರದೇಶದಲ್ಲೇ ಕಾಡಾನೆಗಳು ಯಥೇಷ್ಟವಾಗಿ ಮೇಯ್ದು ಮೆರೆಯುತ್ತಿದ್ದುದರಿಂದ ಸಾಯಂಕಾಲ ಅತ್ತ ಸುಳಿಯುವ ಧೈರ್ಯವನ್ನು ಯಾರೂ ಮಾಡುತ್ತಿರಲಿಲ್ಲ. ಹುಲಿಗಳು, ಕಾಡುಹಂದಿ, ಕಾಟಿ, ಚಿಗರೆಗಳನ್ನು ಬೇಟೆಯಾಡಿ ಜೀವಿಸುತ್ತಿದ್ದವು. ಹಳ್ಳಿಗರೆಲ್ಲ ತಮ್ಮ ದನಕರುಗಳ ಸಲುವಾಗಿ ಹುಲಿರಾಯನಿಗೆ ಹೆದರುತ್ತಿದ್ದುದರಿಂದ ಅಂದಿನ ಬ್ರಿಟಿಷ್ ಸರಕಾರ ಹುಲಿಬೇಟೆಯನ್ನು ಪ್ರೋತ್ಸಾಹಿಸುತ್ತಿತ್ತು. ಶಿಕಾರಿಗಳಿಗೆ ಆಹ್ವಾನವಿತ್ತು ಬೇಟೆಯಾಡಿದ ಹುಲಿಗಳ ಉದ್ದಗಲಳತೆಯ ಮೇಲೆ ಬಹುಮಾನಗಳನ್ನು ಕೊಡಲಾಗುತ್ತಿತ್ತು. ಅಂತೆಯೇ ಹಳ್ಳಿಗರು, ಶೌರ್ಯದಿಂದ ಕೊಂದ ಹುಲಿಯನ್ನು ಒನಕೆಯೊಂದಕ್ಕೆ ಕಟ್ಟಿ ನೇತುಹಾಕಿ ನಾಲ್ವರೋ ಆರುಜನರೋ ಹೊತ್ತು, ಮಾಮಲೇದಾರರ ಕಚೇರಿಗೆ ತರುತ್ತಿದ್ದರು. ನಡುದಾರಿಯಲ್ಲಿ ತುಂಬ ಭಾರವೆನಿಸಿದಾಗ ಭೂಮಿಗಿಳಿಸಿ ವಿಶ್ರಾಂತಿ ಪಡೆಯುವ ಪದ್ಧತಿಯೂ ಇತ್ತು. ನಾವೆಲ್ಲ ಅವರನ್ನು ಹಿಂಬಾಲಿಸುತ್ತ ಸತ್ತ ಹುಲಿಯ ದೇಹ ಸ್ಪರ್ಶಿಸಿ, ಬಾಲ ಹಿಡಿದು ಹಲ್ಲು, ಉಗುರುಗಳ ಹರಿತಕ್ಕೆ ಅಚ್ಚರಿಪಡುತ್ತ ಸಾಗುವದು, ಸಾಮಾನ್ಯವಾಗಿತ್ತು. ಹಳ್ಳಿಗರು, ಹುಲಿಯುಗುರು, ಚರ್ಮ, ಚಿಗುರೆಯ ಕೊಂಬು, ಚರ್ಮಗಳನ್ನು ಮಾರಾಟಕ್ಕೆ ತರುವದು ಕಂಡುಬರುತ್ತಿತ್ತು. ಕೆಲವೇ

ರೂಪಾಯಿಗಳಿಗೆ ಅವನ್ನು ಕೊಳ್ಳಲು ಸಾಧ್ಯವಿತ್ತು. ಖುರ್ಚಿ ಟೇಬಲ್‌ಗಳಿಲ್ಲದ ದಿನಗಳಲ್ಲಿ ನೆಲದ ಮೇಲೆ ಜಮಖಾನೆಯ ಮೇಲೆ ಚಿಗರೆಯ ಚರ್ಮದ ಮೇಲ್ಹಾಸು ಹಾಕಿ ಕೂಡ್ರುವ ಪದ್ಧತಿಯಿತ್ತು. ಸಾಧು ಸಂತರಂತೆ ಇತರ ಗೌರವಾನ್ವಿತರೂ ಮನೆ-ಅಂಗಡಿಗಳಲ್ಲಿ ತಖ್ತದ ಮೇಲೆ ಇಂಥ ಮೃಗಜಿನದ ಮೇಲೆ ಕುಳಿತುಕೊಳ್ಳುತ್ತಿದ್ದರು."

"ಕಾಡು ಪ್ರಾಣಿಗಳ ಈ ಅಪರಿಮಿತ ಸಂಖ್ಯೆಯಲ್ಲಿ ಒಮ್ಮಿಂದೊಮ್ಮೆ ಖೋತಾ ಹೇಗೆ ಉಂಟಾಯಿತು?" ಸತ್ಯ ಸಂಗತಿ ಅರಿಯಲು ಕುತೂಹಲಿಯಾಗಿ ವಿಕ್ ಕೇಳಿದ!

"ಬೆಳೆಯುತ್ತಿದ್ದ ಜನಸಂಖ್ಯೆಗೆ ಹೆಚ್ಚೆಚ್ಚು ಸವಲತ್ತುಗಳು ಬೇಕಾದವು. ಬಗೆಬಗೆಯ ಇಮಾರತಿಗೆ, ಮಂಚ, ಸೋಫಾ, ಆಸನಾದಿಗಳಿಗೆ, ಸೌದೆಗೆ ಹೆಚ್ಚೆಚ್ಚು ಬೇಡಿಕೆ ಬರಲಾರಂಬಿಸಿತು. ಕಾಡುಮರಗಳ ಗುತ್ತಿಗೆದಾರರು ನಾಯಿಕೊಡೆಗಳಂತೆ ಹಬ್ಬಲಾರಂಭಿಸಿದರು. ಹಳ್ಳಿ ಊರುಗಳ ಹೊರವಲಯದಲ್ಲಿದ್ದ ಕಾಡಿನ ಕೊರಡುಗಳು ಸಾಲದಾದವು. ನಿತ್ಯಹರಿತ್ ಕಾಡುಗಳ ಮೇಲೆ ಅವರ ಕಾಕದೃಷ್ಟಿ ಬಿತ್ತು. ಪರಂಪರಾಗತವಾಗಿ ಬಂದ ಚಕ್ಕಡಿ, ಸಾಕಾನೆಗಳಿಂದ ಸಹಾಯ, ಕಾಡು ಗುತ್ತಿಗೆದಾರರಿಗೆ ಸಾಲಲಿಲ್ಲ. ಟ್ರಕ್‌ಗಳು ಕಾಣಿಸಿಕೊಂಡವು. ಸರಕಾರ, ಕಾಡು ಸವರಿ ಕಚ್ಚಾರಸ್ತೆಗಳಿಗೆ ಅನುವು ಮಾಡಿಕೊಟ್ಟಿತು. ಈ ಸವಲತ್ತು ಬೆಳೆದಂತೆ ಕಾಡುಗಳ್ಳರು ಕಾಣಿಸಿಕೊಂಡರು. ಸರಕಾರಕ್ಕೆ ಅರಿವಿದ್ದೊ, ಇಲ್ಲದೆಯೋ ಬೆಲೆಯುಳ್ಳ ದಿಂಡುಗಳನ್ನು ಕೊಳ್ಳೆ ಹೊಡೆಯಲಾರಂಭಿಸಿದರು. ಹತ್ತು ಮರಕಡಿಯಲು ಸರಕಾರದಿಂದ ಒಪ್ಪಿಗೆ ಪಡೆದು ನೂರುಮರಗಳನ್ನು ಕೆಡವಿದರು. ಈ ನಾಶದಲ್ಲಿ ಅರಣ್ಯಾಧಿಕಾರಿಗಳ ಕೈಬೆಚ್ಚಗೆ ಆಗುತ್ತಿದ್ದುದರಿಂದ ಅವರೂ ಈ ಕಾಡ ಕಗ್ಗೊಲೆ, ಸುಲಿಗೆಗಳು ತಮಗೆ ಗೋಚರಿಸಿದರೂ, ಕಣ್ಣಿದ್ದೂ ಕುರುಡರಂತೆ ನಟಿಸುವದನ್ನು ಬಲುಬೇಗ ಕಲಿತರು. ಈ ಮೊದಲು, ಅಭಯಾರಣ್ಯದಂತೆ ಇದ್ದ ಕಾಡನ್ನು ನಂಬಿದ್ದ ಪಶು ಪಕ್ಷಿಗಳೆಲ್ಲ ಅನಾಥವಾದವು. ಜನರೆಲ್ಲ ಅವನ್ನು ಯಥೇಚ್ಛವಾಗಿ ಕೊಂದು, ತಿಂದು, ತೇಗಿದರು. ಅಳಿದುಳಿದವುಗಳ ಸಂತಾನಕ್ಕೆ ಯಾವ ರೀತಿಯ ಆಹಾರ, ನೀರು, ರಕ್ಷಣೆ ಸಿಗದ್ದರಿಂದ ಅವುಗಳ ಸಂತಾನೋತ್ಪತ್ತಿಯ ಸಾಮರ್ಥ್ಯವೇ ಕುಗ್ಗಲಾರಂಭಿಸಿತು. ಹುಲಿರಾಯನನ್ನು ಯಮ ಸದನಕ್ಕೆ ಕಳಿಸಿದ್ದಕ್ಕೆ ಬಹುಮಾನ ನೀಡುವ ದಿನಗಳು ಜಾರಿ ಹೋದವು. ವ್ಯಾಘ್ರ ಸಂತತಿಯ ಸಂರಕ್ಷಣೆಗಾಗಿ ಕೋಟ್ಯಾವಧಿ ರೂಪಾಯಿಗಳನ್ನು ಮುಡಿಪಾಗಿ ಇಡುವ ಸಂದರ್ಭ ಬರುವಂತಾಯಿತು" ಕ್ರಿಶ್, ಗತೇತಿಹಾಸವನ್ನು ನೆನಪಿಸಿಕೊಂಡರು.

"ನೀವು ಹೇಳಿದ್ದೆಲ್ಲ ನಿಜವಿದ್ದರೆ, ಈ ಚಿಗರೆಗೆ ಕಾಡು ತೊರೆದು ಹೆದ್ದಾರಿಗೆ ಬಂದು ಸಾವನ್ನಪ್ಪುವ ಅವಶ್ಯಕತೆ ಏನಿತ್ತು? ವಿಕ್ ಸವಾಲು ಒಡ್ಡಿದ.

"ಗೇರಸಪ್ಪಾ ಕಾಡಿನಲ್ಲಿ ಎಡಬಿಡದ ಜನರ ಹಾವಳಿಯಿಂದ ನೆಮ್ಮದಿ ಕಳೆದುಕೊಂಡ, ವನ್ಯಪ್ರಾಣಿಗಳು, ನೆರೆಹೊರೆಯ ಶರಾವತಿ ಕಣಿವೆಗೆ ಶಾಶ್ವತವಾಗಿ ವಲಸೆ ಹೋದವು. ಕಾಡುಗಳ್ಳರಿಂದ ತಪ್ಪಿಸಿಕೊಳ್ಳುವದರಲ್ಲಿ ಕೆಲವು ಯಶಸ್ವಿಯೂ ಆದವು. ಆದರೆ ವಿದ್ಯುತ್ ಇಲಾಖೆಯವರು ಅಲ್ಲೊಂದು ಆಣೆಕಟ್ಟು ಕಟ್ಟಿ, ನೀರನ್ನು ನಿಲ್ಲಿಸಲಾರಂಭಿಸಿದರು. ಹೀಗಾಗಿ ಆಳವಾದ ಕಣಿವೆಯಲ್ಲಿ ತಳ ಊರಿದ ಪ್ರಾಣಿಗಳೆಲ್ಲ ಮೇಲೇರಿ ಬರಬೇಕಾಯಿತು. ಅಂತೆಯೇ

ರಾಜ್ಯದ ಹೆದ್ದಾರಿಗಳ ಆಸುಪಾಸಿನಲ್ಲಿ ಕೂಡ ಕಾಡುಮೃಗಗಳು ಕಾಣಿಸಿಕೊಳ್ಳಲಾರಂಭಿಸಿದವು. ಅವುಗಳು ಆಹಾರವನ್ನೊ, ಪ್ರೇಮಿಯನ್ನೋ ಅರಸುತ್ತ ರಸ್ತೆಗೆ ಆಗಮಿಸಿದಾಗ, ವೇಗವಾಗಿ ಓಡುವ ವಾಹನಗಳ ಪ್ರಖರವಾದ ಬೆಳಕಿಗೆ ತಾತ್ಕಾಲಿಕ ಕುರುಡಾಗಿ ಮಂತ್ರಮುಗ್ಧವಾಗಿ, ಮಿಸುಕಾಡದೇ ನಿಂತು ಬಿಡುವಂತೆ ಆಗಲಾರಂಭಿಸಿತು. ಇದರಿಂದ ಆ ರಸ್ತೆಗಳಲ್ಲಿ ಸತತವಾಗಿ ಓಡಾಡುವ ವಾಹನಗಳ ಚಾಲಕರಿಗೆ ಆದಾಯದಲ್ಲಿ ಹೆಚ್ಚಳ ಮಾಡಿಕೊಳ್ಳಲು ಅನುಕೂಲವೇ ಆಯಿತು. ಇಂದು ಮೀನು-ಮಾಂಸಗಳ ಬೆಲೆ ಗಗನಕ್ಕೇರಿದೆ. ಹೊಟೇಲಿನವರು, ಅಗ್ಗದ, ಉತ್ತಮ ಅಥವಾ ವಿರಳ ಮಾಂಸ ಪ್ರಕಾರಗಳಿಗೆ ಹಪಹಪಿಸುತ್ತಲೇ ಇರುತ್ತಾರೆ. ಮೊಲ, ಚಿಗರೆ ಸಾಂಬರ, ಕಾಟಿಗಳಂತಹ ಕಾಡುಪ್ರಾಣಿಗಳ ಮಾಂಸಕ್ಕೆ ವಿಪರೀತ ಬೇಡಿಕೆ! ಅಂತೆಯೇ ಬೆಂಗಳೂರಿನ ದೊಡ್ಡ ಹೊಟೇಲಿನವರು ವಾಹನ ಚಾಲಕರ ನೆರವಿನಿಂದ ಸುಲಭ ಬೆಲೆಗೆ ವಿರಳ ಮಾಂಸದ ಪೂರೈಕೆಯ ವ್ಯವಸ್ಥೆ ಮಾಡಿಕೊಂಡಿರುತ್ತಾರೆ" ಕಣ್ಣಾರೆ ಕಂಡ ಮೃಗ ಹತ್ಯೆಯ ಹಿನ್ನೆಲೆಯನ್ನು ಕ್ರಿಶ್ ವಿವರಿಸಿದರು.

"ಅಂದರೆ ಆ ಸುಂದರ ಮೂಕ ಪ್ರಾಣಿಯ ವಧೆ, ಯಾರಾರನ್ನೋ ಸಿರಿವಂತರನ್ನಾಗಿಸಲು ಮಾಡಿದ್ದೇ?" ನಂಬಲಾಗದ ಧ್ವನಿಯಲ್ಲಿ ಮಗ, ಪ್ರಶ್ನಿಸಿದ.

"ಖಂಡಿತವಾಗಿ! ಆದರೆ "ಅಪಘಾತ" ದಲ್ಲಿ ಪ್ರಾಣಿ, ಜೀವ ತ್ಯಜಿಸಿಲ್ಲವೆಂದು ಸಿದ್ಧಮಾಡಲು ಎಚ್ಚರಿಕೆ ವಹಿಸಲಾಗುತ್ತದೆ. ಕಾಲನ್ನೋ ಬೆನ್ನನ್ನೋ ಮುರಿದು, ಅದು ಅಸಹಾಯಕವಾಗಿ ಬಿದ್ದುಕೊಂಡಾಗ ದೇವರ ಹೆಸರು ಜಪಿಸುತ್ತ ಮೋಕ್ಷಕ್ಕೆ ಕಳಿಸುತ್ತಾರೆ. ಇಂಥ ಕೋಶರ್ ಮಾಂಸವನ್ನು (ಶಸ್ತ್ರ ಪ್ರಯೋಗ ಹೊರ್ತುಪಡಿಸಿದ್ದು), ಎಂಥ ಧರ್ಮಿಷ್ಠರೂ ಸೇವಿಸಬಹುದು. ಪ್ರಾಣಿಯನ್ನು, ಗೋಣಿಚೀಲವೊಂದಕ್ಕೆ ತುರುಕಿ ವಾಹನದ ಮೇಲೆ ಏರಿಸುತ್ತಾರೆ. ದಾರಿಯಲ್ಲಿ ಕೆಲವೆಡೆ 'ತಪಾಸಣೆ' ಇದ್ದರೂ ಯಾರೂ ಆ ಚೀಲದ ಬಗ್ಗೆ ಚಕಾರವೆತ್ತುವದಿಲ್ಲ. ಬಂಡವಳ ಇಲ್ಲದೇ ಬಂದ ಲಾಭದ ಪಾಲು ಪೋಲಿಸರಿಗೆ, ಅರಣ್ಯಖಾತೆಯವರಿಗೆ, ಹೊಟೇಲಿನವರಿಗೆ, ಚಾಲಕರಿಗೆ, ಆಸಕ್ತ ಪ್ರಯಾಣಿಕರಿಗೆ ಸೇರುತ್ತದೆ, ಎಂದು ಬೇರೆ ಹೇಳಬೇಕಾಗಿಲ್ಲ" ಕ್ರಿಶ್ ಮೃಗವಧೆಯ ಮೂಲದ ಕತೆಯನ್ನು ಇನ್ನಷ್ಟು ತಿಳಿಯಾಗಿ ಹೇಳಿದರು.

"ನಾವಿಬ್ಬರೂ ಯತ್ನಿಸಿದ್ದರೆ ಈ ಹತ್ಯೆಯನ್ನು ತಡೆಯಲಾಗುತ್ತಿರಲಿಲ್ಲವೇ?" ಬಂದಿತು ವಿಕ್‌ನ ಪ್ರಶ್ನೆ.

"ನಮ್ಮದು ತೀರ ವಿಚಿತ್ರ ಸಮಾಜ! ಅಮೇರಿಕೆ, ಬ್ರಿಟನ್, ಜರ್ಮನಿಗಳಲ್ಲಿ ಸಾರ್ವಜನಿಕರು ಕಾನೂನುರಕ್ಷಕರ ನೆರವಿಗೆ ಧಾವಿಸಿದರೆ ನಮ್ಮವರು ಕಾನೂನು ಉಲ್ಲಂಘನೆ ಮಾಡುವವರೊಂದಿಗೆ ಸರ್ವವಿಧದಲ್ಲಿ ಸಹಕರಿಸುತ್ತಾರೆ. ಕಳ್ಳಮದ್ಯ ಸಾಗಾಣಿಕೆಯಲ್ಲಿ ತೊಡಗಿದ ಲಾರಿ, ವ್ಯಾನ್ ಡ್ರಾಯವರಗೆಲ್ಲ "ಮುಂದೆ ಪೋಲೀಸ್ ತಪಾಸಣೆ ಇದೆ! ಬಳಸುದಾರಿ ಕ್ಷೇಮಕರ!" ಎಂದು ಮುನ್ನೆಚ್ಚರಿಕೆ ಕೊಡುವ ನಾಗರಿಕರಿದ್ದಾರೆ. "ಬರಹೋಗುವ ವಾಹನಗಳಲ್ಲಿ ಅಕ್ರಮವಾಗಿ ಸಾಗಿಸಲಾಗುವ ಅರಣ್ಯ ಸಂಪತ್ತಿನ ಪರಿಶೀಲನೆ ನಡೆದಿದೆ. ಅಡಗಿಸಿಡಲು ಯತ್ನಿಸಿ!" ಎಂದು ಕಾಡು ಚೋರರಿಗೆ ಕಿವಿಮಾತು ಹೇಳುವವರು ಸಾಕಷ್ಟು

ಜನರಿದ್ದಾರೆ. ಬಸ್ ಕಂಡಕ್ಟರ್ ಕಾಸು ಪಡೆದು ಚೀಟಿ ಕೊಡದಿದ್ದಾಗ, ಪ್ರಯಾಣಿಕರು ಪ್ರತಿಭಟಿಸಿದರೆ, "ನೀವೇನು ಟ್ರಾಫಿಕ್ ಇನ್ಸ್‌ಪೆಕ್ಟ್ರಾ?" ಎಂದು ರಾಗ ಎಳೆಯುವವರೂ ಇಲ್ಲದಿಲ್ಲ. ಪ್ರತಿದಿನ, ಇಂಥ ಹತ್ತಾರು ಜನರ ಸಂಪರ್ಕದಲ್ಲಿ ಬಂದೇ ಬರುತ್ತಿದ್ದೇನೆ! ಇವರೆಲ್ಲ ಇದು ತಮ್ಮ ವಿಧದ ರಕ್ಷಣಾ ಸೇವೆ! ಎಂದು ಮಾಡಿದರೆ ಇಂಥ 'ಸೇವೆ'ಗೆ ಲಾಭ ಪಡೆಯುವವರೂ ಇಲ್ಲದಿಲ್ಲ. ಅಧಿಕಾರಿಗಳು ವಿಧಿಸಬಹುದಾದ ನೂರು ರೂಪಾಯಿಗಳ ಜುಲ್ಮಾನೆಯನ್ನು ತಪ್ಪಿಸಿ, ಹತ್ತುರೂಪೈಗಳ 'ಮಾಮೂಲ್ಗೆ' ಇಳಿಸಿ, ಅದರಲ್ಲಿ ಐದು ರೂಪಾಯಿಗಳನ್ನು ತಮ್ಮ ಜೇಬಿಗೆ ಇಳಿಸುತ್ತಾರೆ. ನಮ್ಮ ಸಮಾಜದಲ್ಲಿ ಇಂಥವರೇ ತುಂಬಿ ತುಳುಕುತ್ತಿರುವಾಗ, ನಾವು ಕಾನೂನುಪರವಾಗಿ ವಾದಿಸಲಾರಂಭಿಸಿದರೆ, ನಾವೇ ಮೂರ್ಖರೆನಿಸಿಕೊಳ್ಳುತ್ತೇವೆ. ಈಗ ನೋಡು, ನಮ್ಮ ಡ್ರಾಯವರ್ ಬುದ್ಧ್ಯಾ ಪೂರ್ವಕ ತನ್ನ ವಾಹನದ ಪ್ರಖರ ಬೆಳಕಿನಿಂದ ಆ ಚಿಗರೆ ಕ್ಷಣಕಾಲ ಮಂಕಾಗಿ ನಿಲ್ಲುವಂತೆ ಮಾಡಿದ. ಕಾಲಿಗೆ ಗಾಡಿಯನ್ನು ಡಿಕ್ಕಿ ಹೊಡೆದ ನಂತರ ಅದನ್ನು 'ಹಲಾಲ್' ಮಾಂಸವಾಗಿಸಲು ಅನುಕೂಲ ಒದಗಿಸಿದ. ನಂತರ ಗೋಣಿಚೀಲಕ್ಕೆ ತುಂಬಿಸಿದ. ಎಲ್ಲರ ಕಣ್ಣೆದುರು ನಡೆದರೂ ಒಬ್ಬರಾದರೂ ವಿರೋಧಿಸಿದರೇ? ಕೆಲವರು ಡ್ರಾಯವರನ ಸಹಾಯಕ್ಕೆ ನಿಂತರು. ಈ ದುಷ್ಕೃತ್ಯವನ್ನು ನೀನು ವಿರೋಧಿಸಿದರೆ ಸಹ ಪ್ರಯಾಣಿಕರೆಲ್ಲ ಡ್ರಾಯವರನು ತನ್ನ ಹೊಟ್ಟೆಪಾಡಿಗೆ ಇದನ್ನು ಕೈಕೊಂಡರೆ ನಿನ್ನಪ್ಪನ ಗಂಟೇನು ಹೋಯಿತು? ಎಂದು ಪ್ರಶ್ನಿಸದೇ ಇರುತ್ತಿರಲಿಲ್ಲ!

ಪಶು-ಪಕ್ಷಿ ಪ್ರಪಂಚ, ಈ ದೇಶದ ನಮ್ಮೆಲ್ಲರ ಜೈವಿಕ ಸಂಪತ್ತು, ಎಂಬ ಅರಿವು ಜನಸಾಮಾನ್ಯರಲ್ಲಿ ಮೂಡುವದಿಲ್ಲ. ಅವರಿಗೆ ಆ ಬಗೆಯ ಶೈಕ್ಷಣಿಕ ಹಿನ್ನೆಲೆ ಇಲ್ಲ. ಪರಿಸರ ರಕ್ಷಣೆಯ ಪ್ರಶ್ನೆ ಇಂಥಲ್ಲಿ ಏಳುವದೇ ಇಲ್ಲ! ನಾವೇನಾದರೂ ವಿರೋಧಿಸಿದರೆ, ವಾದಿಸಿದರೆ, ಇಲ್ಲಿ ಬಸ್ ನಿಲ್ಲಿಸದೇ ನಮ್ಮನ್ನು ಹತ್ತಿಸಿಕೊಳ್ಳದೇ ಕಾಡು ಪಾಲು ಮಾಡಿ, ನಾವೇ ಸಕಾಲಕ್ಕೆ ಬಸ್ ಹತ್ತಿಲ್ಲ ಎಂದು ವರದಿಮಾಡುವ ಸಾಧ್ಯತೆ ಇತ್ತು!

"ಈ ಪ್ರತಿರೋಧ ಶಕ್ತಿಯ ಅಭಾವ ಇಂದು ನಿನ್ನೆಯದಲ್ಲ. ಶತಮಾನಗಟ್ಲೆ ಪರಕೀಯರ ದಾಸ್ಯತ್ವದಲ್ಲಿ ಬೆಳೆದು ಬಂದಿರಲು ಸಾಕು. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಶರ ವಿರುದ್ಧ ನಿಂತಾಗ ಅದು ಅಭಿವೃದ್ಧಿಯಾಗಿರಬೇಕು. ಸತ್ಯಾಗ್ರಹಿಗಳಿಗೆ ಆಶ್ರಯ-ಆಹಾರ ಮಾಹಿತಿ ನೀಡುವದು ದೇಶಾಭಿಮಾನಿಗಳ ಕರ್ತವ್ಯ! ಎಂದು ಪರಿಗಣಿಸಲಾಗುತ್ತಿತ್ತು. ಅಂದು ಮಾಡಿದ ದೇಶ ಸೇವೆಯಂತಹದನ್ನು ಈಗ ಕೈಕೊಂಡರೆ ಅದು ದೇಶದ್ರೋಹವಾಗುತ್ತದೆ! ಎಂಬ ಕಲ್ಪನೆ ನಮ್ಮವರಲ್ಲಿ ಇನ್ನೂ ಮೂಡಿಬರಬೇಕಾಗಿದೆ. ನಾವೆಲ್ಲ ಸರ್ವತಂತ್ರ ಸ್ವತಂತ್ರರಾಗಿ ಅರೆಶತಮಾನ ದಾಟಿದರೂ ನಮ್ಮ ವಿಚಾರಸರಣಿ, ಕಾರ್ಯವಿಧಾನಗಳಲ್ಲಿ ಒಂದಿಷ್ಟೂ-ಬದಲಾವಣೆ ಆಗದಿದ್ದದ್ದು ಶೋಚನೀಯ!" ಕ್ರಿಶ್ ಕಣ್ಣುಮುಚ್ಚಿ ಅಂತರ್‌ಮುಖಿಯಾದರು.

೬. ರಾಣಿಯ ರಾಜ್ಯದಲ್ಲಿ

“ಇದೇನು? ನಾವು ಹೊರಟಿದ್ದ ಬಸ್ ಎಕ್ಸ್‌ಪ್ರೆಸ್ ಗಾಡಿ! ಎಂದಿದ್ದರಲ್ಲವೇ? ಇದು, ಈಗ ತಾನು ಹೊರಟ ಹೆದ್ದಾರಿಯನ್ನು ತೊರೆದು ಯಾವುದೋ ಕಿರಿದಾದ ಓಣಿಯಿಂದ, ಕಚ್ಚಾರಸ್ತೆಯಿಂದ ಹೊರಟಿದೆಯಲ್ಲ?” ಕಿಮ್ ಆತಂಕದಿಂದ ವಿಚಾರಿಸಿದಳು. ‘ಹೈಜಾಕ್’ ಭೀತಿ ಕಾಡಿತ್ತೇನೋ!

“ನೀನು ಕೇಳಿದ ಪ್ರಶ್ನೆ ಸಮಂಜಸವಾಗಿಯೇ ಇದೆ. ಆದರೆ ಕಾನೂನಿನಂತೆ ನಡೆಯುವದು, ನಮ್ಮವರ ಜಾಯಮಾನಕ್ಕೆ ಸಲ್ಲದು! ಯಾವನೋ ರಾಜಕಾರಣಿಯ ಕುಟುಂಬಕ್ಕೆ ಜೋಗ್ ಫಾಲ್ಸ್ ದರ್ಶನ ಮಾಡಿಸಲು, ಹೆದ್ದಾರಿ ಬಿಟ್ಟು ಒಳಗೆ ಬಸ್ ಹೋಗಿರಲಿಲ್ಲವೇ? ಈಗ ಇದು ‘ಗೇರಸಪ್ಪಾ, ಹಳ್ಳಿಯತ್ತ ಹೊರಟಿದೆ. ಹೊನ್ನಾವರ ಸಮೀಪ ಬಂದಿದ್ದರೂ ಸಹ! ಏಕೆ ಗೊತ್ತೆ? ಅಲ್ಲಿಯ ಚಹಾದಂಗಡಿ ಈ ಬಸ್‌ದ ಗಿರಾಕಿಗಳನ್ನು ಒಳದಾರಿಯ ಚಿಕ್ಕ ಅಂಗಡಿಗೆ ತಂದು ಕೊಟ್ಟ ಡ್ರಾಯವರ್ ಕಂಡಕ್ಟರ್‌ಗಳಿಗೆ ಕೃತಜ್ಞತಾಪೂರ್ವಕವಾಗಿ ಬಿಮ್ಮನೆಯ ಉಪಹಾರ ತಿಂಡಿ-ತೀರ್ಥಗಳ ಬಿಟ್ಟಿ ಸರಬರಾಜು ಸಹಜ! ಪ್ರಯಾಣಿಕರು ಪ್ರತಿಭಟಿಸುವ ಬದಲು ಸಕಲ ರೀತಿಯ ಸಹಕಾರ ನೀಡುತ್ತಾರೆ. ಹತ್ತಿರದ ಶರಾವತಿ ದಡಕ್ಕೆ ಧಾವಿಸಿ ಪ್ರಾತರ್ವಿಧಿ, ಮುಖ ಮಾರ್ಜನ ಮುಗಿಸಿ, ಇಲ್ಲಿ ಚಹಾ-ತಿಂಡಿ ಮುಗಿಸಿ ದಿನದ ಚಟುವಟಿಕೆಗಳಿಗೆ ಸಜ್ಜಾಗುತ್ತಾರೆ. ಈ ಪದ್ಧತಿಯನ್ನು ಯಾರಾದರೊಬ್ಬ ಪ್ರಾಯಣಿಕ ಖಂಡಿಸುವ ಸಾಹಸಮಾಡಿದರೆ, ಸಹ ಪ್ರಯಾಣಿಕರೇ ಅಂಥವನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇದೀಗ ನಮ್ಮ ಸಹಕಾರ ಪದ್ಧತಿ!” ಕ್ರಿಶ್ ನುಡಿದರು.

ಅರೆನಿದ್ರೆ, ಅರೆತೂಕಡಿಕೆಯ ನಡುವೆ ತೊನೆದಾಡುತ್ತಿದ್ದ ಜೋ ‘ಗೇರಸೊಪ್ಪೆ’ ಎಂದಾಕ್ಷಣ ಜಿಗಿದೆದ್ದು ಕುಳಿತು, ನಾಲ್ಕೂ ಕಡೆ ಕಣ್ಣು ಹಾಯಿಸಲಾರಂಭಿಸಿದಳು. “ಈ ಹಳ್ಳಿಯ ಪರಿಚಯವಿದೆಯೇ?” ಎಂದು ಕಿಮ್ ಕೇಳಿದಾಗ, “ದೇವರೇ! ಈ ಊರಪರಿಚಯ ಮಾಡಿಕೊಳ್ಳದೇ ಉತ್ತರಕನ್ನಡ ಜಿಲ್ಲೆ ಮತ್ತು ಕರಾವಳಿ ಕರ್ನಾಟಕದ ಇತಿಹಾಸಪೂರ್ಣವಾಗುವುದೇ ಇಲ್ಲ! ಅಂತೆಯೇ ಹಿಂದೊಮ್ಮೆ ಕ್ರಿಶ್‌ರನ್ನು ಎಳೆದುಕೊಂಡೇ ಇಲ್ಲಿಗೆ ಬಂದಿದ್ದೆ. ಆಗ ರಸ್ತೆಗಳು ಇಲ್ಲದ್ದರಿಂದ, ಮೋಟಾರ ಸೌಕರ್ಯವೂ ಇಲ್ಲದ್ದರಿಂದ, ನಾವೆಯಲ್ಲಿ ತೇಲುತ್ತಲೇ ಹೊನ್ನಾವರದಿಂದ ಇಲ್ಲಿಗೆ ಬಂದಿದ್ದೆವು. ನದಿ ದಂಡೆಗುಂಟ ಬಿದ್ದಿದ್ದ ದುಂಡಗಿನ ಬಿಳಿಕಲ್ಲುಗಳನ್ನು

ನೋಡಿ ಅದೆಷ್ಟು ಖುಷಿಪಟ್ಟಿದ್ದೆ. ಚೀಲ ತರಲಿಲ್ಲವೆಂದು ಪರಿತಪಿಸಿ ವ್ಯಾನಿಟಿ ಬ್ಯಾಗ್‌ದಲ್ಲಿ ಸಾಧ್ಯವಿದ್ದಷ್ಟು ತುಂಬಿಕೊಂಡಿದ್ದೆ. ಹಳ್ಳಿಯಲ್ಲಿ ಅಲ್ಲೊಂದು ಕಿರಾಣಿ ಅಂಗಡಿ, ಇಲ್ಲೊಂದು ಚಾದಂಗಡಿ, ಒಂದು ಜಿನಿಸಿ ಅಂಗಡಿ ಬಿಟ್ಟರೆ, ಹೇಳಿಕೊಳ್ಳುವಂತಹದು ಏನೂ ಇರಲಿಲ್ಲ. ಆದರೆ..." ಜೋ, ಕ್ರಿಶ್‌ರಂತೆ ಮಾತು ನಿಲ್ಲಿಸಿ ಅಂತರ್‌ಮುಖಿಯಾದಳು.

"ಹಾಗಾದರೆ ನೀವು ಪಟ್ಟಶ್ರಮ ವ್ಯರ್ಥವಾಯಿತೇ?" ಅತ್ತೆಯ ಮಾತಿಗೆ ಕೊಂಚ ಕಾದು, ಕಿಮ್ ತಾನೇ ಮಾತನಾಡಿದಳು.

"ಸಕಲ ಐತಿಹಾಸಿಕ ಘಟನೆಗಳು ನಡೆದದ್ದು ಇಲ್ಲಿಂದ ಮೂರು ಕಿಲೋಮೀಟರ್ ದೂರದ ನಗರಕೇರಿ ಹಾಗೂ ಅದರಾಚೆ. ಶರಾವತಿ ನದಿಯ ಎಡದಂಡೆಗೆ ಗೇರಸೊಪ್ಪೆಯಿದ್ದರೆ ಬಲದಂಡೆಗೆ 'ನಗರಕೇರಿ' ಅಥವಾ ಪ್ರಾಚೀನ ನಗರಿಯಿತ್ತು. ನಾವಿಬ್ಬರೂ ಅಲ್ಲಿ ಹೊರಡಲು ಸಿದ್ಧರಾದರೆ ಒಂದೇ ದೋಣಿಯಿತ್ತು, ಅದನ್ನು ನಡೆಸುವಾತ ಚೆನ್ನಾಗಿ ಕುಡಿದು ಸುಸ್ತಾಗಿ ಮಲಗಿಬಿಟ್ಟಿದ್ದ. ಪ್ರಯಾಣಿಕರು ಎಷ್ಟೇ 'ಕುಹೋss' ಹಾಕಿದರೂ ಆಚೆ ದಂಡೆಯಿಂದ ನಾವೆ ಮಿಸುಕಾಡಲೇ ಇಲ್ಲ. ಈಚೆಯಿಂದ ಅವರೆಲ್ಲರ ಶಾಪ, ಬೈಗಳ ಸುರಿಮಳೆ ಸಹಿಸಲಾಗದೇ ನಾವಿಕನ ಹೆಂಡತಿ ತಾನೇ ಹುಟ್ಟು ಹಾಕುತ್ತ ಈ ದಡಕ್ಕೆ ಬಂದಳು. ಅವಳಿಗೆ ನದಿಯ ಆಳದ, ಸುಳಿಯ ಸ್ಥಾನದ ಸರಿಯಾದ ಅರಿವು ಇರಲಿಲ್ಲ. ಮಧ್ಯ ನದಿಯಲ್ಲಿ ತೀರ ಸುಳಿಯ ಸಮೀಪ ದೋಣಿಯನ್ನು ತಂದು ಬಿಡಬೇಕೇ? ಅಂಥ ಸಂದರ್ಭದಲ್ಲಿ ಅದು ಹಿಡಿತ ತಪ್ಪಿ, ಚಕ್ರಾಕಾರವಾಗಿ ಸುತ್ತುತ್ತ ಜಲ ಸಮಾಧಿಯಾಗುವದು ತೀರ ಸಾಮಾನ್ಯ. ತಲ್ಲಣಗೊಂಡ ಪ್ರಯಾಣಿಕರೆಲ್ಲ ಕಿರುಚಿಕೊಂಡರು. ತಂತಮ್ಮ ಕುಲದೇವರನ್ನು ಕೂಗಿ ಕರೆಯಲಾರಂಭಿಸಿದರು. ಈಜು ಬರುತ್ತಿದ್ದ ನಾನು ಸುಳಿಯಲ್ಲಿ ಏನು ಮಾಡುವದು ಸಾಧ್ಯವಿತ್ತು? ಕ್ರಿಶ್‌ರಿಗಾಗಿ ಆತಂಕಗೊಂಡರೆ, ಅವರೋ ಏನೂ ಧ್ವನಿಯೆತ್ತದೇ, ಪ್ರತಿಕ್ರಿಯಿಸದೇ ಎರಡೂ ಕೈಗಳಲ್ಲಿ ದೋಣಿಯ ಅಂಚನ್ನು ಭದ್ರವಾಗಿ ಹಿಡಿದು ಸ್ಥಿತಪ್ರಜ್ಞರಾಗಿ ಕುಳಿತೇ ಬಿಟ್ಟಿದ್ದರು..."

"ನೀವಿಬ್ಬರೂ ಬದುಕಿ ಉಳಿದದ್ದು ನಮ್ಮ ಪೂರ್ವಜನ್ಮದ ಪುಣ್ಯ!" ಕಿಮ್ ನೆಮ್ಮದಿಯ ಉಸಿರುಬಿಟ್ಟಳು.

"ನಗರಕೇರಿಯನ್ನು ಅಂತೂ ತಲುಪಿದ್ದಾಯ್ತು. ಜನ ಸಂಚಾರ ತೀರ ಕಡಿಮೆಯಾದ್ದರಿಂದ ಇಲ್ಲಿ ಬೀಡು ಬಿಟ್ಟ ಅಸಂಖ್ಯಾತ ಜಿಗಣೆಗಳು ಮಾನವರಕ್ತಕ್ಕಾಗಿ ಹಪಹಪಿಸುತ್ತ ಇರುತ್ತವೆ. ಯಾವ ಆಕ್ರಮಣ ಮಾಡದೇ ಸದ್ದಿಲ್ಲದೇ, ಸಂದೇಹ ಕೂಡ ಬಾರದಂತೆ ಮಾನವ ದೇಹಕ್ಕೆ ಅಂಟಿಕೊಂಡು ರಕ್ತಹೀರಲಾರಂಭಿಸುವವು. ಅವುಗಳ ಡೊಳ್ಳುಹೊಟ್ಟೆ ರಕ್ತದಿಂದ ತುಂಬಿದಾಗಲೇ ನೆಲಕ್ಕೆ ಉರುಳುವವು. ಅವು ಮಾಡಿದ ಗಾಯದಿಂದ ರಕ್ತಬಸಿಯುವದು ಮುಂದರಿದಾಗಲೇ ರಕ್ತ ದರೋಡೆಯ ಅರಿವು ಆಗುವದು! ಹಳ್ಳಿಗರು ಸುಣ್ಣ, ತಂಬಾಕು, ನಾಸೀಪುಡಿಗಳನ್ನು ಸವರಿಕೊಂಡು ಅವನ್ನು ದೂರ ಇಡುವರು. ಪುಣ್ಯಕ್ಕೆ, ನಾವು ಅವುಗಳ ಆಕ್ರಮಣ ತಪ್ಪಿಸಿಕೊಂಡು ಮುಂದೆ ಸಾಗಿದೆವು. ಸಾಳ್ವರ ರಾಜನಗರಿಗೆ."

"ಸಾಳುವ? ಹೊಯ್‌ಸಾಳುವ? ಹೊಯ್ಸಳರು ಇಲ್ಲಿ ಆಳಿದರೇ?" ಕಿಮ್ ಕೇಳಿದಳು.

"ಅಲ್ಲ! ಇಲ್ಲಿಯ ಸಾಳ್ವರದು ಬೇರೆ ಮನೆತನ. ನಂತರದ ಶತಮಾನಗಳಲ್ಲಿಯದು... ಹಿಂದೊಮ್ಮೆ ರಾಜಧಾನಿಯಾಗಿದ್ದ ಸ್ಥಾನದಲ್ಲಿ ಈಗ ಎಲ್ಲೆಲ್ಲೂ ಕಾಡು ತಾಂಡವವಾಡುತ್ತಿತ್ತು. ಸರಿಯಾದ ಕಾಲುದಾರಿ ಕೂಡ ಇರಲಿಲ್ಲ. ಮೈಲಿಗೊಂದು ಹಳ್ಳ ಬರುತ್ತದೆ. ನೀರಿನ ಆಳ ಹೆಚ್ಚಿಲ್ಲವಾದರೂ ಬೆಣಚುಗಲ್ಲುಗಳೆಲ್ಲ ಹಾವಸೆ ಹೊತ್ತು ನಿಂತಿದ್ದರಿಂದ ಕಾಲಿಟ್ಟ ಕಡೆ ಜಾರುವದು ಸ್ವಾಭಾವಿಕ. ಇವನ್ನೆಲ್ಲ ಜಾಗ್ರತೆಯಿಂದ ಎದುರಿಸಿ, ಕೊನೆಗೊಮ್ಮೆ ಜೈನ ಬಸದಿಗಳ ಸಮೂಹಕ್ಕೆ ತಲುಪಿದಾಗ ಆಗುವ ಹಿಗ್ಗು ಸಂತೋಷಗಳಿಗೆ ಎಣೆ ಇರಲಿಲ್ಲ!" ತಮ್ಮ ಅನುಭವಗಳನ್ನು ಸಂಕ್ಷಿಪ್ತವಾಗಿ ಜೋ ವಿವರಿಸಿದಳು.

"ನಾನು ಜಿಗಣೆಗಳಿಗೆ ತುಂಬ ಅಳುಕುತ್ತೇನೆ! ನಾವಿಬ್ಬರೂ ಈ "ಲೀಚ್" ಇದ್ದಲ್ಲಿ ಹೋಗಬಾರದು! ಎಂದೇ ನಿರ್ಧರಿಸಿದ್ದೇವೆ..... ನಿಮ್ಮ ಅನುಭವಗಳನ್ನು ಲಕ್ಷ್ಯವಿಟ್ಟು ಕೇಳಿದರೂ ಎಷ್ಟೋ ವಿಚಾರಗಳನ್ನು ತಿಳಿದುಕೊಳ್ಳಬಹುದು. ದಯವಿಟ್ಟು ಮುಂದುವರಿಸಿ!" ಕಿಮ್ ವಿನಂತಿಸಿದಳು.

"ನಾಲ್ಕು ಶತಮಾನದಷ್ಟು ಹಿಂದೇ ಈ ಊರು, ಹೆಸರಾಂತ ರಾಜಧಾನಿಯಾಗಿ ಮೆರೆಯುತ್ತಿತ್ತು. ಅದನ್ನು 'ನಗಿರೆ', 'ಭಲ್ಲಾತಕೀ ಪುರ', 'ಕ್ಷೇಮಪುರ' ಎಂದು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತಿತ್ತು. ಸಾಳ್ವ ವಂಶಜರು ಗೇರಸೊಪ್ಪೆ ಮತ್ತು ನೆರೆಯ ಹಾಡುವಳ್ಳಿ ಅಥವಾ ಸಂಗೀತ ಪುರಗಳಲ್ಲಿ ರಾಜ್ಯವಾಳುತ್ತಿದ್ದರು. ಅವರು ಪ್ರಬಲ ಹಾಗೂ ಬಲಿಷ್ಟ ಸಾಮ್ರಾಜ್ಯವಾದ ವಿಜಯನಗರದ ಮಾಂಡಲಿಕರಾಗಿದ್ದರು. ಹಯಿವರಸನೆಂಬಾತ ೧೩೯೮ರಲ್ಲಿ ಗೇರುಸೊಪ್ಪೆಯಲ್ಲಿ ರಾಜ್ಯವಾಳುತ್ತಿದ್ದನೆಂದು ದಾಖಲೆಗಳು ಸಿಗುತ್ತವೆ. ಈ ವಂಶದ ಭೈರವದೇವನೆಂಬಾತ (೧೪೩೮-೬೨) ಗೇರಸೊಪ್ಪ, ಹೊನ್ನಾವರ, ಚಂದ್ರಗುತ್ತಿಯ ಬಸದಿಗಳಿಗೆ ಅಪಾರ ದಾನ ದತ್ತಿಗಳನ್ನು ನೀಡಿದನೆಂದು ಶಾಸನಗಳು ಸಾರುತ್ತವೆ. 'ಭೈರಾದೇವಿ ಮಂಟಪ'ದ ರಚನೆಯು, ಮೂಡಬಿದರೆಯ ಸಾವಿರ ಕಂಬಗಳ ಬಸದಿಯಲ್ಲಿ ಆದದ್ದು ಇವನ ಅಳುವಿಕೆಯ ಕಾಲದಲ್ಲಿಯೇ! ಎಂದು ಹೇಳಲಾಗುತ್ತದೆ. ಈತನ ರಾಣಿ ನಾಗಲಾದೇವಿ ಆ ಬಸದಿಯ ಮಾನಸ್ತಂಭ ನಿಲ್ಲಿಸಿದಳು. ಆ ನಂತರ ಪಟ್ಟವೇರಿದ ವಿಜಯನಗರದ ದೇವರಾಯನು ೧೪೭೧ರಲ್ಲಿ ಗೋವೆಯ ಆದಿಲ್‌ಶಹನನ್ನು ಸೋಲಿಸಿ, ಕರಾವಳಿಯನ್ನು ಮುಸಲ್ಮಾನ ಹಡುಗುಗಳ್ಳರ ಉಪಟಳಗಳಿಂದ ಪಾರು ಮಾಡಿದ. ಆದರೆ ೧೪೯೨ರಲ್ಲಿ ವಿಜಯನಗರದ ವಿರೂಪಾಕ್ಷ ರಾಯನಿಂದ ಸೋಲಿಸಲ್ಪಟ್ಟ, ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ (೧೫೫೦...೧೬೦೬) 'ಕಾಳು ಮೆಣಸಿ'ನ ರಾಣಿ, ಕೆಚ್ಚೆದೆಯ ರಾಣಿ ಎಂದೇ ಇತಿಹಾಸದ ಪುಟಗಳಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾಳೆ. ತನ್ನ ರಾಜ್ಯದ ಉತ್ತರಕ್ಕಿರುವ ಪೋರ್ಚುಗೀಸರು ಮತ್ತು ದಕ್ಷಿಣಕ್ಕಿರುವ ಕೆಳದಿ ಅರಸರನ್ನು ದಿಟ್ಟತನದಿಂದ ಎದುರಿಸಿದ ಶ್ರೇಯಸ್ಸು ಇವಳದು. ಇವಳ ರಾಜ್ಯದಲ್ಲಿ ಹೇರಳವಾಗಿದ್ದ ಕರಿಮೆಣಸಿನಕಾಳಿಗೆ ಯುರೋಪಖಂಡದಲ್ಲಿ ವಿಪರೀತ ಬೇಡಿಕೆ ಇತ್ತು. ಹೀಗಾಗಿ ಮೂಲತಃ ವ್ಯಾಪಾರಿಗಳಾಗಿದ್ದ ಪೋರ್ಚುಗೀಸರು ಅವಳೊಂದಿಗೆ ಒಪ್ಪಂದವಷ್ಟೇ ಅಲ್ಲ, ಅವಳನ್ನು

'ಖುಷಾಮತಿ' ಮಾಡಲು ಹೆಣಗಬೇಕಾಯಿತು. ಆದರೆ ನಮ್ಮವರೇ ನಮಗೆ ಶತ್ರುಗಳಲ್ಲವೇ? ಇಕ್ಕೇರಿಯ ಹಿರಿಯ ವೆಂಕಟಪ್ಪ ನಾಯಕನು, ಅವಳನ್ನು ಯುದ್ಧದಲ್ಲಿ ಸೋಲಿಸಿ, ಗೇರುಸೊಪ್ಪೆಯನ್ನು ಸಂಪೂರ್ಣವಾಗಿ ನಾಶ ಮಾಡಿದ. ರಾಣಿಯ ರಾಜ್ಯದ ಭಾಗಗಳಾಗಿದ್ದ ಬಾರ್ಕೂರು, ಭಟಕಳ, ಹೊನ್ನಾವರ ಬಂದರಗಳೆಲ್ಲ ಅವನ ರಾಜ್ಯದಲ್ಲಿ ಲೀನವಾಗಿ ಹೋದವು...!" ಜೋ, ತನ್ನ ಇತಿಹಾಸದ ಓದಿನ ನೆನಪುಗಳನ್ನೆಲ್ಲ ಸೂರೆ ಮಾಡಲಾರಂಭಿಸಿದಳು.

"ಓsss! ಒಂದು ನಿಮಿಷ ತಾಳಿ ಅತ್ತೆಮ್ಮಾ, ನೀವು ವೃಥಾ ಕಂಠಶೋಷ ಮಾಡಿಕೊಂಡು ದಣಿಯುತ್ತಾ ಇದ್ದೀರಿ! ನನಗೆ ಭಾರತದ ಇತಿಹಾಸದ ಹಿನ್ನೆಲೆಯಿಲ್ಲದ್ದರಿಂದ ಇವಾವ ವಿವರಗಳೂ ಅರ್ಥವಾಗುವಂಥವಲ್ಲ! ಆದರೆ ಪ್ರಸಿದ್ಧ 'ಕರಿಮೆಣಸಿನ ರಾಣಿ' ನಮ್ಮ ಊರಿನವಳೇ! ಎಂದು ತುಂಬ ಸಂತೋಷವಾಗಿದೆ! ಆ ಅಪೂರ್ವ ರಾಣಿ ಆಳಿದ ರಾಜ್ಯದಲ್ಲಿ ಯಾವ ಯಾವ ಕುರುಹುಗಳು-ನಾವು ನೋಡುವಂಥವು-ಉಳಿದಿವೆ? ಎಂದು ಹೇಳಿದರೆ ಸಾಕು!" ಕಿಮ್ ವಿನಂತಿಸಿಕೊಂಡಳು.

ಆದರೂ ಕಣ್ಮುಚ್ಚಿಕೊಂಡು ಜೋ, ಇತಿಹಾಸವನ್ನು ನೆನಪಿಸಿಕೊಳ್ಳುತ್ತಲೇ ಇದ್ದಳು. "ರಾಜ್ಯದ ವೈಭವದ ದಿನಗಳಲ್ಲಿ ಇಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿನ ಮನೆಗಳೂ, ಎಂಬತ್ತು ನಾಲ್ಕು ದೇವಸ್ಥಾನಗಳೂ ಇದ್ದವೆಂದು ಸ್ಥಳೀಯ ಐತಿಹ್ಯವಿದೆ. ಆದರೆ ಇಂದು ಎಲ್ಲೆಲ್ಲೂ ಹಾಳು ಸುರಿಯುತ್ತಿದೆ. ನೆಲಸಮವಾದ ಸೌಧಗಳು, ಹಾಳುಬಿದ್ದ ಬಾವಿಗಳು, ಹಂಚಿನ ಚೂರುಗಳು, ಕಟ್ಟಡಗಳ ನೆಲೆಗಟ್ಟುಗಳನ್ನು ಆವರಿಸಿರಬಹುದಾದ ದಿನ್ನೆಗಳು, ಇವೆಲ್ಲವನ್ನು ಧಿಕ್ಕರಿಸಿ ಸೊಕ್ಕಿನಿಂದ ಆಕ್ರಮಣ ಮಾಡಿದ ಘೋರ ಅರಣ್ಯ! ಪಾಶ್ಚಾತ್ಯ ದೇಶಗಳಲ್ಲಾಗಿದ್ದರೆ, ವೈಜ್ಞಾನಿಕವಾಗಿ ಉತ್ಖನನವನ್ನು ಕೈಗೊಂಡು ಅವಶೇಷಗಳನ್ನೆಲ್ಲ ಜಾಗ್ರತೆಯಾಗಿ ಮೇಲೆತ್ತಿ ಕಾದಿರಿಸಿ, ನಮ್ಮ ಗತ ವೈಭವವನ್ನು ಜಗತ್ತಿಗೇ ಸಾರುವ ವ್ಯವಸ್ಥೆ ಮಾಡುತ್ತಿದ್ದರು. ನಮಗೋ, ಯಾವುದರಲ್ಲೂ ಆಸಕ್ತಿ ಇಲ್ಲ! ಇಂದು ಉಳಿದ ಆ ಯುಗದ ಮುಖ್ಯ ಅವಶೇಷಗಳೆಂದರೆ ನಾಲ್ಕು ಜೈನ ಬಸದಿಗಳು ಮಾತ್ರ. ಮೊಟ್ಟ ಮೊದಲು ಸಿಗುವದು ಪಾರ್ಶ್ವನಾಥೇಶ್ವರ ಬಸದಿಯು. ಕಟ್ಟಡ ಹಾಳುಬಿದ್ದರೂ ತೀರ್ಥಂಕರರ ಭವ್ಯಮೂರ್ತಿ, ಬಹಳ ಆಕರ್ಷಕವಾಗಿದೆ. ಕರೇ ಶಿಲೆಯಲ್ಲಿ ಕಟೆದ ವಿಗ್ರಹಕ್ಕೆ ನಯವಾದ ಹೊಳೆ ಹೊಳೆವ ಮಿರುಗು ಕೊಟ್ಟಿದ್ದಾರೆ. ಎರಡನೆಯ ಬಸದಿಯಲ್ಲಿ ಧ್ಯಾನಸ್ಥ ವರ್ಧಮಾನ ಸ್ವಾಮಿಯ ವಿಗ್ರಹ ಸುಂದರವಾಗಿದ್ದರೂ ಮೂಗಿನ ತುದಿಯೇ ಹೋಗಿದೆ. ಇಲ್ಲಿ ಮೂರು ಶಿಲಾಶಾಸನಗಳಿವೆ. ಒಂದು ದಾನದ ಉಲ್ಲೇಖವನ್ನು ನೀಡಿದರೆ, ಇನ್ನೆರಡು ನಿಷಿದಿಗಲ್ಲುಗಳು. ನೇಮಿನಾಥೇಶ್ವರ ಬಸದಿಯಲ್ಲಿ ತೀರ್ಥಂಕರ ಮುಖದಲ್ಲಿ ತ್ಯಾಗ, ತೃಪ್ತಿ ವೈರಾಗ್ಯದ ಮೃದು ಲಾಸ್ಯಗಳನ್ನು ಮೂಡಿಸಿ ಶಿಲ್ಪಿಯು ತನ್ನ ಶಿಲ್ಪಕಲಾ ಪ್ರೌಢಿಮೆಯನ್ನು ಮೆರೆದಿದ್ದಾನೆ. ಕೊನೆಯದಾದ ಚತುರ್ಮುಖ ಬಸದಿಯು ಇವೆಲ್ಲವುಗಳಿಗಿಂತ ದೊಡ್ಡದು. ಹೆಸರೇ ಸೂಚಿಸುವಂತೆ ನಾಲ್ಕು ದಿಕ್ಕುಗಳಿಂದಲೂ ಒಂದೇ ಬಗೆಯಾಗಿ ಕಾಣುವಂತೆ ತೀರ್ಥಂಕರನ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ಕಟ್ಟಡಕ್ಕೆ ನಾಲ್ಕು ದ್ವಾರಗಳು. ಅವುಗಳಲ್ಲೂ ಏಕರೂಪತೆ ತರಲಾಗಿದೆ. ಬಸದಿಯ ಹೊರ ಪೌಳಿಯಲ್ಲಿ ಹೂ-ಬಳ್ಳಿ, ಪಶು-ಪಕ್ಷಿಗಳ ಉಬ್ಬುಚಿತ್ರಗಳನ್ನು

ಕೊರೆಯಲಾಗಿದೆ" ಸ್ಮಾರಕಗಳ ಅಲ್ಪ ಮಾಹಿತಿಯನ್ನು ಜೋ ನೀಡಿದಳು.

"ಅಪರೂಪದ ರಾಣಿಯೋರ್ವಳು ಆಳಿದ ಊರಿನ ಕುರುಹುಗಳನ್ನು ನೋಡಲು ಆಸೆಯಾಗುತ್ತಿದೆ. ಹೊನ್ನಾವರದಿಂದ ದೋಣಿಯಲ್ಲೇ ಅಲ್ಲಿಗೆ ಹೋಗಿ ಬರೋಣವೇ?" ಕಿಮ್‌ಳ ಹೆಣ್ಣುಹೃದಯ ಹಾತೊರೆಯಿತು.

"ಊಹೂಂ! ನನಗೆ ದುಃಸ್ವಪ್ನ ಪ್ರಾಯವಾದ ಆ ನೋಟವನ್ನು ಪುನಃ ಎದುರಿಸುವ ಮನಸ್ಸು ಎಳ್ಳಷ್ಟೂ ಇಲ್ಲ! ಏಕೆ ಗೊತ್ತೆ? ಕ್ರಿಶ್, ಮೊಟ್ಟ ಮೊದಲ ಬಾರಿ ಅಲ್ಲಿ ಹೋದದ್ದು ೧೯೫೩ರಲ್ಲಿ. ಆಗ ಆ ಊರಿನಲ್ಲಿ ದೇವದೇವತೆಯರ ಮೂರ್ತಿಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಿಷದಿ ಕಲ್ಲುಗಳು, ಪೂಜಾ ಸಾಮಗ್ರಿಗಳು ಊರಲ್ಲೆಲ್ಲ ಹರಡಿಕೊಂಡಿದ್ದವಂತೆ. ನಾವಿಬ್ಬರೂ ಅಲ್ಲಿ ಹೋದದ್ದು ಎರಡು ದಶಕಗಳ ನಂತರ, ೧೯೭೩ರಲ್ಲಿ. ಅದಾಗಲೇ ಕಟ್ಟಡಗಳು ಇನ್ನಷ್ಟು ಬೀಳಲಾಗಿದ್ದವು. ಬಿಡಿಯಾಗಿದ್ದ ಕಲಾವಸ್ತುಗಳೆಲ್ಲ ಹೇಳಹೆಸರಿಲ್ಲದೇ ಮಾಯವಾಗಿದ್ದವು. ಬಳಿಕ ನಮ್ಮ ಇತಿಹಾಸ ಪರಂಪರೆಯ ವಸ್ತುಗಳನ್ನು ಕದ್ದೊಯ್ದು ಪಾಶ್ಚಾತ್ಯರಿಗೆ ಮಾರಾಟ ಮಾಡುವ, ಅದರಿಂದಾಗಿ ಆಧುನಿಕರಾಗುವ ಪರಂಪರೆ ಬೆಳೆಯಿತು! ಆಡು ಗಿಡಗಂಟಿಗಳನ್ನು ಬೋಳಿಸಿದಂತೆ ಕದೀಮ ಕಳ್ಳರು ಒಯ್ಯಲು ಸಾಧ್ಯವಿದ್ದ ಪ್ರತಿಮೆ-ವಿಗ್ರಹಗಳನ್ನೆಲ್ಲ ಒಯ್ಯಲಾರಂಭಿಸಿದರು. ಕ್ರಿಶ್ ನೋಡಿದ ಬಸದಿಯ ಭವ್ಯ ಗಂಟೆ ಒಂದು ದಿನ ನಾಪತ್ತೆ ಆಯಿತಂತೆ! ಪೂರ್ವಜರು ಪೂಜಾಸ್ಥಳ ಆಯ್ಕೆ ಮಾಡುವಾಗ ಅದರಡಿ ಬೆಳ್ಳಿ-ಬಂಗಾರ ಹುದುಗಿಸಿಡುತ್ತಿದ್ದರು, ಎಂಬ ದಟ್ಟವಾದ ವದಂತಿ ಹರಡಿತು. ದೇವಾಲಯ-ಬಸದಿಗಳ ಅಸ್ತಿತ್ವಕ್ಕೇ ಸಂಚಕಾರ ಬಂದಿತು. ಚತುರ್ಮುಖ ಬಸದಿಯೂ ಈ ಆಕ್ರಮಣದಿಂದ ಮುಕ್ತವಾಗಲಿಲ್ಲ. ಒಂದು ತೀರ್ಥಂಕರ ಪ್ರತಿಮೆಯನ್ನು ಒಡೆದು ನೆಲಕ್ಕುರುಳಿಸಿಬಿಟ್ಟಿದ್ದಾರೆ! ಅದರ ಅಡಿಯಲ್ಲಿ ಯಾವ ಬೆಲೆ ಬಾಳುವ ಸಾಮಗ್ರಿಯೂ ಸಿಗದಂತೆ ಆದದ್ದಕ್ಕೋ ಏನೋ, ಇನ್ನುಳಿದ ಮೂರು ಮೂರ್ತಿಗಳು ಉಳಿದುಕೊಂಡಿವೆ. ಆ ಭಾರಿ ಮೂರ್ತಿಗಳನ್ನು ಸುಲಭವಾಗಿ ಸಾಗಿಸಲು ಸಾಧ್ಯವಿದ್ದರೆ, ಅವೂ ಸ್ವಸ್ಥಾನದಲ್ಲಿ ಇರುತ್ತಿರಲಿಲ್ಲ! ಪೂರಾ ಅಳಿದ ಗೇರಸೊಪ್ಪೆಯ ನೆನಪಾದರೆ ಸಂಕಟವಾಗುತ್ತದೆ!" ಜೋ ಮಾತು ಮುಗಿಸಿದಳು.

೭. ಬೆಕ್ಕಿನ ಬೇರೆ ಬಿಡಾರ!

ಕುಂದೇಶ್ವರದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಬಸ್ಸು ನಿಂತಿತು. ಝಗಝಗಿಸುವ ವಿದ್ಯುತ್ ದೀಪಗಳು ಸಿಮೆಂಟಿನ ಅತ್ಯಾಧುನಿಕ ಕಟ್ಟಡಗಳ ಸಾಲು ಸಾಲುಗಳನ್ನು ಕಂಡ ಕಿಮ್, 'ಈ ಕಾಡಿನ ನಡುವೆ ಅಂದದ ಈ ಮಾಯಾ ಬಝಾರ್! ಎಲ್ಲಿಂದ ಬಂದಿತು?' ಎಂದು ವಿಸ್ಮಯ ಪಟ್ಟಳು.

"ಈ ಟೇಲ್‌ರೇಸ್ ಯೋಜನೆಯಿಂದಾಗಿ, ಶರಾವತಿಯ ಕೊಳ್ಳದ ಈ ಭಾಗದ ಜನ ಜೀವನದಲ್ಲಿ ಅಲ್ಲೋಲ ಕಲ್ಲೋಲವೆದ್ದಿದೆ! ಈ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲೇ ಇಲ್ಲ! ಜಿಲ್ಲೆಯ ಇನ್ನಿತರ ಕಡೆಯಂತೆ ಈ ಜನರೂ ಶಾಂತಿಪ್ರಿಯರು, ಆರಾಮಶೂರರು. ಅಂತೆಯೇ ತಮ್ಮ ನಿತ್ಯಜೀವನದ ಹತ್ತಾರು ಕೊರತೆಗಳ ಕುರಿತು ಕೊರಗದೇ ಇದ್ದುದರಲ್ಲಿಯೇ ನೆಮ್ಮದಿಯಿಂದ ಶತಮಾನಗಳಿಂದ ಏಕ ಪ್ರಕಾರವಾಗಿ ಬದುಕಿದವರು. ಆದರೆ ಶರಾವತಿ ಟೇಲ್‌ರೇಸ್ ಯೋಜನೆಗಾಗಿಯೇ ಐದು ಸಹಸ್ರ ಜನ ಕಾರ್ಮಿಕರು, ಆಗ ಬಂದು ಇಳಿದಾಗ, ಅತೃಪ್ತಿ-ಅಸಮಾಧಾನಗಳ ತೆರೆಗಳು ಏಳದೇ ಇರಬಹುದೇ? ನಮ್ಮ ವಿಜಾಪುರ, ಗುಲಬರ್ಗಾಗಳಿಂದ ಅಷ್ಟೇ ಅಲ್ಲದೇ ಹೊರ ರಾಜ್ಯಗಳಿಂದಲೂ ಶ್ರಮಿಕರು ತಂಡ ತಂಡವಾಗಿ ಬಂದಿಳಿಯಲಾರಂಭಿಸಿದರು. ಸ್ಥಾನೀಯರ ಮತ್ತು ಆಗಂತುಕರ ಸಂಸ್ಕೃತಿ, ರೀತಿ, ರಿವಾಜುಗಳಲ್ಲಿ ಆಕಾಶ-ಪಾತಾಳಗಳಷ್ಟು ಅಂತರವಿತ್ತು. ಅಂತೆಯೇ ಅವರಲ್ಲಿ ಹೊಂದಾಣಿಕೆಯಾಗಲೇ ಇಲ್ಲ. ನದಿ, ಝರಿ ಪ್ರದೇಶದ ಜನ ಸ್ನಾನ-ಸ್ವಚ್ಛತೆಗಳತ್ತ ವಿಶೇಷ ಲಕ್ಷ್ಯ ನೀಡುವವರಾದರೆ ನೀರಕೊರತೆಯ ಬಯಲು ಸೀಮೆಯವರಿಗೆ ಅವುಗಳತ್ತ ಗಮನವಿಲ್ಲ. ಕಂಡಲ್ಲಿ ಪ್ರಾತರ್ವಿಧಿ, ಸ್ನಾನ, ಅಡಿಗೆ ಮಾಡಿ ಪರಿಸರವನ್ನೆಲ್ಲ ಹಾಳುಗೆಡವಿದ್ದಾರೆ! ಎಂದು ಸ್ಥಳೀಯರು ದೂರಿಕೊಂಡರೆ, 'ಊರ ಜನ ಅತ್ಯಂತ ಸ್ವಾರ್ಥಿಗಳು! ಎಳ್ಳಷ್ಟೂ ಸಹಕಾರ ನೀಡುವದಿಲ್ಲ. ನಾಯಿಗಿಂತ ಕಡೆಯಾಗಿ ನಮ್ಮನ್ನು ಕಾಣುತ್ತಾರೆ' ಎಂದು ಹೊರಗಿನಿಂದ ಬಂದ ಜನ ದೃಢವಾಗಿ ನಂಬಿದರು. ಅಪನಂಬಿಕೆ, ಅಸಹಕಾರ, ಅಸಂತೋಷಗಳು ಸ್ಥಾಯಿಯಾಗಿ ಮುಂದರಿದು ಬಂದವು". ಕಾಡ ನಡುವಿನ 'ಸುಧಾರಿತ ನಗರಿ'ಯ ಹಿನ್ನೆಲೆಯನ್ನು ಕ್ರಿಶ್ ಕೊಡಮಾಡಿದರು.

"ಇಲ್ಲಿಯವರನ್ನೆ ಯೋಜನೆಯ ಕೆಲಸಕ್ಕೆ ನೇಮಿಸಬಹುದಾಗಿತ್ತಲ್ಲ?" ಒಂದೇ ಬಾರಿಗೆ ವಿಕ್-ಕಿಮ್‌ರು ಉದ್ಗರಿಸಿದರು.

"ನಮ್ಮವರಲ್ಲಿ ಹೆಚ್ಚಿನವರು ಕೈಮಣ್ಣಾಗುವ ಕೂಲಿ ಕೆಲಸಕ್ಕೆ ಹೋಗುವವರಲ್ಲ! ಅವರಿಗೆ

ಹೆಚ್ಚು ದಣಿವಾಗದೇ ಕೈತುಂಬ ಸಂಬಳ ತರುವ ನೌಕರಿಗಳಲ್ಲಿ ಹೆಚ್ಚು ಒಲವು. ವಿಜಾಪುರದ ಶ್ರಮಿಕರಾದರೋ ಎಂಥ ಕಠಿಣ ಕೆಲಸಗಳಿಗೂ ಸಿದ್ಧರು. ಸ್ತ್ರೀಯರೂ ಪುರುಷರಿಗೆ ಹೆಗಲುಕೊಟ್ಟು ದುಡಿಯುತ್ತಾರೆ. ಊಟಕ್ಕೆ ಜೋಳದ ಭಕ್ರಿ, ಈರುಳ್ಳಿ, ಕುಡಿಯಲು ನೀರು ಸಿಕ್ಕರೆ, ಇನ್ನೇನೂ ಇಲ್ಲದಿದ್ದರೂ ನಡೆದೀತು! ಎನ್ನುವ ಮಾತಿನಲ್ಲಿ ವಿಶ್ವಾಸವಿಟ್ಟವರು. ಗಂಡಾಳಿಗೆ ದಿನಕ್ಕೆ ಅರವತ್ತು ಹೆಣ್ಣಾಳಿಗೆ ನಾಲವತ್ತು ರೂಪಾಯಿ ಕೂಲಿ ನಿಗದಿಯಾಗಿದ್ದರೆ, ಅದರಲ್ಲಿ ಸಿಂಹಪಾಲನ್ನು ತಮ್ಮೂರಿಗೆ ಕಳಿಸುತ್ತಾರೆ. ಉಳಿದದ್ದು ತಮ್ಮ ದಿನ ನಿತ್ಯದ ಖರ್ಚಿಗೆ ಸಾಕಷ್ಟು ಆಗುತ್ತದೆ ಎಂಬ ಅಲ್ಪತೃಪ್ತರು. ಇವರಿಗಾಗಿ ಊರವರು ಗೂಡಂಗಡಿಗಳನ್ನು ತೆಗೆದು ಚಹಾ-ತಿಂಡಿ, ಬೀಡಿ-ಸಿಗರೇಟು, ಕಿರಾಣಿ ಸಾಮಾನು ಪೂರೈಸಲಾರಂಭಿಸಿದರು. ಕ್ರಮೇಣ ಸರಾಯಿಯೂ ಸಿಗುವ ವ್ಯವಸ್ಥೆ ಮಾಡಿದರು. ಹೆಂಗಳೆಯರಿಗೆ ಸೀರೆ, ರವಕೆ ಬಳೆ-ಕುಂಕುಮಗಳ ಅಂಗಡಿಗಳು ಬಂದವು. ಬಟ್ಟೆ ಹೊಲಿಯುವವರು, ಚಪ್ಪಲಿ ಅಂಗಡಿಯವರು, ಇತರ ದೈನಂದಿನ ಕಾಮಗಾರಿಗಳನ್ನು ಪೂರೈಸುವವರು ಹಿಂಬಾಲಿಸಿದರು. ಇಲ್ಲಿ ಹೊಸ ಸಮ್ಮಿಶ್ರ ಜನಾಂಗದ ಸಂಸ್ಕೃತಿ ರೂಪುಗೊಂಡಿದೆ. ಅನೇಕಾನೇಕ ಕೆಲಸಗಳಿಗೆ ಹತ್ತಿರದ ಹೊನ್ನಾವರವೇ ದೊಡ್ಡ ಊರು. ಆದ್ದರಿಂದ ಅಲ್ಲಿ ಹೋಗಿ ಬರಲು, ಟೆಂಪೊ, ವ್ಯಾನುಗಳು ಕಾಣಿಸಿಕೊಂಡಿವೆ. ಅನೇಕಾನೇಕರು ಇಂಥ ಸೌಕರ್ಯಗಳನ್ನು ಒಟ್ಟಿಗೇ ಕೊಟ್ಟು ಹಣ ಪಡೆಯಲು ಆತುರರಾಗಿರುವದರಿಂದ ಅವರಲ್ಲಿ ತುರುಸಿನ ಸ್ಪರ್ಧೆ ಸ್ವಾಭಾವಿಕ. ವಾಹನಗಳನ್ನು ಇಕ್ಕಟ್ಟಾದ ಮಾರ್ಗಗಳಲ್ಲಿ ಏಕಕಾಲಕ್ಕೆ ಓಡಿಸಿ ಅನೇಕ ಅಪಘಾತಗಳಿಗೆ ಕಾರಣವಾಯಿತು. ಊರಲ್ಲಿ ಕಳವು, ಹೊಡೆದಾಟ, ಕೊಲೆಗಳಲ್ಲಿ ಹೆಚ್ಚಳ ಕಂಡು ಬಂದಿತು. ಇದಕ್ಕೆಲ್ಲ ಸರಕಾರವನ್ನು ಮನಸ್ವೀ ಬೈಯುವವರಲ್ಲಿ ಕೂಡ, ವೈಯಕ್ತಿಕ ಲಾಭ ಮಾಡಿಕೊಳ್ಳುವದರಲ್ಲಿ ಒಂದಿಷ್ಟೂ ಕೊರತೆಯುಂಟಾಗಲಿಲ್ಲ!" ಕ್ರಿಶ್ ವಿವರಿಸಿದಾಗ ಇಬ್ಬರೂ ಯುವ ಜನಾಂಗದವರು ವಿಸ್ಮಯ ಪಟ್ಟರು.

"ಹಾಗಾದರೆ ಈಗ ನಾವು ನೋಡಿದ ಪಕ್ಕಾ ಮನೆಗಳೆಲ್ಲ ಕಾರ್ಮಿಕರಿಗಾಗಿ ಕಟ್ಟಿದವುಗಳೇ?"

"ಛೇ! ಛೇ! ಅಧಿಕಾರಿವರ್ಗ ಎಲ್ಲಿ ಹೋದರೂ ತಮ್ಮ ವಿರಾಮ, ಆರಾಮ, ಸುಖ-ಸೌಕರ್ಯಗಳಿಗೆ ಕಡಿಮೆ ಮಾಡಿಕೊಳ್ಳುವವರಲ್ಲ! ಸಾರ್ವಜನಿಕರ ಮೊತ್ತದಿಂದ ನೀರಿನಂತೆ ಹಣ ವ್ಯಯಿಸಿ ಕಟ್ಟಿದ ಭವ್ಯ ಸೌಧಗಳು ಇವು. ಅವರು 'ಬೆಕ್ಕಿನ ಬಿಡಾರವೇ ಬೇರೆ!' ಎಂಬ ತತ್ವದಲ್ಲಿ ಅಚಲ ವಿಶ್ವಾಸ ಇಟ್ಟವರು. ಅಂತೆಯೇ ಬೆಂಗಳೂರಿನ ಡಾಲರ್ ಕಾಲನಿಯಲ್ಲಿ ಕಾಣಬಹುದಾದಂತಹ ಬಂಗ್ಲೆಗಳನ್ನು ಸಹ್ಯಾದ್ರಿಯ ಈ ಪರ್ವತ ಶ್ರೇಣಿಗಳಲ್ಲಿ ಕಂತ್ರಾಟುದಾರರಿಂದ ಕಟ್ಟಿಸಿಕೊಂಡಿದ್ದಾರೆ. ಸ್ಥಾನೀಯರ ಮನೆಗಳೆಲ್ಲ ಮಣ್ಣು, ಗಚ್ಚು, ಮರಗಲ್ಲು, ಹಂಚುಗಳಿಂದ ನಿರ್ಮಿತವಾದವುಗಳು. ಈ ಮನೆಗಳಾದರೋ ಉಕ್ಕು, ಸಿಮೆಂಟ್, ಮೊಝಾಯಿಕ್ ಟ್ಯಾಲ್ಸ್ ಬಳಸಿದವುಗಳು. ಪ್ರತಿ ಬೆಡ್ ರೂಮಿಗೂ, ಬಾತ್‌ರೂಂ, ವಿರಾಮ ಮಾಡಲು ಸೋಫಾಸೆಟ್, ಊಟಕ್ಕಾಗಿ ಟೇಬಲ್, ನಿರಂತರ ಪುಕ್ಕಟೆಯಾಗಿ ಲಭಿಸುವ ವಿದ್ಯುತ್ತು ಹಾಗೂ

ಕೊಳಾಯಿ ನೀರು, ಬೀಸಿನೀರಿಗೆ ಗೀಸರ್, ತಂಪಿಗೆ ಫ್ರಿಜ್, ಮೇಲಧಿಕಾರಿಗಳ ಓಡಾಟಕ್ಕೆ ಕಾರುಗಳ ಪೂರೈಕೆಯಾಗುವಂತೆ ನೋಡಿಕೊಂಡಿದ್ದಾರೆ. ಇನ್ನಿತರ ಸಿಬ್ಬಂದಿಯ ಪ್ರಯಾಣಕ್ಕಾಗಿ ಬಸ್ಸುಗಳು, ಮಕ್ಕಳಿಗಾಗಿ ಹೋಗಿ ಬರಲು ವಿದ್ಯಾರ್ಥಿವಾಹನ ಇಷ್ಟೆಲ್ಲ ಅನುಕೂಲಗಳನ್ನು ಒದಗಿಸಿದರೂ, ಬೆಂಗಳೂರಿನಲ್ಲಿ ಇರಬೇಕಾಗಿದ್ದ ತಮಗೆ ಇಲ್ಲಿ 'ಕಾಳಾಪಾಣಿ' ಶಿಕ್ಷೆಗೆ ಕಳಿಸಿದ್ದಾರೆ! ಎಂದು ಅಸಂತೋಷ ವ್ಯಕ್ತಪಡಿಸುವ ಅಧಿಕಾರಿಗಳಿಗೆ ಕಡಿಮೆಯಿಲ್ಲ. ವರ್ಚಸ್ಸು ಇದ್ದವರೆಲ್ಲ ಬೆಂಗಳೂರಿನಲ್ಲಿಯೇ ಇದ್ದು ಸಕಲ ಸೌಕರ್ಯಗಳನ್ನು ತಮ್ಮವನ್ನಾಗಿಸಿಕೊಂಡಿದ್ದಾರೆ, ಎಂದು ಹೊಟ್ಟೆಕಿಚ್ಚು ಪಡುವವರೂ ಇದ್ದಾರೆ. ಎಂದು ಇಲ್ಲಿಂದ ಬಿಡುಗಡೆ ಹೊಂದುತ್ತೇವೋ! ಎಂದು ಕಾಯುತ್ತಲೇ ಇರುತ್ತಾರೆ". ಅಲ್ಲಿಯ ಆಗುಹೋಗುಗಳ ಮಾಹಿತಿಯನ್ನು ನೀಡಿದರು ಕ್ರಿಶ್.

"ಅವರು, ಅವರ ಕುಟುಂಬದವರೆಲ್ಲ ಹಲವು ವರ್ಷಗಳಿಂದ ಇಲ್ಲಿದ್ದರೂ ಕೊಂಕಣಿ ಭಾಷೆಯಾಗಲಿ, ಇಲ್ಲಿಯವರ ಆಚಾರ ವಿಚಾರಗಳನ್ನು ತಿಳಿದುಕೊಳ್ಳಲು, ಆಸಕ್ತಿ ವಹಿಸಿದ್ದಾಗಲಿ ತೋರಿಬರುವದಿಲ್ಲ!" ಜೋ ಉದ್ಗರಿಸಿದಳು. ಅಧಿಕಾರಿಗಳಾದರೂ, ಸ್ಥಾನೀಯರೊಂದಿಗೆ ಆಗೀಗ ಬೆರೆತು, ನಗುವಷ್ಟು, ವಂದಿಸುವಷ್ಟು ಸಂಪರ್ಕ ಇಟ್ಟುಕೊಳ್ಳುತ್ತಾರೆ. ಆದರೆ ಅವರ ಗೃಹಿಣಿಯರು, ಮಕ್ಕಳು ಮರಿಗಳು, ಇಲ್ಲಿಯ ನಿವಾಸಿಗಳ ಸಂಪರ್ಕ ಯಾವುದೇ ವಿಧದಲ್ಲಿ ಬೆಳೆಯದಂತೆ ಎಚ್ಚರವಾಗಿರುತ್ತಾರೆ. ಇಂಗ್ಲಿಷ್ ಮಿಶ್ರಿತ ಕನ್ನಡ ಭಾಷೆಯೇ ಶ್ರೇಷ್ಠ ಎಂದು ನಂಬಿದವರು. ಅವಕಾಶ ಸಿಕ್ಕಾಗಲೆಲ್ಲ ತಮ್ಮವರಲ್ಲದವರನ್ನು ಗೇಲಿಮಾಡುವದರಲ್ಲಿಯೇ ಕಾಲಹರಣ ಮಾಡುತ್ತಿರುತ್ತಾರೆ. ಪರಿಸ್ಥಿತಿ ಹೀಗಿರುವಾಗ ಈ ವಿದ್ಯುತ್ ಯೋಜನೆಯ ಲಾಭ ಜಿಲ್ಲೆಯವರಿಗೆ ಸಿಗುತ್ತಿದೆ ಎಂದರೆ ಯಾರು ನಂಬುವಂತಿದೆ?"

ವಾಹನವು ವೇಗ ಕಡಿಮೆ ಮಾಡಿ ಬಲಕ್ಕೆ ತಿರುಗಿದಾಗ ಜಲಾವೃತ ಪ್ರದೇಶದತ್ತ ಬಟ್ಟುಮಾಡಿ ಕ್ರಿಶ್ ಮುಂದುವರಿಸಿದರು "ಈ ಸ್ಥಾನದಲ್ಲಿ ಒಂದು ಮಹಾಸತಿಯ ದೇವಾಲಯವಿತ್ತು. ಇಲ್ಲಿ ಎಲ್ಲ ಪ್ರವಾಸಿಗರೂ ಇಳಿದು ಘಟ್ಟದ ರಸ್ತೆಯಲ್ಲಿ ತಮ್ಮನ್ನೆಲ್ಲ ಸುರಕ್ಷಿತವಾಗಿ ಪಾರುಗೊಳಿಸಿದ್ದಕ್ಕಾಗಿ ದೇವಿಗೆ ಕೃತಜ್ಞತೆ ಸಲ್ಲಿಸಿ ಮುಂದುವರಿಯುವ ಪರಿಪಾಠವಿತ್ತು. ಹಿಂದೆ ಸತಿ ಹೋದವರಿಗಾಗಿ ಇಂಥ ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ದುರ್ದೈವದ ಸಂಗತಿ ಎಂದರೆ, ಈ ಮಹಾಸತಿ, ಪ್ರಜೆಗಳನ್ನು ಸಂರಕ್ಷಿಸುವದಿರಲಿ, ತನ್ನ ಅಸ್ತಿತ್ವಕ್ಕೇ ಸಂಚಕಾರ ಬಂದಾಗಲೂ ಅಸಹಾಯಕಳಾಗಿದ್ದಾಳೆ! 'ಟೇಲ್‌ರೇಸ್' ಶತಮಾನಗಳಿಂದ ಉಳಿದು ಬಂದ ನಮ್ಮದೆನಿಸುವದನ್ನೆಲ್ಲ ಕಬಳಿಸಿಕೊಂಡು ಬಿಟ್ಟಿದೆ' ಕ್ರಿಶ್ ವಿಷಾದಿಸಿದರು.

ಮೂಡಣದಿಕ್ಕಿನಲ್ಲಿ ಮೂಡಿ ಬರುತ್ತಿದ್ದ ನೇಸರನ ಬೆಳಕಿನಲ್ಲಿ ಗಗನದೆತ್ತರಕ್ಕೆ ತಲೆ ಎತ್ತಿ ನಿಂತ ಸಹ್ಯಾದ್ರಿಯ ಶಿಖರಗಳು, ಹುಟ್ಟೂರಿಗೆ ಹಿಂದಿರುಗಬಯಸಿದವರಿಗೆ, ಹಾರ್ದಿಕ ಸ್ವಾಗತ ಕೋರಿದವು. ಹಡಿನಬಾಳ ಹೊಳೆಯ ಇಕ್ಕೆಲದಲ್ಲಿ ಸೊಕ್ಕಿನಿಂದ ಬೆಳೆದು ನಿಂತ ತೆಂಗು, ಕಂಗುಗಳು, ಫಲಕಲಶಗಳನ್ನು ಹೊತ್ತು ಇವರ ಬರವಿಗಾಗಿಯೇ ಕಾಯುತ್ತ ನಿಂತಂತೆ ಅನಿಸಿತು. ಗುಂಡಬಾಳಾ, ಕವಲಕ್ಕಿ, ಬಾಳೆಗದ್ದೆಗಳನ್ನು ಹಿಂದೆ ಹಾಕಿ ಬಸ್ಸು ಮುನ್ನುಗ್ಗಿದಾಗ ಎದುರು ಬಂದ

ಹಳ್ಳಿ 'ಭಾಸ್ಕೇರಿ' ಎಂದು ಡಾಂಬರ ಬಳಿದುಕೊಂಡು ನಿಂತ ಬೋರ್ಡು ಸಾರಿತು. ಕ್ರಿಶ್ ಹಿಗ್ಗಿನಿಂದ ಅತ್ತಬಟ್ಟು ಮಾಡಿ ತೋರಿಸುತ್ತ "ನಮ್ಮ ಕುಟುಂಬದ ಬೇರು ಈ ಹಳ್ಳಿಯಲ್ಲಿದೆ. ನನ್ನ ಮುತ್ತಾತ, ಈ ಹಳ್ಳಿ ಬಿಟ್ಟು ಹೊನ್ನಾವರಕ್ಕೆ ಬಂದು ವ್ಯಾಪಾರ ಪ್ರಾರಂಭಿಸಿದರಂತೆ. ತಮ್ಮ ತಂದೆಯಿಂದ ಪಡೆದ ಪಾವಲಿ (ನಾಲ್ಕು ಆಣೆ)ಯನ್ನು ಎಲೆ-ಅಡಿಕೆ ವ್ಯಾಪಾರದಲ್ಲಿ ತೊಡಗಿಸಿದರಂತೆ. ಮೊದಲದಿನ ತೊಡಗಿಸಿದ ಬಂಡವಲು ಮೂರಾಣೆಗೆ ಇಳಿದರೆ, ಎರಡನೇ ದಿನ ಎರಡಾಣೆಗೆ ಇಳಿಯಿತಂತೆ. ಇಷ್ಟಾದರೂ ಧೃತಿಗೆಡದೇ ವ್ಯಾಪಾರ ಮುಂದರಿಸಿ ಕ್ರಮೇಣ ಲಾಭವಾಗಲಾರಂಭಿಸಿತಂತೆ. ಒಂದು ನೂರು ರೂಪಾಯಿ ಉಳಿತಾಯ ಮಾಡಿ, ಕಾಲು ನಡಿಗೆಯಲ್ಲಿ ಹುಬ್ಬಳ್ಳಿಗೆ ಪಯಣಿಸಿ, ಜವಳಿ ಖರೀದಿಸಿ, ತಂದು ಜವಳಿ ವ್ಯಾಪಾರ ಪ್ರಾರಂಭಿಸಿದರು. ಅಂದಿನಿಂದ ಅದೇ ವ್ಯಾಪಾರವನ್ನು ನಮ್ಮ ಕುಟುಂಬದವರು ನಡೆಯಿಸಿಕೊಂಡು ಬಂದಿರುವದು ಒಂದು ದಾಖಲೆ! ಇಂದಿಗೂ ಈ ಹಳ್ಳಿಯಲ್ಲಿ ನಮ್ಮ ಹೊಲಗದ್ದೆಗಳು ಇವೆ!" ಹೆಮ್ಮೆಯಿಂದ ಎದೆಯುಬ್ಬಿಸಿ ಕ್ರಿಶ್ ಹೇಳಿದರು.

"ಹಾಗಾದರೆ ಹೊನ್ನಾವರದ ಬದಲಾಗಿ ನಮ್ಮ ಕುಟುಂಬದವರ ಈ ಹಳ್ಳಿಯನ್ನೇ ನಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಬಹುದಲ್ಲ! ಅಮೇರಿಕೆಯಲ್ಲಿ ೫೦ ವರ್ಷದ ಕಾಲಮಾನ, ಚರಿತ್ರೆಯನ್ನೆ ನಿರ್ಮಿಸುತ್ತದೆ. ಇಲ್ಲಿ ಕಾಮತ ಕುಟುಂಬದ ೨೦೦ ವರ್ಷ ಹಿಂದಿನ ದಾಖಲೆಯಾಗಿ ಭಾಸ್ಕೇರಿಯ ಹೊಲಗದ್ದೆಗಳಿವೆ!" ಉತ್ಸಾಹದ ಕಾರಂಜಿಯನ್ನೇ ಪುಟಿಸುತ್ತ ಕಿಮ್ ನುಡಿದಳು.

"ಜೀವನದಲ್ಲಿ ಹಿನ್ನೆಲೆಯ ಕುರುಹು ಕಾದಿರಿಸುವದು ಕಷ್ಟದ ಕೆಲಸ! ನಮ್ಮ ತಂದೆ, ತಮ್ಮ ಹೆಸರಿನ ಹಿಂದೆ 'ಭಾಸ್ಕೇರಿ' ಎಂಬ ಪದ ಸೇರಿಸಿಕೊಂಡರೂ ತಿರುಗಿ ಅಲ್ಲಿ ಹೋಗುವದು ಸಾಧಿಸಲೇ ಇಲ್ಲ. ನಾನೂ ಸಹ ನಮ್ಮೂರನ್ನು ಎಷ್ಟೊಂದು ಪ್ರೀತಿಸಿದರೂ ರಾಜ್ಯದ ರಾಜಧಾನಿಯಲ್ಲಿ ಕಾಲುಶತಮಾನ ಕಳೆದ ನಂತರ ಹೊನ್ನಾವರದಲ್ಲಿ ಹೊಂದಾಣಿಕೆ ಸಾಧ್ಯವೇ? ಎಂದು ನಿರ್ಧರಿಸಲೆಂದೇ ಈ ಪ್ರವಾಸ ಕೈಕೊಂಡಿದ್ದೇನೆ. ನನ್ನ ಮಗ ವಿಕ್ ಅಮೇರಿಕೆಯಲ್ಲಿ ಒಂದು ದಶಕ ಕಳೆದ ನಂತರ ಭಾರತದಲ್ಲಿ ಯಾವುದೇ ಮಹಾನಗರದೊಂದಿಗೆ ತನ್ನನ್ನು ಗುರುತಿಸಿಕೊಳ್ಳುವದು ತೀರ ಕಷ್ಟದ ಕೆಲಸ! ವಿಕ್ ಹಾಗೂ ನೀನು ಕೆಲವೊಂದು ಸೌಕರ್ಯಗಳಿಗೆ ತಿಲಾಂಜಲಿಯಿತ್ತು ಕೆಲವು ಕೊರತೆಗಳಿಗೆ ಹೊಂದಿಕೊಳ್ಳುವಂತಿದ್ದರೆ, ಹೊನ್ನಾವರ ಯಾಕೆ, ಭಾಸ್ಕೇರಿಯಲ್ಲೂ ನಿಮ್ಮ ಧ್ವಜ ಊರಲು ಸಾಧ್ಯವಿದೆ!" ನಿಧಾನವಾಗಿ ತಡೆತಡೆದು ಕ್ರಿಶ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಂತೆ ಹೊನ್ನಾವರ ಬಂದೇ ಬಿಟ್ಟಿತು.

ತಮ್ಮನಾದ ತುಳಸಿದಾಸ (ಎಲ್ಲರೂ ಪ್ರೀತಿ-ಸಲಿಗೆಗಳಿಂದ ತುಳಸು ಎಂದೇ ಕರೆಯುವದು ರೂಢಿ) ಬಸ್ ನಿಲ್ದಾಣದಲ್ಲಿ ಆಗಲೇ ಹಾಜರಾಗಿದ್ದ. ಸ್ವಸಹಾಯದಲ್ಲಿ ವಿಶ್ವಾಸವಿಟ್ಟ ಕ್ರಿಶ್ ಕುಟುಂಬದ ಸದಸ್ಯರೆಲ್ಲ ಇಳಿದು ತಮ್ಮ ತಮ್ಮ ಕಿಟ್‌ಬ್ಯಾಗ್, ಸೂಟ್‌ಕೇಸ್‌ಗಳನ್ನು ತಾವೇ ಹೊತ್ತು ನಡೆಯಲಾರಂಭಿಸಿದಾಗ, "ಛೇ! ಛೇ! ವೃಥಾ ತೊಂದರೆಬೇಡ, ಸುಬ್ರಾಯನು ಬಂದಿದ್ದಾನೆ. ಎಲ್ಲವನ್ನೂ ಒಯ್ದು ಕಾರಿನ ಡಿಕ್ಕಿಯಲ್ಲಿ ವ್ಯವಸ್ಥಿತವಾಗಿ ಜೋಡಿಸುತ್ತಾನೆ" ಎಂದು

ತುಳಸು ತಿಳಿಹೇಳಿದ. "ಕಾರು ಬೇರೆ ಬಂದಿದೆಯೇ? ಅಲ್ಲಯ್ಯ! ಕೇವಲ ೫-೧೦ ನಿಮಿಷಗಳ ದಾರಿಗೆ ಗಾಡಿ ಬೇಕೇ? ಅಷ್ಟೂ ನಡೆಯಲಾಗದಷ್ಟು ನಮಗೆ ವಯಸ್ಸಾಗಿದೆಯೇ?" ಕ್ರಿಶ್ ಆಕ್ಷೇಪಿಸಿದರು. ಅತ್ಯಪರೂಪವಾಗಿ ರಾಜ್ಯದ ರಾಜಧಾನಿಯಿಂದ ಅಣ್ಣ-ಅತ್ತಿಗೆ, ಅಮೇರಿಕೆಯಿಂದ ಅವರ ಮಗ-ಸೊಸೆ ತಮ್ಮೂರಿಗೆ ಬಂದಿಳಿದಾಗ, ಇದ್ದ ಕಾರನ್ನು ಬಳಸಲಾಗದಿದ್ದರೆ ಅದು ಇದ್ದೂ ಇಲ್ಲದಂತೆ ಅಲ್ಲವೇ?! ತುಳಸು, ಸವಾಲು ಒಡ್ಡಿದ! "ಅಲ್ಲೋ! ನಮ್ಮ ಅಜ್ಜ, ತಂದೆ, ನಾನೂ ಸಹ– ಯಾವ ಕಾಲದಲ್ಲೂ, ಯಾವ ಸ್ವಂತ ವಾಹನವನ್ನೂ ಉಪಯೋಗಿಸಿದವರಲ್ಲ, ಹೀಗಿದ್ದಾಗ ಈಗ ಈ ಇಲ್ಲದ ಡಂಭಾಚಾರವೇಕೆ?" ಎಂದು ಪ್ರಶ್ನಿಸಿದಾಗ, "ಆ ಕಾಲ ಬೇರೆ! ಈ ಕಾಲ ಬೇರೆ! ನಾವು ಕಾಲಕ್ಕೆ ಅನುಗುಣವಾಗಿ ಬಾಳಲು ಕಲಿಯಬೇಕು. ಆ ಕಾಲದಲ್ಲಿ ಸಾಧುಗಳಂತೆ ಸಾದಾ ಸರಳ ಜೀವನ ನಡೆಸುವ ಸಜ್ಜನರಿಗೆ ಅಪಾರ ಗೌರವವಿತ್ತು. ಆದರೆ ಇಂದು 'ಹೇಗಾದರೂ ಹಣಗಳಿಸು! ಥಾಟಿನಿಂದ ಜೀವಿಸು!' ಎಂಬ ಮಂತ್ರದಲ್ಲಿ ಎಲ್ಲರೂ ವಿಶ್ವಾಸ ಇಡುತ್ತಾರೆ. ಒಂದು ಸೈಕಲ್ ಕೂಡ ಇಲ್ಲದ ನಿಮ್ಮ ನಮ್ಮ ತಂದೆ ಕುಟುಂಬದಲ್ಲಿ ಈಗ ಮೂರು ಕಾರು, ಮೂರು ಸ್ಕೂಟರ್, ಮೂರು ಸೈಕಲ್‌ಗಳಿವೆ ಎಂದರೆ ನಂಬುತ್ತೀಯಾ? ಜಲಬಾಧೆ ಕಳೆಯಲು ಕಾರಿನಲ್ಲಿ ಹೊರಟವನನ್ನು ಗೌರವದಿಂದ ಕಾಣುವ ಕಾಲ ಬಂದಿದೆ! ಇದೆಲ್ಲವನ್ನು ಆ ಬಳಿಕ ನಿಧಾನವಾಗಿ ಚರ್ಚಿಸೋಣ. ಈಗ ಹೊರಡಿ! ಹೊಗೆಯಾಡುವ ಮೊಗ್ಗೆಕಾಯಿದೋಸೆ, ಕಾಯಿಚಟ್ನಿ, ಜೋನಿಬೆಲ್ಲ ತುಪ್ಪಗಳು ನಿಮ್ಮ ದಾರಿಯನ್ನು ಕಾಯುತ್ತಿವೆ!" ಎಂದು ಅಭ್ಯಾಗತರನ್ನು ಕುಳ್ಳಿರಿಸಿ ಭರ್ ಎಂದು ಕಾರನ್ನು ಓಡಿಸಿದ.

೮. ಕಣ್ಮರೆಯಾದ ಕೆರೆ

ತುಳಸು ಮನೆಯಲ್ಲಿ ಗರಿಗರಿಯಾದ ಬಿಸಿ ದೋಸೆಗಳಿಗೆ ವಿಪರೀತ ಬೇಡಿಕೆ ಬಂದು ಬಿಟ್ಟಿತು! ಸರದಿಗಾಗಿ ಕಾಯದೇ ಬೇರೆ ಮಾರ್ಗವೇ ಇರಲಿಲ್ಲ. ಪ್ಲೇಟು ಬರಿದಾದಾಗ ಬಿಡುವಿದ್ದ ಬಾಯಿ ಮಾತನಾಡಲಾರಂಭಿಸಿತು. "ಬೆಂಗಳೂರಿನಂತೆಯೇ ಚಿಕ್ಕ ಊರಾದ ಈ ಹೊನ್ನಾವರದ ಬಸ್ ನಿಲ್ದಾಣ ಕೂಡ ಜನಜಂಗುಳಿಯಿಂದ ಕಿಕ್ಕಿರಿದು ತುಂಬಿರುವದೇಕೆ?" ಕಿಮ್ ಕೇಳಿದಳು. "ವಿಮಾನ, ಟ್ರೇನ, ಬಸ್ಸುಗಳಲ್ಲಿ ಪಯಣಿಸುವವರು ಒಬ್ಬಿಬ್ಬರಾದರೆ, ಬೀಳ್ಕೊಳ್ಳಲೋ, ಬರಮಾಡಿಕೊಳ್ಳಲೋ ಬರುವವರು ಮೂವರು. ಅವರಿಗೆ ಜೊತೆ ಕೊಡಲು ಇನ್ನೂ ನಾಲ್ಕೈದು ಜನ, ಕಾಲಹರಣ ಮಾಡಬಂದವರಿರುತ್ತಾರೆ. ಈಗ ಈ ರೀತಿ ಕಿಕ್ಕಿರಿದು ತುಂಬುವ ಸ್ಥಳ ಹಿಂದೊಮ್ಮೆ ಪ್ರಶಾಂತ ತಾಣವಾಗಿತ್ತು ಎಂದು ನಂಬುವದು ಕಷ್ಟ! ಅಲ್ಲೇ ಸಮೀಪದಲ್ಲಿ, ಬೃಹದಾಕಾರದ ಕೆರೆ ಒಂದಿತ್ತು. ಕೊಂಕಣಿ ಜನರೆಲ್ಲ ಅದನ್ನು ಕೊಟ್ಯಾತಳೆ (ಕೋಟೆಯ ಕೆರೆ) ಎಂದು ಕರೆಯುತ್ತಾರೆ. ಅದಕ್ಕೆ ಹೊಂದಿಯೇ ಹಿಂದೆ ಕೋಟೆ ಇತ್ತು ಎನ್ನುವುದಕ್ಕೆ ಸಾಕ್ಷಿ ಬೇಕೇ?" ಊರ ಗತೇತಿಹಾಸವನ್ನು ಕ್ರಿಶ್, ಪುನಃ ಎತ್ತಿಕೊಂಡರು. ಮನೆಯ ಸೊಸೆ, ಬಿಸಿದೋಸೆಯನ್ನು ತಂದು ಪ್ಲೇಟಿಗೆ ಹಾಕಿದ್ದರಿಂದ ಅತ್ತ ಗಮನ ಹರಿಸಿದರು.

ಜೋಳ ಕಿವಿ ನೆಟ್ಟಗಾದವು. "ಈ ಕೋಟೆ ಕೆರೆಯ ಬಗ್ಗೆ ಹೆಚ್ಚಿನ ಇತಿಹಾಸವೇನಾದರೂ ನಿಮಗೆ ಗೊತ್ತೇ?"

"ಹಿಂದಿನ ಪದ್ಧತಿಯಂತೆ "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಂ ಮಾಡಿಸು" ಎಂಬ ಧಾರ್ಮಿಕ ವೃತ್ತಿಗನುಸಾರವಾಗಿ ಒಬ್ಬ ಧನಿಕ ಶೆಟ್ಟಿ, ಸರ್ವಜನ ಹಿತಕ್ಕಾಗಿ ಇದನ್ನು ಕಟ್ಟಿಸಿರಬೇಕು. ಅಂತೆಯೇ ಊರ ಹೆಚ್ಚಿನ ಜನ ಇದನ್ನು 'ಶೆಟ್ಟಿಕೆರೆ' ಎಂದೇ ಗುರುತಿಸುತ್ತಿದ್ದರು. ಅಲ್ಲಿ ಬಿದ್ದುಹೋದ ಕೋಟೆ ಪುರಾತನವಾದರೂ ಆ ಬಳಿಕವೂ ಆ ಭಾಗ ಆಕ್ರಮಿಸಿ ಪೋರ್ಚುಗೀಸರು ಅಲ್ಲಿ ಫ್ಯಾಕ್ಟರಿ (ವಖಾರಿ) ಇಟ್ಟಿದ್ದರು. ಹೀಗಾಗಿ ಕೋಟೆ ಕೆರೆಯ ನೀರಿನ ಉಪಯೋಗ ಶತಮಾನಗಳ ಕಾಲ ಮುಂದುವರಿದಿತ್ತು. ಶಾಲಾದಿನಗಳಲ್ಲಿ ನಮಗೆಲ್ಲ ಹೊನ್ನಾವರದಲ್ಲಿ ಇದು ಒಂದು ಮಹಾಸರೋವರವೆಂದೇ ಕಲ್ಪನೆಯಿತ್ತು! ಅದರ ಪರಿಸರದ ರಮ್ಯತೆ ಸ್ವಲ್ಪದರಲ್ಲಿ ಹೇಳುವಂತೆ ಇರಲಿಲ್ಲ. ಅದರ ನಾಲ್ಕೂ ದಂಡೆಗಳಲ್ಲಿ ಕೊರೆದ ಕೆಂಪು ಕಲ್ಲುಗಳನ್ನು ಜೋಡಿಸಿದ್ದರು. ಅವುಗಳನ್ನು ಹೂ-ಹಕ್ಕಿಗಳ ಚಿತ್ತಾರಗಳಿಂದ ಅಲಂಕರಿಸಿದ್ದರು. ಪಶ್ಚಿಮ ದಿಕ್ಕಿನಲ್ಲಿ ಮನುಷ್ಯರಿಗೂ ಪ್ರಾಣಿ-ಪಶುಗಳಿಗೂ ನೀರು ಎಟುಕುವಂತೆ ಇಳಿದು

ಹೋಗಲು ಪಾವಟಿಗೆಗಳಿದ್ದವು. ಭೂಮಿಯ ಆಳದಿಂದ ಚಿಮ್ಮುತ್ತಿದ್ದ ಝರಿನೀರು, ಹಾಗೂ ಮಳೆಯ ನೀರು ಶೇಖರವಾಗುತ್ತಿದ್ದುದರಿಂದ ಈ ಕೆರೆ ಸದಾ ತುಂಬಿ ಹರಿಯುತ್ತಿತ್ತು. ಕೆರೆಯ ಉತ್ತರದಂಡೆಯಲ್ಲಿ ಹುಲುಸಾಗಿ ಬೆಳೆದು ನಿಂತ ಹಲವಾರು ಮರಗಳು, ನೀರಿನಲ್ಲಿ ತಮ್ಮ ಪಡಿನೆಳಲು ಕಂಡು ನಸುನಾಚುತ್ತ ಗಾಳಿ ಬೀಸಿದಾಗೊಮ್ಮೆ ಬಳಕುತ್ತ ನಿಂತಿರುವಂತೆ ಭಾಸವಾಗುತ್ತಿತ್ತು. ಕೆಲವು ಮರಗಳಲ್ಲಿ ಗೀಜಗನ ಗೂಡು ಇದ್ದು, ನೀರಿನತ್ತ ಚಾಚಿದ ಟೊಂಗೆಗಳಲ್ಲಿ ಗೀಜಗಗಳು ಆಗೊಮ್ಮೆ ಈಗೊಮ್ಮೆ ಮರಿಗಳಿಗೆ ಗುಟುಕು ನೀಡಲು ಗೂಡ ಒಳ ಸೇರಿ ಹೊರಕ್ಕೆ ಬರುತ್ತಿದ್ದವು. ಮಿಂಚುಳ್ಳಿಗಳು ದಂಡೆಯಲ್ಲಿ ಕಾದು ಕುಳಿತು, ಮೀನು ಪ್ರತ್ಯಕ್ಷವಾದೊಡನೆ, ಮಿಂಚಿನ ವೇಗದಿಂದ ಎರಗಿ ಅದನ್ನು ಕೊಕ್ಕಿನಲ್ಲಿ ಬಂಧಿಸಿ ದೂರ ಹೋಗಿ ವಿರಾಮವಾಗಿ ಭೋಜನ ನಡೆಸುತ್ತಿದ್ದವು. ಬೆಳ್ಳಕ್ಕಿಗಳು, ನೀರ ಮೇಲೆ ತೇಲುತ್ತ ತಮ್ಮ ಉದರ ನಿರ್ವಹಣೆ ಮಾಡಿಕೊಳ್ಳುತ್ತ ನೋಡುವವರಿಗೂ ಕಣ್ಣಿಗೆ ಹಬ್ಬವುಂಟುಮಾಡುತ್ತಿದ್ದವು.” ಹಳೆಯದನ್ನು ನೆನಪಿಸಿಕೊಳ್ಳುತ್ತ ಮಾತಿನಲ್ಲಿ ದೋಸೆಯ ಸರದಿ ತಪ್ಪೀತೆಂದು ಅರಿವಾಗಿ ಕ್ರಿಶ್ ಅತ್ತ ಗಮನ ಹರಿಸಿದರು. ಪ್ಲೇಟುಬರಿದಾಗಿ ಮಾತು ಹರಿಯಿತು.

“ನಡುಬೇಸಿಗೆಯಲ್ಲೂ ಕೆರೆಯಲ್ಲಿ ನೀರು ಇದ್ದೇ ಇರುತ್ತಿತ್ತು. ಹೀಗಾಗಿ ಊರವರಿಗೆ ಅದೊಂದು ವರದಾನವಾಗಿತ್ತು. ಪಶು-ಪಕ್ಷಿ, ದನ-ಕರುಗಳು ಬಾಯಾರಿಕೆ ಬಗೆಹರಿಸಿಕೊಳ್ಳುವ ಉತ್ತಮ ತಾಣವಾಗಿತ್ತು. ಬಿಸಿಲಿನ ತಾಪಕ್ಕೆ ರಸ್ತೆಗಳೆಲ್ಲ ಕಾದು ಧೂಳುಮಯವಾಗುತ್ತಿದ್ದುದರಿಂದ, ನಗರ ಪಾಲಿಕೆಯವರು, ಈ ಕೆರೆಯ ನೀರು ಎತ್ತಿ ರಸ್ತೆಗಳಿಗೆ ಹನಿಸುವ ವ್ಯವಸ್ಥೆಯನ್ನು ಮಾಡಿದ್ದರು. ಪರಿಸರ ಪ್ರೇಮಿಗಳೆಲ್ಲ ಮೆಚ್ಚಬಹುದಾದ ಸಾದಾ ಸರಳವಾದ ಉಪಾಯ ಇದಾಗಿತ್ತು. ಇದಕ್ಕಾಗಿ ಯಾವುದೇ ಯಂತ್ರೋಪಕರಣವಾಗಲಿ ಜಾನುವಾರಗಳನ್ನಾಗಲಿ ಬಳಸುತ್ತಿರಲಿಲ್ಲ. ಬಂಡಿಯೊಂದಕ್ಕೆ ದೊಡ್ಡ ಹೌದನ್ನು ಜೋಡಿಸಿದ್ದರು. ಅದರಿಂದ ಹನಿಹನಿಯಾಗಿ ನೀರು ಚಿಮ್ಮಿಸುವ ವ್ಯವಸ್ಥೆಯಿತ್ತು. ನಾಲ್ಕು ಆಳುಗಳು ಕೆರೆಯ ನೀರು ತುಂಬಿಕೊಂಡು ಹಾಡುತ್ತ ಊರ ರಸ್ತೆಗಳಿಗೆ ನೀರುಣಿಸುತ್ತಿದ್ದರು. ಇಷ್ಟೇ ಅಲ್ಲದೇ ಈ ಕೆರೆಯ ಸಮೀಪ ವಿಸ್ತಾರವಾದ ಕೃಷಿಭೂಮಿ ಇತ್ತು. ಕಾಲುವೆಯಿಂದ ಕೆರೆ ನೀರನ್ನು ಅದಕ್ಕೆ ಹಾಯಿಸಿ ನಡುಬೇಸಿಗೆಯಲ್ಲಿ ಭತ್ತದ ಬೆಳೆ ತೆಗೆಯುತ್ತಿದ್ದರು. ಇವೆಲ್ಲ ಇಂದಿಗೂ ಕಣ್ಣಿಗೆ ಕಟ್ಟಿದಂತೆ ಇದ್ದರೂ, ಅದೇ ಕೆರೆ ಇಂದಿಗೆ ಕಣ್ಣಿಗೆ ಗೋಚರಿಸದಂತಾಗಿದೆ.’

“ಅಂತಹ ಕೆರೆ ದುಸ್ಥಿತಿಗೆ ಏಕೆ ಇಳಿಯಿತು ?” ಊರಲ್ಲೇ ಇದ್ದ ತುಳಸು ಈಗ ಕುತೂಹಲ ಕೆರಳಿದ್ದರಿಂದ ವಿಚಾರಿಸಿದ.

“ಈ ಬೃಹದ್ ನೀರ ಸಂಚಯದ ಸದುಪಯೋಗವಾಗಬೇಕೆಂದು ಅಂದಿನ ನಗರಪಾಲಿಕೆಯ ಪ್ರಗತಿಪರ ಅಧ್ಯಕ್ಷರೊಬ್ಬರು ಅಲ್ಲಿ ಸಿಹಿನೀರಿನ ಮೀನು ತಳಿಯ ಪಾಲನೆ-ಪೋಷಣೆ ಪ್ರಾರಂಭಿಸಿದರು. ಅವಕ್ಕೆ ಯಾವುದೇ ಸ್ಪರ್ಧೆ ಇರದ್ದರಿಂದ, ನೀಡಿದ ಆಹಾರವನ್ನೆಲ್ಲ ನುಂಗಿ ಬೃಹದಾಕಾರ ತಾಳಿ ಬೆಳೆದವು. ಅವನ್ನು ನೋಡಿದರೆ ಶೃಂಗೇರಿಯ ಬಳಿ ತುಂಗಾನದಿಯಲ್ಲಿ ಭಕ್ತಾದಿಗಳು ನೀಡುವ ಯಥೇಷ್ಟ ಆಹಾರ ಸೇವಿಸಿದ ಬಲಿತ ಮೀನುಗಳ ತಂಡ, ನೆನಪಿಗೆ

ಬರುತ್ತಿತ್ತು; ಅಂತರವಿಷ್ಟೆ, ಅಲ್ಲಿ ಅವು ಶಾರದಮ್ಮನ ಕೃಪಾಪೋಷಿತವೆಂದು ಪರಿಗಣಿಸಿ ಭಕ್ತಾದಿಗಳು ಭಕ್ಷಿಸುವುದಿಲ್ಲ. ಇಲ್ಲಿಯ ಮತ್ಸ್ಯಭಕ್ತರು ಅವಕ್ಕೆ ರುಚಿಯೇ ಇಲ್ಲವೆಂದು ಮೂಗುಮುರಿಯುತ್ತಿದ್ದರು. ಕಡಲಿನ ಸುರ್ಮಾ, ಶರಾವತಿಯ ಕಾಣೆ ಮೀನಿನಂತಹ ರುಚಿಕಟ್ಟಾದ ಮೀನಿಗೆ ಮನಸೋತವರು, ಬಾಳೆದಿಂಡಿನಂತಹ ಸಪ್ಪಗಿನ ಸಿಹಿನೀರಿನ ಮೀನನ್ನು ತಿನ್ನುತ್ತಾರೆಯೇ? ಕೊನೆಗೆ ಈ ಮತ್ಸ್ಯರಾಶಿಯನ್ನು ಭಟ್ಕಳದ ನವಾಯತರಿಗೆ ತೀರ ಅಗ್ಗದಲ್ಲಿ ಮಾರಬೇಕಾಯಿತು" ಕ್ರಿಶ್ ಚಹದ ಕಪ್ ಬರಿದು ಮಾಡಿದರು.

"ಊರ ಹೃದಯ ಸ್ಥಾನದಲ್ಲಿದ್ದ ಕೃಷಿಭೂಮಿ ಪೈ ಕುಟುಂಬಕ್ಕೆ ಸೇರಿತ್ತು. ಪೈಗಳು ಒಕ್ಕಲು ಮಕ್ಕಳು ಸರಿಯಾಗಿ ಗೇಣಿ ಕೊಡುವದಿಲ್ಲವೆಂದು ತಾವೇ ನಿಂತು ಆಳುಗಳಿಂದ ಸಾಗುವಳಿ ಮಾಡಿಸುತ್ತಿದ್ದರು. ಆದರೆ ಕೆಲವರ್ಷಗಳ ಬಳಿಕ ಅದು ಲಾಭದಾಯಕವಲ್ಲವೆಂದು ಬೇಸಿಗೆಯಲ್ಲಿ ಊರಿಗೆ ಬರುತ್ತಿದ್ದ ಸರ್ಕಸ್, ನಾಟಕ, ಇತರ ಮನೆರಂಜನೆಗೆಂದು ಆ ಭೂಮಿಯನ್ನು ಬಾಡಿಗೆಗೆ ಕೊಡಲಾರಂಭಿಸಿದರು. ಸರ್ಕಸ್ ಆನೆ, ಒಂಟೆಗಳ ಮೆರವಣಿಗೆ ಬಂತೆಂದರೆ ನಾವೆಲ್ಲ ಹುಡುಗರು ಅವುಗಳನ್ನು ಹಿಂಬಾಲಿಸುತ್ತಿದ್ದೆವು. ಅಲ್ಲದೇ ಬಿಡುವಿದ್ದಾಗ ಪಂಜರದಲ್ಲಿದ್ದ ಹುಲಿ, ಸಿಂಹ, ಕರಡಿಗಳ ದರ್ಶನಲಾಭ ಪಡೆಯಲು ಹಾತೊರೆದು ಓಡುತ್ತಿದ್ದೆವು. ಪಾಲಕರನ್ನು ಪೀಡಿಸಿ, ಒಲಿಸಿ, ಒಂದಾದರೂ ಸರ್ಕಸ್ ಪ್ರಯೋಗಕ್ಕೆ ಕರೆದೊಯ್ಯಲು ಒಪ್ಪಿಸಿದಾಗ ಸ್ವರ್ಗವೇ ಭೂಮಿಗೆ ಇಳಿದು ಬಂದ ಆನಂದವಾಗುತ್ತಿತ್ತು. ಮೋಟಾರ್ ಸೈಕಲ್ ಓಡಿಸುವ ಕರಡಿ, ಬಗೆಬಗೆಯ ಕಸರತ್ತುಗಳನ್ನು ಮಾಡುವ ಆನೆ, ಬೆಂಕಿಯ ಚಕ್ರದಿಂದ ಜಿಗಿಯುವ ಹುಲಿಗಳ ಆಟಗಳೆಲ್ಲ ಅಪೂರ್ವವೆನಿಸುತ್ತಿದ್ದವು. ಜೊತೆಗೆ ಕಿರಿದಾದ ಉಡುಪು ಧರಿಸಿದ ಅಂದವಾದ ಮೈಮಾಟದ ಕುಮಾರಿಯರ ಸರಿಗೆಯ ಮೇಲಿನ ಕಸರತ್ತುಗಳು, ಟ್ರಾಪಿಜ್ ಹಾರಾಟಗಳು ಅತಿ ಎತ್ತರದ ಜೀವದ ಪರಿವೆಯಿಲ್ಲದೆ ಆಡಿ ತೋರಿಸುವ ಕವಾಯತುಗಳೆಲ್ಲ ಪವಾಡವಾಗಿ ತೋರುತ್ತಿದ್ದವು. ಆ ಹುಡುಗಿಯರನ್ನು ಸರ್ಕಸ್ ಮುಗಿದ ಬಳಿಕವೂ ನೋಡುವ ಆತುರದಿಂದ ಡೇರೆಯ ಸುತ್ತು ಹಾಕುತ್ತಿದ್ದೆವು. ಗೌರವರ್ಣ, ಕೆಂಪುತುಟಿ, ರಬ್ಬಾದ ರಿಬ್ಬನ್ ಕಟ್ಟಿದ ಕೇಶರಾಶಿ ಬಣ್ಣಬಣ್ಣದ ಕಿರಿದಾದ ಉಡುಪುಗಳಲ್ಲಿ ಅಪ್ಸರೆಯಂತೆ ಗೋಚರಿಸುತ್ತಿದ್ದವರು, ಹರಟೆ ಹೊಡೆಯುತ್ತ, ಹಳೆ ಬಟ್ಟೆಯುಟ್ಟು ಅಡಿಗೆ, ಮತ್ತಿತರ ಕೆಲಸದಲ್ಲಿ ತೊಡಗಿದ್ದ ಕರ್‍ರಗಿನ ಹುಡುಗಿಯರೇ! ಎಂದು ಅರಿವಾದಾಗ ಹೌಹಾರುವಂತೆ ಆಗಿತ್ತು. ನಮ್ಮ ಕೆಲಸದ ಹುಡುಗಿಯರು ಅವರಿಗಿಂತ ರೂಪ-ರಂಗಿನಲ್ಲಿ ಮೇಲು! ಎಂದು ಆಗ ಅನಿಸಿತ್ತು.

ಸರ್ಕಸ್ ಕಂಪನಿ ನಿರ್ಗಮಿಸಿದ ಕೆಲದಿನಗಳ ಬಳಿಕ "ಶಾಸ್ತ್ರಿ ನಾಟಕ ಕಂಪನಿ" ಅದೇ ಗದ್ದೆಬಯಲಿನಲ್ಲಿ ತಳ ಊರಿತು, ತೆಂಗಿನ ಗರಿಗಳ 'ರಂಗಭೂಮಿ' ನಿರ್ಮಾಣವಾಯಿತು. 'ಟೀಪು ಸುಲ್ತಾನ್' ನಾಟಕ ಪ್ರಾರಂಭವಾಗಿಯೇ ಬಿಟ್ಟಿತು. ಸಂಜೆ ಆರುಗಂಟೆಯ ಪ್ರಯೋಗ ಹೆಂಗಸರಿಗೆ, ಮಕ್ಕಳಿಗೆ ಮೀಸಲಾದರೆ, ಒಂಬತ್ತು ಗಂಟೆಯ ಬಳಿಕದ ರಾತ್ರಿಯ ಪ್ರಯೋಗ, ವ್ಯಾಪಾರಸ್ಥರಿಗೆ ಮೀಸಲು. ತಂದೆಯವರೊಂದಿಗೆ ಮೊದಲ ಬಾರಿ ಕಂಪನಿ ನಾಟಕದ ಪ್ರಯೋಗ ಕಾಣುವಂತಾದಾಗ ಮೈನವಿರು ಏಳುವಂತಾಗಿತ್ತು. ಟೀಪು ಸುಲ್ತಾನನ ಝಗಝಗಿಸುವ

ನಿಲುವಂಗಿ, ಜರಿಯ ರುಮಾಲು, ಸೊಂಟದ ತೂಗಾಡುವ ಖಡ್ಗಗಳೆಲ್ಲ ಅಪರೂಪದ ದೃಶ್ಯವಾಗಿದ್ದಂತೆ, ಹೆಂಗಳೆಯರ ಮುಖ ಕಣ್ಣು ತುಟಿಗಳ ಬಣ್ಣ, ಹೊಳಪಿನ ಬನಾರಸ್ ಸೀರೆಗಳ ಮಾಟ, ರಸಿಕ ಮಾತುಗಾರಿಕೆ, ಎಲ್ಲವೂ ಪ್ರೇಕ್ಷಕರನ್ನು ಹರ್ಷೋಲ್ಲಾಸಗಳಲ್ಲಿ ಮೀಯಿಸಿ ಬಿಡುತ್ತಿದ್ದವು. ರಸಿಕರಾದ ಹೊಸಾಡ ನಾಯ್ಕರು, ಬಾಯಿತುಂಬ ಎಲೆ-ಅಡಿಕೆ ತಂಬಾಕು ತುಂಬಿಕೊಂಡು ನಾಟಕಕ್ಕೆ ಬಂದಿದ್ದರು. ನಾಟಕದಲ್ಲಿಯ ರಸಿಕ ಪ್ರಣಯಿಗಳ ಮಾತುಗಾರಿಕೆಗೆ ಮಾರು ಹೋಗಿ, ಮೈಮರೆತು 'ಖಿಕ್' ಎಂದಾಗ ನಕ್ಕಾಗ, ಮುಂದಿನ ಸಾಲಿನಲ್ಲಿ ಕುಳಿತ ಪ್ರತಿಷ್ಠಿತ ಪ್ರೇಕ್ಷಕರಿಗೆಲ್ಲ ಅವರ ಬಾಯೆಂಜಲಿನ ಪೀಕು ಹೋಳಿಯಾಡಿತ್ತು! ಹಾವಭಾವ-ಮಾಟಮೋಡಿ, ಹಾಡುಕುಣಿತಗಳ ಮಾಯಾನಗರಿಯಲ್ಲಿ ಕಂಡ ನಟ-ನಟಿಯರು ನಿಜಜೀವನದಲ್ಲಿ ಹೇಗೆ ಬಾಳುತ್ತಾರೆ? ಎಂದು ತಿಳಿದುಕೊಳ್ಳುವ ಕುತೂಹಲದಿಂದ ಒಂದು ಮಧ್ಯಾಹ್ನ ಅವರು ಬೀಡು ಬಿಟ್ಟಲ್ಲಿ ಹೋಗಿ ನೋಡಿದಾಗ ಆಘಾತವಾಗಿತ್ತು. ಪ್ರೇಕ್ಷಕರಿಗೆ ಬೆನ್ನು ಮಾಡಿ ಕುಳಿತು ಸುಶ್ರಾವ್ಯವಾಗಿ ಹಾರ್ಮೋನಿಯಂ ಬಾರಿಸಿ, ಹಾಡುವಾತ ಹುಟ್ಟುಕುರುಡನಾಗಿದ್ದ. ನಾಯಕಿಯ ಪಾತ್ರಧಾರಿ ಅಕ್ಕಿ ಆರಿಸುತ್ತ ಕುಳಿತಿದ್ದಳು. ರಾಣಿಯಾದಾಕೆ, ತನ್ನ ಹರಿದ ಲಂಗದ ದುರುಸ್ತಿ ನಡೆಸಿದ್ದಳು. ಬ್ರಿಟೀಶ ಸಾಮ್ರಾಜ್ಯವನ್ನೇ ಅಲುಗಾಡಿಸಿದ ಟಿಪ್ಪು ಸುಲ್ತಾನ್ ನಂಬರ್ ೩೦ ಬೀಡಿ ಬಂಡಲಿನಿಂದ ಚುಟ್ಟತೆಗೆದು ಸೇದಿ, ಹೊಗೆ ಚಿಮ್ಮಿಸುವದರಲ್ಲಿ ತತ್ಪರನಾಗಿದ್ದ. ಕಿರಿ ಪಾತ್ರದವರೆಲ್ಲ ಸಿಂಗಲ್ 'ಚಾ' ಕುಡಿಯುತ್ತ ಕುಕ್ಕುರು ಕಾಲಿನಲ್ಲಿ ಕುಳಿತಿದ್ದರು. ಇವರೂ ನಮ್ಮಂತೆ ಸಾಮಾನ್ಯ ಮನುಷ್ಯರೇ! ಎಂದು ಸೋಜಿಗವಾಗಿತ್ತು.

'ಊರಿಗೆ ಟೂರಿಂಗ್ ಸಿನೇಮಾ ಮಂದಿರಗಳು ಬರಲಾರಂಭಿಸಿದವು. ಸರ್ಕಸ್, ನಾಟಕಗಳು, ವಿರಳವಾದವು. ಒಂದು ಕಾಯಂ ಚಿತ್ರಮಂದಿರವೂ ಕಾಣಿಸಿಕೊಂಡಿತು. ಖಾಲಿ ಬಿದ್ದ ಗದ್ದೆಯ ಬಯಲು ನೀರು ತುಂಬಿಕೊಂಡು ಬಂಜೆಯಾಗಿ ನಿಂತಿತು. ಲಾಭದಾಯಕವಲ್ಲದ ಈ ಭೂಮಿ, ಒಬ್ಬರಿಂದ ಇನ್ನೊಬ್ಬರ ಕೈ ಸೇರುವಂತಾಯ್ತು. ಕಾಂಗ್ರೆಸ್ ಧುರೀಣರೊಬ್ಬರು, ಅದನ್ನು ಕೊಂಡು ತಮ್ಮ ವಶೀಲಿಯನ್ನು ಬೆಂಗಳೂರಿನಲ್ಲಿ ಸರಿಯಾಗಿ ಉಪಯೋಗಿಸಿಕೊಂಡು, ರಾಜ್ಯ ಸಾರಿಗೆ ನಿಲ್ದಾಣ ಕಟ್ಟಲು ಇದು ಅತಿ ಉತ್ತಮ ತಾಣವೆಂದು ಸರಕಾರಕ್ಕೆ ಮನವರಿಕೆ ಮಾಡಿ, ಮಾರಿ, ಜೇಬು ತುಂಬುವಷ್ಟು ಹಣ ಗಳಿಸಿದರು. ಈ ಸ್ಥಳ ತಗ್ಗಿನಲ್ಲಿದೆ. ಮಳೆಗಾಲ ಜೋರಾಗಿರುವ ಇಲ್ಲಿ ನೀರು ತುಂಬಿಕೊಂಡು, ಪ್ರಯಾಣಿಕರಿಗೆ ಆಗುವ ತೊಂದರೆ ಅಷ್ಟಿಷ್ಟಲ್ಲ! ಜಲಬಾಧೆ ತೀರಿಸಿಕೊಳ್ಳಲು-ಸಮೀಪದ ಕಕ್ಕಸಿಗೂ ಹೋಗಲಾರದಷ್ಟು ಕೆಸರು ರಾಡಿ ತುಂಬಿಕೊಂಡಿರುತ್ತದೆ. ಮಹಿಳೆಯರ ಅಸಹಾಯಕತೆಯಂತೂ ಹೇಳತೀರದು!" ಎಂದು ದೂರ ಪ್ರಯಾಣಿಕರ ಗೋಳನ್ನು ಹೇಳುತ್ತಿದ್ದಂತೆ," "ಹೌದಲ್ಲ! ನನಗೆ ಬೆಂಗಳೂರು ಮನೆಯನ್ನು ಬಿಟ್ಟ ನಂತರ ಜಲಬಾಧೆಯ ಶಮನಕ್ಕೆ ಮಾರ್ಗದುದ್ದಕ್ಕೂ ಒಂದಾದರೂ ಸರಿಯಾದ ಸ್ಥಳ ಗೋಚರಿಸಲಿಲ್ಲ" ಎಂದು ಕಿಮ್ ಈಗಲೂ ಪರಿಸ್ಥಿತಿ ಸುಧಾರಿಸಿಲ್ಲ! ಎಂಬ ಅಂಶವನ್ನು ಗಮನಕ್ಕೆ ತಂದಳು.

“ಕೇವಲ ರಾಜ್ಯ ಸಾರಿಗೆ ಬಸ್ಸುಗಳ ಸಂದಣಿ-ಗದ್ದಲಗಳನ್ನು ಹೇಗಾದರೂ ಸಹಿಸಿಕೊಳ್ಳಬಹುದಾಗಿತ್ತು. ಆದರೆ ಲಂಚ ಕೊಟ್ಟು ಲೈಸೆನ್ಸ್ ಪಡೆದೊ, ಪಡೆಯದೆಯೋ ಓಡಿಸುವ ಟ್ಯಾಕ್ಸಿ, ಟೆಂಪೊ, ವ್ಯಾನು, ರಿಕ್ಷಾಗಳು ನಿಲ್ಲುವ ತಾಣವೂ ಇದೇ! ಎಲ್ಲವೂ ವಿಷದ ಹೊಗೆ ಕಾರುತ್ತ ನಿಂತಿರುತ್ತವೆ. ಅವರೆಲ್ಲ ಪ್ರಯಾಣಿಕರನ್ನು ತುಂಬಿಸಲು ಹಾತೊರೆಯುತ್ತ ಜನರಿಗೆ ಓಡಾಡಲೂ ಸ್ಥಳವಿಲ್ಲದಂತೆ ತಮ್ಮ ವಾಹನಗಳನ್ನೆಲ್ಲ ಅಸ್ತವ್ಯಸ್ತವಾಗಿ ನಿಲ್ಲಿಸಿರುತ್ತಾರೆ. ಹಣ ಉಳಿಸಲು ಹಲವರು ಜನ ಪೆಟ್ರೋಲ ಬದಲಾಗಿ ಸೀಮೆಯೆಣ್ಣೆ ಬಳಸುವದರಿಂದ ವಾಹನಗಳ ಹೊಗೆ ದಿನವಿಡೀ ದಟ್ಟವಾಗಿ ಕವಿದಿರುತ್ತದೆ. ಇಷ್ಟು ಸಾಲದೆಂಬಂತೆ ಅನಧಿಕೃತ ಗೂಡಂಗಡಿಗಳು, ಕೈಗಾಡಿಗಳು, ಹೆಜ್ಜೆ ಹೆಜ್ಜೆಗೂ ನಿಂತಿವೆ. ಈ ನೂಕು, ನುಗ್ಗಲುಗಳ ಮಧ್ಯೆ ಎಲ್ಲಿ ಹೋಗಬೇಕು? ಏನು ಮಾಡಬೇಕು? ಎಂದು ತಿಳಿಯದೇ ತಲೆ ಚಿಟ್ಟು ಹಿಡಿದು ಹೋಗುತ್ತದೆ” ಎಂದು ತುಳಸು ವಿವರಣೆ ನೀಡಿದ.

“ಕೆರೆಯ ಬಗ್ಗೆ ಹೇಳ ಹೊರಟಾಗ ವಿಷಯಾಂತರವಾಯಿತು! ಕೆರೆಯ ಗತಿ ಏನಾಯಿತು ಹೇಳಿರಲ್ಲ?” ಜೋ ನೆನಪಿಸಿದಳು.

“ಓ! ಹೌದಲ್ಲ... ಉಳಿದೆಡೆಯ ಕೆರೆಯ ಉಪಯೋಗ ಇಲ್ಲಿ ಇರಲಿಲ್ಲ. ಈ ಹಿರೇ ಹಳ್ಳಿಯಲ್ಲಿ ಅತೃಪ್ತಿಗೆ, ಆಪತ್ತಿಗೆ ಆಸ್ಪದವಿರಲಿಲ್ಲವೆಂದೋ ಏನೋ ಆತ್ಮ ಹತ್ಯೆಗಾಗಿ ಇಲ್ಲಿಯವರು ಈ ಕೆರೆ ಬಳಸುವ ಪ್ರಮೇಯವೇ ಬರಲಿಲ್ಲ. ಒಮ್ಮೆ ಅಂದು ಇದ್ದ ಖಾಸಗಿ ಮೋಟಾರ ಕಂಪನಿಯ ಏಜಂಟರೊಬ್ಬರು, ಪ್ರಯಾಣಿಕರಿಂದ ಪಡೆದ ಹಣವನ್ನು ಕಂಪನಿಯ ಬೊಕ್ಕಸಕ್ಕೆ ಸೇರಿಸುವ ಬದಲಿಗೆ ಖಾಸಗಿ ಖರ್ಚಿಗೆ ಬಳಸಿಕೊಂಡು, ನಂತರ ಕಂಪನಿಯ ವರಾತು, ಒತ್ತಾಯಗಳು ಜಾಸ್ತಿ ಆದಾಗ, ಬೇರೆ ಉಪಾಯ ಕಾಣದೇ ಈ ಕೆರೆಯಲ್ಲಿ ಹಾರಿದ್ದು ಅಪೂರ್ವ ಘಟನೆಯಾಗಿ ಪರಿಣಮಿಸಿತ್ತು. ನಾವೆಲ್ಲ ಈ ಮೃತದೇಹ ನೋಡಲು ಹೋಗಿದ್ದೆವು. ಮೃತರ ಬಲಗೈ ಎತ್ತಿದ್ದು, ‘ಆತ ಬಸ್ಸಿಗೆ ಹೊರಡಲು ಅಪ್ಪಣೆ ಕೊಟ್ಟಿದ್ದಾರೆ!’ ಎಂದು ಒಬ್ಬ ಉದ್ಗರಿಸಿದರೆ, ಕ್ರಿಕೆಟ್ ಪ್ರಿಯನೊಬ್ಬ ‘ಬೌಂಡ್ರಿ ಬಾರಿಸುವದರಲ್ಲಿ ಇದ್ದಾರೆ’ ಎಂದಾಗ ಕೆಲವರಿಗಾದರೂ ನಗೆಬಾರದಿರಲಿಲ್ಲ. ಇದಾದ ಕೆಲದಿನಕ್ಕೆ ಊರ ಪ್ರತಿಷ್ಠಿತರೊಬ್ಬರು ಆ ಕೆರೆಯಲ್ಲಿ ಆತ್ಮ ಹತ್ಯೆ ಮಾಡಿಕೊಂಡರು. ಇದರಿಂದ ಹೌಹಾರಿದ ಊರ ಜನ ಸಭೆ ಸೇರಿ ಕೆರೆಯ ಸುತ್ತ ಗೋಡೆ ಕಟ್ಟಲು ಗುತ್ತಿಗೆ ಕೊಟ್ಟರು. ಅದು ಮೊದಲ ಮಳೆಗಾಲದಲ್ಲೆ ಕುಸಿಯಲಾರಂಭಿಸಿದ್ದರಿಂದ, ಕೆರೆಯನ್ನೇ ಮುಚ್ಚಿ ಬಿಡುವದು ಲೇಸು ಎಂದು ನಿರ್ಧರಿಸಿದರು. ಆದರೆ ಅದಕ್ಕೆ ವಿಪರೀತ ಖರ್ಚು ಬರುವದರಿಂದ, ಊರ ಕಸಕಡ್ಡಿಗಳನ್ನು ಗುಡಿಸಿ ತಂದುದನ್ನು ಕೆರೆಗೆ ಸೇರಿಸುವಂತೆ ನಗರ ಪಾಲಿಕೆಯು ತನ್ನ ಸಫಾಯಿ ಕೆಲಸಗಾರರಿಗೆ ಅಪ್ಪಣೆ ಕೊಟ್ಟಿತು. ಅಷ್ಟರಲ್ಲಿ ಈ ಪ್ರಾಚೀನ ಕೆರೆಯ ಮಣ್ಣಿನಲ್ಲಿ ಬಂಗಾರವಿದೆ! ಎಂಬ ವದಂತಿ ಹರಡಿ, ಅಕ್ಕಸಾಲಿಗರು ಕಾರ್ಮಿಕರಿಂದ ಮಣ್ಣು ಹೊರಿಸಿತಂದು ದಂಡೆಯಲ್ಲಿ ತೊಳೆಯಲಾರಂಭಿಸಿದರು. ‘ಮೊದಲೇ ಗೊಲ್ಲಿ, ಅದರಲ್ಲೂ ಹಡೆದಿದ್ದಾಳೆ’ ಎಂಬ ಗಾದೆಯಂತೆ, ಸುಂದರವಾಗಿದ್ದ ಕೆರೆ ಕೆಸರಿನ ಹೊಂಡವಾಗಿ ಪರಿಣಮಿಸಿತು. ಬಳಿಯ ಬಸ್ ನಿಲ್ದಾಣದಿಂದಾಗಿ, ಕಿರು ವ್ಯಾಪಾರದ ಅಂಗಡಿಗಳೆಲ್ಲ ಸಿಕ್ಕಾಪಟ್ಟೆ ಬೆಳೆದು

ಅವರು ಕೆರೆಯ ದಂಡೆಯ ಪ್ರದೇಶವನ್ನೆಲ್ಲ ಆಕ್ರಮಿಸಿದರು. ಗೂಡಂಗಡಿಗಳು ಅಂಗಡಿಗಳಾದವು. ಈಗ ಅಲ್ಲೊಂದು ಕೆರೆ ಇತ್ತೊ ಇಲ್ಲವೋ ದೇವರೂ ಅರಿಯ! ಆ ಪುಣ್ಯಾತ್ಮ ಶೆಟ್ಟಿಯ ಆತ್ಮ ಮಮ್ಮಲ ಮರುಗುತ್ತಿರಬೇಕು'. ತಮ್ಮ ಊರಿನ ಅಂದವಾದ ತಾಣವೊಂದನ್ನು ಅಲ್ಲಿಯವರೇ ಹಾಳುಗೆಡವಿದ ಘಟನೆಯನ್ನು ನೆನೆಸಿಕೊಂಡು ಕ್ರಿಶ್, ವ್ಯಥೆಪಟ್ಟರು.

೯. ಕರ್ನಲ್ ಹಿಲ್

"ಈ ಊರಿನ ಸೊಸೆಯಾಗಿ, ಇಲ್ಲಿಯ ಇತಿಹಾಸ ಪ್ರಸಿದ್ಧ ಸ್ಮಾರಕವಾಗಿ ತಲೆ ಎತ್ತಿನಿಂತ 'ಕರ್ನಲ್ ಹಿಲ್' ಸ್ತಂಭವನ್ನು ಇನ್ನೂ ನೋಡಿಲ್ಲವೆಂದರೆ ಚರಿತ್ರೆ ಓದಿದಾಕೆಗೆ ಅವಮಾನ! ಅಲ್ಲಿ ಕರೆದುಕೊಂಡು ಹೋಗಿ!" ಬಂದಾಗಿನಿಂದ ಜೋ ದುಂಬಾಲು ಬಿದ್ದಿದ್ದಳು. ತನ್ನೂರಿನ ಇತಿಹಾಸದಲ್ಲಿ ಅಷ್ಟೊಂದು ಆಸಕ್ತಿ ವಹಿಸಿದ ಕ್ರಿಶ್, ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. "ಬೇಡ! ಅದು ಮಹಿಳೆಯರು ಹೋಗಲೇ ಬಾರದ ಸ್ಥಳ!" ಎಂದು ತಮ್ಮ ನಿರ್ಧಾರ ತಿಳಿಸಿ ಬಿಟ್ಟರು. "ಈಗ ಇಪ್ಪತ್ತೊಂದನೆಯ ಶತಮಾನ ಪ್ರಾರಂಭವಾದರೂ ಲಿಂಗ ತಾರತಮ್ಯ ಮುಂದುವರಿದಿದೆ. ಈ ಚಿಕ್ಕ ಪರಿಚಿತ ಊರಿನಲ್ಲಿ ಸ್ತ್ರೀಯರು ಅಲ್ಲಿ ಹೋಗಕೂಡದು! ಇಲ್ಲಿ ಬರಕೂಡದು! ಎಂದರೆ ಸ್ತ್ರೀ ಸ್ವಾತಂತ್ರ್ಯವೆಂಬುದು ಕಲ್ಪನೆಯಾಗಿಯೇ ಮುಂದರಿದದ್ದು ಸ್ಪಷ್ಟವಾಗಿದೆ" ಎಂದ ಜೋ ಸಿಟ್ಟಾದಳು. "ನೀವು ಬಾರದಿದ್ದರೆ ಸರಿ, ರಸ್ತೆ ಹುಡುಕಿಕೊಂಡು ಹೋಗುವದು ಕಷ್ಟವಲ್ಲ!" ಎಂದು ಸೊಸೆಯನ್ನು ಎಬ್ಬಿಸಿಕೊಂಡು ಹೊರಟಳು. ಅವರನ್ನು ಕರೆದೊಯ್ಯಲು ಕಾರು ಸಿದ್ಧವಾಗಿಯೇ ಇತ್ತು. "ಅನುಭವದ ಮಾತು ಹೇಳುತ್ತಿದ್ದೇನೆ, ನೀನಾಗಿಯೇ ಮುಂದಾಗಿ ತಿಳಿದುಕೊಳ್ಳಬೇಕಿತ್ತು ಅಥವಾ ಊರ ಇತರರಿಂದ ಈ ವಿಚಾರದ ಬಗ್ಗೆ ಮಾಹಿತಿ ಪಡೆಯಬೇಕಿತ್ತು" ಎಂದು ಕ್ರಿಶ್ ಹೇಳುತ್ತಿದ್ದಂತೆ ಕಾರು ಗೇಟನ್ನು ದಾಟಿ ಹೋಗಿತ್ತು.

ಒಂದು ಗಂಟೆಯ ಬಳಿಕ ಅತ್ತೆ-ಸೊಸೆ ಕಳೆಗುಂದಿದವರಾಗಿ ಹಿಂದಿರುಗಿದರು. ಉಸ್ಸೆಂದು ಕುಕ್ಕರಿಸಿ ನೀರು ಕುಡಿದು ಸುಧಾರಿಸಿಕೊಂಡ ಬಳಿಕ "ನೀವು ಹೇಳಿದ ಮಾತಿಗೆ ಬೆಲೆ ಕೊಡಬೇಕಿತ್ತು. ಕಾರಿನಿಂದ ಇಳಿದು ಮೆಟ್ಟಿಲ ಮೂಲಕ ಇಬ್ಬರೂ ಬೆಟ್ಟ ಹತ್ತಲಾರಂಭಿಸಿದೆವು. ವಸತಿ ಇದ್ದಂತೆ ಕಂಡು ಬಂದರೂ ಜನ ಓಡಾಡುತ್ತಿಲ್ಲವಲ್ಲ! ಎಂದು ವಿಸ್ಮಯದಿಂದ ಮುಂದುವರಿಯುತ್ತಿದ್ದಂತೆ, ಎಲ್ಲಿಂದಲೊ ಠೊಣಪನೊಬ್ಬ ಪ್ರತ್ಯಕ್ಷನಾದ. ತೂರಾಡುತ್ತ ನಮ್ಮತ್ತಲೇ ಸಾಗಿ ಬಂದಾಗ ಜಂಘಾ ಬಲವೇ ಉಡುಗಿತು. ಏನೇನೋ ಮಾತನಾಡಲಾರಂಭಿಸಿದ ಆತನ ಕಡೆಗೆ ಗಮನ ಕೊಡದೇ ಮುಂದೆಯು ಹೋಗದೇ ಇಬ್ಬರೂ ಹಿಂದಿರುಗುವದೇ? ನಿರ್ಜನ ಮಾರ್ಗದಿಂದ ಮುಂದರಿಯುವದೇ? ಎಂದು ಯೋಚನೆಯಲ್ಲಿ ಬಿದ್ದೆವು. ಆತನ ಬಾಯಿಂದ ದೇಶೀ ಮದ್ಯದ ವಾಸನೆ ಹೊಮ್ಮುತ್ತಿತ್ತು. ಆತನೇ ರಸ್ತೆಯತ್ತ ನೋಡಿ ಚಾಲಕನನ್ನು, ಕಾರನ್ನು ಗುರುತಿಸಿದ. "ನೀವು ಕಾಮತ ಕುಟುಂಬದವರು ಇರಬೇಕು. ಗೌರವಸ್ಥರು ಬರುವ

ಜಾಗ ಇದಲ್ಲ! ಬಂದಂತೆ ಹಿಂದಿರುಗಿ ಹೋಗಿ! ಇಲ್ಲದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ!" ಎಂದು ತೊದಲಿದರೂ ಎಚ್ಚರಿಕೆ ನೀಡುವ ಧ್ವನಿಯಲ್ಲಿ ಹೇಳಿದ. ದುಸರಾ ಮಾತಿಲ್ಲದೇ ನಾವು ಹಿಂದಿರುಗಿ ಬಂದೆವು. ಅವಮಾನ ಆಘಾತಗಳಿಂದ ಜೋ ಕಣ್ಣು ಹನಿಗೂಡಿದ್ದವು.

ಮನೆಗೆ ಬಂದು 'ಕರ್ನಲ್ ಹಿಲ್' ಸಾಹಸ ಯಾತ್ರೆಯ ಬಗ್ಗೆ ತಿಳಿದುಕೊಂಡ ತುಳುಸು, ಸಾಂತ್ವನ ನೀಡುವ ಧ್ವನಿಯಲ್ಲಿ ಅಲ್ಲಿಯ ಪರಿಸ್ಥಿತಿಯ ಪರಿಚಯ ನೀಡಲಾರಂಭಿಸಿದ. "ಹಿಂದೆ ನಮ್ಮೂರಿನ ಅಭಿಮಾನದ ಸಂಕೇತವಾಗಿದ್ದ ಈ ಸ್ಮಾರಕ ಇಂದು ಶಾಪವಾಗಿ ಪರಿಣಮಿಸಿದೆ, ಎಂದರೆ ನಂಬುವದೇ ಕಷ್ಟವಾಗಿದೆ. ಸರಕಾರಕ್ಕೆ ಸೇರಿದ ಭೂಮಿಯನ್ನು ಆಕ್ರಮಿಸಿಕೊಂಡ "ಬಡ" ಹಳ್ಳಿಗರಿಗೆಲ್ಲ ಖಾತಾ ಹಾಕಿಕೊಟ್ಟು ಸಕ್ರಮಗೊಳಿಸುವದಾಗಿ ಹಿಂದಿನ ಅತಿ "ಜನಪ್ರಿಯ" ಮುಖ್ಯಮಂತ್ರಿ ಒಬ್ಬರು, ಸಾರ್ವಜನಿಕವಾಗಿ ಘೋಷಿಸಿ ಎಲ್ಲ ಅಕ್ರಮಗಳಿಗೂ ಅವಕಾಶ ಕಲ್ಪಿಸಿದರಷ್ಟೆ? ಸಮಾಜ ದ್ರೋಹಿಗಳಿಗೆಲ್ಲ ಈ ಘೋಷಣೆ, ಕ್ರಮಗಳು, ಹುಡುಕಿಕೊಂಡು ಹೋದ ಬಳ್ಳಿಗಳೇ ಕಾಲಿಗೆ ಸಿಕ್ಕಿಕೊಂಡಂತೆ ಆಯಿತು. ಈಗ ಒಂದುವರೆ ಶತಮಾನದಿಂದ ಆ ಗುಡ್ಡದ ಪ್ರದೇಶದಲ್ಲಿ ರಸ್ತೆಯೇ ಇರಲಿಲ್ಲ. ಹೀಗಾಗಿ ಕೆಲ ಸಾಹಸಿಗಳನ್ನು ಬಿಟ್ಟರೆ ಇತರರಿಗೆ ಅಲ್ಲಿ ಹತ್ತಿಹೋಗುವದೇ ಕಷ್ಟದ ಕೆಲಸವಾಗಿತ್ತು. ಆದರೆ ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿ, ಈ ಇಕ್ಕಟ್ಟಾದ ಗುಡ್ಡದ ಪಕ್ಕದಲ್ಲೆ ಹಾದು ಹೋಗುವಂತೆ ರಚಿಸಿದ್ದರಿಂದ ಕಳ್ಳಕಾಕರ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತಾಗಿದೆ. ಅವರೆಲ್ಲ ರಾಜಕಾರಣಿಗಳು, ಅಧಿಕಾರಿಗಳು ಮುಂತಾದವರ ನೆರವು ಪಡೆದು, ಇಲ್ಲಿಯ ದೊಡ್ಡ ಭೂಪ್ರದೇಶವನ್ನೆಲ್ಲ ತಮ್ಮ ತಮ್ಮಲ್ಲಿ ಹಂಚಿಕೊಂಡು ಬಿಟ್ಟರು. ಸ್ವಂತ ಗುಡಿಸಲು, ಮನೆ, ಹಿತ್ತಲು ಬೇಕು! ಎಂದು ಕನಸುಕಾಣುವ ಜನಸಾಮಾನ್ಯರಲ್ಲಿ ಈ ಅತಿಕ್ರಮಣಕಾರರಿಂದ ಜಮೀನು ಕೊಂಡುಕೊಳ್ಳುವದರಲ್ಲಿ ಸ್ಪರ್ಧೆಯೇ ನಡೆಯಿತು. ಈ ಸೈಟುಗಳೋ! ಯೋಜನಾಬದ್ಧವಾಗಿರದೇ ಮನೆಗಳನ್ನೆಲ್ಲ ಯದ್ವಾತದ್ವಾ ಕಟ್ಟಿಕೊಂಡಿದ್ದಾರೆ. ಇದೊಂದು ನಮ್ಮೂರಿನ ಕೊಳಚೆ ಪ್ರದೇಶವಾಗಿ ರೂಪಗೊಂಡಿದೆ. ಓಡಾಡಲು ರಸ್ತೆಗಳು, ಕೊಳಚೆ ನೀರು ಹರಿದು ಹೋಗಲು ಗಟಾರುಗಳು, ಹಾಗೂ ನೀರನ್ನು ಪೂರೈಸಲು ಬಾವಿಗಳು ಇಲ್ಲದ್ದರಿಂದ ಅಲ್ಲಿ ಜೀವಿಸುವವರ ಬವಣೆಗಳಿಗೆ ಕೊನೆ ಮೊದಲಿಲ್ಲ. ಇದರ ಲಾಭ ಪಡೆದ 'ಸ್ಲಂ ಲಾರ್ಡ್' ಅಥವಾ ಗೂಂಡಾ ನಾಯಕರು ಅಲ್ಲಿಯ ಆಗು-ಹೋಗುಗಳನ್ನೆಲ್ಲ ತಮ್ಮ ಅಧೀನದಲ್ಲಿ ಇಟ್ಟುಕೊಂಡು, ಅವರನ್ನೆಲ್ಲ ನಿಯಂತ್ರಿಸುವ ಸ್ಪರ್ಧೆಗೆ ಇಳಿದಿದ್ದಾರೆ. ಇಲ್ಲಿ ಕಳ್ಳಸರೆ ವ್ಯಾಪಾರ, ಜೂಜಾಟ, ವೇಶ್ಯಾವೃತ್ತಿಗಳನ್ನೆಲ್ಲ ನಡೆಸಲು ಅವಕಾಶ ಮಾಡಿಕೊಟ್ಟು ತಾವು ಧನಿಕರಾಗುತ್ತಿದ್ದಾರೆ. ಇದನ್ನೆಲ್ಲ ಗಮನಿಸಿದ ವಿದ್ಯಾವಂತರು, ಕಾನೂನು ಪಾಲಕರು, ಸ್ವಾಭಿಮಾನಿಗಳು ಅಲ್ಲಿ ಸುಳಿಯುವ ಸಾಹಸ ಮಾಡುವದಿಲ್ಲ" ತುಳಸು ವಿವರಿಸಿದ.

"ಇದನ್ನೆಲ್ಲ ಮೊದಲೇ ಏಕೆ ಹೇಳಲಿಲ್ಲ?" ಜೋ ಪ್ರಶ್ನೆ. "ಆಗ ನೀವು ಕೇಳಿಸಿಕೊಳ್ಳಲು ಸಿದ್ಧರಿದ್ದಿರಾ? ಅಣ್ಣ ಹಾಗೇಕೆ ಹೇಳಿದರೆಂದು, ಅವರಿಂದಲೇ ಕೇಳಿ ತಿಳಿದುಕೊಳ್ಳುವ ತಾಳ್ಮೆ ತೋರಿದ್ದರೆ, ನೀವಿಬ್ಬರೂ ಹೊರಡುತ್ತಲೇ ಇರಲಿಲ್ಲ. ಇದು ಕೆಲದಿನಗಳ ಹಿಂದಿನ ಮಾತು.

ಅಪರೂಪಕ್ಕೆ ಮುಂಬೈಯಿಂದ ಅತಿಥಿಗಳು ಬಂದಿದ್ದರು. ಅವರಲ್ಲಿ ಹಿರಿಯರು ತಮ್ಮ ಬಾಲ್ಯವನ್ನು ಹೊನ್ನಾವರದಲ್ಲಿ ಕಳೆದವರು. ಕರ್ನಲ್ ಹಿಲ್ ಸ್ತಂಭದ ದುರಸ್ತಿಗಾಗಿ ಹಿಂದೊಮ್ಮೆ ಕಟ್ಟಿದ ಬಿದಿರಿನ ಹಂದರವನ್ನೇ ಹತ್ತಿ ಮೇಲೇರಿ ಹೋಗಿನಿಂತ ಸ್ತಂಭದ ಮೇಲೆ ಸಾಹಸಿಗಳಲ್ಲಿ ಒಬ್ಬರಾಗಿದ್ದರು. ಅಂತೆಯೇ ತಮ್ಮ ಬಾಲ್ಯಸಾಹಸದ ತಾಣವನ್ನು ಕುಟುಂಬದವರಿಗೆಲ್ಲ ತೋರಿಸುವ ಹಂಬಲದಿಂದ, ಕರೆದೊಯ್ದರು. ಅಲ್ಲಿ ಹೋಗುವದು ಕ್ಷೇಮಕರವಲ್ಲ, ಎಂದು ನಾವು ಹೇಳಿದರೂ ಒಪ್ಪಲಿಲ್ಲ, ಪುಂಡರಿರಬಹುದು, ನಮ್ಮಂಥ ಬಡ, ಸಜ್ಜನರಿಗೇನು ಮಾಡುತ್ತಾರೆ? ಎಂದು ಮತ್ತೆ ಮತ್ತೆ ಪಲ್ಲವಿ ಹಾಡಿದರು. ಅನುಭವಿಸಲಿ! ಎಂದು ತೆಪ್ಪಗಿದ್ದೆವು. ಆದರೆ ಒಂದು ಗಂಟೆಯೊಳಗೇ ಜೋಲುಮುಖ ಹಾಕಿಕೊಂಡು ಬಂದರು. ಏನೋ ಅನಾಹುತ ನಡೆದಿದೆ! ಎಂಬುದು ಖಾತ್ರಿಯಾಯಿತು. ಸ್ವಲ್ಪ ಹೊತ್ತಿನಲ್ಲಿ ಸುಧಾರಿಸಿಕೊಂಡ ಹಿರಿಯರು, “ನಿಮ್ಮ ಸೂಚನೆಯನ್ನು ಗಮನಿಸದೇ ಮೋಸ ಹೋದೆವು. ಹಾಗೂ ಹೀಗೂ ಭವ್ಯ ಸ್ತಂಭದ ಅಡಿ ಸೇರಿದ್ದೆವು. ಅಲ್ಲಿ ನಾಲ್ವರು ಕುಡುಕರ ಪಾರ್ಟಿ ನಡೆದಿತ್ತು. ಇಬ್ಬರು ಕುಡಿದು ಕುಸ್ತಿಗೆ ಇಳಿದು ಇನ್ನೇನು ಕೈಯಲ್ಲಿದ್ದ ಬಾಟ್ಲಿಯಿಂದ ಚಚ್ಚಿಕೊಳ್ಳಬೇಕೆಂದಾಗ ಅವರಿಗೆ ಬುದ್ಧಿಹೇಳಿ ಬಿಡಿಸಲು ಹವಣಿಸಿದೆ. ನನ್ನ ಮೇಲೆಯೇ ಎರಗಿದರು. ನನ್ನ ಮಗಳು ಸಹಾಯಕ್ಕೆ ಬಂದಾಗ, ಇನ್ನಿಬ್ಬರು ಅವಳನ್ನು ಎಳೆದುಕೊಂಡು ತಮ್ಮ ಕೇರಿಯತ್ತ ಹೊರಟರು. ನಾವಿಬ್ಬರೂ ಹೆಂಡತಿಯೂ ಬೊಬ್ಬೆ ಹಾಕದೇ ನಿರ್ವಾಹವೇ ಇರಲಿಲ್ಲ. ಅಕ್ಕ-ಪಕ್ಕದ ನಿವಾಸಿಗಳು ಓಡಿ ಬರುವದರೊಳಗಾಗಿ ಮಗಳ ಚೂಡಿದಾರ-ಕಮೀಜ್ ಹರಿದು ಹಾಕಿದ್ದರು-ಕುಡುಕರು.... ಓಡಿಬಂದವರಲ್ಲಿ ಒಬ್ಬಾತ ನಮ್ಮ ನಿಮ್ಮ ಪರಿಚಯ ಹೇಳಿದೊಡನೆ, ಇನ್ನಿಬ್ಬರ ಸಂರಕ್ಷಣೆಯಲ್ಲಿ ಮುಖ್ಯ ಬೀದಿಯವರೆಗೆ ಕಳಿಸಿ, ಸಾಂತ್ವನ ಹೇಳಿ ಹೋದ! ಎಂದು ನಿಟ್ಟುಸಿರು ಬಿಟ್ಟಿದ್ದರು” ತುಳಸು, ಉಸುರಿದ.

“ನಾವು ಕಾಮತ ಕುಟುಂಬದವರಲ್ಲದಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತೊ?” ಕಿಮ್ ಧೇನಿಸಿದಳು.

“ನೀವಿಬ್ಬರೂ ಸಾಕಷ್ಟು ಮೇಲಕ್ಕೆ ಹೋಗದೇ ಇದ್ದದ್ದು, ಮತ್ತು ಯಾರು? ಎಂದು ತಿಳಿದುಕೊಳ್ಳುವಷ್ಟು ಮೈಯೆಚ್ಚರ ಆ ಕುಡುಕನಿಗಿದ್ದದ್ದು, ಸುದೈವ! ಹಣ, ಹೆಂಡ, ಹೆಣ್ಣಿಗಾಗಿ ಸದಾ ಅಲ್ಲಿ ಹೊಡೆದಾಟ, ಬಡಿದಾಟಗಳು ನಡೆದೇ ಇರುತ್ತವೆ. ಒಂದೆರಡು ಕೊಲೆಗಳೂ ನಡೆದಿವೆ. ಪೈಲವಾನನೊಬ್ಬನು ಅಲ್ಲಿ ದರ್ಪದಿಂದ ಜೀವಿಸುತ್ತಿದ್ದ. ಅಲ್ಲಿಯ ದಾದಾನಿಗೂ ಇವನಿಗೂ ಹೆಣ್ಣಿಗೆ ಸಂಬಂಧಿಸಿದ ವೈರ ತಲೆದೋರಿ, ಹಗಲು ಹಾಡೇ ಅವನ ಕೊಲೆ ಆಯಿತು. ಇದರಲ್ಲಿ ಯಾರ ಯಾರ ಕೈವಾಡವಿದೆ? ಎಂದು ಊರವರಿಗೆಲ್ಲ ಗೊತ್ತು. ಆದರೆ ಬಾಯಿಬಿಡುವ ಎದೆಗಾರಿಕೆ ಒಬ್ಬರಲ್ಲೂ ಇಲ್ಲ. ಪೊಲೀಸರಿಗೆ ಅಲ್ಲಿಯ ನಿವಾಸಿಗಳ ‘ಹಪ್ತಾ’ ನಿಯಮಿತವಾಗಿ ಸಲ್ಲುತ್ತ ಇದ್ದುದರಿಂದ ಅವರು ಕಣ್ಣಿದ್ದೂ ಕುರುಡರು. ಉಚ್ಚ ಅಧಿಕಾರಿಗಳು ತಗಾದೆ ಮಾಡಿದರೆ, ಆರೋಪ ಇಲ್ಲದೆಡೆಯಲ್ಲಿ ಬಹಳಷ್ಟು ಹುಡುಕಾಡಿದಂತೆ ಮಾಡಿ, ಅಸಹಾಯಕತೆಯನ್ನು ವರದಿಸುತ್ತಾರೆ. ಕೊಲೆಗಡುಕನಿಗೆ ರಾಜಕಾರಣಿಗಳ ಅಭಯಹಸ್ತ

ಲಭಿಸಿರುತ್ತದೆ. ಎದೆಯಲ್ಲಿ ನೀರಿದ್ದರೆ ನನ್ನತ್ತ ಬನ್ನಿ! ಎಂದು ಆರಕ್ಷಕರಿಗೆ ಸವಾಲು ಒಡ್ಡಿ ನಿಶ್ಚಿಂತೆಯಿಂದ ಊರೆಲ್ಲ ಅಲೆಯುತ್ತಾನೆ. ನಾವೆಲ್ಲ 'ಹೌದಪ್ಪ ನೀನೊಬ್ಬ ಯುಗಪುರುಷ. ದುಷ್ಟ ಜನ ಪಾಲಕ! ಶಿಷ್ಟ ಸಂಹಾರಕ' ಎಂದು ನಮ್ಮಷ್ಟಕ್ಕೆ ಅಂದುಕೊಂಡು ಸುಮ್ಮನಾಗುತ್ತೇವೆ" ಕರ್ನಲ್ ಹಿಲ್ ಪರಿಸರದ ಕೃತ್ಯಗಳ ಕುರಿತು ತುಳಸು, ಪರಿಚಯಿಸಿದ.

"ಹೊನ್ನಿನಂತಿದ್ದ ನಮ್ಮ ಊರು ಹೇಗೆ ಹಾಳಾಗಿಹೋಯಿತು!" ಎಂದು ಕ್ರಿಶ್ ನೊಂದುಕೊಂಡರು. ಮತ್ತೆ ಅವರ ನೆನಪು ತನ್ನ ಬಾಲ್ಯದಿನಗಳತ್ತ ಸರಿಯಿತು. "ನಮ್ಮೂರು ಪರಶುರಾಮ ಭೂಮಿಯ ಅವಿಭಾಜ್ಯ ಅಂಗ. ಹೀಗಾಗಿ ಪರಶುರಾಮ ಆಶೀರ್ವದಿಸಿದ ನಾಲ್ಕು ದಿಕ್‌ಪಾಲಕರು ಸದಾ ಅದರ ರಕ್ಷಣೆಗೆ ಸಿದ್ಧರಾಗಿಯೇ ಇರುತ್ತಿದ್ದರೆಂದು ನಂಬಿಕೆಯಿತ್ತು. ಪೂರ್ವಕ್ಕೆ ತಲೆ ಎತ್ತಿ ನಿಂತಿರುವ, ಪೌರುಷ ಸಾರುವ ಸೈಹ್ಯಾದ್ರಿ ಶಿಖರಗಳು. ಪಶ್ಚಿಮಕ್ಕೆ ಅವಿಶ್ರಾಂತವಾಗಿ ಅಬ್ಬರಿಸುತ್ತಲೇ ಇರುವ ಸಮುದ್ರ ರಾಜ. ದಕ್ಷಿಣಕ್ಕೆ ಸದಾ ಕಾಲ ಉಕ್ಕಿ ಹರಿಯುವ ಶರಾವತಿ ನದಿ ಇದ್ದರೆ, ಉತ್ತರಕ್ಕೆ ಗಗನವನ್ನೇ ಮಾರು ಹಾಕಿ ಅಳೆಯ ಹೊರಟಿದೆಯೇ? ಎಂದು ಭಾಸವಾಗುವ ಭವ್ಯ ಕರ್ನಲ್ ಹಿಲ್ ಸ್ತಂಭ ನಿಂತಿದೆ! ಎಂದು ನಾವೆಲ್ಲ ಹೆಮ್ಮೆ ಪಡುತ್ತಿದ್ದೆವು. ಬೆಟ್ಟ ಹತ್ತಿ ಈ ಕಂಬವನ್ನು ಮುಟ್ಟುವ ಕನಸು, ಅನೇಕ ವರ್ಷಗಳದ್ದು ಇದ್ದರೂ ಕಲ್ಲು-ಮುಳ್ಳುಗಳಿರುವ ಎತ್ತರದ ಪ್ರದೇಶ ತಲುಪುವದು ಸುಲಭವಾಗಿರಲಿಲ್ಲ. ಒಂದು ವರ್ಷ ಬೇಸಿಗೆಯಲ್ಲಿ ಈ ಸ್ತಂಭದ ದುರುಸ್ತಿ ಮಾಡಿ ಸುಣ್ಣ ಬಳೆಯುವ ಕೆಲಸ ಪ್ರಾರಂಭವಾದ್ದರಿಂದ ಕೆಲಸದಾಳುಗಳು ತುಳಿದ ದಾರಿಯಲ್ಲೆ ಹೊರಟೆ. ಬರಿಗಾಲು. ಒಂದು ಬಂಡೆಯಿಂದ ಇನ್ನೊಂದಕ್ಕೆ ಜಿಗಿದು, ಮುಳ್ಳು ಚುಚ್ಚಿ ರಕ್ತ ಬಂದಾಗ, ನಿಧಾನವಾಗಿ ಮುಳ್ಳನ್ನು ಕಿತ್ತೊಗೆದು, ಕೊನೆಗೊಮ್ಮೆ ಅಲ್ಲಿ ತಲುಪಿದಾಗ ಕೈಲಾಸ ಶಿಖರವೇರಿದ ಮಹದಾನಂದ ನನ್ನದಾಗಿತ್ತು.

"ಆಗ ಅದರ ಫೋಟೊ ಕ್ಲಿಕ್ಕಿಸಿದೆಯೇನಪ್ಪ?" ಮಗನು ಕೆಣಕಿದ. "ಅಂದಿನ ದಿನಗಳಲ್ಲಿ ಇಂಥ ಒಂದು ಸಾಧ್ಯತೆ ಇದೆ! ಎಂದು ಕೂಡಾ ಕಲ್ಪನೆಯಿರಲಿಲ್ಲ. ಆದರೆ ಹಿಂದಿರುಗಿದ ಮೇಲೆ ನಾನು ಕಂಡಿದ್ದನ್ನು ಚಿತ್ರದಲ್ಲಿ ರೂಪಿಸಿಡಲು ಮರೆಯಲಿಲ್ಲ. ಆ ಚಿತ್ರ, ಈಗಲೂ ನನ್ನ ಸಂಗ್ರಹದಲ್ಲಿ ಇದೆ! ಕಂಬದ ಎಲ್ಲ ವಿವರಗಳನ್ನು ನೋಡಿ ಗುರುತು ಹಾಕಿಕೊಂಡಿದ್ದೆ....

"ಈಗ ನಮಗೆ, ಸ್ತಂಭವನ್ನು ನೋಡಲು ಸಾಧ್ಯವಾಗದಿದ್ದವರಿಗೆ-ನೆನಪಿನಿಂದ ಹೇಳಬಹುದಲ್ಲ?" ಕಿಮ್ ಯಾಚಿಸಿದಳು.

"ಓಹೋ! ಅದೇ ಆಗ ಇಂಗ್ಲಿಷ್ ಶಾಲೆಗೆ ಸೇರಿದ್ದೆ. ಆದ್ದರಿಂದ 'ಹಿಲ್' ಎಂದರೆ 'ಗುಡ್ಡ' ಎಂದು ಅರಿತಿದ್ದೆ. ಆದರೆ ಈ ಹೆಸರು ಗುಡ್ಡದಿಂದ ಬಂದದ್ದು ಅಲ್ಲ, ಕರ್ನಲ್ ಕ್ಲೆಮೆಂಟ್‌ನ ಕುಟುಂಬದ ಅಡ್ಡ ಹೆಸರು (Sur name) ಎಂದು ನಂತರ ತಿಳಿಯಿತು. ಸ್ತಂಭದ ಎತ್ತರ, ಮೂವತ್ತು ಮೀಟರಗಳಷ್ಟು ಇದೆ. ಚಚ್ಚೌಕವಾದ ನೆಲೆಗಟ್ಟಿನ ಮೇಲೆ ವರ್ತುಲಾಕಾರವಾದ ಸ್ತಂಭವನ್ನು ಜೋಡಿಸಲಾಗಿದೆ. ತುತ್ತತುದಿಯಲ್ಲಿ ಕಿರೀಟಿನ ಆಕಾರ. ಉಕ್ಕು, ಸಿಮೆಂಟ್‌ಗಳನ್ನು ಒಂದಿಷ್ಟೂ ಬಳಸದೇ ಸ್ಥಾನೀಯವಾಗಿ ಲಭ್ಯವಿದ್ದ ಕಲ್ಲು, ಗೊಜ್ಜು, ಸುಣ್ಣಗಳಿಂದ ತಯಾರಿಸಿದ

ಗಚ್ಚನ್ನೇ ಉಪಯೋಗಿಸಿದ್ದಾರೆ. ಇಷ್ಟಾದರೂ ಕಳೆದ ಒಂದೂವರೆ ಶತಮಾನಕ್ಕೂ ಮಿಕ್ಕಿ ನಮ್ಮೂರಿನ ಧ್ವಜಸ್ತಂಭದಂತೆ ನಿಂತಿದೆ. ಇದು ವೀರನೊಬ್ಬನಿಗೆ ನಿಲ್ಲಿಸಿದ ಸ್ಮಾರಕವಾದ್ದರಿಂದ ಭಾವೀ ಪೀಳಿಗೆಯವರಿಗೆ ಅದು ಗೊತ್ತಾಗಲಿ! ಎಂದು ಅಲ್ಲಿ ಇಂಗ್ಲಿಷ್‌ನಲ್ಲಿ ಫಲಕವೊಂದನ್ನು ಜೋಡಿಸಲಾಗಿದೆ. ಅದರ ಒಕ್ಕಣಿಕೆ ಹೀಗಿದೆ."

'ಈ ಸ್ತಂಭವನ್ನು ಕರ್ನಲ್ ಕ್ಲೆಮೆಂಟ್ ಹಿಲ್ ಇವರ ಸ್ಮರಣಾರ್ಥ ನಿಲ್ಲಿಸಲಾಗಿದೆ. ಅವರನ್ನು ಮೈಸೂರು ಡಿವಿಜನ್ ಪರವಾಗಿ ನಡೆದ ಕದನದಲ್ಲಿ ಪಾಲ್ಗೊಳ್ಳಲು ಸೈನ್ಯದ ತುಕಡಿಯೊಂದಿಗೆ, ಅರವತ್ತು ಕಿಲೋಮೀಟರ್ ದೂರದ ಗೇರುಸೊಪ್ಪೆಗೆ ಕಳಿಸಲಾಗಿತ್ತು. ಆದರೆ ದುರ್ದೈವದಿಂದ ಕರ್ನಲ್, ರಣರಂಗದಲ್ಲಿ ಮಡಿದರು. ಅವರ ಕಳೇಬರವನ್ನು ಹೊನ್ನಾವರಕ್ಕೆ ತಂದು ೨೦-೧-೧೮೪೫ ರಂದು ಅಂತಿಮ ಸಂಸ್ಕಾರ ನಡೆಸಲಾಯಿತು. ಈಸ್ಟ್ ಇಂಡಿಯಾ ಕಂಪನಿಯ ಆದೇಶದ ಮೇರೆಗೆ 'ಮದ್ರಾಸ್ ನೇಟಿವ್ ಇನ್‌ಫಂಟ್ರಿ' ಘಟಕವು ಮೃತರ ಸೇವೆಯ ಗೌರವಾರ್ಥವಾಗಿ ಈ ಸ್ಮಾರಕ ಸ್ತಂಭವನ್ನು ನಿರ್ಮಿಸಿತು.'

"ಅವರ ಜ್ಞಾಪಕಾರ್ಥ ಪುತ್ಥಳಿಯನ್ನು ನಿರ್ಮಿಸಿದ್ದರೆ ಆಗುತ್ತಿರಲಿಲ್ಲವೇ?" ಇತಿಹಾಸಕ್ಕೆ ಜೋ ರಾಗವೆಳೆದಳು.

"ಬೆಂಗಳೂರಿನ ಟ್ರಿನಿಟಿ ಚರ್ಚ್‌ದಲ್ಲಿ ಕರ್ನಲ್ ಕ್ಲೆಮೆಂಟ್ ಹಿಲ್‌ರ ಪುತ್ಥಳಿ ಇದೆ. ಇಲ್ಲಿರುವದು ಅವರ ಸ್ಮಾರಕ. ಬ್ರಿಟಿಶ್ ಸರಕಾರವು ಹೊನ್ನಾವರ ಸೇರಿದ ಉತ್ತರ ಕನ್ನಡ ಜಿಲ್ಲೆಯನ್ನು ಒಳಗೊಂಡ ಮುಂಬೈ ಪ್ರಾಂತದ ಆಡಳಿತವನ್ನು ವಹಿಸಿಕೊಂಡ ಮೇಲೆ, ಈ ಸ್ಮಾರಕವನ್ನು ಕಡೆಗಣಿಸಲಿಲ್ಲ. ಮೂರು ವರ್ಷಕ್ಕೊಮ್ಮೆ ಅದರ ಸಣ್ಣಪುಟ್ಟ ದುರುಸ್ತಿಮಾಡಿ, ಸುಣ್ಣ ಬಳಿಯಲು ಹಣಕಾಸು ಪೂರೈಸುತ್ತಿತ್ತು. ಆಗ ಗುತ್ತಿಗೆದಾರರು ಕಂಬದ ಎತ್ತರಕ್ಕೂ ಬಿದಿರುಗಳನ್ನು ಜೋಡಿಸಿ ತಾತ್ಕಾಲಿಕ ಪಾವಟಿಗೆಗಳನ್ನು ರಚಿಸುತ್ತಿದ್ದರು. ಆಗ ಸಾಹಸಿಗಳಾದ ದೊಡ್ಡ ವಿದ್ಯಾರ್ಥಿಗಳು ಅವನ್ನು ಏರಿ ನಿಂತು ದೂರದೂರದ ಬಡಗಣಿ ಹೊಳೆ, ಕುಮಟಾ ನಗರದ ದರ್ಶನ ಪಡೆಯುತ್ತಿದ್ದರು. ಅಂತಹ ಐತಿಹಾಸಿಕ ಸ್ಥಳ ಈಗ ಪುಂಡ-ಪೋಕರಿಗಳ, ಕುಡುಕರ ವಾಸಸ್ಥಾನವಾಗಿರುವದು ನಮ್ಮೆಲ್ಲರ ದುರದೃಷ್ಟ!" ಕ್ರಿಶ್ ನೊಂದುಕೊಂಡು ಹೇಳಿದರು.

೧೦. ಹಿರೇಹಳ್ಳಿ

“ವಿಶ್ವದ ಬಹಳಷ್ಟು ದೇಶಗಳನ್ನು, ಊರುಗಳನ್ನು ಸುತ್ತಾಡಿ ಬಂದಿರುವಿರಿ! ನಿಮ್ಮೂರಿನ ಮೇಲೆಯೇ ನಿಮಗೆ ಇಷ್ಟೊಂದು ಮಮತೆ ಇರಬೇಕೆ? ಸ್ವಂತ ಊರು, ತಾಯಿಯಂತೆ ಅನ್ನುವದೇನೋ ನಿಜ. ಆದರೆ ಇತರ ಎಷ್ಟೋ ಊರುಗಳು ಚೆಲುವಿನಲ್ಲಿ ಮಿಗಿಲಿರಬಹುದಲ್ಲ?” ಜೋ ಪತಿಯನ್ನು ಚುಚ್ಚಿ ನುಡಿದಳು.

“ನಾನು ಭೇಟಿ ನೀಡಿದ ಎಷ್ಟೋ ದೇಶಗಳಿಗೆ ನೀನು ಹೋಗಿ ಬಂದಿದ್ದರೂ, ನೀನೂ ಇದೇ ಅಭಿಪ್ರಾಯವನ್ನು ತಳೆಯುತ್ತಿದ್ದಿ! ಎನ್ನುವದರಲ್ಲಿ ಸಂದೇಹವೇ ಇಲ್ಲ. ಬ್ರಹ್ಮದೇವ ಅತ್ಯಂತ ಪ್ರಫುಲ್ಲ ಮನಸ್ಥಿತಿಯಲ್ಲಿದ್ದಾಗ ನಮ್ಮೂರು ನಿರ್ಮಿಸಿರಬೇಕು! ಅಂತೆಯೇ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಅದ್ವಿತೀಯವೆಂದೇ ಅನಿಸಿಕೊಂಡಿದೆ. ಭೋರ್ಗರೆಯುತ್ತಿರುವ ಅರಬ್ಬಿ ಸಮುದ್ರ, ಹಿಟ್ಟು ಹಾಸಿದಂತಹ ಶುಭ್ರ ಮಳಲದಂಡೆ, ಸರೋವರವೆಂಬ ಭ್ರಮೆ ಹುಟ್ಟಿಸುವ ವಿಸ್ತಾರವಾದ ಶರಾವತಿ ನದಿ. ಗಾಳಿ ಬೀಸಿದಾಗೊಮ್ಮೆ ಸುಂಯ್‌ಗುಡುವ ಗಾಳಿ ಮರಗಳು, ಅತ್ಯಂತ ಕಲಾತ್ಮಕವಾಗಿ ಒಪ್ಪುವ ಆ ಮರಗಳ ತೋಪುಗಳು, ಸೊಕ್ಕಿನಿಂದ ಎತ್ತರವಾಗಿ ಬೆಳೆದು ನಿಂತ ತೆಂಗಿನಮರಗಳು, ತೊನೆದಾಡುತ್ತ ಗರಿಯ ಬೀಸಣಿಗೆ ಬೀಸುತ್ತಲೇ ಇರುವ ಅಡಿಕೆಮರಗಳು, ಊರ ರಕ್ಷಕರಂತೆ ಸದಾಕಾಲ ಕಾಯುತ್ತ ನಿಂತಿರುವ ಗುಡ್ಡಬೆಟ್ಟಗಳ ಸಾಲುಗಳು, ಇಷ್ಟು ಸಾಲದೆಂಬಂತೆ ಪ್ರಾಚೀನ ಗ್ರೀಕ್, ರೋಮನ್ ನಗರಗಳನ್ನು ನೆನಪಿಗೆ ತರುವಂತಹ ಊರಿನ ವಿಶಿಷ್ಟವಾದ ರಚನೆ... ‘ಟಪ್ಪರ್ ಹಾಲ್’, ಊರಿನ ಹೃದಯ ಸ್ಥಾನದಲ್ಲಿದೆ. ಅಲ್ಲಿಯೇ ಆರು ರಾಜಮಾರ್ಗಗಳು ಒಟ್ಟುಗೂಡುತ್ತವೆ. ಅಂತೆಯೇ ಅಲ್ಲಿಂದ ಕಾಲ್ನಡಿಗೆಯಲ್ಲಿ ಕೆಲವೇ ಗಂಟೆಗಳಲ್ಲಿ ಊರೆಲ್ಲವನ್ನು ಸುತ್ತಿ ಆನಂದಿಸಬಹುದು. ಊರಿನ ಹೆಗ್ಗುರುತುಗಳಾದ ಬಂದರು, ಕೆಳಗಿನ ಪಾಳ್ಯ, ರಾಮ ತೀರ್ಥಗಳನ್ನೆಲ್ಲ ಅಲ್ಪಾವಧಿಯಲ್ಲಿ ಇಲ್ಲಿಂದ ಸೇರಿಕೊಳ್ಳಬಹುದು!” ಎದೆ ಉಬ್ಬಿಸಿ ತಮ್ಮೂರ ಹಿರಿಮೆ ಕುರಿತು ಕಿರು ಭಾಷಣವೊಂದನ್ನೇ ಕ್ರಿಶ್ ಬಿಗಿದರು.

“ಅದಕ್ಕಿಂತ ಮುಖ್ಯವಾದದ್ದು ಎಂದರೆ ಈ ಊರಿಗೆ ಎರಡು ಸಹಸ್ರ ವರ್ಷಗಳ ಸುದೀರ್ಘ ಇತಿಹಾಸವಿದೆ! ಕಾಲ ಕಾಲಕ್ಕೆ ಈ ಊರಿಗೆ ಭೇಟಿಯಿತ್ತ ವಿದೇಶೀಯರು ತಮ್ಮ ನಾಲಿಗೆ ಒಡಿದಂತೆ ಅದರ ಹೆಸರನ್ನು ಉಚ್ಚರಿಸುವ ಸ್ವಾತಂತ್ರ್ಯವನ್ನು ಚಲಾಯಿಸಿದ್ದಾರೆ. ಉತ್ತರ

ಆಫ್ರಿಕೆಯ ಮೊರೊಕ್ಕೊದಿಂದ ಬಂದಿದ್ದ ಇಬ್ನ್-ಎ-ಬತೂತನು (ಕ್ರಿ.ಶ. ೧೩೦೪-೬೯) 'ಹಿನಾವ್ರ' ಎಂದು ಕರೆದರೆ, ಪರ್ಶಿಯದ ಪ್ರವಾಸಿ ಅಬ್ದುಲ್ ರಝಾಕ್ (ಕ್ರಿ.ಶ. ೧೪೧೩-೮೨) 'ಮನೋರ್' ಎಂದ. ಕ್ರಿ.ಶ. ೧೫೨೦ ರಲ್ಲಿ ವಿಜಯನಗರಕ್ಕೆ ಭೇಟಿಯಿತ್ತ ಪೋರ್ತುಗಾಲದ ಡುಮಿಂಗೊ ಪಾಎಸ್‌ನು 'ಹೊನೋರ್' ಎಂದು ಕರೆದರೆ, ಕ್ರಿ.ಶ. ೧೫೮೪ರಲ್ಲಿ ಗೋವೆಯ ವೈಸ್‌ರಾಯ್ ಆಗಿ ಬಂದ ಪೋರ್ತುಗೀಜ ಪ್ರಜೆ ಡಾ. ಡು. ಆರ್ತೆ-ಮೆನೆಝುಸ್ ಎಂಬಾತ 'ಒನೇರ್' ಎಂದಿದ್ದಾನೆ. ಜರ್ಮನಿಯಲ್ಲಿ ಹೆಚ್ಚು ಕಡಿಮೆ ಇದೇ ಹೆಸರಿನ ಅಂದರೆ 'ಹ್ಯಾನೋವರ್' ಎಂಬ ಪ್ರಸಿದ್ಧ ಐತಿಹಾಸಿಕ ನಗರವಿದೆ. ಅಲ್ಲಿಯ ಉತ್ಪಾದನಾ ಮೇಳ ಜಗತ್ ಪ್ರಸಿದ್ಧವಿದೆ.... ಹೊನ್ನಾವರ ಶಬ್ದದ ಉತ್ಪತ್ತಿಯ ಕುರಿತು ವಾದ-ವಿವಾದಗಳು ಇದ್ದೇ ಇವೆ. ಹೊನ್ನಮ್ಮರಾಣಿಯ ಗೌರವಾರ್ಥ ಕಟ್ಟಿದ ಪಟ್ಟಣ ಎಂದು ಕೆಲವರೆಂದರೆ, ವಿದೇಶದೊಂದಿಗೆ ಹೊನ್ನಿನ ವ್ಯಾಪಾರ ಮಾಡುತ್ತಿದ್ದ ಊರು ಆದ್ದರಿಂದ ಈ ನಾಮ ವಿಶೇಷ! ಎಂದು ವಾದಿಸುತ್ತಾರೆ. ಇಲ್ಲಿಯ ಆಳರಸರ ಆಸ್ಥಾನ ಕವಿಗಳು, ಶಾಸನಗಳನ್ನು ಬರೆಯುವಾಗ ಸಂಸ್ಕೃತ ವ್ಯಾಮೋಹದಿಂದ 'ಸುವರ್ಣಪುರ'ವೆಂದು ಪರಿವರ್ತಿಸಿದರು. ಪುಣ್ಯಕ್ಕೆ ಜನಸಾಮಾನ್ಯರೆಲ್ಲ ಕನ್ನಡ ಹೆಸರಿಗೇ ಅಂಟಿಕೊಂಡಿದ್ದಾರೆ!" ಜೋ ಇತಿಹಾಸದ ಸ್ಮರಣ ಸಂಪುಟವನ್ನು ತಿರುವಿ ಹಾಕಿದಳು.

"ಇಷ್ಟೆಲ್ಲ ವಿದೇಶೀಯರು 'ಹಿರೇಹಳ್ಳಿ' ಯಂತಿದ್ದ ನನ್ನೂರಿಗೆ ಭೇಟಿ ಕೊಡಲು ಕಾರಣವೇನಿರಬಹುದು ? ನನಗೆ ತುಂಬ ಇಷ್ಟವಾದ ನಿಸರ್ಗಸಿರಿ ಇರಲಿಕ್ಕಿಲ್ಲ" ಕುತೂಹಲದಿಂದ ಕ್ರಿಸ್, ಕೇಳಿದರು. "ಆಗ ಅದು ಹಳ್ಳಿಯಾಗಿರಲಿಲ್ಲ. ಅಂತರಾಷ್ಟ್ರೀಯ ಬಂದರವಾಗಿತ್ತು! ಕವಿ ಬಿಲ್ಹಣ, ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ಆಸ್ಥಾನ ಸೇರಲು, ಗುಜರಾಥದಿಂದ ನೇರ ಹೊನ್ನಾವರಕ್ಕೆ ಬಂದಿಳಿದನಂತೆ! ಇಬ್ನ್-ಎಬತೂತ ೧೩೪೬ರಲ್ಲಿ ಹೊನ್ನಾವರಕ್ಕೆ ಭೇಟಿ ಇತ್ತಾಗ ಇಲ್ಲಿ ಬಹು ಸಂಖ್ಯಾತ ಮುಸಲ್ಮಾನರಿದ್ದರು. ಶಾಂತಿಯುತ ಧಾರ್ಮಿಕ ನಡೆ ನುಡಿಯ ನಾಗರಿಕರಾಗಿದ್ದರು. ಅವರ ಹೆಂಗಳೆಯರು ಬುರ್ಖಾ ಧರಿಸುತ್ತಿರಲಿಲ್ಲ! ಏಕೆಂದರೆ ಅವರೆಲ್ಲ ಸುಂದರಿಯರು, ಮೂಗಿನಲ್ಲಿ ಬುಲಾಕು ಧರಿಸುತ್ತಾರೆ, ಶಾಲೆಗಳಿಗೆ ಹೋಗುತ್ತಾರೆ, ಎಂದೆಲ್ಲ ಪ್ರತ್ಯಕ್ಷ ವರದಿಬರೆದಿಟ್ಟಿದ್ದಾನೆ. ಆತ ಕಂಡ ಹೊನ್ನಾವರದಲ್ಲಿ (ಮುಸ್ಲಿಂ) ಗಂಡುಮಕ್ಕಳಿಗೆ ೨೩ ಹಾಗೂ ಹೆಣ್ಣುಮಕ್ಕಳಿಗೆ ೧೩ ಶಾಲೆಗಳಿದ್ದು, ಇಂಥ ಶಾಲೆಗಳನ್ನು ತಾನೆಲ್ಲೂ ಕಂಡಿರಲಿಲ್ಲವೆಂದು ಆತ ಉದ್ಗರಿಸಿದ್ದಾನೆ. ಇಷ್ಟೊಂದು ಶಾಲೆಗಳಿರುವ ಊರು ಬಲು ದೊಡ್ಡದೇ ಇರಬೇಕು! ಈ ಊರಿನ ಅಧಿಪತಿ ಜಮಾಲ್‌ಉದ್ದೀನ ಮಹ್ಮದ್‌ನು ಹರಿಯಪ್ಪನೆಂಬ ಹಿಂದೂ ಅರಸನ ಮಾಂಡಲಿಕನಾಗಿದ್ದನು. ಆತನ ಬಳಿ ಧೈರ್ಯ ಸಾಹಸಗಳಿಗೆ ಹೆಸರಾದ ಆರು ಸಹಸ್ರ ಮಲಬಾರಿ ಸೈನಿಕರಿದ್ದರು. ಆದರೆ ನಂತರದ ವರ್ಷಗಳಲ್ಲಿ ಬಹಮನೀ ಸೇನಾಧಿಪತಿಯಿಂದ ಸೋಲು ಅನುಭವಿಸಬೇಕಾಯಿತು. ನಂತರ ಬಂದ ಅರಸನು ದುರ್ಬಲನಾಗಿದ್ದು ಪೋರ್ಚುಗೀಸರಿಗೆ ಹತ್ತಿರದವನಾದ. ಅವರಿಗೆ ಈ ಊರಿನಲ್ಲಿ ಫ್ಯಾಕ್ಟರಿ (ವಖಾರಿ) ಸ್ಥಾಪಿಸಲು ಅನುವು ಮಾಡಿಕೊಟ್ಟ. ಹೀಗಾಗಿ ಅವರು ಕ್ರಮೇಣ ಇಲ್ಲಿ ನೆಲೆಯೂರುತ್ತ ಆಯಕಟ್ಟಿನ ಸ್ಥಳದಲ್ಲಿ ಒಂದು ಕೋಟೆಯನ್ನು

೧೫೪೭ರಲ್ಲಿ ಕಟ್ಟಿಕೊಂಡರು. ನಂತರ ಸ್ಥಳೀಯರಿಗೆ ಹಿಂಸೆ ಕೊಡಲಾರಂಭಿಸಿದರು. ೧೫೬೭ರಲ್ಲಿ ಕಾಳಗ ನಡೆದು ಸೋತು ಹೋದರು. ಆದರೆ ತಮ್ಮ ಕೈಗೆ ಎಟುಕಿದ ಹಡಗುಗಳನ್ನು ಧ್ವಂಸಮಾಡಿ, ಊರನ್ನು ಸುಟ್ಟು ಬೂದಿಮಾಡಿದರು." ಜೋ, ಪುಂಡ ಪೋರ್ಚುಗೀಸರ ಆಡಳಿತ ವೈಖರಿಯ ಸ್ಥೂಲ ಪರಿಚಯ ನೀಡಿದಳು.

ಪೋರ್ಚುಗೀಸರ ಕೈ ಮೇಲಾಗಿದ್ದ ನಮ್ಮೂರಿನಲ್ಲಿ ಬ್ರಿಟಿಷರು ಬೇರು ಬಿಡಲು ಹೇಗೆ ಸಾಧ್ಯವಾಯಿತು? ಕ್ರಿಶ್ ಪ್ರಶ್ನಿಸಿದರು "ಇಬ್ಬರೂ ಇಲ್ಲಿ ಬರಲು ಕಾರಣ, ಕಾಳುಮೆಣಸಿನ ವ್ಯಾಪಾರ. ಈ ಸಂಭಾರವಸ್ತುವಿಗೆ ಯುರೋಪಿನಲ್ಲಿ ವಿಪರೀತ ಬೇಡಿಕೆ ಇತ್ತಷ್ಟೆ? ಪೋರ್ಚುಗೀಸರಂತೆ ಬ್ರಿಟಿಶರೂ ಸ್ಥಳೀಯ ಅರಸರೊಂದಿಗೆ ಒಪ್ಪಂದ ಮಾಡಿಕೊಂಡು ಪ್ರತಿವರ್ಷ ೨೧೦ ಟನ್ ಕರಿಮೆಣಸನ್ನು ಖರೀದಿಸಿ ಇಲ್ಲಿಂದಲೇ ನೇರ ತಮ್ಮ ದೇಶಕ್ಕೆ ರವಾನಿಸುವ ವ್ಯವಸ್ಥೆ ಮಾಡಿಕೊಂಡರು. ೧೭೨೭ರಲ್ಲಿ ಬ್ರಿಟಿಶರ ಫ್ಯಾಕ್ಟರಿಯೂ ಈ ಊರಿನಲ್ಲಿ ಪ್ರಾರಂಭವಾಯಿತು. ಮುಂದೆ ಅಂದರೆ ೧೭೬೩ರಲ್ಲಿ ಹೈದರಅಲಿ, ಈ ಊರನ್ನು ಗೆದ್ದುಕೊಂಡ. ಇದರ ಸರ್ವಋತು ಬಂದರದ ಮಹತ್ವವನ್ನು ಮನಗಂಡು ಸೈನ್ಯವಿಟ್ಟಿದ್ದ. ಹೀಗೆ ಹೊನ್ನಾವರ, ಅಕ್ಕಿ, ಮೆಣಸು ನಿರ್ಯಾತ, ಕುದುರೆಗಳು, ತೋಫುಗಳ ಆಯಾತದಿಂದಾಗಿ ಪ್ರಮುಖ ರೇವು ಪಟ್ಟಣವಾಗಿ ಅನೇಕ ಶತಮಾನಗಳ ಕಾಲ ಮೆರೆಯಿತು. ಆದರೆ ಮುಂದೆ ಟಿಪ್ಪುವು ತನಗೆ ಬ್ರಿಟಿಶರ ಕೈಯಲ್ಲಿ ಸೋಲು ಕಟ್ಟಿಟ್ಟದ್ದು! ಎಂದು ಮನವರಿಕೆ ಆಗಿದ್ದರಿಂದಲೋ ಏನೋ ಹೊನ್ನಾವರವನ್ನು ಸಂಪೂರ್ಣ ಸುಟ್ಟು ನೆಲಸಮ ಮಾಡಿದನು. ಕ್ರಿ.ಶ. ೧೭೯೯ರ ಶ್ರೀರಂಗಪಟ್ಟಣ ಯುದ್ಧದಲ್ಲಿ ಟಿಪ್ಪುಸುಲ್ತಾನನು ಕೊಲ್ಲಲ್ಪಟ್ಟ. ಇದಾದ ಕೆಲವೇ ಕಾಲದ ಬಳಿಕ ಇಲ್ಲಿ ಬಂದಿದ್ದ ಪ್ರವಾಸಿಯೊಬ್ಬ ಈ ಊರಿನಲ್ಲಿ ಕೇವಲ ಐದು ಅಂಗಡಿಗಳಿದ್ದವೆಂದು ಉಲ್ಲೇಖಿಸಿರುವ. ೧೮೦೧ರಲ್ಲಿ ಈ ಪ್ರದೇಶದಲ್ಲಿ ಸಂಚರಿಸಿದ ಬ್ರಿಟಿಶ್ ಪ್ರವಾಸಿ ಬುಕ್ಯಾನನ್, ಊರು ಬಿಟ್ಟು ಓಡಿ ಹೋಗಿದ್ದ ವ್ಯಾಪಾರಿಗಳು, ನಾಗರಿಕರು ಆಗಷ್ಟೆ ಹಿಂದಿರುಗಿ ಬಂದು ವ್ಯಾಪಾರ, ಉದ್ಯೋಗಗಳನ್ನು ಪ್ರಾರಂಭಿಸುತ್ತಿದ್ದುದನ್ನು ಗಮನಿಸಿದ್ದ. ಇಡೀ ಕ್ಯಾನರಾ ಅಂದರೆ ಈಗಿನ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೇರಿಯೇ ಹೊನ್ನಾವರವನ್ನು ಜಿಲ್ಲಾಮುಖ್ಯ ಕೇಂದ್ರವೆಂದು ಬ್ರಿಟಿಷರು ಸಾರಿದ್ದರಿಂದ ಕೋರ್ಟು, ಕಚೇರಿ, ಬಂದರು, ಜೈಲುಗಳು ಕಾಣಿಸಿಕೊಂಡವು. ಆದರೆ ತುಂಬ ದೊಡ್ಡದಾದ ಪ್ರದೇಶವಾಗಿ ಆಡಳಿತ ಹೆಚ್ಚು ಪರಿಣಾಮಕಾರಿ ಮಾಡುವ ಉದ್ದೇಶದಿಂದ ಕ್ರಿ.ಶ. ೧೮೬೫ ರಲ್ಲಿ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳೆಂದು ಇಬ್ಭಾಗ ಮಾಡಲಾಯಿತು. ದಕ್ಷಿಣ ಕನ್ನಡಕ್ಕೆ ಮಂಗಳೂರು ಮುಖ್ಯ ಸ್ಥಳಮಾಡಿ, ಮದ್ರಾಸ್ ಪ್ರಾಂತಕ್ಕೆ ಸೇರಿಸಿ, ಈ ಜಿಲ್ಲೆಯನ್ನು ಮುಂಬಯಿ ಪ್ರಾಂತಕ್ಕೆ ಸೇರಿಸಿ, ಕಾರವಾರವನ್ನು ಜಿಲ್ಲಾ ಮುಖ್ಯ ಪಟ್ಟಣವಾಗಿಸಿದರು. ಹೊನ್ನಾವರದ ಚಾರಿತ್ರಿಕ ಮಹತ್ವ ಆಗಲೇ ಕುಗ್ಗಿತು." ಜೋ ವಿವರಿಸಿದಳು.

ಕ್ರಿಶ್, ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತ ಹಿರೇಹಳ್ಳಿಯ ಚರಿತ್ರೆಗೆ ಹೆಚ್ಚಿನ ಇಂಬು ಇತ್ತರು. "ನನ್ನ ಚಿಕ್ಕಂದಿನಲ್ಲಿ ಈ ಊರಿನಲ್ಲಿ ಅನೇಕ ಐತಿಹಾಸಿಕ ಕುರುಹುಗಳು ಇದ್ದವು. ಊರಮಧ್ಯದ ಟಪ್ಪರ್ ಹಾಲ್ ಮಗ್ಗುಲಿಗೇ ಟಿಪ್ಪು ಸುಲ್ತಾನ್ ಕಟ್ಟಿಸಿದ್ದು ಎನ್ನಲಾದ ಭವ್ಯ

ಭವನ ಇತ್ತು. ಆಗಲೇ ಒಂದುವರೆ ಶತಮಾನದ ಕಾಲ, ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡಿ ನಿಂತಿದ್ದರಿಂದ 'ಭೂತಬಂಗಲೆ'ಯಾಗಿ ಮಾರ್ಪಟ್ಟಿತ್ತು. ಹಗಲಿನಲ್ಲಿ ಸಹ ಅಲ್ಲಿ ಹೋಗಲು ಜನ ಹೆದರುತ್ತಿದ್ದರು. ಹೋದ ಶತಮಾನದ ನಾಲವತ್ತರ ದಶಕದಲ್ಲಿ ಖ್ಯಾತ ಮಹಾರಾಷ್ಟ್ರದ ಸಂತ ಗಾಡಗೆ ಬುವಾ ಇಲ್ಲಿ ಬರಲಿದ್ದಾರೆ! ಎಂಬ ಸಮಾಚಾರದಿಂದ ಜನರಲ್ಲಿ ವಿದ್ಯುತ್ ಸಂಚಾರವಾಯಿತು. ಪಾಳು ಬಿದ್ದ ಬಂಗ್ಲೆಗೆ ಭವ್ಯವಾದ ಆವಾರವಿದ್ದು ಅವರ ಬೋಧನೆಗೆ ಅದೇ ಉತ್ತಮ ತಾಣವೆಂದು ನಿರ್ಧರಿಸಿ ಜನ ಕಾರ್ಯೋನ್ಮುಖಿಯಾದರು. ಆ ಕಟ್ಟಡದ ಒಂದೊಂದು ಕಲ್ಲು ಆರು ಆಳುಗಳು ಹೊರಲಾರದಷ್ಟು ಭಾರವಾಗಿದ್ದವು. ಅವುಗಳನ್ನೆಲ್ಲ ಸಾಗಿಸಿ ಭವ್ಯವಾದ ಚಪ್ಪರವನ್ನು ನಿಲ್ಲಿಸಿದರು. ಊರವರಿಂದ ಅಕ್ಕಿ, ಬೇಳೆ, ತೆಂಗಿನಕಾಯಿ, ಎಣ್ಣೆಗಳನ್ನು ಸಂಗ್ರಹಿಸಿ, ಸಾಮೂಹಿಕ ಭೋಜನಕೂಟವನ್ನು ಏರ್ಪಡಿಸಿದ್ದರು. ನಂತರ ಈ ಐತಿಹಾಸಿಕ ಸ್ಥಳ, ಬೇರೆ ಬೇರೆಯವರ ಒಡೆತನಕ್ಕೆ ಒಳಪಟ್ಟಿತು. ಈಗ ಕಟ್ಟಡದ ಯಾವ ಕುರುಹೂ ಉಳಿದಿಲ್ಲ. ಬ್ರಿಟಿಶ್ ಆಡಳಿತದ ಮೊದಲ ದಿನಗಳ ಜೈಲು, 'ಕಸಬಾ ಗಂಡು ಮಕ್ಕಳ ಶಾಲೆ'ಯಾಗಿ ಪರಿವರ್ತಿಸಲಾಯ್ತು. ನಾನು ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ್ದು ಅದೇ ಶಾಲೆಯಲ್ಲಿ! ಎತ್ತರವಾಗಿದ್ದ ಮೆಟ್ಟಿಲುಗಳು, ಭಾರೀ ಭಾರೀ ಸಲಾಕೆಗಳನ್ನು ಜೋಡಿಸಿದ ಕೊಠಡಿಗಳಿಂದಾಗಿ, ನಾವು ಜೈಲಿನಲ್ಲಿದ್ದೇವೆ! ಎಂದು ಸದಾಕಾಲ ಭಾಸವಾಗುತ್ತಿತ್ತು!" ತನ್ನ 'ಜೈಲು ಶಾಲೆ'ಯನ್ನು ಕ್ರಿಶ್ ನೆನಪಿಸಿಕೊಂಡರು.

"ನೀವು ಕಂಡರಿತ ಇನ್ನಾವ ಕುರುಹುಗಳು ಈ ಐತಿಹಾಸಿಕ ಸ್ಥಳದಲ್ಲಿದ್ದವು?" ಹೆಚ್ಚಿನ ಮಾಹಿತಿ ಪಡೆಯುವ ಆತುರದಿಂದ ಜೋ ಕೇಳಿದಳು.

"ಈಗ ಸರಕಾರಿ ಆಸ್ಪತ್ರೆ ಇರುವ ಸ್ಥಳದಲ್ಲೇ ಪೋರ್ಚುಗೀಸರು ಕಟ್ಟಿಸಿದ ಕೋಟೆಯ ಅವಶೇಷಗಳಿದ್ದವು. ಇದನ್ನು ಶರಾವತಿ ನದಿ ತೀರದ ಎತ್ತರವಾದ ಬಂಡೆಗಲ್ಲಿನ ಮೇಲೆ ಕಟ್ಟಿದ್ದರಿಂದ ವೈರಿಗಳ ನೌಕಾಪಡೆಯ ಚಲನವಲನಗಳ ಮೇಲೆ ಸದಾಕಾಲ ನಿಗಾ ಇಡಲು ಸಾಧ್ಯವಾಗಿತ್ತು. ಕೋಟೆಯ ಕಟ್ಟಡ ಹಿಂದೆಂದೋ ನಾಶವಾಗಿದ್ದರೂ, ಅದರ ಅಡಿಪಾಯ ಆಗ ಉಳಿದಿತ್ತು. ನದಿಯ ದಡದಲ್ಲಿ ರಫ್ತು-ಆಮದು ಆದ ಸರಕುಗಳನ್ನು ಹಡಗುಗಳಲ್ಲಿ ತುಂಬಲು, ಇಳಿಸಲು ಸ್ಥಾಪಿಸಿದ ಕ್ರೇನು, ಜಂಗು ಹತ್ತಿ ನಿಂತಿತ್ತು. ಅದಕ್ಕೆ ಜೋಡಿಸಿದ ಭಾರೀ ಭಾರೀ ಸರಪಳಿಗಳು ನಮಗೆ ಆಕರ್ಷಣೀಯವಾಗಿದ್ದವು. ವ್ಯಾಪಾರದ ಸರಕುಗಳನ್ನು ಸಂಗ್ರಹಿಸಲು ಕಟ್ಟಿದ 'ವಖಾರಿಗಳು' ರಸ್ತೆಯ ಎದುರು ಬದುರು ಸಾಲಾಗಿ ನಿಂತಿದ್ದವು. ನಂತರ ಸ್ಥಳೀಯ ವರ್ತಕರು ಸಗಟುವ್ಯಾಪಾರಕ್ಕಾಗಿ ಅವನ್ನು ಮಳಿಗೆಗಳನ್ನಾಗಿಸಿ ಬಳಸಲಾರಂಭಿಸಿದ್ದರು. ಪೋರ್ಚುಗೀಸರು, ಕೆಳದಿಯವರು, ಹೈದರ ಅಲಿ, ಟಿಪ್ಪು ಸುಲ್ತಾನ ನಂತರ ಕೆಲ ಕಾಲ ಬ್ರಿಟಿಷರು, ಸೈನ್ಯದ ತುಕಡಿಗಳನ್ನು ಇಲ್ಲಿ ಸದಾ ಸಿದ್ಧವಾಗಿಯೇ ಇಟ್ಟಿದ್ದರು. ಶರಾವತಿ ನದಿ ದಂಡೆಗುಂಟ ಸೈನ್ಯಕ್ಕೆಂದು ನಿರ್ಮಿಸಿದ ವಾಸಸ್ಥಾನಕ್ಕೆ 'ಕೆಳಗಿನ ಪಾಳ್ಯ' ಎಂದು, ಅದಕ್ಕಿಂತ ಎತ್ತರದ ಸ್ಥಾನಕ್ಕೆ 'ಮೇಲಿನ ಪಾಳ್ಯ'ವೆಂದು ಈಗಲೂ ಹೆಸರುಗಳಿವೆ. ಊರಿನ ಹೊರವಲಯದ ಎತ್ತರದ ಬೆಟ್ಟದ ಮೇಲಿದ್ದ ಗಣೇಶನ ಗುಡಿಯ ಆವಾರದಲ್ಲಿಯೇ ಬಂಧಿತ ವೈರಿಗಳನ್ನು, ಪಾತಕಿಗಳನ್ನು ಗಲ್ಲಿಗೇರಿಸುವ ಕಲ್ಲು ಹಾಗೂ ಎರಡು ಬಾವಿಗಳು ಇದ್ದವು. ಈ ಗಣೇಶನ ಗುಡಿಗೆ

ಹೊಂದಿಸಿದ ಮಾಡು ವರ್ಷ ವರ್ಷವೂ ಮಳೆ-ಗಾಳಿಗೆ ನಾಶವಾಗುತ್ತಿತ್ತು. ಊರವರೆಲ್ಲ ಮೃತರ ಶಾಪದಿಂದ ಹಾಳಾಗುತ್ತದೆ! ಎಂದು ಪರಿಗಣಿಸುತ್ತಿದ್ದರು. ಅದರ ಎದುರಿಗಿನ ಇನ್ನೊಂದು ಬೆಟ್ಟದ ಮೇಲೆಯೇ 'ಕರ್ನಲ್ ಹಿಲ್'ನ ಸ್ಮಾರಕ ನಿಂತಿರುವದು" ಎಂದು ತಮ್ಮ ನೆನಪಿನ ಸುರುಳಿಯನ್ನು ಕ್ರಿಶ್ ಬಿಚ್ಚಿದರು.

"ಅತಿ ಪ್ರಾಚೀನವಾದ ಐತಿಹಾಸಿಕ ಊರು ನಿಮ್ಮದಾಗಿದೆ! ಇಲ್ಲಿಯೇ ಇತಿಹಾಸವೆಂಬುದು ಕಾಲು ಮುರಿದುಕೊಂಡು ಬಿದ್ದಾಗ, ಅದನ್ನು ಅಭ್ಯಸಿಸದಿದ್ದರೆ, ನನಗೆ ಕ್ಷಮೆಯಿಲ್ಲ! ಈಗಲೂ ಅಳಿದುಳಿದ ಹಳೇ ಸ್ಥಳಗಳಿಗೆ ಕರೆದೊಯ್ಯಿರಿ!" ಜೋ ಯೋಚಿಸಿದಳು. "ಅಣ್ಣ, ಈಗ ತಾನೇ ವಿವರಿಸಿದ, ತಾನು ಹಿಂದೆಂದೋ ನೋಡಿದ ಇತಿಹಾಸದ ಯಾವ ಕುರುಹುಗಳೂ ಈಗ ಉಳಿದಿಲ್ಲ! 'ಟಿಪ್ಪುವಿನ ಬಂಗ್ಲೆ' ಇದ್ದ ಸ್ಥಳದಲ್ಲಿ ಕೋಟೆಯ ಕಲ್ಲುಗಳನ್ನೆಲ್ಲ ಜನರು ಎತ್ತಿ ಒಯ್ದು ತಂತಮ್ಮ ಕಟ್ಟಡಗಳಿಗಾಗಿ ಬಳಸಿದ್ದಾರೆ. ಗಣೇಶಗುಡಿ ಇದ್ದಲ್ಲಿ ಈಗ ಒಂದು ಕಲ್ಯಾಣ ಮಂಟಪವನ್ನು ಕಟ್ಟಲಾಗಿದೆ" ತುಳಸು, ಬದಲಾದ ಹಿರೇಹಳ್ಳಿಯ ನೋಟಗಳ ವಿವರಣೆ ನೀಡಿದ.

೧೧. ಕಲೆಗಳ ಆಗರ

"ವಿವಿಧ ಕಲೆಗಳಲ್ಲಿ ನಿಮ್ಮ ಆಸಕ್ತಿ ಹುಟ್ಟಿಸುವಲ್ಲಿ ನಿಮ್ಮೂರಿನ ಪಾತ್ರವೇನಾದರೂ ಇದೆಯೇ?" ಈಶಾಡ ಮಾವಿನ ಹಣ್ಣು ಸವಿಯುತ್ತ, ಪತಿಯ ಸ್ಫೂರ್ತಿಯ ಸೆಲೆ ಎಲ್ಲಿರಬಹುದು? ಎಂದು ಅರಿಯಲು ಜೋ ಇಷ್ಟಪಟ್ಟಳು.

"ಇದ್ದೇ ಇದೆ! ಸೃಷ್ಟಿ ಸೌಂದರ್ಯದ ಬೀಡಾಗಿರುವದರ ಜೊತೆಗೆ ಅನೇಕಾನೇಕ ಕಲಾಕಾರರು ಇಲ್ಲಿಯೇ ಸ್ಥಾಯಿಯಾಗಿದ್ದರು. ಗುಡಿಗಾರರು ಗಣನೀಯ ಸಂಖ್ಯೆಯಲ್ಲಿ ಇದ್ದು, ಅವರ ಸಾಧನೆಯ ಕೀರ್ತಿ, ನಾಲ್ಕೂದೆಸೆಗಳಲ್ಲಿ ಹರಡಿತ್ತು. ಸುಬ್ಬು ಎನ್ನುವವರ ಶ್ರೀಗಂಧದ ಕುಸುರಿನ ಕಲಾಕೃತಿ, ಪ್ಯಾರಿಸಿನ ಪ್ರದರ್ಶನ ಒಂದರಲ್ಲಿ ಮಾನ್ಯತೆ ಪಡೆದಿತ್ತು. ಮಾಸ್ತಿಕಟ್ಟೆಯ ಸುತ್ತ ಮುತ್ತ ಇವರ ವಸತಿಯಿತ್ತು. ಪ್ರತಿಯೊಬ್ಬರೂ ಬೆಳಗಾಯಿತೆಂದರೆ ವೃತ್ತಿನಿರತರು! ಎಡಗೈಯಲ್ಲಿ ಗಂಧದ ಕೊರಡು ಹಿಡಿದು, ಬಲಗೈಯಲ್ಲಿದ್ದ ಚಾಣದಿಂದ ಇವರು ಸುಂದರ ಮೂರ್ತಿಗಳನ್ನು ಕಟೆಯುವ ವಿಧಾನವನ್ನು ನೋಡುತ್ತ ಇರುವದೇ ಕಣ್ಣಿಗೊಂದು ಹಬ್ಬವಾಗಿತ್ತು. ಕೊಂಚವಾದರೂ ಅಲಕ್ಷ ಅಥವಾ ಅಸಡ್ಡೆ ಆಯಿತೆಂದರೆ, ಮೂರ್ತಿಯ ಕಣ್ಣು-ಕಿವಿ-ಮೂಗುಗಳಲ್ಲಿ ಲೋಪ ಕಾಣಿಸಿಕೊಂಡು ಅದನ್ನು ತಿರಸ್ಕರಿಸಲೇಬೇಕಾಗುತ್ತಿತ್ತು. ಜವುಳ, ಪ್ರದೇಶದಲ್ಲಿ ಬೆಳೆಯುವ ಬೆಂಡನ್ನು ತಂದು ಅದರಿಂದ ಮದುವಣಿಗರಿಗಾಗಿ ಬಾಸಿಂಗ, ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತದ ತುರಾಯಿ, ಮುಂತಾದವನ್ನು ರಚಿಸಿ, ಬಣ್ಣಬಳಿದು, ಬೆಗಡೆ ಅಂಟಿಸಿ, ಮಾಡಿದ ಕಲಾಪೂರ್ಣ ವೈಖರಿ, ನೋಡುವವರನ್ನು ದಂಗುಬಡಿಸುತ್ತಿತ್ತು.

"ಉರುವಲಿಗೆ ಬಳಸುವ ಕಟ್ಟಿಗೆ ದಿಂಡನ್ನೆ ಬಳಸಿ ಬಾಚಣಿಗೆ, ಸೀರಹಣಿಗೆ ಮಾಡುತ್ತಿದ್ದರು. ಹುಣಿಸೆಮರದ ತುಂಡೊಂದು ಸಿಕ್ಕರೆ, ಅದಕ್ಕೆ ಸುಂದರವಾದ ಕಡೆಗೋಲಿನ ರೂಪ ಕೊಡದೇ ಇರುತ್ತಿರಲಿಲ್ಲ. ಗೌರಿ-ಗಣೇಶ ಹಬ್ಬಕ್ಕೆ ಶಿವ, ಪಾರ್ವತಿ, ಗಣೇಶರ ಮೂರ್ತಿಗಳನ್ನು ತಯಾರಿಸುವದು, ಚಿತ್ರಪಟಗಳನ್ನು ಮಾಡುವದು ಹಾಗೂ ಊರ ತೇರನ್ನು ಅಲಂಕರಿಸುವದು, ಮೊದಲಾದ ಸಾರ್ವಜನಿಕ ಕಲಾಕೃತಿಗಳ ಸಂಪೂರ್ಣ ಜವಾಬ್ದಾರಿ ಅವರದೇ. ಅವರು ಚಿತ್ರಿಸುತ್ತಿದ್ದ ಶಾರ್ದೂಲ, ರಾಕ್ಷಸ, ಹೂ-ಹಣ್ಣುಗಳನ್ನು ನೋಡುತ್ತ, ಅದೆಷ್ಟು ಕಾಲ ಕಳೆದಿದ್ದೆನೋ!"

"ಈ ಊರಜನ, ಅಂಥ ಕಲಾಕೃತಿಗಳ ಮೇಲೆ ಧನವನ್ನು ವ್ಯಯಿಸುತ್ತಿದ್ದರೇ?" ಕಿಮ್ ವಿಚಾರಿಸಿದಳು. "ಅವೆಲ್ಲ ಜನರ ಕೈಗೆ ಎಟುಕುವ ಬೆಲೆಗೇ ಮಾರುತ್ತಿದ್ದರು. ಅಂತೆಯೇ ಇಂದಿನ

ಓರ್ವ ಕಾರ್ಮಿಕನ ದಿನಗೂಲಿಯಷ್ಟು ಹಣವೂ ಅವರದಾಗಿರುತ್ತಿರಲಿಲ್ಲ. ವಿದೇಶದವರು ಅವರನ್ನು ಹುಡುಕಿಕೊಂಡು ಬಂದಾಗ ಮಾತ್ರ ಅವರಿಗೆ ಕೈತುಂಬ ಆದಾಯ ಬರುತ್ತಿತ್ತು. ಆದರೆ ಅವರನ್ನು ಕರೆತಂದ ದಳ್ಳಾಳಿಗಳು ಇವರಿಂದಲೂ ತಮ್ಮ ಪಾಲನ್ನು ಸೆಳೆದುಕೊಳ್ಳದೇ ಇರುತ್ತಿರಲಿಲ್ಲ. ಇಂತಹ ಸಮಯದಲ್ಲಿ ಗುಡಿಗಾರರ ಸಮಸ್ತ ಕಲಾಕೃತಿಗಳು ಅವರ ಕಪಾಟು, ಟ್ರಂಕು, ಗುಡಿಸಲುಗಳಿಂದ ಈಚೆ ಬರುತ್ತಿದ್ದುದರಿಂದ ಆಗಂತುಕರ ಹಿಂದೆಯೇ ಅವೆಲ್ಲವುಗಳ ದರ್ಶನಲಾಭ ಪಡೆಯಲು ನಾವೂ ಅಲೆಯುತ್ತಿದ್ದೆವು. ಆಗಂತುಕರ-ಕಾರು ಊರ ಹೊರಗೆ ಓಡಿದಾಗಲೇ ನಾವು ಗೃಹಾಭಿಮುಖರಾಗುತ್ತಿದ್ದೆವು. ಆನಂದು, ಅನಂತ, ಮುಂಡು, ನಾಗೇಶ, ದೇವಿದಾಸ, ವಿಠ್ಠಲ ಗುಡಿಗಾರರ ಕೃತಿಗಳಿಗೆ ಹೆಚ್ಚಿನ ಬೇಡಿಕೆ ಇರುತ್ತಿತ್ತು" ಕ್ರಿಶ್ ನೆನಪಿಸಿಕೊಂಡರು.

"ಈಗಲೂ ಶ್ರೀಗಂಧದ ಅಂಥ ಕೃತಿಗಳು ಲಭ್ಯ ಇವೆಯೇ?" ಕುತೂಹಲದಿಂದ ಕಿಮ್ ಕೇಳಿದಳು.

"ಕೊರಡು ಸುಲಭವಾಗಿ ಸಿಗುವದಿಲ್ಲ. ಶ್ರೀಗಂಧವಂತೂ ವಿಪರೀತ ದುಬಾರಿ! ಈ ವೃತ್ತಿಯನ್ನು ಮುಂದುವರಿಸುವದೇ ಕಷ್ಟಕ್ಕಿಟ್ಟುಕೊಂಡಿದೆ. ವಿದ್ಯಾಭ್ಯಾಸ ಮುಗಿಸಿ, ಮುಂಬೈ ಬೆಂಗಳೂರುಗಳಿಗೆ ನೌಕರಿಯನ್ನು ಅರಸಿಕೊಂಡು ಯುವಕರು ಹೋಗುವಂತಾಯಿತು. ಕೆಲವರು, ಡ್ರಾಯಿಂಗ್ ಕಲಿಸುವ ವೃತ್ತಿ ಕೈಕೊಂಡರು. ಕೆಲವೇ ಹಳಬರು, ನಿವೃತ್ತರು, ತಮ್ಮ ಪೂರ್ವಜರ ಮನೆ, ಹಿತ್ತಿಲ ಮೇಲ್ವಿಚಾರಣೆ ನಡೆಸಿ ಸುಗ್ಗಿ ನೃತ್ಯದ ಮುಖವಾಡಗಳು, ಪೇಪರ ಮಾಶ್, ಕತ್ತದ ಕಲಾಕೃತಿಗಳನ್ನು ಮಾಡುತ್ತಿರುತ್ತಾರೆ" ಎಂದು ತುಳಸು, ಈ ಕುಗ್ಗಿದ ಕಲಾಕಾರರ ಸಂಖ್ಯೆ ಕುರಿತು ಹೇಳಿದ.

"ಜೊತೆಗೆ ಇಲ್ಲಿ ಕಂಚುಗಾರರೂ ಇದ್ದರು, ಅತಿ ಪುರಾತನ ಕಾಲದಿಂದ ದಕ್ಷಿಣ ಭಾರತ, ಕಂಚಿನ ಪಾತ್ರೆ-ಪರಗಣೆ, ಪಂಚಲೋಹ ಮೂರ್ತಿಗಳಿಗಾಗಿ ವಿಶ್ವಖ್ಯಾತಿ ಪಡೆದಿದೆಯಷ್ಟೆ? ನಾಲ್ಕು ಐದನೇ ಶತಮಾನಗಳಲ್ಲಿ ಪಲ್ಲವರು ೧೦-೧೩ ಶತಮಾನಗಳಲ್ಲಿ ಚೋಳರು, ೧೬ನೇ ಶತಮಾನದಲ್ಲಿ ವಿಜಯನಗರ ಆಳರಸರ ತುಂಬು ಹೃದಯದ ಪ್ರೋತ್ಸಾಹದಿಂದ ದೇವಾಲಯ ನಿರ್ಮಾಣ ಹಾಗೂ ಕಂಚುಗಾರಿಕೆಯಂಥವು ವೈಭವ ಶಿಖರಕ್ಕೇರಿದವು. ಈ ಚಿಕ್ಕ ಊರಿನಲ್ಲೂ ಕಾಯಂ ಕಂಚುಗಾರರ ಕಮ್ಮಟ ನಡೆಯುತ್ತಿತ್ತು ಎಂದು ಈಗ ಹೇಳಿದರೆ ಯಾರೂ ನಂಬಲಿಕ್ಕಿಲ್ಲ. ಆದರೆ ಬಾಲ್ಯದಲ್ಲಿ ಅವರ ಕೈಚಳಕವನ್ನು ಏಕಚಿತ್ತದಿಂದ ವೀಕ್ಷಿಸುವದು ನನ್ನ ಹಾಬಿ ಆಗಿತ್ತು. ಶೆಟ್ಟಿಕೆರೆ ಸಮೀಪದಲ್ಲೇ ಹುಲ್ಲು ಚಾವಣಿಯ ದೊಡ್ಡ ಮಂಟಪ ಈ ಕಂಚುಗಾರರ ಕರ್ಮಭೂಮಿಯಾಗಿತ್ತು. ಮುಂಭಾಗದಲ್ಲಿ ಸಕಲ ಸಲಕರಣೆಗಳನ್ನು ಹರಡಿಕೊಂಡು ಗಂಡಸರು ಕಾರ್ಯಮಗ್ನರಾಗಿದ್ದರೆ, ಹಿಂಭಾಗದಲ್ಲಿ ಅವರ ಹೆಂಗಸರು, ಮಕ್ಕಳ ಲಾಲನೆ-ಪಾಲನೆ ಮಾಡುತ್ತ ಅಡಿಗೆಯಲ್ಲಿ ತೊಡಗಿರುತ್ತಿದ್ದರು. ಕೃಷ್ಣವರ್ಣದ ಕಿರುಮುಂಡು ಉಡುಪಿನ, ರವಕೆರಹಿತ, ಜೋಲು ಕಿವಿಯ ಹೆಂಗಳೆಯರು, ಕೇರಳದವರೆಂದು ಸಾರುತ್ತಿದ್ದವು. ಮೊದಲಲ್ಲಿ ಅವರು ಮೇಣದಿಂದ ಎರಕ ಹೊಯ್ಯಬೇಕಾದ ಪ್ರತಿಕೃತಿಗಳನ್ನು ರಚಿಸಿಕೊಳ್ಳುತ್ತಿದ್ದರು. ಇದಕ್ಕಾಗಿ ಪುಡಿಮಾಡಿದ ಡೆಮರ್ ಅಥವಾ ರಾಳವನ್ನು ಶೇಂಗಾ ಎಣ್ಣೆಯೊಂದಿಗೆ ಬೆರೆಸಿ, ಕಾಸಿಕೊಂಡು

ಜೇನು ಮೇಣದೊಂದಿಗೆ ಬೆರೆಸಿ, ತಣ್ಣೀರಿನಲ್ಲಿ ಸೋಸುತ್ತಿದ್ದರು. ಆ ಮಿಶ್ರಣ ಆಗ ತೆಳ್ಳಗಿದ್ದು ಇಚ್ಛಿತ ರೂಪಕ್ಕೆ ಪರಿವರ್ತನಗೊಳ್ಳಬಹುದಿತ್ತು. ಮೇಣದ ಕಲಾಕೃತಿ ಆಕೃತಿಗೆ ಜೇಡಿಮಣ್ಣಿನಿಂದ ಲೇಪನ ಮಾಡುವಾಗ, ಕರಗಿಸಿದ ಲೋಹವನ್ನು ಅಚ್ಚಿನಲ್ಲಿ ಸುರುವಲು ಕಿಂಡಿಯ ಅನುಕೂಲ ಮಾಡಿಕೊಂಡಿರುತ್ತಿದ್ದರು. ಇದನ್ನು ಉರಿಯುವ ಬೆರಣಿಯಲ್ಲಿ ಕಾಸಿ ಮೇಣವನ್ನು ಬೇರ್ಪಡಿಸುತ್ತಿದ್ದರು. ಆಗ ಮಣ್ಣಿನ ಅಚ್ಚು ಪಡೆಯುತ್ತಿದ್ದರು. ಪಂಚಲೋಹಗಳನ್ನು ಪಾತ್ರೆಗೆ ಸೇರಿಸಿ ಐದುಗಂಟೆಕಾಲ ಸತತವಾಗಿ ಕಾಸಿ ಕರಗಿಸುತ್ತಿದ್ದರು. ಅದನ್ನು ಅತ್ಯಂತ ಎಚ್ಚರದಿಂದ ಎರಕದಲ್ಲಿ ಹುಯ್ದು ಆರಲು ಬಿಡುತ್ತಿದ್ದರು. ಒಂದು ದಿನ ಕಳೆದ ಬಳಿಕ ಮಣ್ಣಿನ ಕವಚ ಕಳಚಿದಾಗ ಕಚ್ಚಾ ಆಕೃತಿ ಸಿದ್ಧವಾಗುತ್ತಿತ್ತು. ಅದನ್ನು ತಿಕ್ಕಿ, ತಿದ್ದಿ, ಸಾಣೆ ಹಿಡಿದು, ಬಂಗಾರದಂತೆ ಹೊಳೆ ಹೊಳೆವ ವಿಗ್ರಹ ಮಾಡಿದಾಗ ಅದರ ಹಿಂದಿದ್ದ ಅಗಾಧ ಶ್ರಮ ಸಾರ್ಥಕವಾಯಿತು, ಎಂದು ಅವರಿಗೆ ಅನಿಸುತ್ತಿದ್ದಿರಬಹುದೇ? ಎಂದು ನನ್ನ ಎಳೆಮನಸ್ಸು ಪ್ರಶ್ನಿಸುತ್ತಿತ್ತು.

ಮೂರ್ತಿಗಳು ದೊಡ್ಡವಾಗಿದ್ದರೆ, ಅವುಗಳ ಅಂಗಾಂಗಗಳನ್ನು ಬೇರೆ ಬೇರೆಯಾಗಿ ನಿರ್ಮಿಸಿ ನಂತರ ಜೋಡಿಸುತ್ತಿದ್ದರು. ಜಾತ್ರೆ, ತೇರು, ಬಂಡಿಹಬ್ಬಗಳಲ್ಲಿ, ಈ ಮೂರ್ತಿಗಳನ್ನು ನಿರ್ಮಿಸಿದವರೇ ಹೊತ್ತುತಂದು, ಮಾರುತ್ತಿದ್ದರು.... ಈಗ ಆ ವರ್ಗವೇ ಇಲ್ಲ. ಅಪೂರ್ವದ ಈ ಕಲಾಕಾರರಿಗೆ ಕನಿಷ್ಠ ಪ್ರೋತ್ಸಾಹವನ್ನೂ ನೀಡದೇ ನಾವೆಷ್ಟು ಅನ್ಯಾಯ ಮಾಡಿದ್ದೇವೆ!" ಎಂದು ಕ್ರಿಶ್ ಮರುಗಿದರು.

ಅದಕ್ಕೆ ಪ್ರತಿಕ್ರಿಯಿಸುತ್ತ ತುಳಸು, "ಆ ಕಲೆ ನಶಿಸಿ ಹೋದರೂ ಕಲಾಕಾರರ, ಕುಟುಂಬದವರು ನಮ್ಮೊಂದಿಗೆ ಇದ್ದಾರೆ! ಈಗ ಅವರಲ್ಲಿ ಕೆಲವರು ಸ್ಟುಡಿಯೋ ನಡೆಸುತ್ತಿದ್ದಾರೆ. ಒಬ್ಬಿಬ್ಬರು ಕಲಾ ಶಿಕ್ಷಕರಾಗಿದ್ದಾರೆ" ಎಂದು ಅವರ ವೃತ್ತಿಯಲ್ಲಿ ಬಂದ ಪರಿವರ್ತನೆಯ ಪರಿಚಯ ಮಾಡಿಕೊಟ್ಟ.

"ನಮ್ಮ ಪೂರ್ವಜರ ಮನೆಯ ಗೋಡೆಗಳ ಮೇಲೆಲ್ಲ ಚಿತ್ರಗಳಿದ್ದವೆಂದು ಬರೆದಿದ್ದೀರಿ. ಆ ಚಿತ್ರಗಳನ್ನೆಲ್ಲ ಯಾರು ರಚಿಸುತ್ತಿದ್ದರು?" ವಿಕ್ ಪ್ರಶ್ನಿಸಿದ.

"ಕರಾವಳಿ ಪ್ರದೇಶದಲ್ಲಿ ವಿಪರೀತ ಮಳೆ ಹಾಗೂ ಆರ್ದ್ರತೆಗಳಿಂದಾಗಿ, 'ಫ್ರೆಸ್ಕೊ' ದಂತಹ ಭಿತ್ತಿಚಿತ್ರಗಳು ಬಲುಬೇಗ ನಶಿಸಿಹೋಗುತ್ತವೆ. ಅಂತೆಯೇ ಸ್ಥಾನೀಯರು, ಸುಲಭವಾಗಿ ಸಿಗುವ ಹಾಗೂ ತಾಳಿಕೆ ಬರುವ ಸಾಮಗ್ರಿಗಳಿಂದಲೇ 'ಕಾವಿಚಿತ್ರ ಕಲೆ'ಯನ್ನು ತಮ್ಮದನ್ನಾಗಿ ಮಾಡಿಕೊಂಡರು. ಇವುಗಳ ನಿರ್ವಹಣೆಗೆ ಆ ಕಲೆಯಲ್ಲಿ ಪರಿಣಿತರಾದ ಗಾವಡಿಗಳ ತಂಡವೇ ಇರುತ್ತಿತ್ತು. ಕಲಾಕಾರನಿಂದ ಬಾಹ್ಯರೇಖೆಗಳನ್ನು ಹಾಳೆಗಳ ಮೇಲೆ ಗುರುತು ಹಾಕಿಸಿಕೊಂಡು, ಅವನ್ನು ಗೋಡೆ ಅಥವಾ ಸೂರಿನ ಮೇಲೆ ಮೂಡಿಸಲು ನಿರ್ಧರಿಸುತ್ತಿದ್ದರು. ಮರಗಲ್ಲುಗಳ ಜೋಡಣೆಗೆ ಬೇಕಾದ ಗಚ್ಚನ್ನೇ ಗಿಲಾಯಿಗೆ ಬಳಸುತ್ತಿದ್ದರು. ಬೆಣ್ಣೆಯಂತೆ ನಯವಾದ, ಹಿಮದಷ್ಟು ಬಿಳಿದಾದ, ಸುಣ್ಣದಲ್ಲಿ ಕೆಂಪು ಹುರಮುಂಜಿಯ ಪುಡಿಯನ್ನು ಬೆರಸಿ ಪಾಯಸದಷ್ಟು ದಪ್ಪ ಮಿಶ್ರಣವನ್ನು ಸಿದ್ಧಮಾಡಿಕೊಳ್ಳುತ್ತಿದ್ದರು. ಇದನ್ನು ಗುರುತುಹಾಕಿಕೊಂಡ ಗೋಡೆಗೆ ಏಕಪ್ರಕಾರ ವಾಗಿ ಲೇಪಿಸಿಕೊಳ್ಳುತ್ತಿದ್ದರು. ಒಂದು ಗಳಿಗೆಯ ನಂತರ ಅನವಶ್ಯಕವಾದ ಮಿಶ್ರಣವನ್ನು

ತಾಪಿಯಿಂದ ಬೇರ್ಪಡಿಸಿದಾಗ, ಶುಭ್ರವಾದ ಒಳಗೋಡೆಯ ಮೇಲೆ ರಕ್ತವರ್ಣದ ಚಿತ್ರಗಳು ನಳನಳಿಸಲಾರಂಭಿಸುತ್ತಿದ್ದವು. ನಾಜೂಕಿನ ವಿವರಗಳಲ್ಲಿ ತಾಪಿಯ ಬದಲಾಗಿ ಉಕ್ಕಿನ ಕಂಟ (ಟಂಕ?) ವನ್ನು ಬಳಸುತ್ತಿದ್ದರು. ಒಂದು ದಿನ ಕಳೆದ ಬಳಿಕ, ಪ್ರತಿ ನಾಲ್ಕುಗಂಟೆಗೆ ಒಮ್ಮೆ ನೀರು ಹನಿಸಿ, ಬಿರುಕು ಬಿಡದಂತೆ ಮಾಡುತ್ತಿದ್ದರು. ಇದು ವಾರದವರೆಗೂ ಮುಂದುವರೆಯುತ್ತಿತ್ತು. ಸಿದ್ಧವಾದ ಚಿತ್ರಗಳು ಏಕವರ್ಣೀಯವಾಗಿ ಚಪ್ಪಟೆಯಾಗಿದ್ದರೂ, ಕಲಾತ್ಮಕವಾಗಿ ತಮ್ಮದೇ ವೈಶಿಷ್ಟ್ಯಪೂರ್ಣವಾದ ಸೌಂದರ್ಯದಿಂದ ಕಂಗೊಳಿಸುತ್ತಿದ್ದವು" ಎಂದು ಕ್ರಿಶ್, ಕರಾವಳಿಯ ವಿಶಿಷ್ಟ ಕಲೆಯಾಗಿದ್ದ ಕಾವಿಚಿತ್ರ ಕಲೆಯ ಬಗ್ಗೆ ವಿವರಿಸಿದರು.

"ಈ ಕಲೆ ರೂಢಿಸಿಕೊಂಡ ಕೆಲವರನ್ನಾದರೂ ಭೇಟಿ ಮಾಡಿ ಅವರ ಕೆಲಸವನ್ನು ಕ್ಲಿಕ್ಕಿಸಬಹುದಲ್ಲ?" ಕಿಮ್ ರಾಗವೆಳೆದಳು. "ಈಗ, ಆ ಜನರಿಗೆ ಪ್ರೋತ್ಸಾಹವಿಲ್ಲದೇ, ಹೊಟ್ಟೆಗೂ ಇಲ್ಲದೇ ಇಳಿವಯಸ್ಸಿನ ಒಬ್ಬಿಬ್ಬರೂ ಔಷಧೋಪಚಾರಕ್ಕೆ ಗತಿಯಿಲ್ಲದೇ ಕೊನೆಯುಸುರು ಬಿಡುವಂತಾಗಿದೆ.... ಆ ಕಲೆ ಎಂದೋ ನಶಿಸಿ ಹೋಗಿದೆ!" ತನಗೆ ಗೊತ್ತಿದ್ದ ವಿಚಾರವನ್ನು ತುಳಸು ಅರುಹಿದ.

"ತಾಮ್ರದ ಪಾತ್ರೆ-ಪಗಡಗಳಿಗೆ ಆಗ ವಿಶೇಷ ಬೇಡಿಕೆ ಇತ್ತು. ದೈನಂದಿನ ಉಪಯೋಗದ ಹಂಡೆ, ಕೊಡ, ಚೊಂಬು, ಬಿಂದಿಗೆ, 'ಮಾಂಡೊ' ತಟ್ಟೆ, ಬೋಗುಣಿ, 'ಅಡಸಳಿ'ಗಳೆಲ್ಲ ತಾಮ್ರದವೇ ಇರುತ್ತಿದ್ದವು. ಇವನ್ನು ರಚಿಸುವ 'ತಾಮ್ಮಟಕಾರ'ರು ನಮ್ಮ ಮನೆಯ ಪಕ್ಕದಲ್ಲಿಯೇ ಹಗಲು-ರಾತ್ರಿ ದುಡಿಯುತ್ತಿದ್ದರು. ದೊಡ್ಡದೊಡ್ಡ ತಾಮ್ರದ ತಗಡುಗಳನ್ನು ತರಿಸಿ, ಕತ್ತರಿಸಿ, ಜಪ್ಪಿ, ಕುಟ್ಟಿ, ಹಂಡೆ-ಬಿಂದಿಗೆಗಳನ್ನು ನಿರ್ಮಿಸುವ ವಿಧಾನಗಳನ್ನು ನೋಡುತ್ತಿರುವದೇ ಕಣ್ಣಿಗೆ ಹಬ್ಬವಾಗಿತ್ತು. ಭಾಗಗಳನ್ನು ಜೋಡಿಸಿರುವಲ್ಲಿ ಗೋಚರಿಸದಂತೆ ಅರಗು ಲೇಪಿಸುತ್ತಿದ್ದರು. ಹಳೆಯ ತಾಮ್ರ ಬಳಸಿದ್ದು ಗೊತ್ತಾಗದಂತೆ ಕೆಂಬಣ್ಣ ಸವರುತ್ತಿದ್ದರು. ಆಡಿನ ತೊಗಲಿನ ಚೀಲ (ತಿದಿಯನ್ನು) ಬಳಸಿ ಕುಲುಮೆಯನ್ನು ಹೊತ್ತಿಸುವದು, ಮಾಯಾವಿದ್ಯೆಯಂತೆ ಗೋಚರಿಸುತ್ತಿತ್ತು. ಮದುವೆ, ಮುಂಜಿಗಳಲ್ಲಿ ಇವರ ಸಾಮಗ್ರಿಗಳಿಗೆ ಹೆಚ್ಚಿನ ಬೇಡಿಕೆ ಇರುತ್ತಿತ್ತು. ಹೀಗಾಗಿ ಚಿಮಣಿ-ಬುಡ್ಡಿಯ ಬೆಳಕಿನಲ್ಲಿ ರಾತ್ರಿಯಿಡೀ ತಾಮ್ರದ ಪಾತ್ರೆಗೆ ತುತ್ತಿಯ ಏಟುಹಾಕುತ್ತ ಬೆಳಗು ಮಾಡುತ್ತಿದ್ದರು. ಊರ ರಥೋತ್ಸವ, ಜಾತ್ರೆ, ಬಂಡಿಹಬ್ಬಗಳ ಸಮಯದಲ್ಲಿ ತಾಮ್ಮಟಕಾರರ (ತಾಮ್ರ ಕಲಾಕಾರರ) ಮಳಿಗೆ ಸಾಕಷ್ಟು ದೊಡ್ಡದಾಗಿಯೇ ಇರುತ್ತಿತ್ತು" ಸ್ಮೃತಿ ಪಟಲದಿಂದ ಕೆಲ ಚಿತ್ರಗಳನ್ನು ಕ್ರಿಶ್ ಬಿತ್ತರಿಸಿದರು. ದೊಡ್ಡವನಾದ ಮೇಲೆ ಉತ್ತಮ ತಾಮ್ಮಟಕಾರ್ ಆಗುವ ಕನಸು ಕಂಡಿದ್ದೆ! ಎಂದು ನಕ್ಕರು.

"ಈಗ ತಾಮ್ರದ ಪಾತ್ರೆಗಳಿಗೆ ಬೇಡಿಕೆಯಾದರೂ ಎಲ್ಲಿದೆ? ಗೀಸರ್‌ಗಳು ಹಂಡೆಗಳನ್ನು ಓಡಿಸಿ ಆಯಿತು. ನಲ್ಲಿ ಬಂದು ಬಾವಿಯ ನೀರು-ಬಿಂದಿಗೆ ಕೊಡಗಳು ಮಾಯವಾಗಿವೆ. ಒಂದೇ ತಿಂಗಳಿನಲ್ಲಿ ಹಾಳಾಗಿ ಹೋದರೂ ಎಲ್ಲರೂ ಪ್ಲಾಸ್ಟಿಕ್ ಮಗ್-ಟಂಬ್ಲರ್‌ಗಳನ್ನೆ ಬಳಸುತ್ತಾರೆ. ತಮ್ಮಟಕಾರ ಕುಲದ ಅಣ್ಣಪ್ಪನು, ಆಯುರ್ವೇದ ಔಷಧದ ಗಿಡ ಮೂಲಿಕೆಗಳನ್ನು ಹುಡುಕಿ ತಂದು ಮಾರುವ ವೃತ್ತಿಯನ್ನು ಕೈಕೊಳ್ಳುವ ಪ್ರಸಂಗ ಬಂದಿತು!" ತುಳಸು ಈಗಿನ ಚಿತ್ರ ನೀಡಿದ.

"ಊರವರಿಗೆ, ಅದರಲ್ಲಿಯೂ ಬಡಬಗ್ಗರಿಗೆ ರಂಗುರಂಗಿನ ಬಟ್ಟೆ-ಬರೆಗಳನ್ನು ಹೊಲಿದು ಪೂರೈಸುವಲ್ಲಿ ನಮ್ಮೂರಿನ ಕ್ರೈಸ್ತದರ್ಜಿಗಳು ಹೆಸರುವಾಸಿಯಾಗಿದ್ದರು. ಲಂಗ, ಕುಪ್ಪಸ, ಫ್ರಾಕು, ಪೋಲಕಗಳನ್ನು ಅಂದವಾಗಿ ಹೊಲಿಯುತ್ತಿದ್ದರು. ಹೊಲಿದು, ಉಳಿದ, ಕತ್ತರಿಸುವಾಗ ಬಿದ್ದ ಬಣ್ಣದ ಬಟ್ಟೆಯ ಚೂರುಗಳ ಆಕರ್ಷಕ ಡಿಝ್ಯಾನ್ ಮಾಡುತ್ತಿದ್ದರು. ಡಿಯೋಗ, ಪಾಸ್ಕೋಲ್, ಅಂತೋನ, ಜುವಾನ ಮೊದಲಾದವರು ಇತರರಿಗಿಂತಲೂ ಕಡಿಮೆ ಬಟ್ಟೆಯಲ್ಲಿ ಚಂದವಾಗಿ ಪೋಷಾಕು ಹೊಲಿಯುತ್ತಿದ್ದರು. ಚಿಕ್ಕಮಕ್ಕಳ ಝುಬಲೆ, ಕಸೆ ಅಂಗಿ, ಕುಲಾವಿಗಳನ್ನು ರಚಿಸುವಲ್ಲಿ ನಿಸ್ಸೀಮರು. ಕವಳ (ಎಲಡಿಕೆ) ಹಾಕುವವರಿಗಾಗಿ ಇವರು ಮಾಡಿಕೊಡುವ 'ಚಂಚಿ'ಗಳಂತೂ ಅತ್ಯಾಕರ್ಷಕ! ಎಲೆ, ಸುಣ್ಣದ ಡಬ್ಬಿ, ಅಡಿಕೆ ಹೋಳು, ತಂಬಾಕು ಮುಂತಾದವನ್ನು ಬೇರೆ ಬೇರೆಯಾಗಿ ಇಡಲು ಖಾನೆಗಳನ್ನು ನಿರ್ಮಿಸುತ್ತಿದ್ದರು. ಅವಕ್ಕೆ ಕೆಂಪು ಇಲ್ಲವೇ ಕಪ್ಪು ಗೋಟುಗಳು ಬೇರೆ! ತಮ್ಮ ಅಂಗಡಿಗಳ ಮುಂದೆ ಈ ಬಣ್ಣಬಣ್ಣದ ಚಂಚಿಗಳನ್ನು ನೇತುಹಾಕಿದಾಗ, ರಾಜಸ್ಥಾನಿಗಳ ರಂಗ್-ಬಿರಂಗಿ ಬಟ್ಟೆಯಂಗಡಿಯ ನೆನಪಾಗುತ್ತಿತ್ತು. ಇವುಗಳಿಗೆಲ್ಲ ಖಚಿತ ಬೆಲೆಯೆಂಬುದು ಇರುತ್ತಿರಲಿಲ್ಲ. ಹೀಗಾಗಿ ಕೊಡುಕೊಳಿಗೆ ತುಂಬ ಅವಕಾಶ! ಅದೆಷ್ಟೋ ಸಲ ಹಣದ ಅಡಚಣೆ ಇದ್ದಾಗ, ಅಗ್ಗದಲ್ಲಿ ಕೊಟ್ಟು ಬಿಡುತ್ತಿದ್ದರು" ಕೌದಿ ಬಟ್ಟೆಯ ತಯಾರಿಯನ್ನೂ ಕ್ರಿಶ್ ನೆನಪಿಸಿಕೊಂಡರು.

"ಇಂದು ನೀವು ಸ್ಪೆಶಲ್ ರೇಟ್ ಕೊಡುತ್ತೇನೆ! ಎಂದು ಸಾರಿದರೂ ಅಂಥ ಸಾಮಗ್ರಿ ಹೊಲಿಯುವ ಒಬ್ಬನಾದರೂ ದರ್ಜಿ ಇಲ್ಲಿ ಸಿಗಲಾರ! ಆರ್ಥಿಕವಾಗಿ ಗಟ್ಟಿಯಾಗಿದ್ದವರು, ನಾಲ್ಕಾರು ದರ್ಜಿಗಳನ್ನು ಕೆಲಸಕ್ಕೆ ನೇಮಿಸಿಕೊಂಡು ಸೂಟ್, ಪ್ಯಾಂಟ್, ಶರ್ಟ್, ಚೂಡೀದಾರ್, ಸ್ಕರ್ಟ್‌ಗಳನ್ನು ಹೊಲಿದುಕೊಡುವ ಪರಿಣತರು! ಎಂದು ಕರೆದುಕೊಳ್ಳುವದರಲ್ಲೇ ಅಭಿಮಾನ ಪಡೆಯುತ್ತಾರೆ" ಎಂದು ಪ್ರಸ್ತುತ ಪರಿಸ್ಥಿತಿಯನ್ನು ತುಳಸು ಪರಿಚಯಿಸಿದ.

೧೨. ಶರಾವತಿಯ ಸಾನ್ನಿಧ್ಯ

"ಇಲ್ಲಿ, ಸೃಷ್ಟಿ ಸೌಂದರ್ಯ ಕಾಲು ಮುರಿದುಕೊಂಡು ಬಿದ್ದಂತಿದೆ. ಇಂಥ ಒಂದಾದರೂ ತಾಣ, ಹಸಿರಿನ, ನೀರಿನ ವಿವಿಧ ರೂಪಗಳನ್ನು ಬಿಂಬಿಸುವ ಜಾಗ ಕೋರಿಯದಲ್ಲಿ ಇಲ್ಲ!" ಶರಾವತಿ, ಸಮುದ್ರರಾಜನೊಡನೆ ಒಂದಾಗುವ ಸ್ಥಳದ ಅಂಚಿನಲ್ಲಿ ನಿಂತು, ಭಾವನಾ ಪರವಶಳಾಗಿ ಕಿಮ್ ಉದ್ಗರಿಸಿದಳು.

"ಇಲ್ಲಿ, ನದಿಯ ಈ ತಾಣದಲ್ಲಿದ್ದ ಹಿಂದಿನ ನಿಸರ್ಗಸಿರಿ ಈಗ ನೋಡಲು ಸಿಗುವಂತಿದ್ದರೆ ನೀನು ಏನೆನ್ನುತ್ತಿದ್ದಿಯೋ!" ಹೊಸ ಸ್ಮ ೃತಿ-ಸುರುಳಿಯ ಪೀಠಿಕೆ ಹಾಕಿದರು ಕ್ರಿಶ್. "ಇಲ್ಲಿ ನದಿಯ ಪಾತ್ರ ವಿಸ್ತಾರವಾಗಿದ್ದರಿಂದ ನಾವೆಲ್ಲ ಅದನ್ನು ನಮ್ಮ ಬಾಗಿಲು' ಎಂದು ಕರೆಯುವದು ವಾಡಿಕೆ. ಇಲ್ಲಿಯ ಬಲದಂಡೆಯ ಆಚೆ, 'ಮಲ್ಲಿಕುರ್ವೆ' ಎಂಬ ನಡುಗಡ್ಡೆ ಇತ್ತು. ಅದೆಲ್ಲ ಶರಾವತಿ ಹೊತ್ತು ತಂದ ಸೂಸಲು ರೇವೆಯಿಂದ ನಿರ್ಮಿತವಾದದ್ದರಿಂದ, ಇಲ್ಲಿ ಹುಲುಸಾದ ತೆಂಗಿನ ತೋಟಗಳನ್ನು ಬೆಳಸಿ, ಗುಡಿಸಲು ಕಟ್ಟಿಕೊಂಡು, ಮಾಪಿಳ್ಳೆ ಜನ, ಹಾಯಾಗಿ ವಾಸಿಸುತ್ತಿದ್ದರು. ಅಲ್ಲಿಂದ ಒಂದು ಕೋಡಿ (ಶಾಖೆ) ಹರಿದು ಕೆಸರ ಕೋಡಿಯತ್ತ ಮುಂದೆ ಸಾಗುತ್ತಿತ್ತು. ಅಲ್ಲಿ 'ಪಾವಿನ ಕುರ್ವೆ' ಎಂಬ ಇನ್ನೊಂದು ನಡುಗಡ್ಡೆ ಇದೆ. ನದಿಯ ಎಡದಂಡೆಯಲ್ಲಿ ಕಾಸರಕೋಡ ಹಳ್ಳಿ ಇದೆ. ಕರಾವಳಿಯಿಂದ ಕೊಂಚದೂರ ಕಡಲ ನಡುವೆ ನಡುಗಡ್ಡೆ ಕಾಣಿಸುತ್ತಿದೆಯಲ್ಲ? ಅದೇ 'ಬಸವರಾಜದುರ್ಗ'. ಪ್ರಾಚೀನ ಕಾಲದ ಮಹತ್ವದ ಕೋಟೆಗಳಲ್ಲಿ 'ಜಲದುರ್ಗ' ಒಂದಾಗಿತ್ತು. ಈ ದುರ್ಗ ಅಂಥ ಸುರಕ್ಷಿತ ಸ್ಥಳದ ಉತ್ತಮ ಮಾದರಿಯಾಗಿದೆ. ವಿದೇಶಿ ಪ್ರವಾಸಿಗಳು ಅದನ್ನು 'ಹೊನ್ನಾವರ ಬಂಡೆ' ಎಂದು ಕರೆದಿದ್ದಾರೆ. ಹೀಗೆ ನದಿ, ಕೋಡಿ, ಕಡಲು, ಕುರ್ವೆಗಳೆಲ್ಲ ಒಟ್ಟಿಗೇ ನೋಡಲು ಸಿಗುವ ತಾಣಗಳು ಅತಿ ವಿರಳ. ಅದೂ ಪರ್ವತರಾಜನ ಸನ್ನಿಧಿಯಲ್ಲಿ. ಸಹ್ಯಾದ್ರಿ ಅದನ್ನೂ ಒದಗಿಸಿದೆ! ಅಮೇರಿಕೆಯಲ್ಲಿ ಇವುಗಳಲ್ಲಿ ಒಂದೆರಡು ಇದ್ದರೂ ಅಭಿವೃದ್ಧಿಗೊಳಿಸಿ ಪ್ರವಾಸಿಗರಿಗೆ ಆಕರ್ಷಕವಾಗುವಂತೆ ಮಾಡುತ್ತಾರೆ. ನಮ್ಮಲ್ಲಿ ಇಂಥ ಸೃಷ್ಟಿ ಸಂಪತ್ತು ಇದ್ದು, ನಮ್ಮೂರವರೇ ಕಣ್ಣೆತ್ತಿ ನೋಡದಿದ್ದಾಗ, ಇತರರ ಗಮನ ಹರಿಯುವದಾದರೂ ಹೇಗೆ?" ಕ್ರಿಶ್ ವಿಷಾದಿಸಿದರು.

"ನದಿಯಲ್ಲಿ ನೌಕಾವಿಹಾರಕ್ಕೆ ಅನುಕೂಲತೆ ಮಾಡಿ ಕೊಟ್ಟಿದ್ದರೆ, ಊರವರಿಗೂ ಅದರ ಲಾಭ ಸಿಗುತ್ತಿರಲಿಲ್ಲವೇ? ಪ್ರವಾಸಿ ತಾಣವಾಗಿ ಬೆಳೆದು ಎಷ್ಟೊಂದು ಉದ್ಯೋಗ, ಕೈಗಾರಿಕೆಗಳಿಗೆ ಅವಕಾಶವಾಗುತ್ತಿತ್ತಲ್ಲ?" ಕಿಮ್ ಪ್ರಶ್ನಿಸಿದಳು.

“ಶರಾವತಿ ಹರಿದು ಬರುವ ಪಕ್ಕದ ಸಹ್ಯಾದ್ರಿಯ ಓಳಿಗಳು, ಅತ್ಯಂತ ಕಲಾತ್ಮಕವಾಗಿವೆ! ಸೂರ್ಯೋದಯಕ್ಕೆ ಮೊದಲೇ ಇಲ್ಲಿ ಬಂದು ತಲುಪಿದರೆ, ವಿಸ್ಮಯ ಪ್ರಪಂಚವೊಂದು ವೀಕ್ಷಕರಿಗಾಗಿ ಕಾಯುತ್ತಿರುತ್ತದೆ. ಕೆಂಬಣ್ಣದ ಗಗನಮಂಡಲವನ್ನೇ ಅಳೆಯಲು ಹೊರಟ ಪರ್ವತ ಶಿಖರಗಳು, ನರ್ತಿಸುತ್ತಿರುವಂತೆ ಭಾಸವಾಗುತ್ತದೆ. ಈಗ ಕೊಂಚ ಸಮಯದ ನಂತರ ಹೊಂಬಣ್ಣವು ಮೆಲ್ಲಮೆಲ್ಲಗೆ ಮೇಲೇರಿ ಬರುವಾಗ, ಕತ್ತಲು ತಲೆಮರೆಸಿಕೊಂಡು ಬಿಡುವದು. ಮಂದಮಾರುತನು ಸೂಚಿಸಿದಂತೆ ತೆಂಗಿನ ಮರಗಳು ಗರಿಗಳ ಚಾಮರ ಬೀಸುತ್ತ ಸೂರ್ಯನನ್ನು ಕಾತರತೆಯಿಂದ, ಸಂಭ್ರಮದಿಂದ ಬರಮಾಡಿಕೊಳ್ಳುವವು. ಕಿರಿಯ, ಹಿರಿಯ ನಾವೆಗಳೆಲ್ಲ ನದಿಯಲ್ಲಿ ತೇಲುತ್ತ, ಅಬ್ಬರದ ಗಾಳಿ ಬೀಸಿದಾಗ, ಓಡುತ್ತಾ ನೀರಿನಲ್ಲಿ ತರಂಗಗಳನ್ನು ಎಬ್ಬಿಸುತ್ತ, ಪ್ರಕೃತಿಯ ಸೊಬಗನ್ನು ಹೆಚ್ಚಿಸುವವು. ಕ್ಷಣಕ್ಷಣಕ್ಕೂ ವರ್ಣಲಾವಣ್ಯ ಬದಲಾಗುವ ಗಗನದಲ್ಲಿ ಮುಳುಗಡೆ ಸೂಸುತ್ತ ಗುಡ್ಡ-ಬೆಟ್ಟಗಳ ಮೆಟ್ಟಿಲುಗಳನ್ನು ಒಂದೊಂದಾಗಿ ಏರುತ್ತ ಪ್ರತ್ಯಕ್ಷನಾಗುವ ರವಿಯ ವೈಭವವನ್ನು ವರ್ಣಿಸುವದು ಅಸಾಧ್ಯ!

‘ಮುಂಜಾವಿನ ಬರವನ್ನೇ ಕಾಯುತ್ತ ರಾತ್ರೆಯನ್ನು ಕಳೆದ ಹಕ್ಕಿಗಳೆಲ್ಲ ಚಿಲಿಪಿಲಿ ಗುಟ್ಟುತ್ತ, ಹಾಡುತ್ತ, ಸೋಮಾರಿಗಳನ್ನು ಕೂಗಿ ಎಬ್ಬಿಸುತ್ತ, ಇತ್ತಿಂದತ್ತ ಹಾರಲಾರಂಭಿಸಿದಾಗ, ಬಗೆಬಗೆಯ ಪಕ್ಷಿಸಂಕುಲಗಳ ಬೇರೆಯೇ ಲೋಕಕ್ಕೆ ವೀಕ್ಷಕನು ಪಯಣಿಸುತ್ತಾನೆ. ಆದರೆ ಇದು ಅಲ್ಪಾವಧಿಯ ಕಾಲ. ತಿರುಗಿ ಆತ, ಇಹಲೋಕಕ್ಕೆ ಮರಳುವ ಮುಂಚೆಯೇ ಬಿಸಿಲ ವಿವಿಧ ಬಣ್ಣಗಳ ಚಿತ್ತಾರಗಳೆಲ್ಲ ಮಾಯವಾಗಿ, ಅದರ ಶಾಖ ಬಂದು ಮೈಗೆ ಬಡಿಯಲಾರಂಭಿಸುತ್ತದೆ!

ಗೇರಸೊಪ್ಪಾ ಕಡೆಯಿಂದ ತೇಲುತ್ತ ಬರುವ ನಾವೆಗಳು ಒಂದೊಂದಾಗಿ ಕಾಣಲಾರಂಭಿಸುವವು. ಬೀಸುಗಾಳಿಯನ್ನೇ ‘ಇಂಧನಶಕ್ತಿ’ ಯಾಗಿ ಬಳಸುವ ‘ಗಾಳಿಕುದುರೆ’ (ಹಾಯಿ ಹಡಗ)ಗಳು ಜೋರಾಗಿ ಬಂದು ಬಂದರ ಸೇರುತ್ತಿದ್ದಂತೆ ತಮ್ಮ ಹಾಯಿಗಳನ್ನು ಸುರುಳಿಯಾಗಿ ಸುತ್ತಿಕೊಂಡು ವಿಶ್ರಮಿಸುವವು. ಸವೆದು ಹೋದ ರುಬ್ಬುವ ಕಲ್ಲನ್ನೇ ಹಗ್ಗದಿಂದ ಬಿಗಿದು ಲಂಗರದಂತೆ ಬಳಸಿ, ನಾವೆಗಳು ತೆರೆಗಳೊಂದಿಗೆ ತೇಲಿ ಹೋಗದಂತೆ ಎಚ್ಚರವಹಿಸುವರು-ನಾವಿಕರು. ಹಳ್ಳಿಗರು ಉತ್ಪಾದಿಸಿದ ಬಗೆಬಗೆಯ ಸರಕುಗಳನ್ನು ಸಗಟುಬೆಲೆಯಲ್ಲಿ ಕೊಳ್ಳಲು ದೂರ ದೂರದಿಂದ ಆಗಮಿಸಿದ ವ್ಯಾಪಾರಿಗಳು ನದಿಯ ದಡದಲ್ಲಿ ತುಂಬಿರುತ್ತಾರೆ. ಎಳನೀರು, ಕೊಬ್ಬರಿ, ತೆಂಗಿನಕಾಯಿ, ಸೋರೆಕಾಯಿ, ಹಲಸಿನ ಹಣ್ಣು, ಕಲ್ಲಂಗಡಿ ಹಣ್ಣು, ಇಬ್ಬಳಹಣ್ಣು, ಸುವರ್ಣಗಡ್ಡೆ, ಕೆಸವಿನಗಡ್ಡೆ, ತಿಳಿಬೆಲ್ಲದ ಮಡಕೆಗಳೆಲ್ಲ ಕೊಳ್ಳುವವರನ್ನು ಎದುರುನೋಡುತ್ತಿವೆ. ತೆಂಗಿನ ಕತ್ತದಿಂದ ಉತ್ಪಾದಿಸಿದ ದಿನಬಳಕೆಯ ಗೃಹೋಪಯೋಗಿ ಸಾಮಗ್ರಿಗಳು, ದನಕರುಗಳನ್ನು ಕಟ್ಟಲು ಬಳಸುವ ಹಗ್ಗ (ದಾವೆ)ಗಳು, ಬಾವಿಯ ನೀರು ಸೇದುವ ಹುರಿ ಹಗ್ಗಗಳು, ಮೊಸರು, ಬೆಣ್ಣೆ, ಇತರ ಖಾದ್ಯಪದಾರ್ಥಗಳು ಬೆಕ್ಕುಗಳಿಗೆ ಎಟುಕದಂತೆ ತೂಗಹಾಕುವ ನೆಲುವುಗಳು, ಗಡಿಗೆ, ಮಡಕೆಗಳು ನೆಲಕ್ಕೆ ಉರುಳದಂತೆ ಹಿಡಿದಿಡುವ “ಸಿಂಬಿ ನಿರ್ಮಾಣ”ಗಳು ರಾಶಿರಾಶಿ ಬಿದ್ದಿವೆ! ಅನತಿದೂರದಲ್ಲಿ ರಾತ್ರೆಯೆಲ್ಲ ಎಚ್ಚರವಾಗಿದ್ದು, ಅಂಬಿಗರೆಲ್ಲ ಹಿರಿಯಬಲೆ, ಗಾಳ, ಬಲೆಗಳಿಂದ ಹಿಡಿದು

ತೀರದಲ್ಲಿ ರಾಶಿ ಹಾಕಿದ ಮತ್ಸ್ಯವೈವಿಧ್ಯಗಳು ತಿನ್ನುವವರ ಬಾಯಿಗೆ ನೀರೂರಿಸುತ್ತಿವೆ! ಪ್ರೋಟೀನ್ ಭರಿತ ಪೌಷ್ಟಿಕ ಆಹಾರ ಅಲ್ಪ ಬೆಲೆಗೆ ಲಭ್ಯವಿದ್ದರೂ, ಚೌಕಾಶಿ ಮಾಡುತ್ತಾರೆ!" ಕ್ರಿಶ್, ಕಣ್ಣುಮುಚ್ಚಿ ತಾನು ಬಾಲಕನಿದ್ದಾಗ ಕಾಣುತ್ತಿದ್ದ ದೈನಂದಿನ ನೋಟವನ್ನು ಪುನರ್ ಚಿತ್ರಿಸಿದರು.

"ಶರಾವತಿ ಪ್ರದೇಶ ಇಂದಿಗೂ ಸುಂದರವಾಗಿಯೇ ಇದ್ದರೂ ಹಿಂದಿನದೆಲ್ಲ ಚೆನ್ನಾಗಿತ್ತು! ಎಂದು ಪುನಃ ಪುನಃ ನೆನಪಿಸಿಕೊಂಡು ಬೇಸರಪಡಬೇಕೇ?" ವಿಕ್ ಕೇಳಿದ. "ಅಂದಿನ ಜೀವನವೆಲ್ಲ ನಿರೀಕ್ಷಿಸಲು ನೀನು ಹುಟ್ಟಿಯೇ ಇರದಿದ್ದಾಗ, ಆ ಬಗ್ಗೆ ನೀನು ಏನೇ ಹೇಳಿದರೂ ಸರಿಯಿರುವದು ಶಕ್ಯವಿಲ್ಲ! ಎಂತಹ ಸ್ವಚ್ಛ, ಸುಂದರ ನದಿಯನ್ನು ನಾವು ಅದೆಷ್ಟು ಹಾಳುಗೆಡವಿ ಹಾಕಿದೆವು! ಎಂದು ನೆನಪಿಸಿಕೊಂಡಾಗೆಲ್ಲ ಹೊಟ್ಟೆ ಉರಿಯದೇ ಇದ್ದೀತೇ? ಶತಮಾನಗಳಿಂದ ಪಾವನಗಂಗೆಯಾಗಿ ಹರಿಯುತ್ತಿದ್ದ ಶರಾವತಿಯ ಕರುಳನ್ನೆ ಬಗಿಯುವ ಉಗ್ರಕ್ರಮವನ್ನು ಸ್ವಾರ್ಥಿಗಳು ಕೈಗೊಂಡಿದ್ದಾರೆ! ಹೀಗಾಗಿ ಆಕೆಯೂ, ಮನಸ್ವಿ ವರ್ತಿಸಲಾರಂಭಿಸಿದ್ದಾಳೆ. ವೇಗವಾಗಿ ಹರಿಯುತ್ತಿದ್ದ ನದಿಯ ಈಗಿನ ಗತಿ ನೋಡು. ಆಗ ನೀರಿನ ರಭಸಕ್ಕೆ ಮಳಲು ಸಂಚಯವಾಗಲು ಅವಕಾಶವೇ ಇರದೇ, ಸದಾಕಾಲವೂ ನೌಕಾಸಂಚಾರಕ್ಕೆ ಯೋಗ್ಯವಾಗಿಯೇ ಇರುತ್ತಿತ್ತು. ಆದರೆ ಜಲವಿದ್ಯುತ್ತಿಗಾಗಿ ಆಣೆಕಟ್ಟುಗಳನ್ನು ಹಾಕಿದ್ದುದರಿಂದ ನದಿಯ ನೀರಿನ ರಭಸ ಕುಗ್ಗಿ, ರೇವೆಯೆಲ್ಲ ಬೇರೆ ಬೇರೆ ಕಡೆ ಸಂಚಯವಾಗಲಾರಂಭಿಸಿದೆ. ನದಿ, ಸಮುದ್ರವನ್ನು ಸೇರುವ ಎಡೆಯಲ್ಲಿ ದೊಡ್ಡರೇವೆಯ ರಾಶಿಯೇ ಜಮಾಯಿಸಿದೆ. ಹೀಗಾಗಿ ಮಳೆಗಾಲದ ನೀರೆಲ್ಲ ಬಂದು ಬಲದಂಡೆಯಲ್ಲಿದ್ದ ಮಲ್ಲಿಕುರ್ವೆಯನ್ನು ಕೊಚ್ಚಿಕೊಂಡು ಹೋಯಿತು. ಆ ಮರಳೆಲ್ಲ ಕಾಸರಕೋಡಿನತ್ತ ಒಟ್ಟಾಗಲಾರಂಭಿಸಿದ್ದರಿಂದ ಅಲ್ಲೊಂದು ಹೊಸ ನಡುಗಡ್ಡೆ ತಲೆ ಎತ್ತಲಾರಂಭಿಸಿತು. ಮಲ್ಲಿಕುರ್ವೆಯ ಮುಳುಗಡೆಯಿಂದ ನಿರಾಶ್ರಿತರಾದ ಖಾರ್ವಿ, ದಾಲ್ಜಿ, ಮಾಪಿಳ್ಳೆ ಜನಾಂಗದವರು ಈ ನೆಲವನ್ನು ತಮ್ಮದನ್ನಾಗಿ ಮಾಡಿಕೊಂಡು ಗುಡಿಸಲುಗಳನ್ನು ನಿಲ್ಲಿಸಿ, ತೆಂಗು ಬೆಳೆಯಲಾರಂಭಿಸಿದ್ದಾರೆ. ಮೀನನ್ನು ಒಣಗಿಸಿ ರಫ್ತುಮಾಡುವ ತಾಣವಾಗಿ ಅದು ಮಾರ್ಪಟ್ಟಿದೆ!" ಕ್ರಿಶ್ ಬದಲಾದ ಪರಿಸರದ ವಿವರಣೆ ನೀಡಿದರು.

"ನದಿಯೇನೋ ಒಂದೆಡೆಯಿಂದ ರೇವೆಯನ್ನು ಸಾಗ ಹಾಕಿ ಇನ್ನೊಂದೆಡೆ ಒಟ್ಟಿದೆ. ಅಲ್ಲಿ ನೆಲೆ ತಪ್ಪಿದವರು ಇಲ್ಲಿ ಹೊಸ ಜೀವನ ಸಾಗಿಸಲು ಹವಣಿಸುತ್ತಿದ್ದಾರೆ. ಅದಕ್ಕಾಗಿ ಸಂಕಟ ಪಡಬೇಕೇ?" ತಂದೆಯ ಒಳನೋವಿನ ಆಳವನ್ನು ಅರಿಯಲೆತ್ನಿಸದೇ ವಿಕ್ ಉದ್ಗರಿಸಿದ.

"ಪರಿಸರದ ಆಗು-ಹೋಗುಗಳನ್ನು ಅರಿಯಲು ಆಳವಾದ ಜ್ಞಾನಬೇಕು. ನೀರು ಬಂದರೆ ಬಂತು, ಹೋದರೆ ಹೋಯಿತು! ಎಂಬ ಧೋರಣೆ ಈ ಅಧ್ಯಯನಕ್ಕೆ ಸಲ್ಲದು. ಈಗ ಈ ನದಿಯ ನೀರಿಗೆ ಅಬ್ಬರವೇ ಇಲ್ಲದ್ದರಿಂದ ಇದೊಂದು ಕೆರೆಯಾಗಿ ಪರಿವರ್ತನಗೊಂಡಿದೆ. ನೀರ ಪಾತಳಿಯ ಕೆಳಗೆಲ್ಲ ಹೂಳು ತುಂಬಿಕೊಂಡದ್ದರಿಂದ ನೀರಿನ ಆಳ ತುಂಬ ಕಡಿಮೆಯಾಗಿ ಬಿಟ್ಟಿದೆ. ಆಳ ಕಡಿಮೆಯಾದ ನದಿಯಲ್ಲಿ ದೊಡ್ಡ ನಾವೆಗಳ ಸಂಚಾರ ಹೇಗೆ ಸಾಧ್ಯ? ಅಲ್ಲದೇ ಆಳ ನೀರಲ್ಲಿ ವಾಸಿಸುವ ಅನೇಕ ಜಲಚರಗಳು ಪಲಾಯನ ಮಾಡಿವೆ, ಇಲ್ಲವೇ ಶಾಶ್ವತವಾಗಿ

ವಲಸೆ ಹೋಗಿವೆ. ಹೆಚ್ಚು ಮಳಲು ಸಂಗ್ರಹವಾದಲ್ಲಿ ಹೊಸ ಹೊಸ ನಡುಗಡ್ಡೆಗಳು ತಲೆ ಎತ್ತಲಾರಂಭಿಸಿವೆ. ಪ್ರತಿವರ್ಷವೂ ಇನ್ನಷ್ಟು ಹೂಳು ಜಮಾಯಿಸುವದರಿಂದ ಅಲ್ಲಲ್ಲಿ ಹಲವಾರು 'ಬೊಕ್ಕತಲೆ'ಗಳು ಕಾಣಿಸುತ್ತಿವೆ. ರಭಸದಿಂದ ಹರಿಯುವ ನದಿ, ಕಡಲಿನ ಉಪ್ಪು ನೀರು ಒಳಗೆ ಸೇರದಂತೆ ಮಾಡುತ್ತಿತ್ತು. ಆದರೆ ಇಂದು ನೀರು ಉಪ್ಪಾಗಿದೆ. ನದಿಯಲ್ಲಿ ಪ್ರತೀಕಾರ ಮಾಡುವ ಶಕ್ತಿಯೇ ಉಡುಗಿ ಹೋಗಿದ್ದರಿಂದ ಮಾನವನು ನಾಲ್ಕೂ ಕಡೆಯಿಂದ ಆಕ್ರಮಣ ನಡೆಸಿದ್ದು ನಿನಗೆ ತಿಳಿದಂತಿಲ್ಲ!" ಕ್ರಿಶ್ ಖಾರವಾಗಿ ಹೇಳಿದರು.

ಕ್ರಿಶ್‌ರ ವಿವರಣೆಯಿಂದ ಉತ್ತೇಜನಗೊಂಡ ತುಳಸು, "ಅಣ್ಣನ ಮಾತು ಶತಶಃ ಸತ್ಯ! ಘಟ್ಟದಿಂದ ಶರಾವತಿ ಹೊತ್ತು ತಂದ ರೇವೆ ದಂಡೆಯಲ್ಲಿ ಸಂಚಯವಾಗಲಾರಂಭಿಸಿದೆ. ಅಂತೆಯೇ ಅದಕ್ಕೆ ಹೊಂದಿರುವ ಭೂಮಿಯ ಮಾಲಕರು, ಈ ಹೊಸ ನೆಲವನ್ನೂ ಏಕ ಪ್ರಕಾರವಾಗಿ ಕಬಳಿಸಲಾರಂಭಿಸಿದ್ದಾರೆ. ನದಿಯ ಹರಹೂ ಕಿರಿದಾಗುತ್ತ ನಡೆದಿದೆ. ಇದರ ಬಗ್ಗೆ ಸರಕಾರ ಒಂದಿಷ್ಟೂ ತಲೆ ಕೆಡಿಸಿಕೊಳ್ಳದ್ದರಿಂದ ಆಕ್ರಮಣಕಾರರು ಗೆಲುವಾಗಿಯೇ ಇದ್ದಾರೆ. ಒಂದೇ ಹೊಸಭೂಮಿಗೆ ಪರಸ್ಪರ ಸ್ಪರ್ಧೆ-ಹೊಡೆದಾಟಗಳು ಸಾಮಾನ್ಯ. ಒಂದೆರಡು ಕೊಲೆಗಳೂ ನಡೆದಿವೆ. ಹೊಸದಾಗಿ ನಿರ್ಮಾಣವಾದ 'ನಡುಗಡ್ಡೆ'ಗಳಿಗಾಗಿಯೂ ತೀವ್ರ ಪೈಪೋಟಿ. ಒಬ್ಬಾತ ಇದೇ ಹೊಸ ಕುರ್ವೆ ಆಕ್ರಮಿಸಿ ತೆಂಗಿನ ತೋಟ ಬೆಳೆಸಿದರೆ, ಜುವಾನ್‌ನು ಕಡಲ ಚಿಪ್ಪುಗಳನ್ನು ಸುಟ್ಟು ಸುಣ್ಣವನ್ನು ಉತ್ಪಾದಿಸುವ ಕೇಂದ್ರವನ್ನು ಹೊಸದಾದ ದ್ವೀಪದ ಮೇಲೆ ಪ್ರಾರಂಭಿಸಿದ್ದಾನೆ. ಇದರಿಂದಾಗಿ ನದಿಯ ನೀರೆಲ್ಲ ಕಲ್ಮಶವಾಗುತ್ತಿದ್ದರೂ ಅದಕ್ಕಾಗಿ ವ್ಯಥೆ ಪಡುವವರು ಒಬ್ಬರೂ ಇಲ್ಲ! ಒಮ್ಮೊಮ್ಮೆ ಮಳೆಗಾಲದಲ್ಲಿ ನದಿಗೆ ಮಹಾಪೂರ ಬಂದು, ಈ ಆಕ್ರಮಿತ ಭೂಮಿ ಕೊಚ್ಚಿಕೊಂಡು ಹೋಗುವದಿದೆ. ಇಂಥ ಪ್ರಸಂಗಗಳಲ್ಲಿ ಆಕ್ರಮಣಕಾರರು ತಮಗೆಷ್ಟು ಹಾನಿ ತಟ್ಟಿದೆ! ಎಂದು ಪತ್ರಿಕೆಗಳಲ್ಲಿ ಚಿತ್ರಸಹಿತ ವರದಿ ಹಾಕಿಸಿ ಮಾಮಲೇದಾರ್, ಕಲೆಕ್ಟರ್, ಮಂತ್ರಿ, ಶಾಸನಸಭಾ ಸದಸ್ಯರ ವಶೀಲಿಯಿಂದ ನೆರೆಹಾವಳಿಯ ಸಹಾಯಧನ ಪಡೆಯುವದುಂಟು. ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿಯ ಸಾಲ ಪಡೆಯುವದಿದೆ. ಮಳೆಯ ಜೋರು ಕಡಿಮೆ ಆದ ಮೇಲೆ ಪುನಃ ಆ ಭೂಮಿ ಅವರದೇ! ಇದನ್ನೇ ವೃತ್ತಿಯಾಗಿಸಿ ಕೊಂಡವರಿದ್ದಾರೆ." ಹಳ್ಳಿಗಾಡಿನ ರಾಜಕಾರಣದ ಮುಖವನ್ನು ತುಳಸು ಪರಿಚಯಿಸಿದ.

೧೩. ದ್ವೀಪಗಳ ರಾಣಿ

"ನಿಮ್ಮ ಬಾಲ್ಯದಲ್ಲಿ ಶರಾವತಿ ನದಿಯಲ್ಲಿ ದ್ವೀಪಗಳೇ ಇರಲಿಲ್ಲವೇ?" ಮುನ್ನಾದಿನ ಅನೇಕಾನೇಕ ಚಿಕ್ಕದೊಡ್ಡ ಮಳಲು ರಾಶಿಗಳು ನಡುಗಡ್ಡೆಗಳಾಗಿ ಪರಿಣಮಿಸಿದ್ದನ್ನು ಕಣ್ಣಾರೆ ಕಂಡ ವಿಕ್ ಕೇಳಿದ.

"ಓಹೋ! ಇತಿಹಾಸದ ಪುಟಗಳಲ್ಲಿ ಈ ನದಿ, ದ್ವೀಪಗಳ ರಾಣಿ ಎಂದೇ ಹೆಸರು ಪಡೆದಿದೆ. ಕಡಲನ್ನೇ ತನ್ನ ಆಸ್ಥಾನವನ್ನಾಗಿ ಮಾರ್ಪಡಿಸಿಕೊಂಡ 'ಬಸವರಾಜ ದುರ್ಗ'ವು ತುಂಬ ದೂರದಿಂದಲೇ, ಗೋಚರಿಸುತ್ತದೆ. ರಾಮತೀರ್ಥದ ಗುಡ್ಡದ ಮೇಲಿಂದ ಅದನ್ನು ನೋಡಿದಾಗೊಮ್ಮೆ ಅದನ್ನು ಹತ್ತಿ ಹೋಗುವ ಆಸೆಯಾಗುತ್ತಿತ್ತು. ಕೊನೆಗೊಮ್ಮೆ ಈ ಆಸೆ ನೆರವೇರಿದಾಗ ಎವರೆಸ್ಟ್ ಏರಿದ ತೇನ್‌ಸಿಂಗ್‌ನಷ್ಟು ಸಂತೋಷ-ನೆಮ್ಮದಿಗಳಿಂದ ನಲಿದಿದ್ದೆ. ಸುಮಾರು ಎರಡು ಕಿಲೋಮೀಟರ್ ವ್ಯಾಸವುಳ್ಳ ಈ ನಡುಗಡ್ಡೆ, ಬೃಹತ್ ಕಲ್ಲುಬಂಡೆ-ಗುಂಡುಗಳ ಆಗರವೇ ಆಗಿದೆ. ಮೂರು ಶತಮಾನಗಳ ಹಿಂದಿನ ಕೋಟೆಯ ಹೆಚ್ಚಿನ ಭಾಗವನ್ನು ಇಂದಿಗೂ ಕಾಣಬಹುದಾಗಿದೆ. ನಾಲ್ಕು ಆಳುಗಳಿಂದಲೂ ಎತ್ತಲಾಗದ ಭಾರಿ ಕಲ್ಲುಗಳನ್ನು, ಗಚ್ಚು-ಸಿಮೆಂಟ್‌ಗಳಿಲ್ಲದೇ ಹೇಗೆ ಜೋಡಿಸಿದರೆಂದು ವಿಸ್ಮಯವಾಗುತ್ತದೆ. ಶತಮಾನಗಳಿಂದ ರುದ್ರಾವತಾರ ತಾಳಿ ಅಪ್ಪಳಿಸುವ ತೆರೆಗಳು, ಮಳೆ-ಬಿಸಿಲು, ಹಾವಸೆಗಳ ಆಕ್ರೋಶಕ್ಕೆ ಈ ಕಲ್ಲುಗಳು ತಮ್ಮ ನೈಸರ್ಗಿಕ ಕೆಂಬಣ್ಣವನ್ನು ಕಳೆದುಕೊಂಡು, ಕಪ್ಪಾಗಿವೆ. ಹಲವಷ್ಟು ಕಲ್ಲುಗಳು ಸ್ವಸ್ಥಾನದಿಂದ ಜಾರಿ ಕಡಲನ್ನು ಸೇರಿವೆ. ಹಲವೆಡೆ ಗೋಡೆಗಳು ಬಿರುಕುಬಿಟ್ಟಿವೆ. ಇಷ್ಟಾದರೂ ತೋಪು, ತುಬಾಕಿಗಳನ್ನು ಕಾಯ್ದಿರಿಸುತ್ತಿದ್ದ ಸ್ಥಳ, ವೈರಿಗಳ ಹಡಗುಗಳನ್ನು ಗುರುತಿಸಲು ಬಳಸುತ್ತಿದ್ದ ಎತ್ತರದ ನಿರೀಕ್ಷಣಾಲಯ, ಮುಂತಾದವನ್ನು ಸುಲಭವಾಗಿ ಗುರುತಿಸಬಹುದು." ಕ್ರಿಶ್, ಈ ಜಲದುರ್ಗಕ್ಕೆ ಕೈಕೊಂಡ ಸಾಹಸ ಪಯಣವನ್ನು ಸ್ಮರಿಸಿಕೊಂಡರು.

"ಅಲ್ಲಿ ದುಷ್ಕರ್ಮಿ ಮಾನವರ ಸುಳಿವೇ ಇರದ್ದರಿಂದ ಅಲ್ಲಿಯ ಪಶು-ಪಕ್ಷಿಗಳು ಯಾವ ಭಯ-ಭೀತಿಗಳಿಲ್ಲದೇ ನೆಮ್ಮದಿಯ ಜೀವನ ನಡೆಸುತ್ತಿರಬೇಕಲ್ಲವೇ?" ಕಿಮ್ ಉದ್ಗರಿಸಿದಳು.

"ವಿಷಸರ್ಪಗಳು ಅಲ್ಲಿ ರಾಜ್ಯವಾಳುವದರಿಂದ, ಅಲ್ಲಿಗೆ ಹೋಗುವ ಸಾಹಸ ಮಾಡದಿರುವದೇ ವಾಸಿ! ಎಂದು ಅನೇಕ ಸ್ಥಾನೀಯರು ಸೂಚಿಸಿದ್ದರು. ಯಾವ ಸರ್ಪರಾಜನ ದರ್ಶನವೂ ಆಗದಿದ್ದರೂ, ಶತಮಾನಗಳಿಂದ ಯಾರ ನಿಯಂತ್ರಣಕ್ಕೂ ಒಳಗಾಗದೇ ಬೆಳೆದು ನಿಂತ ಗಿಡಗಂಟಿಗಳು, ಆಗಂತುಕರ ಪ್ರವೇಶವನ್ನು ನಿಷೇಧಿಸುವ ತೆರದಲ್ಲಿಯೇ ದಟ್ಟವಾಗಿ

ಬೆಳೆದು ನಿಂತಿದ್ದವು. ಸಾಲದ್ದಕ್ಕೆ ಏರಿ ಹೋಗುವ ದಾರಿ, ತೀರ ಇಳಿಜಾರಾಗಿದ್ದರಿಂದ, ಒಂದು ಕಾಲು ಊರಿ, ಇನ್ನೊಂದನ್ನು ಎತ್ತುವದರಲ್ಲಿ ಎರಡೂ ಜಾರಿ ನೆಲಕಚ್ಚುವ ಪ್ರಸಂಗಗಳು ಅನೇಕ ಬಾರಿ ಬಂದವು. ಮೈ ಚುಚ್ಚುವ, ತುರಿಕೆ ಬರಿಸುವ ಕಂಟೆಗಳಿಗಂತೂ ಕೊನೆಮೊದಲಿಲ್ಲ. ಅಂತೆಯೇ ಕತ್ತಿ ಕುಠಾರಿಗಳಿಂದ ಅವನ್ನು ಸವರುತ್ತ ಕಾಲು ಊರಲು ಅವಕಾಶ ಮಾಡಿಕೊಳ್ಳುತ್ತ ಆಮೆಯ ವೇಗದಿಂದ ಕೋಟೆಯ ಆರೋಹಣ ಮಾಡಬೇಕಾಯಿತು. ಅಲ್ಲಲ್ಲಿ ಹರಡಿಕೊಂಡು ನಿಂತ ಕಾಡುಮೆಣಸಿನ ಗಿಡಗಳು ಹಾಗೂ ಕೆಲವು ಪಪಾಯಿ ಹಣ್ಣಿನ ಗಿಡಗಳನ್ನು ಬಿಟ್ಟರೆ ಬೇರಾವ ಫಲ-ಪುಷ್ಪಗಳ ಸಸ್ಯಗಳು ಕಣ್ಣಿಗೆ ಬೀಳಲಿಲ್ಲ. ದಾರಿಯನ್ನು ಅಡ್ಡಗಟ್ಟಿದ ಕೆರೆ, ಪಾಚಿಕಟ್ಟಿಕೊಂಡು ನಿಂತಿತ್ತು. ಅದರಲ್ಲಿ ತೇಲುತ್ತಿದ್ದ ಕಾಡು ಕೋಳಿಗಳ ಪುಕ್ಕಗಳ ಅವಶೇಷಗಳು ಅವುಗಳ ವಂಶಜರು ಅನಾದಿಕಾಲದಿಂದಲೂ ಆ ದ್ವೀಪದಲ್ಲಿ ವಾಸಮಾಡುತ್ತಿರುವದಕ್ಕೆ ಸಾಕ್ಷಿ ಹೇಳಿದವು. ಅಲ್ಲಿ ಐದು ಕೆರೆ-ಹೊಂಡಗಳಿದ್ದರೂ ಒಂದಾದರೂ ಬಾವಿ ಕಣ್ಣಿಗೆ ಬೀಳದ್ದರಿಂದ, ಮಳೆಯ ನೀರನ್ನೇ ಸಂಗ್ರಹಿಸಿ ಬಳಸಲಾಗುತ್ತಿತ್ತು ಎಂದೆನಿಸಿತು. ಅತಿ ಎತ್ತರದಲ್ಲಿ ಸಮತಟ್ಟಾದ ಬಯಲು ಗೋಚರಿಸಿತು. ಬಹುಶಃ ಸೈನಿಕರು ಒಟ್ಟಾಗುವ ಅನುಕೂಲಕ್ಕೆ ಇರಬೇಕು. ಹುಲುಸಾಗಿ ಬೆಳೆದು ನಿಂತ ಹುಲ್ಲುಬಿಟ್ಟರೆ, ಬೇರಾವ ಗಿಡ-ಮರಗಳೂ ಅಲ್ಲಿ ಕಂಡು ಬರಲಿಲ್ಲ" ಜೀವಶಾಸ್ತ್ರಜ್ಞನಿಗೆ ಅಲ್ಲಿ ಯಾವ ಹೆಚ್ಚಿನ ಅಥವಾ ಹೊಸ ಮಾಹಿತಿ ಸಿಗುವ ಸಾಧ್ಯತೆ ಇಲ್ಲ ಎಂಬರ್ಥದಲ್ಲಿ ಕ್ರಿಶ್ ಆ ನಿರ್ಜನ ದುರ್ಗದ ವಿವರ ನೀಡಿದರು.

"ಅಮ್ಮನ ಬತ್ತಳಿಕೆಯಲ್ಲಿ ಈ ಕುರಿತಾದ ಕೆಲ ಬಾಣಗಳು ಇದ್ದಿರಲಿಕ್ಕೆ ಸಾಕು!" ಹೆಚ್ಚಿನ ವಿಶ್ವಾಸದಿಂದ ವಿಕ್ ನುಡಿದಾಗ, ಜೋ ಹುರುಪಿನಿಂದ ಇತಿಹಾಸದ ಪುಟಗಳನ್ನು ತಿರುವಿ ಹಾಕಲಾರಂಭಿಸಿದಳು. "ಕೆಳದಿಯ ಬಸವಪ್ಪನಾಯಕನು ಸುಮಾರು ಕ್ರಿ.ಶ. ೧೭೦೦ರಲ್ಲಿ ಕೋಟೆಯೊಂದನ್ನು ಕಟ್ಟುವ ಪೂರ್ವದಲ್ಲಿ, ಇದು 'ಗೇರಸಪ್ಪಾ ನದಿಯ ಬಂಡೆ' ಎಂದೇ ಹೆಸರಾಗಿತ್ತು. ವಿದೇಶದಿಂದ ಬರುತ್ತಿದ್ದ ಹಡಗುಗಳು, ಕಾರವಾರ-ಬಿಣಗಾ ಬಳಿಯ 'ಅಂಜದೀವ್' ದ್ವೀಪಕ್ಕೆ ಮೊದಲು ಹೋಗಿ, ಆಮೇಲೆ ಮಿರ್ಜಾನ ಮಾರ್ಗವಾಗಿ ಈ ನಡುಗಡ್ಡೆಗೆ ಆಗಮಿಸಿ, ಲಂಗರು ಹಾಕಿ, ತೆರೆಗಳ ಅಬ್ಬರ ಕಡಿಮೆ ಆದಾಗ, ಮೆಣಸು ಮತ್ತಿತರ ಸಂಭಾರ ಜೀನಸುಗಳನ್ನು ಖರೀದಿಸಲು ಶರಾವತಿ ನದಿಗೆ ಪ್ರಯಾಣ ಬೆಳೆಸುತ್ತಿದ್ದವು. ಕೆಳದಿಯ ರಾಜನನ್ನು ಸೋಲಿಸಿ ಹೈದರ ಅಲಿಯು ವಶಪಡಿಸಿಕೊಂಡ ಈ 'ಬಸವರಾಜದುರ್ಗ'ವನ್ನು, ಅನಂತರ ಬ್ರಿಟಿಶರು ಸುಲಭವಾಗಿ ಗೆದ್ದುಕೊಂಡು, ಕಿರಿದಾದ ಸೈನ್ಯದಿಂದಲೇ ಈ ಎಲ್ಲ ಪ್ರದೇಶವನ್ನು ನಿಯಂತ್ರಿಸಲಾರಂಭಿಸಿದರು. ಇದಕ್ಕೂ ಮೊದಲು ಅಂದರೆ ೧೭೯೨ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕರಾವಳಿಯನ್ನು ವಿವರವಾಗಿ ಅಭ್ಯಸಿಸಿದ ಫೋರ್ಬೆಸ್‌ನು, ಈ ದುರ್ಗಕ್ಕೆ ಭೇಟಿ ನೀಡಿದ್ದ. ೧೭೭೫ರಿಂದ ಈ ಕೋಟೆಯ ಆಯಕಟ್ಟಿನ ಸ್ಥಳದಲ್ಲಿ ಸೈನ್ಯವಿತ್ತು. ನೌಕಾದಳದವರು ಹೇರಿಕೊಂಡು ಬಂದ ಸಾಮಗ್ರಿಗಳನ್ನು ಕೇವಲ ದಕ್ಷಿಣ ದ್ವಾರದಿಂದ ಮಾತ್ರ ಸಾಗಿಸಲಾಗುತ್ತಿತ್ತಂತೆ. ಅಲ್ಲಿ ಎಂಟು ತೋಪುಗಳಿಂದ ಕೂಡಿದ ಸೈನ್ಯವು ಸದಾ ಸಿದ್ಧವಿರುತ್ತಿತ್ತೆಂದು ನಮೂದಿಸಲಾಗಿದೆ. ೨೩-೧-೧೭೮೩ರಲ್ಲಿ ಆಂಗ್ಲ ಕ್ಯಾಪ್ಟನ್, ಟೋರಿಯಾನೊ ಈ ದುರ್ಗವನ್ನು ವಹಿಸಿಕೊಂಡು,

ಬ್ರಿಟಿಶರ ಸ್ಥಾನವನ್ನು ಭದ್ರಪಡಿಸಿದ. ಆದರೆ ಟಿಪ್ಪುವಿನ ಸೇನಾಪತಿ ಮಿರ್ಝಾಖಾನನು, ಕಪಟ-ವಂಚನೆಗಳಿಂದ ಕೋಟೆಯನ್ನು ವಶಪಡಿಸಿಕೊಂಡ. ೧೭೯೨ ರಲ್ಲಿ ಬ್ರಿಟಿಷ್ ಸೈನಿಕರು, ೩೪ ತೋಪು ಹಾಗೂ ಮದ್ದುಗುಂಡುಗಳೊಡನೆ ಆಕ್ರಮಣ ನಡೆಸಿ, ೬೦ ತೋಪುಗಳಿಂದ ಸಜ್ಜಿತವಾಗಿದ್ದ ಟಿಪ್ಪುಸುಲ್ತಾನನ ಯುದ್ಧನೌಕೆಯನ್ನು ಹಾರಿಸಿ ಕಡಲು ಪಾಲು ಮಾಡಿದರು. ದುರ್ಗವನ್ನು ಪುನಃ ವಶಪಡಿಸಿಕೊಂಡರು.

೧೮೦೧ರಲ್ಲಿ ಈ ಪ್ರದೇಶದಲ್ಲೆಲ್ಲ ಸಂಚರಿಸಿದ ಬುಕ್ಯಾನನ್ ಎಂಬಾತ, ಈ ದುರ್ಗದ ಪರಿಸರದಲ್ಲಿ ಕಡಲುಗಳ್ಳರು ಪ್ರಬಲರಾಗಿದ್ದಾರೆಂದು ಗಮನಿಸಿದ್ದ. ಬ್ರಿಟಿಷರ ಆಡಳಿತದೊಂದಿಗೆ ಸುರಕ್ಷತೆ ನೆಲೆಗೊಂಡು, ಈ ಆಯಕಟ್ಟಿನ ಸ್ಥಳವನ್ನು ಬಳಸಿಕೊಳ್ಳುವ ಪ್ರಸಂಗವೇ ಬರಲಿಲ್ಲ. ಹೀಗಾಗಿ ಈ ಕೋಟೆ, ಹಾಳು ಕೊಂಪೆಯಾಗಿ ಮುಂದುವರಿಯಿತು ಎಂದು ಮುಗಿಸಿದಾಗ ತುಳಸು, “ಹಣದ ಲೋಭಿಗಳು ಕೆಲವರು, ಪ್ರವಾಸಿಗಳನ್ನು ಆಕರ್ಷಿಸಲು, ತಂಗುದಾಣವೊಂದನ್ನು ನಿರ್ಮಿಸುವ ನೆಪದಲ್ಲಿ ಅದನ್ನು ಕಬಳಿಸಲು ಸರ್ವಪ್ರಯತ್ನ ನಡೆಸಿದ್ದರು. ಆದರೆ ಸ್ಥಳೀಯ ಮುಖಂಡರು ಎಚ್ಚೆತ್ತು ಬಲವಾಗಿ ವಿರೋಧಿಸಿದ್ದರಿಂದ ಅವರ ಆಟ ನಡೆಯಲಿಲ್ಲ. ಈ ಜಲದುರ್ಗದಲ್ಲಿದ್ದ ಗಣೇಶನ ದೇವಸ್ಥಾನದ ಪೂಜಾವಿಗ್ರಹವನ್ನು ಇಂದಿಗೂ ಹಳದಿಪುರದ ಅಗ್ರಹಾರದಲ್ಲಿ ಕಾಣಬಹುದಾಗಿದೆ” ಬಾಕಿ ಇತಿಹಾಸವನ್ನು ಅರುಹಿದ.

ಪೂರ್ವದಿಕ್ಕಿನಲ್ಲಿ ಬಟ್ಟು ಮಾಡಿ ಕಿಮ್, “ಅದು ಎರಡು ನದಿಗಳ ಸಂಗಮವೇ?” ಎಂದು ವಿಚಾರಿಸಿದಳು.

“ಅನೇಕ ವಿದೇಶೀ ಪ್ರಯಾಣಿಕರು, ಹೀಗೆಯೇ ಭಾವಿಸಿ, ಅದನ್ನು ‘ಅಂಬು’ ಮತ್ತು ‘ಶರಾವತಿ’ ನದಿಗಳೆಂದು ಕರೆದಿದ್ದಾರೆ. ಆದರೆ ನಿಜವಾದ ಸಂಗತಿ ಎಂದರೆ, ನದಿಯ ನಟ್ಟ ನಡುವೆ ಐದು ಕಿಲೋಮೀಟರ್ ಉದ್ದದ ‘ಮಾವಿಕುರ್ವೆ’ ದ್ವೀಪವಿದ್ದುದರಿಂದ ಇಲ್ಲಿ ಶರಾವತಿ ಇಬ್ಭಾಗವಾಗಿ ಹರಿಯುತ್ತಾಳೆ. ಉಳಿದೆಲ್ಲ ಕುರ್ವೆಗಳಿಗಿಂತ ಕ್ಷೇತ್ರಫಲದಲ್ಲಿ ಇದು ವಿಸ್ತಾರವಾದದ್ದು. ಸೂಸುಮಣ್ಣು, ವಿಪುಲವಾದ ನೀರು, ಇವುಗಳ ಲಾಭ ಪಡೆದು ಇಲ್ಲಿ ಅನೇಕಾನೇಕ ತೆಂಗಿನ ತೋಪುಗಳನ್ನು ಬೆಳೆಸಿದ್ದಾರೆ. ಇಲ್ಲಿಯ ಮರಗಳಲ್ಲಿ ಸಂಸಾರ ಹೂಡಿದ ಅಸಂಖ್ಯ ಬೆಳ್ಳಕ್ಕಿಗಳು ದಿನವೆಲ್ಲ ಸುತ್ತಮುತ್ತಲಿನ ಹೊಳೆ, ಕೆರೆ, ಗದ್ದೆಗಳಲ್ಲಿ ಮೀನುಗಾರಿಕೆ ನಡೆಸಿ, ಹೊಟ್ಟೆ ಹೊರೆದುಕೊಂಡು ಸಂಜೆಯಾದೊಡನೆ ತೆರೆತೆರೆಯಾಗಿ ಬಾನಿನಲ್ಲಿ ತೇಲಿಬಂದು ಪುನಃ ಆಯಾ ಮರಗಳ ಆಶ್ರಯ ಪಡೆಯುತ್ತವೆ. ರಾತ್ರಿಯೆಲ್ಲ ‘ಕೆಚ್! ಕೆಚ್!’ ಎಂದು ಕರ್ಕಶ ಧ್ವನಿಯಲ್ಲಿ ಕಾದಾಡುತ್ತ ಜೋಗುಳ ಹಾಡುತ್ತ, ಅಲ್ಲಿಯ ನಿವಾಸಿಗಳಿಗೆ, ತಾವು ಇಲ್ಲಿಯೇ ವಾಸಮಾಡಿದ್ದೇವೆ! ಎಂದು ಆಶ್ವಾಸನೆ ಕೊಡುತ್ತ ಬೆಳಗು ಮಾಡುತ್ತವೆ.

ಈ ದ್ವೀಪದ ನಿವಾಸಿಗಳಾಗಿರುವ ಹಲವು ವ್ಯಾಪಾರಿಗಳು, ಕಸಬುದಾರರು, ಪ್ರತಿದಿನ ಉದರ ನಿರ್ವಹಣೆಗೆ ಹೊನ್ನಾವರಕ್ಕೆ ಹೋದರೂ, ಸಂಜೆಗೆ ಪುನಃ ಕುರ್ವೆಗೇ ಮರಳುವರು. ಮಳೆ ಜೋರಾಗಿದ್ದರೂ, ಬಿರುಗಾಳಿ ಬೀಸಿದರೂ ತಡವಾಗಿ ಆದರೂ ತಮ್ಮೂರಿಗೆ ಬಾರದೇ ಇರುವದಿಲ್ಲ. ಇಲ್ಲಿಯ ಕ್ಷೌರಿಕರು, ಮರಹತ್ತಿ ತೆಂಗಿನ ಕುಯ್ಲು ಮಾಡುವ ವೃತ್ತಿಯ

'ಪಾಡೇಕಾರ'ರು ತಮ್ಮ ಸೇವಾನಿಷ್ಠೆಗೆ ಹೆಸರು ಮಾಡಿದ್ದಾರೆ. ಅಲ್ಲಿಯ ಆಚಾರಿಗಳು ಉತ್ಪಾದಿಸಿದ ಲೋಹದ ಬೀಗಗಳು, ದೇಶ-ವಿದೇಶಗಳಲ್ಲಿ ಖ್ಯಾತಿ ಪಡೆದಿವೆ' ಎಂದು ಎರಡು ಕುರ್ವೆಗಳ ವರ್ಣನೆಯನ್ನು ಕ್ರಿಶ್ ವಿವರವಾಗಿ ಕೊಡಮಾಡಿದಾಗ, ಕೇಳುಗರಿಗೆ ಅವನ್ನು ನೋಡಬೇಕು ಅನಿಸಿತು.

"ಪೀಟ್ರೊ ಡೆಲ್ಲಾವಾಲೆ ಎಂಬ ವೆನಿಸಿನ ಪ್ರವಾಸಿ ಕ್ರಿ.ಶ. ೧೬೨೩ರಲ್ಲಿ ಹೊನ್ನಾವರದ ಸಮೀಪವಿದ್ದ ಬ್ರಾಹ್ಮಣರ ಅಗ್ರಹಾರಕ್ಕೆ ಭೇಟಿಕೊಟ್ಟಿದ್ದನ್ನು ಬರೆದಿಟ್ಟಿದ್ದಾನೆ. ಈ ಊರವರು ಹಸು, ಎಮ್ಮೆಗಳನ್ನು ಸಾಕುವದಲ್ಲದೇ ಬೇರೆ ವೃತ್ತಿಗಳಿಂದಲೂ ಜೀವಿಸುತ್ತಾರೆ. ಊರ ನಡುವೆ ಅಂದವಾದ ಚಚ್ಚೌಕ ಆಕಾರದ ಕೊಳವಿದೆ. ಇದರ ಒಂದೊಂದು ದಂಡೆಯೂ ನೂರುಗಾವುದ ಉದ್ದವಿದ್ದು, ಮಳೆಯ ನೀರು ಅದರಲ್ಲಿ ಸಂಚಯವಾಗುತ್ತಿದ್ದು ವರ್ಷವಿಡೀ ಇಂಗುವದೇ ಇಲ್ಲ!" ಎಂದು ವಿಸ್ಮಯ ಪಟ್ಟಿದ್ದಾನೆ....

"ಈ ಸ್ಥಳ, ಹೊನ್ನಾವರದ ಭಾಗವಾಗಿದ್ದ ಈ ಸ್ಥಳ, ಯಾವುದೆಂದು ನಿಮ್ಮಿಂದ ಗುರುತಿಸಲಾಯಿತೇ?" ಕುತೂಹಲ ಕೆರಳಿ ಜೋ, ಕಾಲೇಜ್ ವಿದ್ಯಾರ್ಥಿನಿಯಂತೆ ಪ್ರಶ್ನಿಸಿದಳು.

ಕ್ರಿಶ್, ಗಂಟಲು ಸರಿಮಾಡಿಕೊಂಡು, ವಿಶ್ವವಿದ್ಯಾಲಯದ ಪ್ರೊಫೆಸರ್ ಅವರ ಗತ್ತಿನಿಂದ, ಅಧಿಕಾರವಾಣಿಯಿಂದ ಹೇಳಲಾರಂಭಿಸಿದರು. "ಈಗ ಕಿರುದ್ವೀಪವಾಗಿ ಮಾರ್ಪಟ್ಟ ಹೈಗುಂದವೇ, ಡೆಲ್ಲಾವಾಲೆ ಕಂಡ ಬ್ರಾಹ್ಮಣರ ಅಗ್ರಹಾರವಿರಬೇಕು! ಅಲ್ಲಿಯ ಬಹುಸಂಖ್ಯಾತರು ಹವ್ಯಕರು ಹಾಗೂ ಅವರ ಒಕ್ಕಲುಜನ. ಬಲು ಪುರಾತನಕಾಲದಿಂದ ಅಲ್ಲಿ ಬ್ರಾಹ್ಮಣರು ಬೀಡುಬಿಟ್ಟು ವೇದಾಧ್ಯಯನ, ಅಧ್ಯಾಪನ, ಹೋಮ-ಹವನಗಳಲ್ಲಿ ನಿರತರಾಗಿದ್ದರು. ಈಗಲೂ ಅಲ್ಲಿಯ ಪುರಾತನ ಭೂಮಿಯಲ್ಲಿ ಅಗೆದಾಗ, ಆ ಕಾಲದ ಯಜ್ಞ-ಕುಂಡಗಳು, ಇಟ್ಟಂಗಿಗಳು, ನೀರು ಸರಬರಾಜಿಗೆ ರಚಿಸಿದ ಕಾಲುವೆಗಳು, ಗೋಚರಿಸುತ್ತವೆ. ಹಿಂದೊಮ್ಮೆ ಇದು ಬೌದ್ಧಧರ್ಮದ ಕೇಂದ್ರವೂ ಆಗಿತ್ತೆಂಬುದು ಇತ್ತೀಚೆಗೆ ಸಿಕ್ಕ ಕುರುಹುಗಳು, ಬುದ್ಧಪ್ರತಿಮೆ, ಯಕ್ಷವಿಗ್ರಹ ಮುಂತಾದವುಗಳಿಂದ ಸಿದ್ಧವಾಗಿದೆ. ಆದರೆ ಅವು ಎಲ್ಲಿಂದ ಬಂದವು? ಎನ್ನುವುದಕ್ಕೆ ಖಚಿತ ಆಧಾರಗಳಿಲ್ಲ. ಬಯಲಲ್ಲಿದ್ದ ಆಲದ ಮರದ ಆಶ್ರಯದಲ್ಲಿ ಅವನ್ನು ಜೋಡಿಸಿಡಲಾಗಿದೆ. ಏಕಶಿಲಾನಿರ್ಮಿತ ಆರು ಅಡಿ ಎತ್ತರದ ವಿಗ್ರಹಗಳನ್ನು ವೀಕ್ಷಿಸುತ್ತಿದ್ದಾಗ, ಕಾನ್ಹೇರಿ, ನಾಸಿಕ, ಔರಂಗಾಬಾದ, ಎಲ್ಲೋರ, ಅಜಂತಗಳ ಗುಹಾಲಯಗಳ ಶಿಲ್ಪಗಳೇ ಕಣ್ಣಿಗೆ ಕಟ್ಟಿಟ್ಟಂತೆ ಆಗುತ್ತದೆ. ಇವುಗಳೂ ಅದೇ ಕಾಲದ್ದಿದ್ದರೆ ಆಶ್ಚರ್ಯವಿಲ್ಲ."

"ನೀವು ಕೊಟ್ಟ ಮಾಹಿತಿಯಿಂದಲೇ ಈ ಕುರ್ವೆಗಳಲ್ಲಿ ಅಡಗಿದ ಇತಿಹಾಸ ಸಂಶೋಧನೆಗೆ ಎಷ್ಟೊಂದು ಅವಕಾಶವಿದೆ, ಎಂಬ ಕಲ್ಪನೆ ಮೂಡುತ್ತದೆ. ನಮ್ಮ ಸರಕಾರವಾಗಲಿ, ಇತಿಹಾಸ ತಜ್ಞರಾಗಲಿ, ಇವುಗಳ ಬಗ್ಗೆ ಇಷ್ಟೊಂದು ನಿರ್ಲಕ್ಷವೇಕೆ ತಳೆಯುತ್ತಾರೆ?" ಜೋ ಪ್ರಶ್ನೆ.

"ನಮ್ಮವರಿಗೆ ಸ್ವಾಭಿಮಾನದ ತೀವ್ರ ಕೊರತೆಯಿದೆ. ನಮ್ಮಲ್ಲಿ ಇರುವ ಸಾಂಸ್ಕೃತಿಕ ಸಂಪತ್ತಿನ ಬಗ್ಗೆ ಯಾರಿಗೂ ಹೆಮ್ಮೆ ಎಂಬುದಿಲ್ಲ. ಯಾವ ಕೆಲಸ ಮಾಡದೇ ಕೈ ತುಂಬ

ಸಂಪಾದನೆ ಬರುವ ಸಂತೋಷದಿಂದ ಬೀಗುವ ಅಸಂಖ್ಯರು ಇದ್ದರೂ ಕಣ್ಣೆದುರಿಗೇ ಐತಿಹಾಸಿಕ ಕಟ್ಟಡಗಳು ಹಾಳಾಗುತ್ತಿದ್ದರೆ ಗಮನಿಸುವವರಿಲ್ಲ. ಕೋಟೆಯ ಕಲ್ಲುಗಳು, ಧಾತುಗಳ ಸಾಮಗ್ರಿಗಳನ್ನು ಎತ್ತಿ ಹಾಕುವ ನಿಸ್ಸೀಮರಲ್ಲಿ ಕಲಿತವರು, ಕಲಿಯದಿದ್ದವರು ಎಂಬ ಭೇದವಿಲ್ಲ! ಬಸವರಾಜದುರ್ಗವನ್ನು ವಶಪಡಿಸಿಕೊಳ್ಳಲು ಟಿಪ್ಪುಸುಲ್ತಾನ ಹಾಗೂ ಬ್ರಿಟಿಷರ ನಡುವೆ ಹಲವಾರು ಕಾಳಗಗಳು ನಡೆದವು. ಯುದ್ಧ ನೌಕೆಗಳು, ತೋಫುಗಳು ಜಲಸಮಾಧಿ ಹೊಂದಿದವು ಎಂದು ಚರಿತ್ರೆ ಸಾರುತ್ತದೆ. ಅದರಂತೆ ಪ್ರಾಚೀನ ಕಾಲದಿಂದ ದೊಡ್ಡ ನೌಕಾನೆಲೆಯಾಗಿ ಮೆರೆದ ಹೊನ್ನಾವರದಲ್ಲಿ, ವಿಜಯನಗರ, ಕೆಳದಿ, ಗೇರಸೊಪ್ಪಾ ನಾಯಕರ ಕಾಲದಲ್ಲೆಲ್ಲ ಲೆಕ್ಕವಿಲ್ಲದಷ್ಟು ಸಂಘರ್ಷಗಳಾಗಿವೆ. ಪೋರ್ಚುಗೀಸರ ಹಡಗುಗಳೆಷ್ಟೊ ಮುಳುಗಿವೆ. ಇಷ್ಟಾದರೂ ಅವುಗಳ ಅವಶೇಷಗಳನ್ನು ಮೇಲೆತ್ತಿಸುವ ಪ್ರಯತ್ನವನ್ನಾಗಲಿ, ಅಭ್ಯಸಿಸುವ, ಹೋಗಲಿ ಕ್ಷೇತ್ರ ಸಮೀಕ್ಷೆ ಮಾಡುವ ಶ್ರಮವನ್ನಾಗಲಿ, ಒಂದು ಪಿಳ್ಳೆಯೂ ಕೈಕೊಂಡಿಲ್ಲ!

ಶತಮಾನಗಳ ಹಿಂದೆ ಈಜಿಪ್ಟ್, ಗ್ರೀಸ್, ರೋಮ್‌ದ ನಾವೆಗಳು ಕಡಲ ತಳ ಸೇರಿದ ವೃತ್ತಾಂತಗಳನ್ನು ಇತಿಹಾಸದ ಪುಟಗಳಿಂದ ಕಂಡುಹಿಡಿದು, ವೃತ್ತಿಸಾಗರ-ಶೋಧಕರು, ಸರಕಾರ ಮತ್ತಿತರ ಖಾಸಗೀ ಸಂಸ್ಥೆಗಳೊಂದಿಗೆ ಪ್ರಾಪ್ತಿಯ ಅರ್ಧಪಾಲಿನ ಒಪ್ಪಂದ ಮಾಡಿಕೊಂಡು, ಅತ್ಯಾಧುನಿಕ ಸಾಧನಗಳೊಂದಿಗೆ, ಉತ್ತಮ ಈಜುಗಾರರನ್ನು ಹೊಂದಿಸುತ್ತಾರೆ. ಮಹಾಸಾಗರದ ನಿರ್ದಿಷ್ಟ ಸ್ಥಾನವನ್ನು ಪತ್ತೆಹಚ್ಚಿ, ಶೋಧ-ಸಂಶೋಧನಗಳನ್ನು ಕೈಕೊಂಡು, ವಿಪುಲ ಸಂಪತ್ತನ್ನು ಹೊರತರುತ್ತಾರೆ. ತಾವು ಧನಿಕರಾಗುವದಲ್ಲದೇ ಇತಿಹಾಸ ಕ್ಷೇತ್ರವೂ ಸಮೃದ್ಧವಾಗುವಂತೆ ಮಾಡಿದ್ದಾರೆ. ಈ ತಂಡದವರು ನಮ್ಮಲ್ಲಿಯೂ ಬಂದು ಧನಲಾಭ ಮಾಡಿಕೊಳ್ಳುವಂತಾದರೆ, ಸ್ಥಾನೀಯರ 'ಮಂಗ್ಯಾತನ' ಊಹಿಸಿಕೊಳ್ಳಬಹುದು!

ಹೈಗುಂದ (ಹವ್ಯಕ ಕುಂಡ)ದ ಒಂದು ಕುರ್ವೆಯಲ್ಲಿಯೇ ಎರಡು ಸಹಸ್ರ ವರ್ಷಗಳ ಹಿಂದಿನ ಪುರಾತನ ಅವಶೇಷಗಳು ಸಿಕ್ಕಿವೆ. ಅಲ್ಲಿ ಉತ್ಖನನ ನಡೆಸಿದರೆ, ಅಸಂಖ್ಯ ವಸ್ತುಗಳೊಂದಿಗೆ ಬೇರೆ, ಬೇರೆ ಕಾಲಮಾನದ ಐತಿಹಾಸಿಕ ನೆಲೆಗಳು ಲಭಿಸುವ ಸಾಧ್ಯತೆಯಿದೆ. ಆದರೆ ಯಾವ ಸ್ವಂತ ಲಾಭವೂ ಇಲ್ಲದ ಅಥವಾ ಸಿಗದ ನಮ್ಮ ಪೂರ್ವಜರ ಇತಿಹಾಸ ಕುರಿತ ಆಸಕ್ತಿ ಯಾರಿಗಿದೆ?" ಕ್ರಿಶ್, ನಿಟ್ಟುಸುರು ಬಿಟ್ಟರು.

೧೪. ಹೊಸತು, ಹೊಸತು

"ಇಂದಿನ ಜೀವನದ ಯಾವ ಸವಲತ್ತು, ಸೌಕರ್ಯಗಳಿಲ್ಲದ ನಿಮ್ಮ ಬಾಲ್ಯಜೀವನ ಹೇಗಿತ್ತು? ಪ್ರತಿಯೊಂದು ಸಾಮಾನು ಹೊಸದೇ ಇರಬೇಕೆನ್ನುವ ಯುಗ ಇದು. ಆಗ ಸಾಮಾನುಗಳಿಗೇ ಸಂಚಕಾರ ಇದ್ದಿರಬೇಕಲ್ಲವೇ?" ಕಿಮ್ ಕೇಳಿದಳು.

"ಬಹುಶಃ ಶತಮಾನಗಳಿಂದ ನಮ್ಮ ಪ್ರಾಚೀನರೆಲ್ಲ ಬಾಳಿ ಬದುಕಿದ ಬಗೆಯ 'ರಾಮರಾಜ್ಯ'ದಲ್ಲಿಯ ಜೀವನ ಕ್ರಮ ನಮ್ಮದಾಗಿತ್ತು. ನಸುಕಿನಲ್ಲಿ ಕೋಳಿ ಕೂಗಿದಾಗ ಅಥವಾ ಬ್ರದರ್ ಶಾಲೆಯ ಮೊದಲಗಂಟೆ, ಬಡಿದುಕೊಳ್ಳಲಾರಂಭಿಸಿದಾಗ, ಊರವರೆಲ್ಲ ಎದ್ದು ಬಿಡುತ್ತಿದ್ದರು. ಪ್ರಾತರ್ವಿಧಿ, ಸ್ನಾನ, ಅಲ್ಪೋಹಾರಗಳನ್ನು ತೀರಿಸಿ, ತಂತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮೈಮರೆಯುತ್ತಿದ್ದರು. ಅಧಿಕ ಧನದ ಲೋಭವಿರದ್ದರಿಂದ ದಿನಕ್ಕೆರಡು ಊಟಕ್ಕಾಗುವಷ್ಟು ಗಳಿಕೆ ಇರುವ ಯಾವ ವೃತ್ತಿಯಾದರೂ ಸರಿಯೇ, ತಲೆಮಾರುಗಳಿಂದ, ವಂಶಪರಂಪರೆಯಿಂದ ಬಂದ ಕಸುಬು ಮುಂದರಿಸಿಕೊಂಡು ಹೋಗುವದು ಧರ್ಮ! ಎಂದು ಪರಿಗಣಿಸಲಾಗುತ್ತಿತ್ತು. ಅಂತೆಯೇ ಗುಡಿಗಾರರು ಗಂಧದ ಕೆತ್ತನೆ, ಕಂಚುಗಾರರು ಮೂರ್ತಿಪಾತ್ರೆಗಳನ್ನು ಎರಕ ಹೊಯ್ಯುವದರಲ್ಲಿ, ಸುವರ್ಣಕಾರರು, ಮೀನುಗಾರರು, ನಾವಿಕರು, ಕಲಾಯಿ ಹಾಕುವವರು, ಗಾರೆಯವರು, ಚಿಪ್ಪಿಗರು, ಎಲ್ಲರೂ ತಮ್ಮ ಕುಲದ ಕಸಬುಗಳನ್ನು ಪರಿಣತಿಯಿಂದ ಮತ್ತು ಅಭಿಮಾನದಿಂದ ಕೈಗೊಂಡು ಶ್ರದ್ಧೆಯಿಂದ ನೆರವೇರಿಸುತ್ತಿದ್ದರು. ಎಲ್ಲರ ಕಾರ್ಯ-ಚಟುವಟಿಕೆಗಳು ಸೂರ್ಯಾಸ್ತದೊಂದಿಗೆ ಮುಕ್ತಾಯ ಗೊಳ್ಳುತ್ತಿದ್ದವು. ಆಗಿನ ಶರಾವತಿ ನದಿ, ವಿಶಾಲವಾಗಿ ಹರಡಿಕೊಂಡು, ಯಾವುದೇ ವಾಹನ ಗಳನ್ನು ಆಚೆಯ ದಡಕ್ಕೆ ದಾಟಿಸುವ ಏರ್ಪಾಡು ಇರಲಿಲ್ಲ. ಅಂತೆಯೇ ಹುಬ್ಬಳ್ಳಿಯಿಂದ ನಸುಕಿನಲ್ಲಿ ಹೊರಟ ಮೋಟಾರಗಾಡಿ, ಕತ್ತಲಾಗುವದರೊಳಗೆ ಹೊನ್ನಾವರ ಸೇರಿಕೊಂಡಿ ತೆಂದರೆ, ಊರಿಗೆ ಆ ದಿನ, ಹೊರ ಜಗತ್ತಿನ ಸಂಪರ್ಕ ಮುಗಿದಂತೆ! ಕತ್ತಲನ್ನು ಹೊಡೆದೋಡಿಸಲು ಹೊನ್ನೆಣ್ಣೆಯ 'ಸಮೆ'ಯನ್ನು ಉರಿಸುತ್ತಿದ್ದರು. ಅದರ ಬೆಳಕಿನಲ್ಲಿ ಮಕ್ಕಳ ಓದು, ಪಠಣ, ಪಾರಾಯಣ, ಭಜನೆಗಳು ನಡೆಯುತ್ತಿದ್ದವು. ಬಳಿಕ ಅನ್ನ ಸಾರು, ತಂಬುಳಿ, ಗೊಜ್ಜು, ಮಜ್ಜಿಗೆಗಳ ಊಟ ಮುಗಿಸಿ ಹಾಸಿಗೆ ಸೇರಿದರೆಂದರೆ ಇನ್ನೊಂದು ನೆಮ್ಮದಿಯ ದಿನ ಕಳೆದಂತೆ. ಊರಿನ ಉಳ್ಳವರು ಹಾಗೂ ಜನಸಾಮಾನ್ಯರ ಊಟ-ಉಡಿಗೆಗಳಲ್ಲಿ ಹೇಳಿಕೊಳ್ಳುವ ಅಂತರವಿರುತ್ತಿರಲಿಲ್ಲ. ಮೇಲು-ಕೀಳು ಭಾವನೆಗೆ

ಅವಕಾಶವಿರುತ್ತಿರಲಿಲ್ಲ. ಪ್ರತಿ ವೃತ್ತಿಯವರು ಸಮಾಜದ ಅವಿಭಾಜ್ಯ ಘಟಕವಾಗಿದ್ದಾರೆ ಎಂದು ಎಲ್ಲರೂ ಮನಗಂಡಿದ್ದರು.” ಕ್ರಿಶ್ ಸ್ಥೂಲವಾಗಿ ತಾವು ಬೆಳೆದ ಬಾಲ್ಯಕಾಲೀನ ಸಮಾಜವನ್ನು ಸೊಸೆಗೆ ವರ್ಣಿಸಲು ಯತ್ನಿಸಿದರು.

“ಇಂಥ ಕಗ್ಗಹಳ್ಳಿಯ ವಾತಾವರಣದಲ್ಲಿ ಹುಟ್ಟಿ ಬೆಳೆದ ನೀವು ಉಚ್ಚಶಿಕ್ಷಣಕ್ಕಾಗಿ ಅಮೇರಿಕೆಗೆ ಹೋಗಲು ಹೇಗೆ ಸಾಧ್ಯವಾಯಿತು?” ಪುತ್ರನು ವಿಸ್ಮಯಪಟ್ಟ.

“ಈ ಪ್ರದೇಶದಲ್ಲಿ ಶಿಕ್ಷಣದ ಸೌಕರ್ಯಗಳು, ಅತಿಕಡಿಮೆ ಇದ್ದರೂ ಕರಾವಳಿಯ ಜನ, ಶಿಕ್ಷಣಕ್ಕೆ ಆದ್ಯತೆ ಕೊಡುತ್ತಲೇ ಬಂದಿದ್ದಾರೆ. ನಮಗೆ ‘ಕಸಬಾ ಗಂಡು ಮಕ್ಕಳ ಶಾಲೆ,’ಪ್ರಾಥಮಿಕ ಹಂತದಲ್ಲಿ ಇದ್ದಂತೆ, ಹುಡುಗಿಯರಿಗೂ ಪ್ರತ್ಯೇಕ ಶಾಲೆ ಇತ್ತು. ಊರ ಜನವಸತಿಯನ್ನು ಗಮನಿಸಿದಾಗ, ಶಾಲಾ ವಿದ್ಯಾರ್ಥಿಗಳ ಸಂಖ್ಯೆ ದಂಗುಬಡಿಸುವಷ್ಟು ಹೆಚ್ಚು ಇರುತ್ತಿತ್ತು. ಕ್ರೈಸ್ತ ಮಿಶನರಿಗಳು ತುಂಬ ಹಿಂದೆಯೇ ‘ಬಾಸೆಲ್ ಮಿಶನ್’ ಇಂಗ್ಲಿಷ್ ಶಾಲೆ ತೆಗೆದಿದ್ದರು. ಇಲ್ಲಿ ಅಭ್ಯಸಿಸಿದ ತಂದೆಯವರು ಮ್ಯಾಟ್ರಿಕ್ ಪರೀಕ್ಷೆ ಕಟ್ಟಲು ಹಡಗಿನಲ್ಲಿ ಮುಂಬೈಗೆ ಹೋಗಿ ಬರಬೇಕಾಯಿತು! ನಂತರದ ವರ್ಷಗಳಲ್ಲಿ ಪ್ರೌಢಶಾಲೆಯ ಕೊರತೆ ತೀವ್ರ ಅನಿಸಿ, ಸ್ಥಳೀಯರೇ ಸೇರಿ ‘ದಿ ನ್ಯೂ ಇಂಗ್ಲೀಷ್ ಸ್ಕೂಲ್’ ಪ್ರಾರಂಭಿಸಿದರು. ಮಿಶನರಿಗಳ ಸೇಂಟ್ ಥಾಮಸ್ ಸ್ಕೂಲಿಗೂ, ಈ ಸ್ಕೂಲಿಗೂ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ತೋರಿಸಲು ತುರುಸಿನ ಸ್ಪರ್ಧೆ ನಡೆಯುತ್ತಿತ್ತು. ಅಂದು ಮ್ಯಾಟ್ರಿಕ್ ಅಥವಾ ಎಸ್.ಎಸ್.ಎಲ್.ಸಿ. ಮುಗಿಸಿದವರಿಗೂ ಮುಂಬೈಯಂತಹ ಮಹಾನಗರಗಳಲ್ಲಿ ನೌಕರಿಗಳು ಸಿಗುತ್ತಿದ್ದುದರಿಂದ ಹಾಯ್‌ಸ್ಕೂಲ ಶಿಕ್ಷಣ ಮುಗಿದೊಡನೆ ಯುವಪೀಳಿಗೆಯವರೆಲ್ಲ ಮುಂಬೈಗೆ ಹೋಗಲಾರಂಭಿಸಿದರು. ಅಲ್ಲಿ ತಮ್ಮೂರಿನ ಕೊಂಕಣಿ-ಕನ್ನಡಗಳನ್ನು ಮರವಿನ ಖಾತೆಗೆ ಜಮಾ ಮಾಡಿ ಮರಾಠೀ ಭಾಷೆಯನ್ನು ತಮ್ಮದನ್ನಾಗಿ ಮಾಡಿಕೊಂಡರು. ಅಲ್ಲಿಯೇ ನೆಲೆಸಿದ್ದ ಮನೆತನಗಳ ಹುಡುಗಿಯರನ್ನು ವರಿಸಲಾರಂಭಿಸಿದರು. ಶಾಶ್ವತವಾಗಿ ಮಹಾರಾಷ್ಟ್ರದವರೇ ಆಗಿಬಿಟ್ಟರು!” ಶಿಕ್ಷಣದೊಂದಿಗೆ ಕಾಣಿಸಿಕೊಂಡ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕ್ರಿಶ್, ವಿವರಿಸಿದರು.

“ನೀವೂ ಮುಂಬೈಗೆ ಹೋಗಿ ನೌಕರಿ ಹಿಡಿದು ಮರಾಠೀ ಕನ್ಯೆಯನ್ನು ಮದುವೆಯಾಗ ಬಹುದಿತ್ತಲ್ಲ?” ಜೋ ಪತಿಯನ್ನು ಛೇಡಿಸಿದಳು.

“ನನ್ನ ಹಣೆಯಲ್ಲಿ ವಿಧಾತನು ನೀನೇ ಪತ್ನಿ! ಎಂದು ಬರೆದರೆ ಏನು ಮಾಡುವಂತಿತ್ತು? ಆದ್ದರಿಂದ ಧಾರವಾಡದ ಕರ್ನಾಟಕ ಕಾಲೇಜನ್ನು ಹೆಚ್ಚಿನ ವ್ಯಾಸಂಗಕ್ಕೆ ಸೇರಿಕೊಳ್ಳುವಂತೆ ಆಯಿತು! ಆಗ ಅದು ನಾಲ್ಕು ಜಿಲ್ಲೆಗಳ ಬುದ್ಧಿವಂತರನ್ನು ಆಕರ್ಷಿಸುವ ಪ್ರತಿಷ್ಠಿತ ಸರಕಾರೀ ಕಾಲೇಜು ಆಗಿತ್ತು. ಸ್ನಾತಕೋತ್ತರ ಪದವಿ ಪಡೆದ ಬಳಿಕ ಅದೇ ಕಾಲೇಜಿನವರು ಕರೆದು ನೌಕರಿ ಕೊಟ್ಟರು. ಕೇವಲ ಎರಡು ವರ್ಷದ ಶಿಕ್ಷಕ ವೃತ್ತಿ ಮಾಡುವಲ್ಲಿ ಅಮೇರಿಕೆಯ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಶಿಷ್ಯವೇತನ ಲಭಿಸಿದ್ದರಿಂದ, ಅಲ್ಲಿಗೂ ಹೋಗುವಂತಾಯಿತು. ಹುಟ್ಟಿ ಬೆಳೆದ ನೆಲಕ್ಕೇ ನನ್ನ ಜೀವನ ಮೀಸಲಿಡಬೇಕು! ಎಂಬ ಕನಸು ಇಲ್ಲದಿದ್ದರೆ, ನಾನೂ ಯಾಂಕಿ

ಕುವರಿಯೋರ್ವಳನ್ನು ವರಿಸಿ ಅಮೇರಿಕೆಯಲ್ಲಿ ನೆಲೆಸುತ್ತಿದ್ದನೋ ಏನೋ! ಆದರೆ ಆ ದೇಶದ ಯಾಂತ್ರಿಕ ಜೀವನ, ವೈವಿಧ್ಯತೆಯ ಕೊರತೆ, ಹಾಗೂ ದೈನಂದಿನ ಏಕತಾನತೆಗಳು ನನ್ನನ್ನು ಆಕರ್ಷಿಸಲೇ ಇಲ್ಲ. ಇಲ್ಲಿಯ ನೂಕು-ನುಗ್ಗಲು, ಪರದಾಟ, ಹಸಿವು-ಬಡತನ, ತೀವ್ರ ಅಭಾವಗಳಲ್ಲೂ ಜೀವಂತಿಕೆ ಇದೆ. ಅಂತೆಯೇ ಇಲ್ಲಿಯವರೊಡನೆ ಒಂದಾಗಿ ಬಾಳಲು ಬಯಸಿದೆ. ಈಗಲಾದರೂ ಅಷ್ಟೇ! ಮರಳಿ ಹುಟ್ಟೂರಿಗೆ ಬಂದರೆ ಹೇಗೆ? ಎಂದು ಅರಿತುಕೊಳ್ಳಲೆಂದೇ ಇಲ್ಲಿಗೆ ಬಂದಾಯ್ತು" ತಮ್ಮ ಈ ಪಯಣದ ಉದ್ದೇಶವನ್ನು ಕ್ರಿಶ್ ಸ್ಪಷ್ಟವಾಗಿ ಹೊರಗೆಡವಿದರು.

"ಆದರೆ ನೀವಿಲ್ಲಿ ಹುಟ್ಟಿ ಬೆಳೆದಾಗಿನ ಪರಿಸ್ಥಿತಿ ಇಲ್ಲವೇ ಇಲ್ಲ! ಊರಿನಲ್ಲಿ ಇಷ್ಟೊಂದು ಬದಲಾವಣೆಗಳ ಗಾಳಿ ಬೀಸಲು ಹೇಗೆ ಸಾಧ್ಯವಾಯಿತು?" ಕಿಮ್ ಕೇಳಿದಳು.

"ನಮ್ಮ ಊರೇ ಪ್ರಗತಿ ಹೊಂದಿದರೆ, ಯುವ ಪೀಳಿಗೆಯವರು ಇತರೆಡೆಗಳಲ್ಲಿ ವಲಸೆ ಹೋಗುವದನ್ನು ತಪ್ಪಿಸಬಹುದೆಂದು ಖಚಿತವಾಗಿ ನಂಬಿದ ಊರ ಕೆಲ ಸಮಾಜ-ಸುಧಾರಕರು ಈ ಹಿರೇಹಳ್ಳಿಗೆ ಹೊಸ ರೂಪ ಕೊಡಲು ಕಂಕಣಬದ್ಧರಾದರು. ಇವರಲ್ಲಿ ನಮ್ಮ ದೊಡ್ಡಪ್ಪ ಬಿಕ್ಕು ವಾಸುದೇವ ಕಾಮತರು ಮುಂಚೂಣಿಯಲ್ಲಿದ್ದರು. ಸ್ವಂತ ಹಣ ಖರ್ಚು ಮಾಡಿ ಊರ ಜನರು ಗಾಳಿ ಸೇವನೆಗೆ ಬಂದಾಗ ವಿಶ್ರಮಿಸುವಂತೆ ಟಪ್ಪರ್ ಹಾಲಿನ ಪರಿಸರದಲ್ಲಿ ಪೀಠಗಳನ್ನು ಕಟ್ಟಿಸಿದರು. ಊರ ಆಸ್ಪತ್ರೆಯಲ್ಲಿ ಪ್ರಸೂತಿಗಾಗಿ ಮೀಸಲಿಟ್ಟ ಸ್ಥಳ ಅಸಮರ್ಪಕವೆಂದು ವಿಶೇಷ ವಾರ್ಡ್ ಕಟ್ಟಿಸಿದರು. ನೀರಿನ ಅಭಾವವಿದ್ದ ಹಲವೆಡೆ ಭಾವಿಗಳನ್ನು ತೋಡಿಸಿದರು. ಊರಿನ ಪ್ರಗತಿಗಾಗಿ ಸರ್ವವಿಧದಲ್ಲಿ ಶ್ರಮಿಸಿದರು. ಸಿದ್ಧಾಪುರದಿಂದ ಹೊನ್ನಾವರಕ್ಕೆ ನೇರ ಮಾರ್ಗವಾಗ ಬೇಕೆಂದು ಪ್ರಚಾರ-ಪ್ರಯತ್ನ ನಡೆಸಿದರು. ಇದರಿಂದ ಅಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ಅಡಕೆ, ಬಾಳೆ, ತೆಂಗುಗಳು ಶಿರ್ಸಿಗೆ ಹೋಗುವ ಬದಲು ನಮ್ಮೂರಿಗೆ ಬರುವ ಸಾಧ್ಯತೆ ಹೆಚ್ಚಾಗಿ ಹೊನ್ನಾವರ ಬಂದರದ ಪ್ರಾಶಸ್ತ್ಯ ಬೆಳೆಯುವದೆಂದು, ಅವರ ಎಣಿಕೆಯಾಗಿತ್ತು. ಹಿಂದೆ, ಮೈಸೂರು ಮಹಾರಾಜರ ಸರಕಾರ, ಸಂಸ್ಥಾನಕ್ಕೆ ಭಟಕಳ ಬಂದರನ್ನು ಕೊಡಮಾಡಿ! ಎಂದು ಬ್ರಿಟಿಷರಿಗೆ ಆಗ್ರಹ ಮಾಡಿತ್ತು. ಅದು ಸಾಧ್ಯವಾಗಬಹುದೆಂದು ಆಶಿಸಿ ಶಿವಮೊಗ್ಗೆಯಿಂದ ನಮ್ಮೂರಿಗೆ ಸಮೀಪದ ತಾಳಗುಪ್ಪಾವರೆಗೂ ರೇಲ್ವೆಯಿಂದ ಜೋಡಿಸಿತ್ತು. ಅಲ್ಲಿಂದ ಹೊನ್ನಾವರಕ್ಕೆ ರೇಲ್ವೆ ಬಂದರೆ, ಬಂದರು, ಊರಿನ ವ್ಯಾಪಾರ, ಉದ್ಯೋಗಗಳೆಲ್ಲ ಬೆಳೆದೇ ಬೆಳೆಯುತ್ತವೆ! ಎಂದು ಈ ದಿಕ್ಕಿನಲ್ಲಿ ಸರ್ವಪ್ರಯತ್ನವನ್ನು ಕಾಮತರು ಕೈಕೊಂಡರು. ಸ್ಥಾನೀಯ ಮುಖಂಡರು, ರಾಜಕಾರಣಿಗಳು, ಶಾಸಕರು, ಸಂಬಂಧಪಟ್ಟ ಮಂತ್ರಿಗಳು ಇತ್ಯಾದಿ ಅವರು ಸಂಪರ್ಕಿಸದೇ ಇದ್ದ ವ್ಯಕ್ತಿಗಳೇ ಇರಲಿಲ್ಲ. ಅವರ ಮನವಿಗಳಿಗೆ, ಓಡಾಟಕ್ಕೆ ಯಾವ ಪಿಳ್ಳೆಯೂ, ಯಾವ ವಿಧದಲ್ಲೂ ಪ್ರತಿಸ್ಪಂದಿಸಲಿಲ್ಲ. ಅವರ ಜೀವಿತ ಕಾಲದಲ್ಲಿ ನಡೆಸಿದ ಪತ್ರ ವ್ಯವಹಾರಗಳ ದಾಖಲೆಗಳನ್ನಾದರೂ ತಮ್ಮ ಸಂಗ್ರಹಕ್ಕೆ ಕೊಡಮಾಡಿ! ಎಂದು ಪುರಾತನ ಪತ್ರಾಗಾರ ಖಾತೆಯವರು ವಿಚಾರಿಸಿದಾಗ ಅವು ಎಲ್ಲಿವೆಯೋ! ಹುಡುಕಬೇಕು ಎಂದು ನಿರ್ಲಕ್ಷದ ಜವಾಬೂ ಮನೆಯ ಜನರಿಂದ ಹೊರಟಿತು.... ಬಹುಶಃ ಇಷ್ಟು ಹೊತ್ತಿಗೆ ಅವೆಲ್ಲ ಸುಟ್ಟು

ಧ್ವಂಸವಾಗಿರಬೇಕು" ಹಳೇ ವಿಚಾರವೊಂದನ್ನು ಕ್ರಿಶ್ ನೆನಪಿಸಿಕೊಂಡರು.

"ಇಷ್ಟು ಹಿಂದುಳಿದ ಹಿರೇಹಳ್ಳಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಆದದ್ದಾದರೂ ಹೇಗೆ? ನಾವು ಕರ್ನಲ್ ಹಿಲ್‌ಗೆ ಹೋಗುವಾಗ ಬಳಸಿದ ಮಾರ್ಗ ಅದೇ ಅಲ್ಲವೇ?" ಊರಿನ ಹೆಗ್ಗುರುತುಗಳನ್ನು ಅರಿಯಲು ಕಾಯಂ ಉತ್ಸುಕಳಾಗಿದ್ದ ಕಿಮ್ ಕೇಳಿದಳು.

"ಇದು, ಬೆಲ್ಲ ತೂಗುವಲ್ಲಿ ನೊಣಕ್ಕೆ ಮೃಷ್ಟಾನ್ನ ಸಿಕ್ಕಂತೆ! ರಾಷ್ಟ್ರೀಯ ಹೆದ್ದಾರಿಗಳ ಯೋಜನೆಯಲ್ಲಿ, ಕಾಶ್ಮೀರದೊಡನೆ ಕೇರಳವನ್ನು ಜೋಡಿಸುವ ಮಾರ್ಗ, ಮುಂಬಯಿವರೆಗೆ ಕರಾವಳಿಯ ಮೂಲಕ ಹೋಗುತ್ತಿತ್ತು. ನಮ್ಮೂರನ್ನು ಕರಾವಳಿಯಿಂದ ಬೇರ್ಪಡಿಸುವದು ಸಾಧ್ಯವಿರಲಿಲ್ಲವಲ್ಲ! ಹೆದ್ದಾರಿ ತಾನಾಗಿ ನಮ್ಮೂರಿಗೆ ಬರುವಂತಾಯ್ತು. ಆದರೆ ಅದರ ನಿರ್ಮಾಣ ಹಂತದಲ್ಲಿ ಊರವರು ಪಡಬೇಕಾಗಿ ಬಂದ ಬವಣೆ, ಅಷ್ಟಿಷ್ಟಲ್ಲ. ರಾಜಮಾರ್ಗಕ್ಕೆ ಅವಕಾಶಮಾಡಿ ಕೊಡಲು ಶತಮಾನಗಳಿಂದ ಬಳಸಿದ, ಜನರಿಗೆ ರೂಢವಾದ ಸಂಕ, ಸೇತುವೆಗಳನ್ನೆಲ್ಲ ಅಗೆದು ಹಾಕಿದ್ದರು. ಅಂತೆಯೇ ತೀರ ಹತ್ತಿರದ ಭಟಕಳಕ್ಕೆ ಹೋಗಲು ಇಲ್ಲವೇ ಕುಮಟೆಗೆ ಹೋಗಿ ಬರಲು ಇಡೀ ದಿನ ಬೇಕಾಗುತ್ತಿತ್ತು ಎಂದರೆ ನಂಬುವದು ಕಷ್ಟ! ಶರಾವತಿ ನದಿಗೆ ಸೇತುವೆ ನಿರ್ಮಿಸುವಾಗಲಂತೂ ಶ್ರೀರಾಮನ ಕಪಿಸೈನ್ಯ ಲಂಕೆಗೆ ಹೋಗಲು ಸೇತುವೆ ಕಟ್ಟಲು ಶ್ರಮಿಸಿರಬಹುದಾದ ಕಲ್ಪನೆಯನ್ನು ಮೂಡಿಸುತ್ತಿತ್ತು. ಅದನ್ನು ಅಂದರೆ ಶರಾವತಿ ಸೇತುವೆಯನ್ನು ಗಟ್ಟಿಮುಟ್ಟಾಗಿ ಕಟ್ಟದೇ ಇದ್ದುದರಿಂದ ಸದಾರೋಗಿಷ್ಠನಂತೆ ಕಾಯಂ ಚಿಕಿತ್ಸೆಗೆ ಒಳಪಡಬೇಕಾಯಿತು. ಒಮ್ಮೆ ಬೆನ್ನು ನೋವು, ಇನ್ನೊಮ್ಮೆ ಕಫ, ಮತ್ತೊಮ್ಮೆ ಹೊಟ್ಟೆ ನೋವು, ಮಗುದೊಮ್ಮೆ ತಲೆನೋವುಗಳಂತೆ ಈ ಸೇತುವೆಗೆ ಕಾಣಿಸಿಕೊಂಡ ತೊಂದರೆಗಳಿಗೆ ಹಣದ ರೂಪದ ಮಾತ್ರೆಗಳನ್ನು ಎಷ್ಟೊಂದು ನುಂಗಿಸಬೇಕಾಯಿತೆಂಬ ನಿರ್ದಿಷ್ಟ ಲೆಕ್ಕಾಚಾರ ಇಟ್ಟವರಿಲ್ಲ! ಗೋವಾದ ಮಾಂಡವಿ, ಬೋರಯಿ ನದಿಯ ಸೇತುವೆ ಕೌಮಾರ್ಯದಲ್ಲೇ ಕುಸಿದು ಜನರ ಸಾವು-ನೋವಿಗೆ ಕಾರಣವಾದ್ದರಿಂದ, ಶರಾವತಿ ಸೇತುವೆಯನ್ನೂ ಅದೇ ಗುತ್ತಿಗೆದಾರರು ರಚಿಸಿದ್ದರಿಂದ, ಇದು ಪಾತಾಳಕ್ಕಿಳಿದರೆ ಆಗುವ ಅಪಾರ ಹಾನಿಯನ್ನು ಊಹಿಸಿ, ವಾಹನ ಸಂಚಾರವನ್ನೇ ಸರಕಾರ, ಸ್ಥಗಿತಗೊಳಿಸಿತು. ಬೃಹತ್(!) ದುರಸ್ತಿಗೆ ವ್ಯವಸ್ಥೆ ಮಾಡಿತು. ಅಂದಿನ ದಿನಗಳಲ್ಲಿ ಬಾರ್ಜ್, ಜೆಟ್ಟಿಗಳಲ್ಲಿ ವಾಹನಗಳನ್ನು ಸಾಗಿಸಲಾರಂಭಿಸಿದರು. ನದಿಯ ದಂಡೆಯ ಎರಡೂ ಮಗ್ಗಲಿಗೆ ನಾಲ್ಕಾರು ಕಿಲೋಮೀಟರ್ ದೂರದವರೆಗೆ ಭಾರಿ ವಾಹನಗಳು, ಬಸ್ಸುಗಳು ನದಿ ದಾಟುವ ಸರದಿಗಾಗಿ ಸಾಲಾಗಿ ನಿಂತದ್ದನ್ನು ಕಾಣಬಹುದಿತ್ತು" ರಾಷ್ಟ್ರೀಯ ಹೆದ್ದಾರಿಯು "ನಡೆದು ಬಂದ ದಾರಿ" ಯನ್ನು ಕ್ರಿಶ್ ವಿವರಿಸಿದರು.

ಈ ಹೆದ್ದಾರಿಯಿಂದ ತಮಗೆ ಒದಗಬಹುದಾದ ಅನಿಷ್ಟಗಳ ಭವಿಷ್ಯದ ಕಲ್ಪನೆ, ಮುಂದಾಗಿಯೇ ಆಗುವಂತಿದ್ದರೆ, ಕೆಲವರಾದರೂ ಪ್ರಜ್ಞಾವಂತರು ರಾಷ್ಟ್ರೀಯ ಮಾರ್ಗ ಬೇಕೇ ಇಲ್ಲವೆಂದು ಅಂದೋಲನ ಕೈಗೊಳ್ಳುತ್ತಿದ್ದರೋ ಏನೋ! ಗಂಟೆಗೆ ಕೇವಲ ಹತ್ತು ಕಿಲೋಮೀಟರ್ ಓಡಿಸಲು ಸಾಧ್ಯವಿದ್ದ ರಸ್ತೆಯಲ್ಲಿ ಚಾಲಕರು ಈಗ ಸುಲಭವಾಗಿ ನೂರು ಕಿಲೋಮೀಟರ್ ವಾಹನಗಳನ್ನು ಓಡಿಸಲಾರಂಭಿಸಿದರು. ತಾಸಿಗೆ ಹತ್ತು ವಾಹನಗಳೂ ಕಾಣಸಿಗದೆಡೆಯಲ್ಲಿ

ನೂರು ವಾಹನಗಳು ಕಾಣಿಸಿಕೊಂಡವು. ನಾ ಮುಂದು! ತಾ ಮುಂದು! ಎಂದು ಗಾಡಿಯೋಡಿಸುವ ಸ್ಪರ್ಧೆಯಲ್ಲಿ ಪಾಲುಗೊಂಡವರಂತೆ ಎಲ್ಲರೂ ವರ್ತಿಸಲಾರಂಭಿಸಿದರು. ಖಾಸಗೀ ಟ್ಯಾಕ್ಸಿಗಳಂತೂ ತಮ್ಮ ಜೇಬು ತುಂಬಿಸಿಕೊಳ್ಳುವ ಏಕ ಮಾತ್ರ ಧ್ಯೇಯದಿಂದ ಯಾವ ಸಾರಿಗೆ-ನಿಯಮವನ್ನೂ ಪಾಲಿಸುತ್ತಿಲ್ಲ. ಭಾರವಾದ ಸರಕುಗಳನ್ನು ಹೊತ್ತ ಟ್ರಕ್ ಚಾಲಕರು ರಸ್ತೆಗಳೆಲ್ಲ ತಮ್ಮಪ್ಪನ ಖಾಸಗೀ ಒಡೆತನಕ್ಕೆ ಒಳಪಟ್ಟಿವೆ! ಎಂದು ನಂಬಿ ಯಾರಿಗೂ ದಾರಿ ಬಿಡುವ ಗೋಜಿಗೇ ಹೋಗುವದಿಲ್ಲ. ಈ ನೂಕು-ನುಗ್ಗಲಿನಲ್ಲಿ ಜರುಗುವ ಅಪಘಾತಗಳಿಗೆ ಕೊನೆ ಮೊದಲಿಲ್ಲ. ದನಕರುಗಳೊಂದಿಗೆ ಅದೆಷ್ಟೋ ಎಳೆ ಜೀವಗಳು, ಪರಿಚಿತರು ಪ್ರಾಣ ಕಳೆದುಕೊಂಡಿದ್ದಾರೆ. ಅದೆಷ್ಟೋ ಜನ ಕೈ-ಕಾಲು ಕಳೆದುಕೊಂಡು ಶಾಶ್ವತ ಅಂಗವಿಕಲತೆಯನ್ನು ಹೊಂದಿದ್ದಾರೆ. ಹಿಂದೆ ಕೇರಳದಿಂದ ನಮ್ಮೂರಿಗೆ ಬರಲು ಏಳು ನದಿಗಳನ್ನು ದಾಟಬೇಕಿತ್ತು. ಹೀಗಾಗಿ ಸಾಹಸಿಗಳನ್ನು ಬಿಟ್ಟರೆ ಬರುವವರು ಕಡಿಮೆ ಇದ್ದರು. ಈಗ ಎಲ್ಲವುಗಳ ಮೇಲೆ ಸೇತುವೆಗಳ ನಿರ್ಮಾಣವಾಗಿದೆ. ಇದರಿಂದಾಗಿ ಉತ್ತರ ಹಾಗೂ ದಕ್ಷಿಣದಿಂದ ಕಳ್ಳಕಾಕರ ಹಾವಳಿ ಅಧಿಕವಾಗಿ ಬಿಟ್ಟಿದೆ! ಕೊಳ್ಳೆ ಹೊಡೆಯುವ ಚತುರ ಗುಂಪುಗಳೊಂದಿಗೆ ಸ್ಥಳೀಯರೂ ಶಾಮೀಲಾಗಿ ಮಾಹಿತಿ ನೀಡುವದರಿಂದ ಮನೆಗೆ ಬೀಗಹಾಕಿ ಬೇರೆ ಊರಿಗೆ ಹೋದವರ ಮನೆಗಳಲ್ಲಿ-ಹೋದ ರಾತ್ರೆಯೇ ಕಳ್ಳತನಗಳು ಜರುಗುವದು ಖಂಡಿತ! ಊರ ಪೊಲೀಸರಿಗೆ ಅವರ ಹಪ್ತಾ-ಮಾಮೂಲುಗಳನ್ನು ಕೊಡಮಾಡುವದರಿಂದ ಕಳ್ಳರು ಸಿಕ್ಕಿ ಬೀಳುವದೇ ಇಲ್ಲ. ಮದುವೆಗಾಗಿ ಮಾಡಿಸಿಟ್ಟ ಆಭರಣ, ಸಾಲಕ್ಕಾಗಿ ಅಡವಿಟ್ಟುಕೊಂಡ ಬೆಳ್ಳಿ, ಬಂಗಾರ, ನಗದು, ರೋಖಹಣ ಅಪಹರಿಸಿಕೊಂಡು ಹೋದ ಸಂಪತ್ತಿಗೆ ಲೆಕ್ಕವೇ ಇಲ್ಲ. ಹಣಕ್ಕಾಗಿ ಸಿರಿವಂತರ ಕೊಲೆ ನಡೆದಿದೆ. ರಾಜಕೀಯ ಕೊಲೆಗಳೂ ಕಾಣಿಸಿಕೊಂಡಿವೆ. ನಮ್ಮೂರಿನಲ್ಲಿ ಹಿಂದೆಂದೂ ನಡೆಯದ ಘಟನೆಗಳು ಇವು!" ರಾಷ್ಟ್ರೀಯ ಹೆದ್ದಾರಿಯ ರಚನೆಯ ನಂತರ ಊರಲ್ಲಿ ನಡೆದ ಅನಾಹುತಗಳ ಪರಿಚಯವನ್ನು ತುಳಸು ಕೊಡಮಾಡಿದ.

"ಈಗ ಹೊನ್ನಾವರವನ್ನು ಕೊಂಕಣರೇಲಿನಿಂದ ಇತರ ನಗರಗಳಿಗೆ ಜೋಡಿಸಿದ್ದರಿಂದ ದೇಶದ ಯಾವ ಮೂಲೆಗೂ ಇಲ್ಲಿಯ ಜನ ಹೋಗಿ ಬರಬಹುದಲ್ಲ? ಆ ಬಗ್ಗೆ ತುಂಬ ಅಭಿಮಾನದಿಂದ ಹಿಂದೊಮ್ಮೆ ಪತ್ರ ಬರೆದಿದ್ದಿರಿ! ಈಗ ಅದರ ಉತ್ತಮ ಪರಿಣಾಮಗಳು ಕಾಣಿಸುತ್ತಿರಬಹುದಲ್ಲ?" ಕಿಮ್ ವಿಚಾರಿಸಿದಳು.

ಇದಕ್ಕೆ ಉತ್ತರಿಸಲು ತುಳಸವೇ ಮುಂದಾದ, "ಕೊಂಕಣಪಟ್ಟಿಯು, ದೇಶದಲ್ಲೇ ಹಿಂದುಳಿದ ಪ್ರದೇಶಗಳಲ್ಲಿ ಒಂದಾಗಿತ್ತು, ಹೀಗಾಗಿ ಅದರ ಬೆಳವಣಿಗೆಗೆ ಟೊಂಕ ಕಟ್ಟಿನಿಂತ ಹಿಂದಿನ ರೇಲ್ವೆ ಮಂತ್ರಿ ಮಧು ದಂಡವತೆಯವರು ರತ್ನಾಗಿರಿಯನ್ನು ಮುಂಬಯಿಗೆ ಜೋಡಿಸುವ ಯೋಜನೆ ಹಾಕಿದ್ದರು. ಆದರೆ ಬೇಗನೆ ಅವರು ಅಧಿಕಾರ ಬಿಟ್ಟುಕೊಡಬೇಕಾಯಿತು. ಅನೇಕ ವರ್ಷಗಳವರೆಗೆ ಈ ರೇಲ್ವೆಯ ಕೆಲಸ ಒಂದು ಸೆಂಟಿಮೀಟರನಷ್ಟು ಕೂಡಾ ಮುಂದುವರಿಯದೇ ಇದ್ದುದರಿಂದ ಮುಂದಿನ ರೇಲ್ವೆ ಮಂತ್ರಿಯಾದ ಜಾರ್ಜ್ ಫರ್ನಾಂಡಿಸರು, ಕರಾವಳಿ ಹೊಂದಿರುವ ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ರಾಜ್ಯಗಳ ಸಂಯುಕ್ತ ಯೋಜನೆಯನ್ವಯ

ಒಂದು ಮಂಡಳ ಸ್ಥಾಪಿಸಿದರು. ಸಾಕಷ್ಟು ಹಣ ಕೊಂಕಣ ರೇಲ್ವೆಗೆ ಹೊಂದಿಸಲು ಕಷ್ಟಪಟ್ಟದ್ದೇ ಅಲ್ಲದೇ ಹೆಚ್ಚಿನ ಹಣಕಾಸಿನ ಸಹಾಯ ಒದಗಿಸುವಂತೆ ಈ ಪ್ರದೇಶದ ಸಿರಿವಂತರಿಗೆ ಕಳಕಳಿಯಿಂದ ವಿನಂತಿಮಾಡಿಕೊಂಡರು. ರೇಲ್ವೆ ಬಾಂಡ್‌ಗಳನ್ನು ಪ್ರಚಾರಕ್ಕೆ ತಂದರು. ಆದರೆ ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣದ ಎಲ್ಲ ಅನಿಷ್ಟಗಳನ್ನು ಎದುರಿಸಬೇಕಾಗಿ ಬಂದ ಹೆಚ್ಚಿನವರು, ಈ ರೇಲ್ವೆಬಾಂಡ್‌ಗಳನ್ನು ಖರೀದಿಸಲೇ ಇಲ್ಲ! ಆದರೂ ರೇಲ್ವೆ ರಚನೆ ಎಲ್ಲರ ನಿರೀಕ್ಷೆ ಮೀರಿ ತ್ವರಿತವೇಗದಿಂದ ಮುಂದುವರಿಯಿತು.

ಆದರೆ ದುರದೃಷ್ಟದಿಂದ ಈ ರೇಲ್ವೆಯೂ, ಜನಸಾಮಾನ್ಯರಿಗೆ ಹೆಚ್ಚಿನ ಸೌಕರ್ಯ ಒದಗಿಸುವದಕ್ಕಿಂತ, ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯ ಮೇಲ್ಪಂಕ್ತಿಯನ್ನು ಅನುಸರಿಸುವಂತಾಗಿದೆ. ಕಳ್ಳಕಾಕರಿಗೆ, ಪುಂಡಪೋಕರಿಗಳಿಗೆ ಪಲಾಯನದ ಅನುಕೂಲವಾಗಿದೆ! ಗೋವಾದ 'ಫೆನ್ನಿ' ಸೆರೆಯು ಅಕ್ರಮ ರೂಪದಲ್ಲಿ ಧಾರಾಳವಾಗಿ ನಮ್ಮಲ್ಲಿ ಬಂದು ಇಳಿಯಲಾರಂಭಿಸಿತು. ಇಲ್ಲಿ ಬೇರೂರಿ ನಿಂತ ಕಳ್ಳ ಸಾಗಾಟದಾರರು ಗೋವಾದ ಕಾಣಕೋಣಕ್ಕೆ ಪಾಸು ಪಡೆದುಕೊಂಡು ವಿವಿಧ ಪಾನೀಯಗಳ ಹೊಳೆಯನ್ನೇ ನಮ್ಮೂರಿನಲ್ಲಿ ಹರಿಸಲಾರಂಭಿಸಿದ್ದಾರೆ. ಬಡವರ ಹೆಣ್ಣುಮಕ್ಕಳನ್ನು ಮುಂಬೈ-ದಿಲ್ಲಿಗಳ ಕೆಂಪು ದೀಪದ ಪ್ರದೇಶಕ್ಕೆ ರವಾನಿಸಲು ಈ ರೇಲ್ವೆ ಮಾರ್ಗದ ಉಪಯೋಗವಾಗುತ್ತಿದೆ, ಎಂದು ನೆನೆಸಿಕೊಂಡಾಗ ಸಂಕಟವಾಗದೇ ಇರುವದೇ ? ಇವಿಷ್ಟೆ ಅಲ್ಲದೇ ಹಿಂದೆಂದೂ ನಾವು ಕಂಡರಿಯದ ಅಪರಾಧಗಳು ದಿನದಿನವೂ ಜರುಗುತ್ತಿರುತ್ತವೆ." ಊರಿಗೆ ಬಂದ ಹೊಸ ಸಂಪರ್ಕ ಜಾಲದ ಪ್ರಗತಿಯ ವರದಿಯನ್ನು ತುಳಸು ಒಪ್ಪಿಸಿದ.

"ನಮ್ಮದು ಪರಶುರಾಮಭೂಮಿ ಎಂದು ಹೆಸರು ಪಡೆದಿದೆ. ಅಂದರೆ ಕ್ಷಾಮ, ಡಾಮರ, ಅನಾವೃಷ್ಟಿಗೆ, ಅವಕಾಶವಿಲ್ಲ! ಧಾನ್ಯ, ಫಲ, ಪುಷ್ಪಗಳಿಗೆ ಎಂದೆಂದೂ ಕೊರತೆಯಾಗದಂತೆ ಪರಶುರಾಮನ ವರ ಇದಕ್ಕಿದೆ! ಎನ್ನಲಾಗುತ್ತಿದೆ. ಆದರೆ ಈ ಎರಡೂ ಸಾರಿಗೆ ಪ್ರಕಾರಗಳಿಗೆ ಎಷ್ಟೊಂದು ಅರಣ್ಯ ಹಾಗೂ ಫಲವತ್ತಾದ ನೀರಿನ ಒರತೆಯಿದ್ದ ಪ್ರದೇಶವನ್ನು ಹಾಳುಗೆಡವಬೇಕಾಯಿತು, ಎನ್ನುವ ಕಲ್ಪನೆ ಜನ ಸಾಮಾನ್ಯರಿಗಿಲ್ಲ. ಎಂದಿಗೂ ಭರಿಸಲಾಗದ ಹಾನಿ. ಜೊತೆಗೆ ಆಗಂತೂ ಜಲವಿದ್ಯುತ್ತಿಗಾಗಿ ನೆಲಸಮ ಮಾಡಿದ ಸಸ್ಯ ವೃಕ್ಷಕೋಟಿಯನ್ನು ಲಕ್ಷಕ್ಕೆ ತೆಗೆದುಕೊಂಡಾಗ ನಾವೆಲ್ಲ ನಿಸರ್ಗಮಾತೆಗೆ ಮಾಡುತ್ತಿರುವ ಅನ್ಯಾಯ, ಅಪಚಾರಗಳ ಕಲ್ಪನೆ ಬರುವಂತಿದೆ!" ಕ್ರಿಶ್ ಸ್ವಲ್ಪದರಲ್ಲಿ ವಿವರಣೆ ನೀಡಿದರು.

೧೫. ಊರ ಹೊಲಸು

ಮಲಮೂತ್ರಗಳೆಲ್ಲ ನದಿಗೇ ಸೇರುವಂತೆ ಕಟ್ಟಿದ ಸಂಡಾಸುಗಳು, ಕೊಳೆತ, ಹಳಸಿದ ಕಾಯಿಪಲ್ಲೆ, ಚೆಲ್ಲಿದ ತಂಗಳ ವಾಸನೆ ಹೊತ್ತ ಗೂಡಂಗಡಿಗಳು, ಮೀನು ಕೊಳೆತ ದುರ್ಗಂಧದ ತೀರ, ಮಲದ ಗುಪ್ಪೆಗಳನ್ನು ಉದ್ದಕ್ಕೂ ಹೊಂದಿದ ಕಡಲದಂಡೆಯನ್ನು ವೀಕ್ಷಿಸುತ್ತ ಕ್ರಿಶ್ ಪರಿವಾರ, ಒಂದು ಸಂಜೆ ಮೌನವಾಗಿಯೇ 'ವಿಹಾರ'ಕ್ಕೆಂದು ಹೊರಟಿತ್ತು. "ಹೋದಲ್ಲಿ, ಬಂದಲ್ಲಿ ಹೊಲಸನ್ನು ಕಂಡು ಮೂಗು ಮುರಿಯುವಂತಾಗಿದೆ! ನಿಮ್ಮೂರಲ್ಲಿ ಹಿಂದೆ ಸ್ವಚ್ಛತೆಯನ್ನು ಹೇಗೆ ಕಾಯ್ದುಕೊಳ್ಳುತ್ತಿದ್ದಿರಿ?" ಕಿಮ್ ಮೌನವನ್ನು ಮುರಿದಳು.

"ಅದೊಂದು ಸ್ವಚ್ಛವಾದ ಅಂದದ ಮಾಯಾನಗರಿಯಾಗಿತ್ತು! ಎಂದು ಈಗ ಪದೇ ಪದೇ ಅನಿಸಿದರೆ ಆಶ್ಚರ್ಯವಿಲ್ಲ! ಹಿಂದಿನವರೆಲ್ಲ ತಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಪರಿಸರ ಮಾಲಿನ್ಯವು ತಲೆದೋರದಂತೆ ಎಚ್ಚರವಹಿಸುತ್ತಿದ್ದರು. ಊರ ಹೊರಗೆ ಗುಡ್ಡಗಾಡು, ವಿಸ್ತಾರವಾದ ಕಾಡು ಹಬ್ಬಿದ್ದರಿಂದ ಪ್ರಾತರ್ವಿಧಿಗೆ ಅದನ್ನೇ ಬಳಸುವ ರೂಢಿಯಿತ್ತು. ಅಲ್ಲಿಗೆ ಹೋಗಲಾಗದ ವಯಸ್ಕರಿಗೆ, ಹೆಂಗಳೆಯರಿಗೆ ಪ್ರತಿ ಮನೆಗೂ ಹಿತ್ತಲಿನ ಮೂಲೆಯಲ್ಲಿ ತಾತ್ಪೂರ್ತಿಕ ಕಕ್ಕಸು ಇದ್ದೇ ಇರುತ್ತಿತ್ತು!" ಎಂದು ಕ್ರಿಶ್, ಪೀಠಿಕೆ ಹಾಕುತ್ತಿದ್ದಂತೆ, "ಹೀಗೆ ಕಂಡಲ್ಲಿ ಮಲಮೂತ್ರ ವಿಸರ್ಜನೆ, ಇಂದು ನಿನ್ನಿನದಲ್ಲ. ಅದೊಂದು ಸಾಮಾಜಿಕ ಗುನ್ಹೆ ಅಲ್ಲವೇ ಅಲ್ಲ! ಇದು.... ಹಿಂದಿನಿಂದ ನಡೆದು ಬಂದಿದೆ!" ಪುತ್ರನ ಟೀಕೆ ಬಂದಿತು.

"ಆದರೆ ಹಿಂದೆ ಊರು ವಿಸ್ತಾರವಾಗಿದ್ದು, ಜನವಸತಿ, ತೀರ ಕಡಿಮೆ ಇತ್ತು. ಅಂತೆಯೇ ನದಿ, ಕಾಡು, ಕಡಲು, ಗುಡ್ಡಗಳನ್ನು ಕಕ್ಕಸು ಆಗಿ ಬಳಸಿದರೂ ಪ್ರಖರವಾದ ಬಿಸಿಲಿಗೆ, ಅದೆಲ್ಲ ಮಾಲಿನ್ಯವಾಗಿ ಉಳಿಯುತ್ತಿರಲಿಲ್ಲ. ಕಾಡಿನೆಡೆ ಗಿಡ-ಮರಗಳಿಗೆಲ್ಲ ಅದು ಗೊಬ್ಬರವಾಗಿ ಪರಿಣಮಿಸುತ್ತಿತ್ತು" ಆಲೋಚನ ಮಗ್ನರಾಗಿದ್ದ ಕ್ರಿಶ್ ನುಡಿದರು.

"ಹೊಲಸು ನೀರು ಹರಿದು ಹೋಗುವ ವ್ಯವಸ್ಥೆಯೇ ಇಲ್ಲ! ಬಳಸಿದ ಚರಂಡಿ ನೀರು ಸಂಚಯವಾಗಿ ಕೊಳಚೆ-ಗುಂಡಿಯಾಗುತ್ತಿರಲಿಲ್ಲವೇ?" ಕಿಮ್ ಕೇಳಿದಳು.

"ಆಗಿನ ಜೀವನ ವಿಧಾನವೇ ಬೇರೆ ಇತ್ತು. ಬಂಗ್ಲೆಯಿರಲಿ, ಗುಡಿಸಲು ಇರಲಿ, ಮನೆಗೊಂದು ಬಾವಿ ಇದ್ದೇ ಇರುತ್ತಿತ್ತು. ನಮ್ಮ ದೊಡ್ಡಮನೆಯಲ್ಲಿ ಎರಡು ಬಾವಿಗಳಿದ್ದವು. ಕತ್ತಕ್ಕೆ ಹುರಿ ಹಾಕಿದ ದಪ್ಪ ಹಗ್ಗ ಬಳಸಿ ಭಾರವಾದ ತಾಮ್ರದ ಕೊಡಗಳಿಂದ ಬಾವಿಯ ನೀರು ಸೇದುವದು ಸುಲಭ ಸಾಧ್ಯವಾಗಿರಲಿಲ್ಲ. ಆದ್ದರಿಂದ ಕುಟುಂಬದ ಸದಸ್ಯರೆಲ್ಲ ಅತ್ಯವಶ್ಯವಾದ

ನೀರನ್ನಷ್ಟೇ ಬಳಸಬೇಕೆಂಬುದು ಅಲಿಖಿತ ನಿಯಮವಾಗಿತ್ತು. ಭಾವಿಕಟ್ಟೆ ಬಳಿ ಯುವಕರು, ದೊಡ್ಡ ಮಕ್ಕಳು, ಕೊಡಗಳಿಂದ ನೀರು ಸೇದಿ ಸೇದಿ ತಲೆಯ ಮೇಲೆ ಹುಯ್ದುಕೊಂಡು ಸ್ನಾನ ಮಾಡಲು ಆಕ್ಷೇಪ ಇರುತ್ತಿರಲಿಲ್ಲ! ಮಡದಿಮಕ್ಕಳಿಗೆ ಬಚ್ಚಲು ಮನೆ-ಹಂಡೆ ನೀರು ಇದ್ದವು. ಸ್ನಾನ ಮಾಡಿದ ನೀರು, ಪಾತ್ರೆ ತೊಳೆದ ನೀರೆಲ್ಲ ತೆಂಗಿಗೆ, ಬಾಳೆಗೆ, ಬಸಳೆ ಮತ್ತಿತರ ತರಕಾರಿ ಗಿಡಗಳಿಗೆ ತಲುಪುವಂತೆ ಹರಿಬಿಡಲಾಗುತ್ತಿತ್ತು. ಹೆಚ್ಚುವರಿ ಬಾಳೆ ಗಿಡ ನಟ್ಟವರು, ತೆಂಗಿನ ತೋಪು ಇದ್ದವರು, ಬಾವಿಗೆ 'ದೊಟ್ಟೆ' ಹಾಕಿ ಗಿಡಮರಗಳಿಗೆ ನೀರುಣಿಸುತ್ತಿದ್ದರು." ಹಿಂದಿನ ಸರಳ ಜೀವನವನ್ನು ಕ್ರಿಶ್ ವಿವರಿಸಿದರು.

"ದನಕರುಗಳನ್ನು ಸಾಕುವ ಪರಿಪಾಠ ಇತ್ತು ಎಂದಿರಿ! ಅವುಗಳ ಮಲ ಮೂತ್ರಗಳು ಕ್ರಿಮಿ-ಕೀಟಗಳಿಗೆ ಆಹ್ವಾನವಾಗುತ್ತಿರಲಿಲ್ಲವೇ?" ಹಾಲನ್ನೆ ಕಾಣದ ಕೋರಿಯದಲ್ಲಿ ಬೆಳೆದ ಕಿಮ್, ಕುತೂಹಲದಿಂದ ಕೇಳಿದಳು.

"ದನಕರುಗಳ ಸಗಣಿ ಉತ್ತಮ ಗೊಬ್ಬರವೆನಿಸಿಕೊಂಡಿದೆ. ಅಲ್ಲದೇ ಅದು ಶೀಘ್ರುದೇಶೀ 'ಪ್ಲಾಸ್ಟರ್' ಬೇರೆ ಗೊತ್ತಾ? ಮನೆ ಅಂಗಳಗಳನ್ನು ಶುಭ್ರವಾಗಿಡಲು ಮೇಲಿಂದ ಮೇಲೆ ಸೆಗಣಿಯಿಂದ ಸಾರಿಸುತ್ತಿದ್ದರು. ಇದಕ್ಕೆ ಸುಟ್ಟ ತೆಂಗಿನ 'ಕರಿ'ಯನ್ನು ಸೇರಿಸಿ ಕಪ್ಪು ಬಣ್ಣ ತರಿಸುತ್ತಿದ್ದರು. ಹಿತ್ತಲಲ್ಲಿ ನೆಟ್ಟ ತರಕಾರಿಗೆ ಗೊಬ್ಬರವಾಗಿ ಸೆಗಣಿಯನ್ನು ಬಳಸುತ್ತಿದ್ದರು. ಮತ್ತೂ ಮಿಕ್ಕಿದ ಸೆಗಣಿಯನ್ನು ಕೈಯಿಂದ ಬಡಿದು ಬೆರಣಿ ಮಾಡಿ ಒಣಗಿಸಿ ಇಂಧನವಾಗಿ ಉಪಯೋಗಿಸುತ್ತಿದ್ದರು.

ಆಗೆಲ್ಲ ಕೊರಡನ್ನು ಉರುವಲಿಗಾಗಿ ಬಳಸುತ್ತಿದ್ದರಷ್ಟೇ? ಬೆರಣಿ ಮತ್ತು ಕಟ್ಟಿಗೆಯ ಬೂದಿಯನ್ನು ಉಪಯುಕ್ತವಾಗಿಸಿದ್ದರು–ಪಾತ್ರೆ-ಪಡಗಗಳನ್ನು ಬೆಳಗಲಿಕ್ಕೆ. ಈಗಿನಂತೆ ಪಾತ್ರೆ ಬೆಳಗುವ ರಾಸಾಯನಿಕಗಳ ಪ್ರಚ್ಛನ್ನ ಹಾನಿಯ ಬೆದರಿಕೆ ಇರಲೇ ಇಲ್ಲ! ಸ್ವಚ್ಛತೆಯ ಮಾಧ್ಯಮವಾಗಿ ಬೂದಿಯ ನಿರಪಾಯತೆಯನ್ನು ನಮ್ಮ ಹಿರಿಯರು ಎಂದೋ ಕಂಡುಕೊಂಡಿದ್ದರು. ಅಲ್ಲದೇ ತಾಮ್ರ-ಹಿತ್ತಾಳೆಯ ಪಾತ್ರೆಗಳ ಹೊರಮೈಗೆ ಅದನ್ನು ಲೇಪಿಸಿದರೆ, ಸುಡುತ್ತಿರುವ ಉರಿಯಿಂದ ಅವಕ್ಕೆ ರಕ್ಷಣೆ ಸಿಗುತ್ತದೆಂದು ಅರಿತಿದ್ದರು. ದಿನ ಬಳಕೆಯ ತರಕಾರಿಗಳನ್ನು ಕಂಬಳಿ ಹುಳದಂತಹ ಕೀಟಬಾಧೆಯಿಂದ ಸಂರಕ್ಷಿಸಲು ಬೂದಿಯನ್ನು ಬಳಸುತ್ತಿದ್ದರು. ಸುವರ್ಣ ಗಡ್ಡೆಯಂತಹ ಭೂಮಿಯೊಳಗಡೆ ಬೆಳೆಯುವ ತರಕಾರಿಯನ್ನು ನೆಡುವಾಗ ಅದರ ಸುತ್ತಲೂ ಬೂದಿಯನ್ನು ಹರವಿದರೆ ಅವು ಬೇಗ ಬೆಳೆಯಲು ಅನುಕೂಲವೆಂದು ಬಲ್ಲವರಾಗಿದ್ದರು. ಇಷ್ಟಾಗಿಯೂ ಮಿಕ್ಕಿದರೆ, ಬೂದಿಯನ್ನು ಕೃಷಿಕರು ಕೊಂಡೊಯ್ಯುತ್ತಿದ್ದರು.

ಅಡಿಗೆ ಮಾಡುವಾಗ ಸುಲಿದ ಸಿಪ್ಪೆ, ತೊಗಟೆ, ಬೀಜಗಳೆಲ್ಲ ದನಕರುಗಳಿಗೆ. 'ಕಲಗಚ್ಚು' ಸೇರಿ ಆಹಾರ ರೂಪವಾಗುತ್ತಿತ್ತು. ಇನ್ನುಳಿದ ಕಸ-ಕಡ್ಡಿಗಳನ್ನು ತೆಂಗಿನ ಮರದಡಿ ಸೇರಿಸಿದರೆ ಗೊಬ್ಬರವಾಗಿ ಪರಿವರ್ತಿಸುತ್ತಿತ್ತು. ಇಂಥ ತಮ್ಮ ಮನೆ-ಹಿತ್ತಿಲುಗಳಲ್ಲೇ ಕಲ್ಮಷದ ವಿಲೇವಾರಿ ಆಗಿ ಊರನ್ನು ಶುಭ್ರವಾಗಿಡಲು ಯಾವ ತೊಂದರೆಯೂ ಇರುತ್ತಿರಲಿಲ್ಲ. ಉಚ್ಚ ಶಿಕ್ಷಣಕ್ಕಾಗಿ,

ಹುಬ್ಬಳ್ಳಿ-ಧಾರವಾಡಕ್ಕೆ ಹೋದಾಗ, ಮೊದಲ ಬಾರಿಗೆ ಅಲ್ಲಿಯ ಕೊಚ್ಚೆಯೊಂದಿಗೆ ಕೊಳೆತ ತರಕಾರಿಗಳ ವಾಸನೆಯಿಂದ ಮೂಗು ಮುರಿಯುವಂತೆ ಆಗಿತ್ತು. ಮಂಗಳವಾರ ಸಂತೆಯ ದಿನವಂತೂ ಕಸ-ಕೊಳೆ, ಮಲ-ಮೂತ್ರ ವಿಸರ್ಜನೆಯ ವಾಸನೆಯಿಂದ ಮೂರ್ಛೆ ಬರುವಂತಾಗುತ್ತಿತ್ತು" ಕ್ರಿಶ್ ಉದ್ಗರಿಸಿದರು.

"ಇಂದು ನಮ್ಮೂರಿನ ಸ್ಥಿತಿ ನೀನು ವರ್ಣಿಸಿದ ಹುಬ್ಬಳ್ಳಿ-ಧಾರವಾಡಗಳಿಗಿಂತ ಕಳಪೆಯಾಗಿದೆ! ನೀನು-ನೀವು ಈಗ ನೋಡಿದ್ದಕ್ಕಿಂತ ಗಲೀಜಾಗಿದೆ! ದೂರದ ಊರುಗಳಲ್ಲಿದ್ದು ಜನರ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸುವ ರಾಜ್ಯ ಹಾಗೂ ಕೇಂದ್ರ ಸರಕಾರಗಳು, ನಾವೆಲ್ಲ ಬರೇ ಹೊಂಡ ಹಾಗೂ ಕೊಳಕು ಕೆರೆ ನೀರನ್ನು ಸೇವಿಸಿಯೇ ಬದುಕುತ್ತಿದ್ದೇವೆ! ಎಂದು ಭ್ರಮಿಸಿ, ಕುಡಿಯಲಿಕ್ಕಾದರೂ ಈ ಪ್ರಾಣಿಗಳಿಗೆ ಸ್ವಚ್ಛ ನೀರು ಸಿಗಲಿ, ಎಂಬ ಸದುದ್ದೇಶದಿಂದ ಕೋಟಿಗಟ್ಲೆ ಹಣವ್ಯಯಿಸಿ ಕೊಳವೆ ನೀರಿನ ಸರಬರಾಜನ್ನು ಪ್ರಾರಂಭಿಸಿತು. ಸಹ್ಯಾದ್ರಿ ಪರ್ವತಗಳೆಡೆ, ಸಮತಟ್ಟಾದ ಪ್ರದೇಶದಲ್ಲಿ ಕೊಳವೆ-ಭಾವಿಗಳನ್ನು ನಿರ್ಮಿಸಿ, ದೊಡ್ಡ ದೊಡ್ಡ ಹೌದುಗಳನ್ನು ತುಂಬಿಸಿ, ಭೂಮಿಯ ಗುರುತ್ವಾಕರ್ಷಣ ಶಕ್ತಿಯಿಂದಲೇ ಊರಿಗೆಲ್ಲ ನಲ್ಲಿ ನೀರು ಪೂರೈಸುವ ವ್ಯವಸ್ಥೆಯಾಯಿತು. ಇದು ಸೀಮಿತ ಅವಧಿಯಲ್ಲಿ ಮಾತ್ರ ಕಾರ್ಯಾಚರಣೆಯಲ್ಲಿ ಇರುವದರಿಂದ, ಅಂದರೆ ದಿನಕ್ಕೆ ಎರಡರಿಂದ ನಾಲ್ಕು ತಾಸಿನವರೆಗಷ್ಟೇ ನೀರು ಹರಿಯುವಂತೆ ಇದ್ದುದರಿಂದ, ಮೀಟರ್‌ಗಳ ಅವಶ್ಯಕತೆಯೇ ಇಲ್ಲವೆಂದರು. ಆದರೆ ಈ ಯೋಜನೆ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಕೊಳವೆಗಳ ಜೋಡಣೆ ಸರಿಯಾಗಿರದ್ದರಿಂದ ನೀರು ಏಕಪ್ರಕಾರವಾಗಿ ಸುರಿದು, ಹರಿದು ವ್ಯರ್ಥವಾಯಿತು. ಜೋಡಿಸಿದ ನಲ್ಲಿಗಳನ್ನೆಲ್ಲ ಜನರು ಕದ್ದೊಯ್ದು, ಎಲ್ಲ ಕಡೆಗೆ ನೀರಿನ ಮಡುವುಗಳು ನಿಂತವು. ಸಾಲದ್ದಕ್ಕೆ ನೀರನ್ನು ಸಮೀಪವಿದ್ದ ಮನೆಗೇ ಒಯ್ಯಲು ಬೇಸರಪಡುವ ಜನ ಅಲ್ಲೇ ಪಾತ್ರೆಗಳನ್ನು ಬೆಳಗುವದು, ಬಟ್ಟೆಗಳನ್ನು ಒಗೆಯುವದು, ಸ್ನಾನ ಮಾಡುವುದು ಮುಂತಾದವನ್ನು ಪ್ರಾರಂಭಿಸಿದರು. ಬಳಸಿದ ನೀರು ಹರಿದು ಹೋಗಲು ವ್ಯವಸ್ಥೆ ಇಲ್ಲದೇ, ನೀರಿನ ಪೂರೈಕೆ ಮಾಡಿದರೆ ಇನ್ನೇನು ಆದೀತು?

"ಕೆಲವು ಮನೆಯವರು ತಮ್ಮ ಮನೆಗೂ ಕೊಳಾಯಿ ನೀರು ಬರುವಂತೆ ಜೋಡಣೆ ಮಾಡಿಸಿದರು. ಆದರೆ ಬರುವ ನೀರಿನ ನಿಯಂತ್ರಣದ ಗೊಜಿಗೇ ಹೋಗದೇ, ಅಕ್ಕಪಕ್ಕದ ಖಾಲಿ ಪ್ರದೇಶಗಳೆಲ್ಲ ಜವುಗು ಪ್ರದೇಶವಾಗಲು ಅನುವು ಮಾಡಿಕೊಟ್ಟರು! ಭೂಮಿಯಲ್ಲಿ ಇಂಗಿದ ಕೊಳಚೆ ನೀರು ಬಾವಿಗಳಲ್ಲೆಲ್ಲ ಸೇರಿಕೊಂಡು, ಅದೇ ನೀರನ್ನು ಬಳಸುವ ಜನರಲ್ಲಿ ಆಗಾಗ ವಾಂತಿ ಭೇದಿಗಳು ಕಾಣಿಸಿಕೊಳ್ಳಲಾರಂಭಿಸಿದವು." ತುಳಸು ಊರಿನ ನೀರಿನ ಸರಬರಾಜಿನ ಹಿಂದಿನ ಕಥೆಯನ್ನು ಬಿತ್ತರಿಸಿದ.

"ಹೆಜ್ಜೆಹೆಜ್ಜೆಗೆ ಹೊಟೇಲುಗಳಾಗಿವೆ. ಊರ ಹೊಲಸಿಗೆ ಅವುಗಳ ಕೊಡುಗೆ ದೊಡ್ಡದೇ ಇರಲಿಕ್ಕೆ ಸಾಕು!" ಕ್ರಿಶ್ ಉದ್ಗರಿಸಿದರು.

"ಹಿಂದೆ ಪರವೂರಿನಿಂದ ಬಂದವರಿಗೆ ರಾಮಚಂದ್ರ ನಾಯ್ಕರ ಖಾನಾವಳಿ ಒಂದೇ ಇದ್ದರೆ ಈಗ ಊರವರು ಬಾಯಿಚಪಲವನ್ನು ಚೆನ್ನಾಗಿ ಬೆಳೆಸಿಕೊಂಡು ಪ್ರತಿದಿನವೂ ಹೊಟೇಲ್

ತಿಂಡಿ-ತಿನಿಸುಗಳನ್ನು ಸ್ವಾದಿಸುವುದನ್ನು ರೂಢಿಸಿಕೊಂಡಿದ್ದಾರೆ. ಹಿಂದೆ ನಮ್ಮೂರಿನಲ್ಲಿ ಮುರ್ಗಿ, ಮಟನ್, ಮೊಟ್ಟೆಗಳಂಥವನ್ನು ಎಂದಾದರೂ ನೋಡಿದ ನೆನಪು ನಿನಗಿದೆಯೇ? ಆದರೆ ಇಂದು ಇಲ್ಲಿಯ ಹೊಟೇಲುಗಳಲ್ಲಿ ವ್ಯಂಜನ ವೈವಿಧ್ಯಗಳನ್ನು ಒದಗಿಸಲು ಎಡಬಿಡದ ಪೈಪೋಟಿ! ಜೊತೆಗೆ ಬಿಯರ್, ಬ್ರಾಂದಿ, ವ್ಹಿಸ್ಕಿಗಳೂ ಧಾರಾಳವಾಗಿ ದೊರೆಯುತ್ತವೆ. ಈ ಹೊಟೇಲಗಳ ನೀರು ಹರಿದು ಹೋಗುವ ವ್ಯವಸ್ಥೆಯಿಲ್ಲ. ಭೂಮಿಯಲ್ಲಿ ಇಂಗಿ ನೆರೆ ಹೊರೆಯ ಬಾವಿಗಳಲ್ಲಿ ಅದೇ ನೀರು ಸೇರಿಕೊಂಡು ಬಿಡುತ್ತದೆ. ಇನ್ನು ಹೊಟೇಲಿನ ತಿಂದುಳಿದ ಎಂಜಲು, ತಂಗಳು, ಬಿಸಾಕಿದ ತರಕಾರಿ-ಮಾಂಸಗಳಾದಿಗಳಿಗೆ ದನಕರು, ನಾಯಿ, ಕಾಗೆ, ಹದ್ದುಗಳಲ್ಲಿ ಸದಾಕಾಲ ಸ್ಪರ್ಧೆ ಕಾದಾಟಗಳು ನಡೆದೇ ಇರುತ್ತವೆ. ಹೊನ್ನಾವರದ ಪರಿಸರ ಮಾಲಿನ್ಯಕ್ಕೆ ಈ ಹೊಟೇಲುಗಳ ದೇಣಗೆ ಸಾಕಷ್ಟು ದೊಡ್ಡದೇ!" ಅಣ್ಣನ ಮಾತನ್ನು ತುಳಸು ಅನುಮೋದಿಸಿದ.

"ಒಂದು ಕಾಲಕ್ಕೆ ಶರಾವತಿಯ ನೀರು ಎಷ್ಟು ಶುಭ್ರವಾಗಿತ್ತು. ನೀರಡಿಯ ಬೆಣಚು ಕಲ್ಲುಗಳು, ಕಡಿಮೆ ಆಳದ ಪ್ರದೇಶದಲ್ಲಿ ಗೋಚರಿಸುತ್ತಿದ್ದವು. ಈಗ ನೋಡು ಕೊಳಚೆ ಹೊಂಡವಾಗಿದೆ. ಬಂದರದ ಭಾಗವಂತೂ ಹೊಲಸು ನಾರುತ್ತದೆ! ಹೀಗಾಗಲು ಕಾರಣರಾದ ಧೀರರು ಯಾರು?" ಕ್ರಿಶ್ ಬೇಸರದಿಂದ ಪ್ರಶ್ನಿಸಿದರು.

"ಅದೆಲ್ಲ ದೊಡ್ಡ ಕತೆ! ಸ್ವಲ್ಪದರಲ್ಲಿ ವಿವರಿಸಲು ಯತ್ನಿಸುತ್ತೇನೆ. ಊರವರ ನೀರಿನ ಬಳಕೆ ಹೆಚ್ಚಿದಂತೆ, ಅದು ನೆಲದಲ್ಲಿ ಇಂಗದೇ ಹೋಯಿತು. ಅಂತೆಯೇ ದಂಡೆಯ ಬಳಿ ಮನೆ ಕಟ್ಟಿಕೊಂಡವರೆಲ್ಲ ಗಲೀಜು ನೀರನ್ನು ನದಿಗೆ ಬಿಡುವ ವ್ಯವಸ್ಥೆ ಮಾಡಿದರು! ಶರಾವತಿ ನೀರಿಗೋ, ಹಿಂದಿನ ಅಬ್ಬರ, ಸೆಳವುಗಳಿಲ್ಲ. ಹೀಗಾಗಿ ನೀರು ಅಲ್ಲಲ್ಲಿ ಮಡುವುಗಟ್ಟಿ ನಿಂತಿದೆ. ಅವುಗಳಲ್ಲಿ ಕೂಡಿಬಿದ್ದ ಆಹಾರ-ಕೀಟಗಳನ್ನು ಹುಡುಕಿಕೊಂಡು ಪಕ್ಷಿಗಳು ಬರಲಾರಂಭಿಸಿದವು. ನೀರು-ಕಾಗೆಗಳೂ ಹಿಂಡುಗಟ್ಟಿಕೊಂಡು ಬರಲಾರಂಭಿಸಿದವು. ಹಿಂದೆ ಮತ್ಸ್ಯಾಹಾರಿಗಳು ತಮ್ಮ ಮನೆಗಳಲ್ಲಿಯೇ ಮೀನುಗಳ ಸ್ವಚ್ಛತೆಯನ್ನು ಕೈಕೊಂಡು, ಅನುಪಯುಕ್ತ ಭಾಗಗಳನ್ನು ಹಿತ್ತಲ ಗಿಡ-ಮರಗಳಿಗೆ ಗೊಬ್ಬರವಾಗಿ ಬಳಸುತ್ತಿದ್ದರಷ್ಟೇ? ಆದರೆ ಇಂದಿನವರಿಗೆ ಬಂದರ ಬಳಿ ಮೀನು ಕೊಂಡರೆ, ಅಲ್ಲಿಯೇ, ಕೊಯ್ದು ಸ್ವಚ್ಛಮಾಡಿ ಕೊಡುವ ವ್ಯವಸ್ಥೆ ಇದೆ. ಈ ಕೆಲಸಮಾಡಿಕೊಡುವವರು, ಬೇಡಾದ ಭಾಗವನ್ನೆಲ್ಲ ನದಿಗೇ ಬಿಸಾಕಿ ಮುಂದಿನ ಗಿರಾಕಿಗಳತ್ತ ಲಕ್ಷ ಪೂರೈಸುವರು. ಮೀನಿನ ಅಂಗಾಂಗಗಳು ಕೊಳೆತರೆ ಅದರಷ್ಟು ದುರ್ಗಂಧ ಇನ್ನಿಲ್ಲ!.... ನಿಜವಾದ ಮೀನಿನ ಸ್ವಾದವನ್ನೆ ಅರಿಯದ ಸಸ್ಯಾಹಾರಿಗಳು ಇಂಥ ದುರ್ಗಂಧಯುಕ್ತ ಆಹಾರವನ್ನೇ ನಾವು ಕಾಯಂ ಸೇವಿಸುತ್ತೇವೆ! ಎಂದು ತಿಳಿಯುತ್ತಾರೆ" ತುಳಸು ವಿಷಾದಿಸಿದ.

"ನದಿ ದಂಡೆಯೆಲ್ಲ ಕಕ್ಕಸಾಗಿ ಬಳಸುವ ಪದ್ಧತಿ ಮುಂದುವರಿದಂತೆ ಕಾಣುತ್ತದೆಯಲ್ಲ?" ಇಂದಿನ ಸ್ಥಿತಿಗತಿಗಳನ್ನು ಅರಿಯಲು ಕ್ರಿಶ್ ಹವಣಿಸಿದರು.

"ಹಾಗಿದ್ದರೆ ಅದೆಷ್ಟೋ ವಾಸಿಯಿತ್ತು. ಇದೊಂದು ಬೇರೆಯೇ ಕತೆ. ಕೆಲವೊಮ್ಮೆ ವಿಪರೀತ ಮಳೆಯಾಗಿ ನದಿಗೆ ಮಹಾಪೂರ ಬಂದಾಗ ಅತಿಕ್ರಮಣ ಮಾಡಿದ ಭೂಮಿಯೆಲ್ಲ ಕೊಚ್ಚಿಕೊಂಡು ಹೋಗುತ್ತದೆ. ಇದರಂತೆ ಅಣೆಕಟ್ಟಿನಲ್ಲಿ ನೀರು ಹೆಚ್ಚು ಸಂಚಯವಾಗಿ

ಗಂಡಾಂತರವನ್ನು ಎದುರಿಸಬೇಕಾದ ಸಾಧ್ಯತೆ ಅಧಿಕವಾದಾಗ, ಅಧಿಕಾರಿಗಳು ಹೆಚ್ಚುವರಿ ನೀರನ್ನು ನದಿಗೇ ಬಿಟ್ಟು ಕೊಡುವರು. ಇದರಿಂದ ದಂಡೆಗೆ ಹೊಂದಿದ್ದ ಹಳ್ಳಿಗಳ ನಿವಾಸಿಗಳ ಗಿಡಮರಗಳು, ಬೆಳೆಗಳು, ಕೊಚ್ಚಿ ಹೋಗುವದು ಸಾಮಾನ್ಯ. ಇಂಥ ಅನಾಹುತಗಳು ಸಂಭವಿಸಿದಾಗಲೆಲ್ಲ, ಸಂಬಂಧಿತ ಅಧಿಕಾರಿಗಳು ಸರಕಾರದಿಂದ ಸಾಧ್ಯವಿದ್ದ ಪರಿಹಾರ ಧನವನ್ನು ಪಡೆದು, ಅದರಲ್ಲಿ ತಮ್ಮ ಪಾಲನ್ನು ಜೇಬಿಗೆ ಇಳಿಸಿಕೊಂಡು, ಉಳಿದದ್ದನ್ನು ಹಾನಿಗೊಳಗಾದವರದೆಂದು ಕಾಣಿಸಿದವರಲ್ಲಿ ಹಂಚುವರು. ಯಾವ ದುಡಿಮೆ ಮಾಡದೇ ಬಂದ ಈ ಹಣವನ್ನು ಪಡೆದವರು ತಮ್ಮ ಮಣ್ಣಿನ ಮನೆಗಳನ್ನು ಪಕ್ಕಾ ಸಿಮೆಂಟಿನವಾಗಿ ಕಟ್ಟಿಕೊಳ್ಳಲಿಕ್ಕೊ, ಶಾಶ್ವತ ಕಕ್ಕಸು ಕಟ್ಟಲಿಕ್ಕೊ ಹುಲ್ಲಿನ ಮಾಡಿನ ಬದಲಾಗಿ ಹಂಚಿನದನ್ನು ಹಾಕಿಸಲಿಕ್ಕೊ ಬಳಸುವರು. ಅವರೆಲ್ಲ ಪರಿಹಾರಧನ ಪಡೆದು ಈ ರೀತಿ ಉಪಯೋಗಿಸಲಿಕ್ಕೆ ಆಕ್ಷೇಪಣೆ ಇಲ್ಲ. ಆದರೆ ನದಿಗೇ ಹೊಲಸು ಹೋಗುವಂತೆ ಕಟ್ಟಿದ ಕಕ್ಕಸುಗಳು ಸಾರ್ವಜನಿಕವಾಗಿ ಅತೀವ ಅಪಾಯಕಾರಿ! ಎಂದು ಅವರು ಮನಗಾಣುವದೇ ಇಲ್ಲ. ಎಲ್ಲ ಗಲೀಜು ನೇರವಾಗಿ ನದಿ ನೀರಿಗೇ ಸೇರುವದರಿಂದ ಸುತ್ತಮುತ್ತಲಿನ ಪರಿಸರವೆಲ್ಲ ದೂಷಿತವಾಗಲು ಬೇರೆ ಕಾರಣ ಬೇಕೇ ಇಲ್ಲ. ತಮ್ಮ ಮಲದ ಆಹಾರವನ್ನು ನುಂಗಿದ ಮೀನುಗಳನ್ನೇ, ಅದೇ ಕುಟುಂಬದವರು ಬಳಸುವದು, ಎಷ್ಟೊಂದು ವಿರೋಧಾಭಾಸ! ಅವರಿಗೆ ಈ ವಿಚಾರ ತಿಳಿಸಿದರೆ-ತರ್ಕಬುದ್ಧಿ ಕೊಡುವ ಉತ್ತರ ಕುತೂಹಲಕಾರಿಯಾಗಿದೆ. ಹರಿಯುವ ನೀರಿಗೆ ಶಾಸ್ತ್ರವಿಲ್ಲವಂತೆ! ನದಿ ನೀರಿಗೆ ಅದೆಷ್ಟು ಕಕ್ಕಸುಗಳು ತೆರೆದುಕೊಂಡರೂ ಅವರ ಮಡಿವಂತಿಕೆ, ಸ್ವಚ್ಛತೆಗೆ 'ಧೋಕಾ' ಇಲ್ಲವಂತೆ! ಮತ್ಸ್ಯಾಹಾರದಲ್ಲಿ ಎಂತಹ ಅನಪೇಕ್ಷಿತ ರಾಸಾಯನಿಕಗಳಿದ್ದರೂ, ಅದಕ್ಕೆ ಉಪ್ಪು, ಖಾರ, ಮಸಾಲೆಗಳನ್ನು ಸೇರಿಸಿದಾಕ್ಷಣ ಅವೆಲ್ಲ ವಿಷಕಾರಿ ಅಂಶಗಳು ಮಾಯವಾಗಿ ಬಿಡುತ್ತವಂತೆ! ಇಂಥ ಅವೈಜ್ಞಾನಿಕ ಧೋರಣೆ ತಳೆದವರೇನು ಅಶಿಕ್ಷಿತರು ಅಥವಾ ನಿರಕ್ಷರಿಗಳಂತೂ ಖಂಡಿತ ಅಲ್ಲ. ಇಂಥವರಿಗೆಲ್ಲ ಪರಿಸರ ಪ್ರಜ್ಞೆ, ಸಮಷ್ಟಿ ಪ್ರಜ್ಞೆಗಳಂತಹ ಶಬ್ದಗಳಿಂದ ಏನಾಗಬೇಕಾಗಿದೆ?" ಊರ ಹೊಲಸು ಹೆಚ್ಚಾದ ಹಲ ಬಗೆಗಳ ಮೇಲೆ ತುಳಸು, ತಾನು ಕಂಡರಿತ ಟಿಪ್ಪಣಿ ನೀಡಿದ.

"ನಮ್ಮವರೆಲ್ಲ ಬುದ್ಧಿವಂತರು, ವ್ಯವಹಾರ ಕುಶಲರು, ಜಾಣರು ಎಂದು ಭಾವಿಸಿದ್ದೆ. ತಮ್ಮ ಸ್ವಾರ್ಥ ಹಾಗೂ ಲಾಭಗಳ ಎದುರಿಗೆ ಬುದ್ಧಿಮತ್ತೆಯೆಲ್ಲ ಕರಗಿ ಹೋಗುತ್ತಿರಬೇಕು!" ಕ್ರಿಶ್ ವಿಷಾದದ ನಗೆ ನಕ್ಕರು.

೧೬. ಪರ್ಣ ಸಂಸ್ಕೃತಿ

"ಪರಿಸರದೊಂದಿಗೆ ಹಾಸುಹೊಕ್ಕಾಗಿ ಬೆಳೆದೆ! ಎಂದು ಹೇಳಿದಿರಲ್ಲವೇ? ಅದನ್ನು ಸ್ವಲ್ಪ ವಿವರವಾಗಿ ಹೇಳುತ್ತೀರಾ?" ಇಲ್ಲಿಯ ಜೀವನ, ತಾನು ಹುಟ್ಟಿ ಬೆಳೆದ ನೆಲಕ್ಕಿಂತ ಎಷ್ಟು ಭಿನ್ನವಾಗಿದೆ, ಎಂದು ಕ್ಷಣಕ್ಷಣಕ್ಕೂ ಮನಗಾಣುತ್ತಲೇ ಇದ್ದ ಕಿಮ್ ಕೇಳಿದಳು.

"ಅಂದು ನಾವು ಮತ್ತು ಪ್ರಕೃತಿ ಭಿನ್ನವಾಗಿರದೇ ಒಂದೇ ಆಗಿದ್ದೆವು. ನಿಜವಾದ ಮಣ್ಣಿನ ಮಕ್ಕಳು! ಬೆಳಿಗ್ಗೆ ನಿಗದಿಪಡಿಸಿದ ನಿಸರ್ಗದ ತಾಣದಲ್ಲಿ ಪ್ರಾತರ್ವಿಧಿ ಮುಗಿಸಿ, ಹಲ್ಲುಜ್ಜಲು ಹಿತ್ತಿಲಲ್ಲಿ ಬೆಳೆಯುವ ಮಾವಿನ ಎಲೆ, ಇಲ್ಲವೇ ಗುಡ್ಡದ ಓರೆಯಲ್ಲಿ ಬೆಳೆಯುವ ಗೇರು ಮರದ ಎಳೆ ಎಲೆಗಳನ್ನು ಕಿತ್ತು ಸುರುಳಿಮಾಡಿ, ಹಲ್ಲಿನಿಂದ ಕಡಿದರೆ ಅದೇ ಬ್ರಶ್, ಅದೇ ಪೇಸ್ಟ್! ಒಗರಾದ ರಸದಿಂದ ನಾಲಗೆ, ಒಸಡು ಹಲ್ಲುಗಳೆಲ್ಲ ತಿಕ್ಕಿ ತಿಕ್ಕಿ ಎಲೆಯ ಬ್ರಶ್ ಸವಿದಂತೆ ಸ್ವಚ್ಛವಾಗಿ ಬಿಡುತ್ತಿದ್ದವು! ಬಾಳೆ ಎಲೆಯನ್ನು ಅದೆಷ್ಟು ವಿಧದಲ್ಲಿ ಬಳಸುತ್ತಿದ್ದೆವು ಎಂದು ಹೇಳಲಿಕ್ಕಿಲ್ಲ! ಜಿಡ್ಡು ಇಲ್ಲದ "ಮುಂಬ್ರಿ" (ರೊಟ್ಟಿ) ಬೇಯಿಸಲು ಅಕ್ಕಿಹಿಟ್ಟು, ಕಾಯಿ ಸುಳಿಯ ಮಿಶ್ರಣವನ್ನು ಬಾಳೆ ಎಲೆಯ ಮೇಲೆ ಹರವಿ ಹಂಚಿನ ಮೇಲೆ ಬೇಯಿಸುತ್ತಿದ್ದರು. ಅಥವಾ ಆ ಹಿಟ್ಟು ಕೆಂಡದ ರೊಟ್ಟಿಯ ರೂಪ ತಾಳುತ್ತಿತ್ತು. ತಿಂಡಿಗಾಗಿ, ಊಟಕ್ಕಾಗಿ, ಪ್ಲೇಟು, ಹರಿವಾಣಗಳನ್ನು ಬಳಸುವ ಪರಿಪಾಠ ಇರಲಿಲ್ಲ. ಬಾಳೆ ಎಲೆಗಳೇ ತಟ್ಟೆ, ಹಿತ್ತಿಲಿನಿಂದ ಕೊಯ್ದು ತಂದ ಇಲ್ಲವೇ ಪೇಟೆಯಿಂದ ಕೊಂಡು ತಂದವುಗಳು. ಮಿಕ್ಕಿದರೆ ಗಾಳಿ ನೆಳಲಿನಲ್ಲಿ ಒಣಗಿಸಿ ಬಳಸುತ್ತಿದ್ದರು. ಇವುಗಳಿಂದ ದೊನ್ನೆಗಳನ್ನು ಮಾಡುತ್ತಿದ್ದರು. ಅವೇ 'ವಾಟಿ' (ಬಟ್ಟಲು)ಗಳಂತೆ ಉಪಯೋಗವಾಗುತ್ತಿದ್ದವು. ಬಳಸಿದ ಎಲೆ-ದೊನ್ನೆಗಳೆಲ್ಲ ದನಕರುಗಳಿಗೆ ಆಹಾರವಾಗುತ್ತಿದ್ದುದರಿಂದ ಪರಿಸರಮಾಲಿನ್ಯದ ಸಮಸ್ಯೆಯೇ ಏಳುತ್ತಿರಲಿಲ್ಲ!"

ಬೆಂಗಳೂರಿನ ತೊಟ್ಟಿಗಳು ತುಂಬಿ ಬಿರಿಯುತ್ತಿದ್ದ ಪ್ಲಾಸ್ಟಿಕ್ ಎಲೆ, ಬಟ್ಟಲು, ಆಯ್ಸ್‌ಕ್ರೀಮ್ ಕಪ್‌ಗಳ ನೋಟ ಕಣ್ಣೆದುರು ಸುಳಿದು ಜೋ, ನಿಟ್ಟುಸುರು ಬಿಟ್ಟಳು.

"ಇಂದಿನ ಡಾಕ್ಟರುಗಳೆಲ್ಲ ಬೇರೆ ಬೇರೆ ಸೊಪ್ಪಿನ ಪ್ರಕಾರಗಳನ್ನು ಅಧಿಕವಾಗಿ ಸೇವಿಸಿ! ಅದರಿಂದ ಮಲಬದ್ಧತೆ, ಕರುಳಿನ ಕ್ಯಾನ್ಸರ್ ಇತ್ಯಾದಿಗಳನ್ನು ತಡೆಗಟ್ಟಬಹುದು! ಎಂದು ಘಂಟಾಘೋಷವಾಗಿ ಸಾರುತ್ತಲೇ ಇರುತ್ತಾರೆ. ಇಂಥ ಸಮಸ್ಯೆಗಳು ಆಗಲೂ ಇದ್ದವೇ?" ಕಿಮ್ ಪ್ರಶ್ನೆ.

"ಇಂಥ ತಿಳಿವಳಿಕೆ ಹೇಳುವ-ಕೇಳುವ ಪ್ರಮೇಯವೇ ಏಳುತ್ತಿರಲಿಲ್ಲ! ನಮ್ಮ ಹಿಂದಿನ ಊಟದ ಪದ್ಧತಿ ಅತ್ಯಂತ ಆರೋಗ್ಯಕಾರಿಯಾಗಿತ್ತು ಎಂದು ಈಗ ಸ್ಪಷ್ಟವಾಗುತ್ತಿದೆ. ಮನೆ ಮನೆಯಲ್ಲೂ ಬಸಳೆ ಸೊಪ್ಪಿನ 'ಮಂಟಪ' ಇರುತ್ತಿತ್ತು. ಬಚ್ಚಲ ನೀರು ಸಂಚಯವಾಗುವಲ್ಲಿ ಅದನ್ನು ನೆಟ್ಟು ತೀರ ಹಗುರವಾದ 'ಮಂಟಪ' (ಚಪ್ಪರ) ಅದಕ್ಕೆ ಹಾಕಿಕೊಟ್ಟರೆ, ಅದರ ಪಾಡಿಗೆ ಅದು ವಿಸ್ತಾರವಾಗಿ ಬೆಳೆಯುತ್ತ ಧನಿಯ ಸೇವೆಗೆ ಸದಾ ಸಿದ್ಧವಾಗಿರುತ್ತಿತ್ತು. ಮತ್ಸ್ಯಾಹಾರಿಗಳು ಉಪಯೋಗಿಸದಿದ್ದ ಭಾಗವೆಲ್ಲ ಅದಕ್ಕೆ ಪೌಷ್ಟಿಕ ಆಹಾರವಾಗುತ್ತಿತ್ತು. ಶಾಖಾಹಾರಿಗಳು ಸೆಗಣಿಯನ್ನು ಗೊಬ್ಬರವಾಗಿ ಪೂರೈಸುತ್ತಿದ್ದರು. ಅಂಗೈಯಗಲದ ಎಲೆಗಳನ್ನು ಹೆಚ್ಚಿ ಬೇಳೆ ಹಾಕಿಯೋ, ಹಾಕದೆಯೋ ಬೇಯಿಸಿ, ತೆಂಗಿನಕಾಯಿ ಮಸಾಲೆ ಹಾಕಿದರೆ ರುಚಿಕಟ್ಟಾದ 'ಪದಾರ್ಥ' ತಯಾರ್! ದಂಟುಗಳನ್ನೂ ಧಾರಾಳವಾಗಿ ಬಳಸುತ್ತಿದ್ದರು. ಬಸಳೆ ದಂಟು, ಸೊಪ್ಪಿನ ದಂಟು, ಕೆಸುವಿನ ದಂಟು, ಕುಂಬಳ ಬಳ್ಳಿ ದಂಟು, ಒಂದೇ ಎರಡೆ! 'ಫ್ಯಾಬರ್' (ನಾರು) ಇರುವ ಆಹಾರ ಉಪಯೋಗಿಸಿ! ಎಂದು ಪಾಶ್ಚಾತ್ಯ ವೈದ್ಯರ ಕೂಗು ಕೇಳಿ ಬರುವ ದಶಕಗಳ ಮೊದಲೇ ಪಲ್ಯದ ದಂಟನ್ನು ಜಗಿ ಜಗಿದು ರಾಶಿ ಹಾಕುತ್ತಿದ್ದೆವು! ಸೊಪ್ಪಿನ ದಂಟು ಆಳೆತ್ತರ ಬೆಳೆದೀತು, ಒಂದೇ ದಂಟಿನಿಂದ ಇಡೀ ಕುಟುಂಬಕ್ಕೆ ವ್ಯಂಜನ ಒದಗಿಸಬಹುದಿತ್ತು" ತಮ್ಮ ದಂಟಿನ ಜೊತೆಯ ನಂಟನ್ನು ಕ್ರಿಶ್ ನೆನಪಿಸಿಕೊಂಡರು.

"ಕರಾವಳಿ ಅಡಿಗೆಯಲ್ಲಿ ವಿಟ್ಯಾಮಿನ್ ಭರಿತ ಚಟ್ನಿ, ಗೊಜ್ಜು ತಂಬುಳಿಗಳಿಗೆ ಪ್ರಾಮುಖ್ಯತೆ ಇತ್ತು ಎಂದು ಅತ್ತೆಯವರು ಹೇಳುತ್ತಿದ್ದರು. ಇವುಗಳಲ್ಲೂ ಪರ್ಣಗಳ ಪ್ರಾಮುಖ್ಯತೆ ಇತ್ತೇ?" ಅಡಿಗೆಯಲ್ಲಿ ವಿವಿಧ ಎಲೆಗಳ ಉಪಯೋಗವನ್ನು ಅರಿಯುವ ಆಸಕ್ತಿಯನ್ನು ಕಿಮ್ ತೋರಿಸಿಕೊಂಡಳು.

"ಓಹೋ! ಬೇಕಾದಷ್ಟು! ಅಡಿಗೆಯಲ್ಲಿ ಬಳಸುವ ಎಲೆಗಳ ವೈವಿಧ್ಯ-ನೆನಪಿರುವಷ್ಟು ಹೇಳುತ್ತೇನೆ. ಹೊಲ ತೋಟಗಳ ಅಂಚಿನಲ್ಲಿ ನೀರ ಸೆಲೆ ಇರುವಲ್ಲಿ 'ಒಂದೆಲಗ' ಧಾರಾಳವಾಗಿ ಬೆಳೆಯುತ್ತದೆ. ಬ್ರಾಹ್ಮಿ ಜಾತಿಯ ಈ ಪರ್ಣಗಳನ್ನು ಹುರಿದು ಇಲ್ಲವೇ ಬೇಯಿಸಿ ಮಾಡಿದ ಚಟ್ನಿ-ತಂಬುಳಿಗಳು ಬಲು ರುಚಿ. ಗುಡ್ಡದ ಇಳಿಜಾರಿನಲ್ಲಿ 'ತಾಯಕಿಳೊ' (ಚಗಟೆ, ತಗಚೆ) ಕಾಡಾಗಿ ಬೆಳೆಯುವದುಂಟು. ಅವುಗಳ ಚಿಗುರೆಲೆಗಳಿಂದ 'ಉಪ್ಕರಿ' ಮಾಡುತ್ತಾರೆ. ಬೇಳೆ ಅಕ್ಕಿ ರುಬ್ಬಿ ಸೇರಿಸಿ 'ಪೋಡಿ' ಮಾಡುತ್ತಾರೆ. ಎಳೆ ನುಗ್ಗೆಕಾಯಿ, ಸೊಪ್ಪು, ಹೂಗಳನ್ನು ವಿವಿಧ ವ್ಯಂಜನಗಳಿಗೆ ಬಳಸುವದುಂಟು. ಸೋರೆಕಾಯಿ, ಎಳೆಸೊಪ್ಪು, ಹೂಗಳ ಉಪಯೋಗವೂ ಹೀಗೇ! ಪತ್ರೊಡೆ ತಿಂದಿರುವಿಯಲ್ಲ! ಬೃಹದಾಕಾರದ ಆನೆ ಕಿವಿಯ ಆಕಾರದ ಈ ಕೆಸುವಿನ ಎಲೆಗಳಿಗೆ ಬೇಡಿಕೆ ತುಂಬ. ಪತ್ರೊಡೆ ಹೆಸರು ಹೇಳಿದೊಡನೆ ಬಾಯಿ ನೀರೂರುತ್ತೆ ಹಲವರಿಗೆ... ಎಲ್ಲರ ಮನೆಗಳಲ್ಲಿ ಎಲ್ಲ ಬಗೆಯ ಸೊಪ್ಪು-ಎಲೆಗಳು ಸಿಗುವದಿಲ್ಲವಲ್ಲ? ಇವಾವ ಸೊಪ್ಪು ಪೇಟೆಯಲ್ಲಿ ಬೆಲೆಗೆ ಸಿಗುತ್ತಿರಲಿಲ್ಲ. ಅಂತೆಯೇ ಗೃಹಿಣಿಯರಲ್ಲಿ ಪರಸ್ಪರ ಇವನ್ನು ಕೊಟ್ಟು ಕೊಳ್ಳುವದು ವಾಡಿಕೆಯಾಗಿತ್ತು.

ನಾಯಿಕೊಡೆ ಅನಿಸಿಕೊಳ್ಳುವ ಅಣಬೆ, ಬಿದುರಿನ ಚಿಗುರು ಕಳಲೆ, ಬಾಳೆದಿಂಡು, ಬಾಳೆ ಹೂಗಳನ್ನೆಲ್ಲ ರುಚಿಕರ ವ್ಯಂಜನಗಳನ್ನಾಗಿಸುವ ವಿಧಾನಗಳನ್ನು ನಮ್ಮ ಹಿರಿಯರು ತುಂಬ ಹಿಂದೆಯೇ ಅರಿತಿದ್ದರು." ಕ್ರಿಶ್ ತುಂಬ ಅಭಿಮಾನಪಟ್ಟರು.

"ಊರ ಮನೆಗಳಿಗೆಲ್ಲ ತೆಂಗಿನಗರಿಗಳ ಛಾವಣಿ ಹಾಕುತ್ತಿದ್ದರಂತೆ! ನಿಜವೇ?" ಮತ್ತೆ ಪ್ರಶ್ನಿಸಿದಳು ಕಿಮ್.

"ತೆಂಗಿನಮರ ಎಲ್ಲ ವಿಧದಲ್ಲೂ ಕಲ್ಪವೃಕ್ಷವೇ ಸೈ! ಅದರ ಅಂಗಾಂಗಗಳನ್ನು ಎಷ್ಟು ವಿಧದಲ್ಲಿ ಬಳಸಲು ಸಾಧ್ಯವೆಂದು ಯಾದಿ ಮಾಡುವದೇ ಕಷ್ಟ! ಹಸಿ ಹೆಡೆಗರಿಗಳಿಂದ ಮಡಲುಗಳನ್ನು ಬೇರ್ಪಡಿಸಿ, ಪ್ರತಿ ಉದ್ದನ್ನ ಎಲೆ ಸೀಳಿ ಕಡ್ಡಿಗಳನ್ನು ಪಡೆಯುತ್ತಾರೆ. ಈ ಕಡ್ಡಿಗಳಿಂದ ಮಾಡಿದ ಪೊರಕೆಗಳು, ಹುಲ್ಲು ಕಡ್ಡಿಗಳ ಕಸಬರಿಗೆಗಳಿಗಿಂತ ಬಲು ಗಟ್ಟಿ ಮತ್ತು ತಾಳಿಕೆ ಬರುವಂತಹವು. ತೆಂಗಿನಗರಿಗಳನ್ನು ಚಾಪೆಯಂತೆ ಹೆಣೆದು ತೇವು ಬಾರದಂತೆ ನೆಲಕ್ಕೆ ಹಾಸುತ್ತಾರೆ. ಚಪ್ಪರಕ್ಕೆ, ಮನೆ ಒಳ ಹೊರಗು ಕಾಣದಂತೆ ಮರೆಮಾಡಲಿಕ್ಕೆ, ನೀರು ಒಳ ಸೇರದಂತೆ ಸೂರಿಗೆ ಹಾಸುತ್ತಾರೆ. ಹಸಿಗರಿಗಳನ್ನು ಹೆಣೆದು ಕೈಚೀಲ, ಹಗುರಾದ ಬುಟ್ಟಿ ಮಾಡುತ್ತಾರೆ. ಅದೆಷ್ಟೊ ಮೀನುಗಾತಿಯರು, ಇಂತಹ ಚೀಲಗಳಲ್ಲಿಯೇ ಮೀನು ಇಟ್ಟು ಮಾರಲು ತರುತ್ತಿದ್ದರು. ತೆಂಗಿನ ಕಡ್ಡಿಗೆ, ಕಾಣೆ, ಸೌಂದಾಳೆ, ಶೆತಕ, ಮೊದಲಾದ ಮೀನುಗಳನ್ನು ಪೋಣಿಸುವ ಪದ್ಧತಿ ಇತ್ತು. ಹೀಗೆ ಮಾಡಿ ಮಾರಲು ತಂದಾಗ, ಕೊಳ್ಳುವವರು ಇಡೀ 'ಸರ' ಕೊಳ್ಳಬೇಕಾದ್ದರಿಂದ ದೊಡ್ಡವುಗಳನ್ನಷ್ಟೇ ಆರಿಸಿ ಚಿಕ್ಕವನ್ನು ಬಿಡುವ ಸಾಧ್ಯತೆಯೇ ಇರಲಿಲ್ಲ! ಮೀನುಗಾತಿಯರೂ ಜಾಣ್ಮೆಯಿಂದ ಸರಾಸರಿ ಮೀನುಗಳನ್ನು ಪೋಣಿಸಿ ತರುತ್ತಿದ್ದರು. ಗೋಡಂಬಿ ತೋಟಕ್ಕೆ ಭೇಟಿಕೊಟ್ಟವರು, ಹಣ್ಣು ತಿಂದು, ಬಾರದವರಿಗಾಗಿ ಹೀಗೆಯೇ ತೆಂಗಿನ ಕಡ್ಡಿಗೆ ಹಣ್ಣುಗಳನ್ನು ಪೋಣಿಸಿ ತರುತ್ತಿದ್ದರು. ಮನೆಯ ಮಾಡಿಗೆ ತೆಂಗಿನಗರಿ, ತಾಳೆಗರಿ, ಹುಲ್ಲುಹಾಸುಗಳನ್ನು ಹೊಚ್ಚಿದರೆಂದರೆ ಒಂದು ತೊಟ್ಟು ನೀರೂ ಒಳಸೇರುತ್ತಿರಲಿಲ್ಲ.

ಊರ ಉಪ್ಪಾರರು ತಾಳೆ ಮಡಲುಗಳಿಂದ ಸುಂದರವಾದ ದೇಶೀ 'ಛತ್ರಿ'ಗಳನ್ನು ಹೆಣೆಯುತ್ತಿದ್ದರು. ಮಳೆಯಲ್ಲಿ ಕೆಲಸ ಮಾಡುವವರು, ಸಾಧು ಸಂತರು ಕೂಡ ಇಂತಹ ಸತ್ತಿಗೆಗಳನ್ನೆ ಬಳಸುತ್ತಿದ್ದರು. ಗೊರಬು ಮಾಡಲಿಕ್ಕೂ ತೆಂಗಿನಗರಿ ಬಳಸುತ್ತಿದ್ದರು. ಮಕ್ಕಳು ತೆಂಗಿನಗರಿಗಳಿಂದ ಬಗೆಬಗೆಯ ಆಟಿಗೆಗಳನ್ನು ಮಾಡುತ್ತಿದ್ದರು. ಕೈಗಡಿಯಾರ, ಪೀಪೀ, ಹಾವು, ತೇರು ಇತ್ಯಾದಿ. ಅಡಕೆಯ ತೋಟ ಇದ್ದವರು, ಅದರ ಹಾಳೆಗಳನ್ನು ವಿವಿಧ ರೀತಿಯಲ್ಲಿ ಬಳಸುತ್ತಿದ್ದರು. ಮಣ್ಣಿನ ನೆಲವನ್ನು ಸೆಗಣೆಯಿಂದ ಸಾರಿಸಿದ ಬಳಿಕ, ಏಕ ಪ್ರಕಾರವಾಗಿ ಬಳಿದು ತೆಗೆಯಲು ಅಡಕೆ ಹಾಳೆ ಬಲು ಸಹಾಯಕಾರಿ! ವೀಳ್ಯದೆಲೆ, ಅಣಬೆ, ಮೀನು, ಬೆಣ್ಣೆ ಮುಂತಾದವನ್ನು ಕೆಡದಂತೆ ಕಾಯ್ದಿಡಲು ಹಾಳೆಯ ಪೊಟ್ಟಣಗಳನ್ನು ಬಳಸುತ್ತಿದ್ದರು. ಕಷ್ಟಜೀವಿಗಳು ಅದರ ಟೋಪಿ (ಹಾಳೆತೋಪಿ: ಮಟ್ಟಾಳೆ) ಹಾಗೂ ಚಪ್ಪಲಿ ಮಾಡಿ ಹಾಕಿಕೊಳ್ಳುತ್ತಿದ್ದರು. ಒಂದು ಪುಟ್ಟ ಮಗು ಸುಖವಾಗಿ ಮಲಗಬಹುದಾದಷ್ಟು ವಿಸ್ತಾರವಾಗಿರುತ್ತಿದ್ದ 'ಕಾಸಾಳಿ' ಎಲೆಗಳನ್ನು ಸಂಡಿಗೆ ಒಣಗಿಸಲು ಉಪಯೋಗಿಸುತ್ತಿದ್ದರು."

ಕ್ರಿಶ್, ಪರ್ಣಲೋಕದ ಪ್ರಯೋಜನಗಳನ್ನು ನೆನಪಿಸಿಕೊಂಡರು.

"ಹಿಂದಿನವರು ನಿಸರ್ಗದಲ್ಲಿಯೇ ಲಭ್ಯವಿದ್ದ ಅನೇಕಾನೇಕ ವಸ್ತುಗಳನ್ನು ಅದೆಷ್ಟು ನೈಪುಣ್ಯದಿಂದ ಬಳಸುತ್ತಿದ್ದರಲ್ಲವೇ? ಇಂದಿನ ಪ್ಲಾಸ್ಟಿಕ್ ಯುಗದಲ್ಲಿ ನೀನು ಹೇಳಿದ ಯಾವ ವಸ್ತುಗಳಿಗೂ ಬೇಡಿಕೆಯೇ ಇಲ್ಲ! ಈ ಪ್ಲಾಸ್ಟಿಕ್ ವಸ್ತುಗಳ ಬಳಕೆ, ಮಾನವ ಹಾಗೂ ಪ್ರಾಣಿ ಸಂಕುಲದ ಅಸ್ತಿತ್ವಕ್ಕೇ ಗಂಡಾಂತರ ತರುವ ಸ್ಥಿತಿ ತಲುಪಿದೆ. ಈ ಚೀಲಗಳ ದುರುಪಯೋಗ ಎಷ್ಟಾಗುತ್ತದೆಯೆಂದರೆ, ಕೀಟನಾಶಕಗಳಿದ್ದ ಪ್ಲಾಸ್ಟಿಕ್ ಕವರುಗಳಲ್ಲಿ ಆಹಾರ ವಸ್ತುಗಳನ್ನಿಟ್ಟು ತಿಂದು ಸತ್ತವರೂ ಇದ್ದಾರೆ! ದನಕರುಗಳ ಉದರ ಸೇರಿ ಪ್ರಾಣಹಾನಿಯ ಲೆಕ್ಕವಿಟ್ಟವರಿಲ್ಲ. ಊರುಗಳೆಲ್ಲ ಅತಿ ಹೊಲಸಾಗಲು ಈ ಪ್ಲಾಸ್ಟಿಕ್ ಪೊಟ್ಟಣಗಳ ಕೊಡುಗೆ ಬಲು ದೊಡ್ಡದಾಗಿದೆ!" ಎಂದು ತುಳಸು ಮರುಗಿದ.

"ಕಾಲಕಾಲಕ್ಕೆ ಸೇವಿಸುತ್ತಿದ್ದ ಕಷಾಯ ಹಾಗೂ ಕಾಢಾಗಳಿಂದಲೇ ಈ ಇಳಿವಯಸ್ಸಿನಲ್ಲಿಯೂ ಆರೋಗ್ಯ ಸದೃಢವಾಗಿದೆ ಎಂದು ಜಂಬ ಕೊಚ್ಚಿಕೊಳ್ಳುತ್ತೀರಿ! ಅವುಗಳಿಗೂ ಹಸಿರೆಲೆಗಳನ್ನು ಬಳಸುತ್ತಿದ್ದರಲ್ಲವೇ?" ಜೋ ರಾಗವೆಳೆದಳು.

"ಪ್ರತಿ ರವಿವಾರ, ಮಕ್ಕಳೆಲ್ಲ ಆರೋಗ್ಯಕ್ಕಾಗಿ ಮದ್ದನ್ನು ಸೇವಿಸುವದು ಕಡ್ಡಾಯವಾಗಿತ್ತು. ಮಂಜಪತ್ರಿ ಎಲೆಗಳು, ಸುವಾಸನೆ ಹೊಂದಿದ್ದರೂ ಅತ್ಯಂತ ಕಹಿಯಾಗಿರುತ್ತಿದ್ದವು. ಈ ಚಿಗುರೆಲೆಗಳನ್ನು ನುಣ್ಣಗೆ ರುಬ್ಬಿ ಉಪ್ಪು ಮಜ್ಜಿಗೆ ಸೇರಿಸಿ ಪಾನೀಯ ತಯಾರಿಸುತ್ತಿದ್ದರು. ಕುಟುಂಬದ ಸರ್ವ ಸದಸ್ಯರಿಗೆ ಹಂಚಿ ಅದನ್ನು ಸಮನಾಗಿ ಸೇವಿಸುವಂತೆ ನೋಡಿಕೊಳ್ಳುವದು ಈ ಹಿರೇಮಾಣಿಯ ಕೆಲಸವಾಗಿತ್ತು! ಹಸಿಶುಂಠಿ ರುಬ್ಬಿ, ಸೋಸಿ, ಲಿಂಬೆರಸ ಸೇರಿಸಿ, ಜೀರ್ಣಕ್ಕೆ ಒಳ್ಳೆಯದೆಂದು ಕುಡಿಸುತ್ತಿದ್ದರು. ಗಜ್ಜುಗದ ಎಲೆಗಳನ್ನು ಗಿಡದ ಮುಳ್ಳುಗಳಿಂದ ಬೇರ್ಪಡಿಸುವದು ಸಾಹಸದ ಕೆಲಸ. ಇದರ ಕಷಾಯವಂತೂ ಭಯಂಕರ ಕಹಿ! ಹೀಗಾಗಿ ಕುಡಿದಾದ ಮೇಲೆ ಕಲ್ಲು ಸಕ್ಕರೆ ಹಂಚಲಾಗುತ್ತಿತ್ತು. ಜೀರಾತ ಕಾಡಿ (ನೆಲಬೇವು)ಯ ಕಷಾಯವೂ ಇದರ ಅಣ್ಣನಂತಹದು! ಇವೆಲ್ಲವನ್ನು ನಿಯಮಿತ ಅಂತರದಲ್ಲಿ ಸೇವಿಸುವದು ಕಡ್ಡಾಯವಾಗಿತ್ತು. "ಹೊಟ್ಟೆಯ ಹುಳುಗಳ ಬಾಧೆ ಇರುವುದಿಲ್ಲ. ಜೀರ್ಣಶಕ್ತಿ ಬೆಳೆಯುತ್ತದೆ. ಶೀತ ಪ್ರತಿರೋಧಕ" ಎಂದು ಹಿರಿಯರೆಲ್ಲ ಮಕ್ಕಳಿಗೆ ಮನವರಿಕೆ ಮಾಡಿಕೊಡುತ್ತಿದ್ದುದರಿಂದ ಯಾರೊಬ್ಬರೂ ಈ ನಿಯಮಾವಳಿಯಿಂದ ಹೊರಗಿರಲು ಯತ್ನಿಸುತ್ತಿರಲೇ ಇರಲಿಲ್ಲ" ಎಂದು ಕ್ರಿಶ್ ವಿವರಿಸಿದರು.

"ಎಲೆಗಳನ್ನು ಇನ್ನೂ ಅನೇಕ ವಿಧಗಳಲ್ಲಿ ಬಳಸುವ ಪದ್ಧತಿ ಇತ್ತು. ಧಾನ್ಯಗಳನ್ನೆಲ್ಲ ಮಳೆಗಾಲಕ್ಕೆ ಸಂಗ್ರಹಿಸಿಡುತ್ತಿದ್ದರಷ್ಟೇ? ಅವನ್ನು ಬಿಸಿಲಲ್ಲಿ ಚೆನ್ನಾಗಿ ಒಣಗಿಸಿ ಅವುಗಳೊಂದಿಗೆ ಬೇವಿನಸೊಪ್ಪು ಇಲ್ಲವೇ ಲಿಂಗಡಾ (ನೆಕ್ಕಲಿ, ನಿರ್ಗುಂಡಿ)ದ ಒಣಸೊಪ್ಪು ಸೇರಿಸಿಡುತ್ತಿದ್ದರು. ಇವುಗಳನ್ನು ಸೇರಿಸಿ ಮುಡೆ ಕಟ್ಟಿಟ್ಟರೆ ಯಾವ ಕೀಟಜಾತಿಗೂ ಆಕ್ರಮಣ ಮಾಡುವ ಧೈರ್ಯವೇ ಆಗುತ್ತಿರಲಿಲ್ಲ. ಕಗ್ಗತ್ತಲ ರಾತ್ರಿಯಲ್ಲಿ ಪಯಣ ತೆಗೆಯಲು ಒಣ ತೆಂಗಿನ ಗರಿಗಳ ಸೂಡು ಕಟ್ಟಿ ಹಿಲಾಲಿನಂತೆ ಬಳಸುತ್ತಿದ್ದರು. ಊರ ರಥೋತ್ಸವದ ರಾತ್ರಿ, ಇಂಥ ಸೂಡಿಗಳ ಬೆಳಕಿನಲ್ಲಿಯೇ

'ಹಗರಣ' ನಡೆಯುತ್ತಿತ್ತು. ಮಳೆಗಾಲ ಪ್ರಾರಂಭವಾದ ಬಳಿಕ ಸಸ್ಯಶಾಮಲೆ ಎಲ್ಲೆಡೆ ಹಚ್ಚಹಸುರಾಗಿ ಕಂಗೊಳಿಸುತ್ತ ನಿಂತಾಗ ಹೆಂಗಳೆಯರು ಶ್ರಾವಣಮಾಸದಲ್ಲಿ "ಚೂಡಿ"ಗಳನ್ನು ಪೂಜಿಸಿ ಹಂಚುತ್ತಿದ್ದರು. ದರ್ಭೆ, ಔಷಧಿ ಸಸ್ಯದ ಆರೆಂಟು ಪರ್ಣಮಾದರಿಗಳು ಹಾಗೂ ಹೂಗಳ ಚಿಕ್ಕ ಗುಚ್ಛಗಳೇ 'ಚೂಡಿ'ಗಳು. ಭೂದೇವಿಯನ್ನು ಈ ಚೂಡಿಗಳಿಂದ ಪೂಜಿಸಿ ಬಳಿಕ ಮುತ್ತೈದೆಯರಿಗೆ ಇವನ್ನು ಕೊಟ್ಟು-ಕೊಳ್ಳುವದು, ಕರಾವಳಿ ಕೊಂಕಣಿಗರ ವಿಶಿಷ್ಟ ಸಂಪ್ರದಾಯವಾಗಿತ್ತು. ಇದರಿಂದ ಸಾಂಸಾರಿಕ ಸುಖ ವೃದ್ಧಿಯಾಗುತ್ತದೆ! ಎಂಬ ನಂಬಿಕೆ. ಆದರೆ ಪ್ರಕೃತಿ ಮಾತೆಗೆ ಕೃತಜ್ಞತೆ ಅರ್ಪಿಸುವ ವಿಧಾನ ಎಂದು ಏಕೆ ಭಾವಿಸಬಾರದು?" ಎಂದು ಕ್ರಿಶ್ ಹೇಳಿದಾಗ 'ಗೃಹದೇವತೆಗೆ' ಎಂದು ಹೇಳಿ!" ಎಂದು ಜೋ ತಿದ್ದಿದಳು, ಪ್ರಸನ್ನತೆಯಿಂದ.

"ಇಂಥ ವ್ರತ-ಪೂಜೆಗಳು ಮುಂದುವರಿದು ಬಂದಿದ್ದರೆ, ಸಾಂಸಾರಿಕ ನೆಮ್ಮದಿ ಸ್ಥಾಪಿಸುವಲ್ಲಿ ತಮ್ಮ ಪಾಲು ಇದೆ! ಎಂದು ಯುವತಿಯರು ಹೆಚ್ಚಾಗಿ ಮನಗಾಣುವಂತೆ ಆಗುತ್ತಿತ್ತು. ವಿವಾಹ-ವಿಚ್ಛೇದನೆಗೆ ಕೋರ್ಟು ಕಚೇರಿಗಳಿಗೆ ಎಷ್ಟೋ ಜನ ಎಡತಾಕುವದು ತಪ್ಪುತ್ತಿತ್ತು!" ತುಳಸು ವಿಸ್ಮಯಪಟ್ಟ.

"ಇಷ್ಟೊಂದು ಕಾಳಜಿವಹಿಸಿದರೂ ಅನಾರೋಗ್ಯ ಕಾಣಿಸಿಕೊಂಡರೆ ಏನು ಮಾಡುತ್ತಿದ್ದರು?" ಕಿಮ್, ವಿಚಾರಿಸಿದಳು.

"ಹಿತ್ತಲಲ್ಲಿ ಬೆಳೆಸಿದ ಸಕಲ ಗಿಡ-ಮೂಲಿಕೆಗಳಲ್ಲಿ ಔಷಧಿಯ ಗುಣಧರ್ಮಗಳಿವೆ ಎಂದು ನಮ್ಮವರು ದೃಢವಾಗಿ ನಂಬಿದ್ದರು. ಅಂತೆಯೇ ಅನೇಕಾನೇಕ ದೈಹಿಕ ತೊಂದರೆಗಳಿಗೆ ಮನೆಯಲ್ಲಿಯೇ ಪ್ರಥಮ ಚಿಕಿತ್ಸೆ, ಆರೈಕೆಗಳನ್ನು ನಡೆಸಿ, ಗುಣಪಡಿಸುತ್ತಿದ್ದರು. ಶಿಶುವಿಗೆ ಮಲಬದ್ಧತೆ ಕಾಣಿಸಿಕೊಂಡರೆ, ಬಸಳೆ ದಂಟಿಗೆ ಹರಳೆಣ್ಣೆ ಲೇಪಿಸಿ, ಗುದದ್ವಾರದಲ್ಲಿ ಸೇರಿಸಿದರೆ ಕಚಕುಳಿಯಿಟ್ಟಂತಾಗಿ ಒಳಗೆ ಕಟ್ಟಿಕೊಂಡ ಮಲ ಪ್ರವಾಹವಾಗಿ ಕೆಳಗಿಳಿಯುತ್ತಿತ್ತು. ಉಷ್ಣವಾದರೆ, ಹತ್ತಿ ಎಲೆಗೆ ಔಡಲೆಣ್ಣೆ ಸವರಿ, ನೆತ್ತಿಯ ಮೇಲೆ ಒತ್ತಿ ಹಿಡಿದು ತಂಪು ಮಾಡುತ್ತಿದ್ದರು. ಮನೆ ಮನೆಯ ಅಂಗಳದಲ್ಲಿರುತ್ತಿದ್ದ ತುಳಸಿಗಿಡ ಅದೆಷ್ಟೋ ರೋಗಗಳಿಗೆ ರಾಮಬಾಣದಂತೆ. ಸಣ್ಣಪುಟ್ಟ ಗಾಯಗಳಾದರೆ, ರಕ್ತಬಸಿದರೆ, ತುಳಸಿಯ ಚಿಗುರೆಲೆಗಳನ್ನು ಹಿಂಡಿ ರಸವನ್ನು ಗಾಯದ ಮೇಲೆ ಲೇಪನ ಮಾಡಿದರೆ, ಮರುದಿನವೇ ಗಾಯ ಮಾಗಿ ಬಿಡುತ್ತಿತ್ತು. ಜ್ವರದಿಂದ ನರಳುವವರಿಗೆ ತುಳಸಿ ತೆನೆಯ ಕಷಾಯ ಕುಡಿಸಿದರೆ ಚೇತರಿಸಿಕೊಳ್ಳುವಂತೆ, ಆಗುತ್ತಿತ್ತು. ತುಳಸಿ ಎಲೆಗಳು ಸುಲಭವಾಗಿ ಸಿಗದ ಸ್ಥಳಗಳಲ್ಲಿ ಎಲ್ಲೆಲ್ಲೂ ಕಳೆಯಂತೆ ಬೆಳೆಯುವ ನಸುಗುನ್ನಿ ಎಲೆ (ಪುಸ್ಕಿಪಾಲೊ) ಇದಕ್ಕಾಗಿ ಬಳಸುತ್ತಿದ್ದರು. ಗಾಯ ಆಳವಾಗಿದ್ದರೆ, ಕಳ್ಳಿಯ ಹಾಲು ಸವರಿ ಶುಭ್ರ ಬಟ್ಟೆ ಕಟ್ಟುತ್ತಿದ್ದರು. ಬೆರಳಿನ ಉಗುರುಗಳಿಗೆ ಏಟು ಬಿದ್ದರೆ, ನೋವು ಕಾಣಿಸಿಕೊಂಡರೆ, ಪೊಳ್ಳು ಮಾಡಿದ ಕಳ್ಳಿಯ ಟೋಪಿ ಹಾಕುತ್ತಿದ್ದರು. ಹೊಟ್ಟೆ ನೋವಿನ ಶಮನಕ್ಕೆ ಔಡಲ ಸೊನೆಯು ಉಪಯೋಗವಾಗುತ್ತಿತ್ತು. ಆಡುಸೋಗೆಯನ್ನು ಬೇಲಿಗಾಗಿ ಬಳಸಿದರೂ ಅದರ ಪರ್ಣಗಳ ಕಷಾಯ ಕೆಲವೊಂದು ಜ್ವರ ಪ್ರಕಾರಗಳಿಗೆ ರಾಮಬಾಣವೆಂದು ಕಂಡುಹಿಡಿದಿದ್ದರು. ಪಿತ್ಥದ ಬಾಧೆಗೆ ನೇರಳೆ, ಬೆಳ್ಳಗಳ ಚಿಗುರೆಲೆಯ ಕಷಾಯ ಸೇವನೆ, ನೆಮ್ಮದಿ ನೀಡುತ್ತಿತ್ತು. ಕಣ್ಣುಗಳಲ್ಲಿ

ಧೂಳು, ರೇವೆ ಸೇರಿಕೊಂಡರೆ, ಮಾವಿನ ಮರದ ಮೇಲೆ ಬೆಳೆಯುವ 'ಬೆಂದುರ್ಲಿ' (ಬಂದಳಿಕೆ) ಎಂಬ ಪರಪುಷ್ಪದ ಎಲೆಗಳನ್ನು ನೀರಲ್ಲಿ ಹಾಕಿ ಅದರಿಂದ ಕಣ್ಣುಗಳನ್ನು ತೊಳೆಯುತ್ತಿದ್ದರು. ತೊಡೆಯ ಸಂದಿಯಲ್ಲಿ ಬಾವು, ಹುಣ್ಣು ಕಾಣಿಸಿಕೊಂಡರೆ, ಬಸಳೆ ಸೊಪ್ಪಿನ ಪೋಲ್ಟೀಸು ಕಟ್ಟಿ, ಹುಣ್ಣಿನ ಬೀಜ ಹೊರ ಬರುವಂತೆ ಏರ್ಪಾಡು ಮಾಡುತ್ತಿದ್ದರು. ಮಧುಮೇಹದಿಂದ ಬಳಲುವವರಿಗೆ 'ಗೋಡಮಾರಿ' (ಮಧುನಾಶಿನಿ) ಸೊಪ್ಪು-ಒಳ್ಳೆ ಔಷಧವಾಗಿತ್ತು. ಆದರೆ ಈ ಗಿಡಗಳೆಲ್ಲ ದಟ್ಟಕಾಡಿನಲ್ಲಿ ಬೆಳೆಯುತ್ತಿದ್ದುದರಿಂದ ಸುಲಭವಾಗಿ ಸಿಗುತ್ತಿರಲಿಲ್ಲ. ಊರವರ ಸಸ್ಯತಜ್ಞ ವೆಂಕಪ್ಪನಿಗೆ ಹೇಳಿದರೆ ಸಂಜೆಯಾಗುವದರೊಳಗೆ ಎಲೆಗಳ ರಾಶಿ ಮನೆಗೆ ಬಂದು ಬೀಳುತ್ತಿತ್ತು. ಇದರ ಒಂದೇ ಎಲೆ ತಿಂದರೂ ಅತೀ ಸಿಹಿ ತಿಂಡಿ ತಿಂದರೆ ಹಿಟ್ಟಿನಂತೆ ಅನುಭವವಾಗುತ್ತಿತ್ತು. ಈ ಸೊಪ್ಪನ್ನು ಉರಿಬಿಸಲಲ್ಲಿ ಒಣಗಿಸಿ ಶೇಖರಿಸಿ ಇಡುತ್ತಿದ್ದರು" ತಮಗೆ ನೆನಪಾದ ಪರ್ಣೌಷಧಿಗಳ ಬಗ್ಗೆ ಕ್ರಿಶ್ ವಿವರಿಸಿದರು.

"ಹಾಗಾದರೆ ನಿಮಗೆಲ್ಲ ಡಾಕ್ಟರ್, ವೈದ್ಯರ ಖರ್ಚೇ ಇರುತ್ತಿರಲಿಲ್ಲ! ಎಂದ ಹಾಗಾಯಿತು" ಜೋ ಧ್ವನಿ ಎಳೆದಳು. "ಪ್ರತಿಮನೆಯ ಗೃಹಿಣಿಯೂ ವೈದ್ಯೆಯೇ. ಓಣಿಗೊಬ್ಬ ಪರಿಣತ ವೈದ್ಯೆ ಇದ್ದೇ ಇರುತ್ತಿದ್ದರಲ್ಲ! ಊರಲ್ಲಿ ಮಕ್ಕಳಿಗೆ, ಶಿಶುಗಳಿಗೆ ವಾಂತಿ, ಭೇದಿ, ಜ್ವರ ಬಂದಿದೆ ಎಂದರೆ 'ಸೌಸಾಂಭಾರ' (ದೊಡ್ಡಪತ್ರೆ, ಸಾಂಬಾರ ಬಳ್ಳಿ) ದಾಳಿಂಬ, ಪೇರಲ, ಬೇವು, ಅನಂತದ ಎಲೆಗಳ ಕಷಾಯ ಕುಡಿಸಲು ಹೇಳುತ್ತಿದ್ದರು. ತೆಂಗಿನಕಾಯಿ ಎಳೆ ಬೊಂಡ, ತೇದು ಸಕ್ಕರೆಯೊಡನೆ ಬೆರೆಸಿ ಸೇವಿಸುವಂತೆ ಮಾಡುತ್ತಿದ್ದರು. ಮನೆಯಲ್ಲಿ ಬೆತ್ತದ ಬುಟ್ಟಿಯಲ್ಲಿ ಹತ್ತಾರು ಬೇರು, ಗಿಡ-ಮೂಲಿಕೆಗಳು ಇದ್ದೇ ಇರುತ್ತಿದ್ದವು. ಅನನುಭವಿಗಳು ಹುಡುಕಿಕೊಂಡು ಬಂದಾಗ ಕೂಡಲೇ ಆಯಾ ಕಾಯಿಲೆಗೆ ಬೇಕಾದ ಔಷಧ, ಕಷಾಯ, ಎಣ್ಣೆಗಳನ್ನು ಕೊಡಲು ಮುಂದಾಗುವ ಗೃಹಿಣಿಯರಿದ್ದರು. ಇಂಥ ಸೇವೆಗೆ ಬಿಡಿಗಾಸೂ ಪಡೆಯುತ್ತಿರಲಿಲ್ಲ. ಇಷ್ಟೇ ಅಲ್ಲ, ಮಗು ಸುಧಾರಿಸಿಕೊಂಡಿದೆ, ಇಂದು ಚೆನ್ನಾಗಿ ಆಡಿಕೊಂಡಿದೆ ಎಂದು ಹೇಳಬಂದವರಿಗೆ ತಿಂಡಿ ತೀರ್ಥಕೊಟ್ಟು ಕಳಿಸುವ ಸಂಪ್ರದಾಯವಿತ್ತು! ಸರ್ಪಸುತ್ತು (ಹರ್ಪಿಸ್) ದಂತಹ ಯಾತನೆ ಕಾಣಿಸಿಕೊಂಡಾಗ ಬೇತಾಳ ಭಟ್ಟರ ಬಳಿ ಲಿಂಗಡಾ (ನಿರ್ಗುಂಡಿ) ಸೊಪ್ಪು ಮತ್ತು ಒಂದು ತೆಂಗಿನಕಾಯಿಯೊಡನೆ ಹೋದರೆ ಅವರು "ತುಂಡು" ಹೊಡೆದು ಗುಣಪಡಿಸುತ್ತಿದ್ದರು. ವಿಷಸರ್ಪ ಕಚ್ಚಿದಾಗಲೂ ಗರುಡರೇಖೆ ಇರುವ ಭಟ್ಟರು ಗಾಯಕ್ಕೆ ಯಾವುದೋ ಸೊಪ್ಪನ್ನು ಅರೆದು ಕಟ್ಟಿ, ಹೊಟ್ಟೆಗೆ ಬೇರೊಂದು ಸೊಪ್ಪಿನ ರಸ ಕುಡಿಸುತ್ತಿದ್ದರು. ಆಗ ಡಾಕ್ಟರ ವೃತ್ತಿಯಲ್ಲಿದ್ದ ಡಾ. ಶಿವರಾಂ, ಡಾ. ವಿಧುಮೌಳಿಗಳ ಹತ್ತಿರ ಹೋದರೂ ಅವರು ಇಂಥವೇ ಗಿಡ-ಮೂಲಿಕೆಗಳ ಔಷಧ ಕೊಡುತ್ತಿದ್ದರು. ಔಷಧಕೊಟ್ಟು ಶ್ರೀಮಂತರಾಗಬಹುದೆಂಬ ಕಲ್ಪನೆಯೇ ಅಂದಿನ ವೈದ್ಯರಿಗೆ ಇರಲಿಲ್ಲ." ಅಂದಿನವರ ಸಮಾಜ ಸೇವೆಯ ಅತ್ಯಮೂಲ್ಯ ಪರಿಯೊಂದನ್ನು ಕ್ರಿಶ್ ಪರಿಚಯಿಸಿದರು.

"ನೀವೆಲ್ಲ ಪುಣ್ಯಮಾಡಿದವರು. ಸತ್ಯಯುಗದ ಕೆಲವಂಶಗಳು ಉಳಿದುಕೊಂಡಾಗಲೇ

ಜನ್ಮ ವೆತ್ತಿ ಬಂದಿರಿ! ನಾವು ಸಂಪೂರ್ಣವಾಗಿ ಕಲಿಯುಗದ ಕುಡಿಗಳು. ಡಾಕ್ಟರರ ಕಾಂಪೌಂಡಿನಲ್ಲಿ ಕಾಲಿಡುವಾಗಲೇ ಐವತ್ತುರೂಪಾಯಿ ಫೀ! ನಮ್ಮ ಮನೆಯಲ್ಲಿ ಅವರ ಪಾದಧೂಳಿ ಬೀಳುವಂತಾದರೆ ನೂರು ರೂಪಾಯಿ. ಕೇವಲ ಹಲ್ಲುನೋವು, ಹೊಟ್ಟೆ ನೋವು ಬಂದರೂ ಮೊದಲು ಹತ್ತೆಂಟು ಪರೀಕ್ಷೆಗಳಿಗೆ ಒಳಪಡಬೇಕು. ತಜ್ಞರ ಬಳಿ ಓಡಲೇಬೇಕು. ಇದಕ್ಕಾಗಿ ತೆರುವ ಬೇರೆ ಬೇರೆ ಫೀಯಲ್ಲಿ ಮೂಲ ಡಾಕ್ಟರರ ಪಾಲು ಇರುತ್ತದೆಂದು ಬೇರೆ ಹೇಳಬೇಕಿಲ್ಲ. ಇಷ್ಟಾಗಿ ರೋಗದ ಪರಿಚಯವಾಗದ ಸಂದರ್ಭಗಳಲ್ಲಿ ಹುಬ್ಬಳ್ಳಿಗೋ, ಮಣಿಪಾಲಕ್ಕೊ ತಮ್ಮ ಪರಿಚಯದ ತಜ್ಞರ ಬಳಿ ಓಡಿಸುತ್ತಾರೆ. ಎಷ್ಟೋ ಸಲ ಏನೂ ಸೀರಿಯಸ್ ಇಲ್ಲವೆಂದು ಹಿಂದಿರುಗಿದ ಕೆಲವೇ ದಿನಗಳಲ್ಲಿ ಹಿಪೆಟೈಟಿಸ್-ಬಿ ಅಥವಾ ಕ್ಯಾನ್ಸರ್ ರೋಗ ಬಲಿತು, ಸ್ವರ್ಗಕ್ಕೇರಿದವರ ಸಂಖ್ಯೆ ಸಾಕಷ್ಟಿದೆ. ಹಿಂದೆ ಸೂಲಗಿತ್ತಿ ಮನೆಗೇ ಬಂದು ಹೆರಿಗೆ ಮಾಡಿಸುತ್ತಿದ್ದಳಲ್ಲವೇ? ಈಗಿನ ಸುಧಾರಿತ ಪದ್ಧತಿಯಲ್ಲಿ ಮೂರು ತಿಂಗಳು ತುಂಬುತ್ತಿದ್ದಂತೆ ತಜ್ಞ ವೈದ್ಯೆಯಿಂದ ಮಾಸಿಕ ಪರೀಕ್ಷೆಗೆ ಒಳಪಡಬೇಕು. ಆರು ಮಾಸ ತುಂಬಿದೊಡನೆ ಪ್ರತಿಪಕ್ಷಕ್ಕೆ, ಎಂಟು ತಿಂಗಳು ಕಳೆದಾಗ ವಾರಕ್ಕೊಮ್ಮೆ ಹೋಗಲೇಬೇಕು. ನವಮಾಸಗಳು ತುಂಬಿದೊಡನೆ ಪ್ರತಿದಿನ, ಸುಲಭದ ಬಾಣಂತನವೆಂದು ಸಿಝೇರಿಯನ್ ಮಾಡಿಸಿಕೊಂಡರೆ ಕ್ಷೇಮ! ಎಂದು ಸೂಚಿಸಲಾಗುತ್ತದೆ. ಹಿಂದೆಲ್ಲ ಇಪ್ಪತ್ತು ರೂಪಾಯಿಗೆ ಆಗುವ ಹೆರಿಗೆಗೆ ಈಗ ಇಪ್ಪತ್ತು ಸಹಸ್ರ ರೂಪಾಯಿಗಳು ಸಹಜವಾಗಿ ಖರ್ಚಾಗುತ್ತವೆ. ಹಿಂದೆ ಮನೆಯ ಹಿರಿಯಳು ಅನೇಕ ಗ್ರಂದಿಗೆ ಸಾಮಾನು ತರಿಸಿ ಮನೆಯಲ್ಲೆ ಕಾಥಾ ಹಾಗೂ ಲೇಹ್ಯಗಳನ್ನು ತಯಾರಿಸಿ ಕೊಡುತ್ತಿದ್ದಳು. ಆದರೆ ಇಂದು ನುಂಗಬೇಕಾದ ಮಾತ್ರೆ, ಟಾನಿಕ್‌ಗಳಿಗೆ ಕೊನೆಮೊದಲಿಲ್ಲ. ಊರಿನಲ್ಲಿ ಡಾಕ್ಟರರ, ಆಸ್ಪತ್ರೆಗಳ ಸಂಖ್ಯೆ ಬೆಳೆಯುತ್ತ ಹೋದಂತೆ, ಸಾವು-ನೋವುಗಳ ಬಾಧೆ ಕಡಿಮೆಯಾಗುವ ಬದಲು ಹೆಚ್ಚುತ್ತ ಹೋಗಿವೆ!" ತುಳಸು ಸತ್ಯ ಸಂಗತಿಯನ್ನು ಅರುಹಿದ.

೧೭. ಮಾಯವಾದ ವನರಾಜಿ

"ಕಣ್ಣುಹಾಯಿಸಿದಲ್ಲೆಲ್ಲ ಗಿಡಮರಗಳೇ ಗೋಚರಿಸುತ್ತಿರುವಾಗ ಊರೆಲ್ಲ ಬೋಳಾಗಿದೆ! ಎಂದು ನೀವು ಹೇಳುವದನ್ನು ನಂಬುವದು ಕಷ್ಟ!" ಸೊಸೆ ಉದ್ಗರಿಸಿದಳು.

"ಮರುಭೂಮಿಯಲ್ಲಿ ಔಡಲಗಿಡವೇ ಮಹಾವೃಕ್ಷವೆನ್ನುವಂತಾಗಿದೆ!" ಕ್ರಿಶ್ ಸಂಸ್ಕೃತ ಸುಭಾಷಿತವನ್ನು ಉದ್ಧರಿಸಿದರು. ಕಾಡುಗಳೇ ಪರಿಸರದ ಅತ್ಯಂತ ದಕ್ಷ ರಕ್ಷಕರಾಗಿ ಕಾರ್ಯನಿರ್ವಹಿಸುತ್ತವೆ. ಬಾಲ್ಯದಲ್ಲಿ ಕರ್ನಲ್ ಹಿಲ್ ಮೇಲಿಂದ ಕೆಳಗೆ ವೀಕ್ಷಿಸಿದಾಗ, ನಮ್ಮೂರು ನಾಡೋ ಬರಿಯ ಕಾಡೋ! ಎಂದು ನಿರ್ಧರಿಸುವದು ಕಠಿಣವಾಗಿತ್ತು. ಅಷ್ಟೊಂದು ದಟ್ಟವಾದ ಗಿಡ-ಮರಗಳಿಂದ ಆವೃತವಾಗಿತ್ತು. ಪ್ರತಿ ಮನೆ, ಗುಡಿಸಲು, ಬಂಗಲೆಗಳ ಸುತ್ತಮುತ್ತ ತೆಂಗು, ಮಾವು ಹಲಸು, ಬಾಳೆಗಿಡಗಳನ್ನು ಬೆಳೆದೇ ಬೆಳೆಸುವದು ವಾಡಿಕೆಯಾಗಿತ್ತು. ದೇವರ ಕಾಡು, ಇಲ್ಲವೇ 'ಕಾದಿಟ್ಟ ಕಾಡು' ಎಂದು ಕರೆಯಲು ಯೋಗ್ಯವಾದ ತೋಪು, ವನಗಳು ಊರಲ್ಲಿ ಉದ್ದಗಲಕ್ಕೆ ಇದ್ದವು.

ಬಸರೂರು ರಾಘವೇಂದ್ರರಾಯರ 'ವಡಗೇರಿ', ನಂದನವನದಂತಹ ವಿಸ್ತಾರವಾದ ತೋಪು, ಊರಿನ ಮೂಗ, ಮೂಗುತಿಯಂತೆ ಶೋಭೆ ತರುವಂತೆ ಇತ್ತು. ಊರ ಉತ್ತರಕ್ಕಿದ್ದ ಈ ವನರಾಜಿಯು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿಕೊಂಡಿದೆ, ಎಂದು ಹೇಳುವದು ಅಸಾಧ್ಯವಾಗಿತ್ತು. ಸುತ್ತಲೂ ಬೇಲಿಯಾಗಲಿ, ಪ್ರವೇಶದ್ವಾರವಾಗಲಿ, ಕಾವಲುಗಾರರಾಗಲಿ ಇಲ್ಲದೇ ಇರುವದು, ಅದರ ವೈಶಿಷ್ಟ್ಯವಾಗಿತ್ತು. ಊರವರಿಗೆಲ್ಲ ಅಲ್ಲಿ ಸದಾಕಾಲ ಸುಸ್ವಾಗತ! ಹೀಗಾಗಿ ಬಿಡುವು, ರಜಾದಿನಗಳಲ್ಲಿ ಬೆಳೆಯುವ ಮಕ್ಕಳಿಗೆ ನಿಸರ್ಗದೊಂದಿಗೆ ಒಂದಾಗಿ ಸಮಯ ಕಳೆಯುವ ಅಪೂರ್ವ ಅವಕಾಶ ದೊರಕುತ್ತಿತ್ತು. ಅಲ್ಲಿ ಬೆಳೆದು ನಿಂತ ಹಣ್ಣು ಹಂಪಲುಗಳ ಗಿಡ-ಮರಗಳನ್ನು ನೆನೆಸಿಕೊಂಡರೆ ಮೈನವಿರೇಳುತ್ತದೆ. ನೇರಳೆಹಣ್ಣಿನ ಗೊಂಚಲು ಗೊಂಚಲುಗಳು ಭಾರವಾಗಿ ಬಗ್ಗಿದ ಟೊಂಗೆಗಳು ನೆಲವನ್ನು ಮುದ್ದಿಡುತ್ತಿದ್ದವು! ಕಾಡು ನೇರಳೆಗಳೂ ಅಷ್ಟೇ ವಿಪುಲವಾಗಿದ್ದವು. ಅವು ಚಿಕ್ಕವಿದ್ದು ಬೀಜದೊಡ್ಡದು. ರುಚಿಯೂ ಕಡಿಮೆ. ಹೀಗಾಗಿ ಅವನ್ನು ಹೆಚ್ಚು ಕೀಳುತ್ತಿರಲಿಲ್ಲ. ನೇರಳೆ ಹಣ್ಣುಗಳನ್ನು ಯಥೇಷ್ಟವಾಗಿ ತಿಂದು, ಬಾಯಿ-ನಾಲಿಗೆಯೆಲ್ಲ ನೀಲಿ ಮಾಡಿಕೊಂಡು, ಕೋತಿಗಳ ಹತ್ತಿರದ ಸಂಬಂಧಿಗಳೆಂದು ನಾವು ತೋರಿಸಿಕೊಂಡಾಗಲೇ ನೆಮ್ಮದಿಯಿರುತ್ತಿತ್ತು!" ಕ್ರಿಶ್ ತಮ್ಮ ನೆನಪುಗಳ ಖಜಾನೆಯ ಬೀಗ ತೆಗೆದರು.

ತುಳಸು ಪತ್ನಿ, ತಂದಿಟ್ಟ ಲಿಂಬೇ ಹಣ್ಣಿನ ಶರಬತ್ತು ಸವಿದು ಮಾತು ಮುಂದರಿಸಿದರು, "ಈ ವಡಗೇರಿ, ಗೋವೆ (ಗೇರು) ಹಣ್ಣಿಗೆ ಸುಪ್ರಸಿದ್ಧವಾಗಿತ್ತು. ವಸಂತ ಋತುವಿನಲ್ಲಿ ಗೇರು, ಹೂಬಿಟ್ಟಾಗ ವನವೆಲ್ಲ ವಿಶಿಷ್ಟವಾದ ಸುವಾಸನೆಯಿಂದ ಗಮಗಮಿಸುತ್ತಿರುತ್ತದೆ. ಮಧುವನ್ನು ಹೀರಲು ಜೇನ್ನೊಣಗಳು ಹಿಂಡು ಹಿಂಡಾಗಿ ಮರಗಳಿಗೆ ಮುತ್ತಿಗೆಯಿಡುತ್ತವೆ. ಗೇರು ಹೂಗಳಿಂದ ಪಡೆದ ಜೇನುತುಪ್ಪ ಸುವಾಸನೆ ಹಾಗೂ ಬಣ್ಣ-ರುಚಿಗಳಲ್ಲಿ ತೀರ ಭಿನ್ನವಾಗಿರುತ್ತದೆ.

ಗೇರು ಕಾಯಿ ಇನ್ನೂ ಮಿಡಿಯಾಗಿರುವಾಗಲೇ ಗೇರು ಬೀಜ ಸಾಕಷ್ಟು ಬಲಿತಿರುತ್ತದೆ. ಆಗ ಅದು ತಿನ್ನಲು ಬಲುರುಚಿಯಾದರೂ ಅಧಿಕ ಸೊನೆಯಿಂದ ಆವೃತವಾಗಿರುತ್ತದೆ. ಹಾಗೆಯೇ ಕಾಯಿಯಿಂದ ಬೀಜವನ್ನು ಬೇರ್ಪಡಿಸಿ ಬಾಯಿಗೆ ಸೇರಿಸಿದರೆ ತುಟಿ-ನಾಲಿಗೆಗಳು ಸುಟ್ಟು ಬೊಕ್ಕೆ ಏಳುವದು ಖಂಡಿತ! ಅಂತೆಯೇ ಕಾಯಿಗಳನ್ನು ಮರದ ತೊಗಟೆಗೆ ತಿಕ್ಕಿ, ತೀಡಿ, ನಂತರ ಹಿಚುಕಿದಾಗ ಹೊರಬಂದ ಎಳೆಗೇರು ಬೀಜಗಳನ್ನು ತಿನ್ನುತ್ತಿದ್ದೆವು. ಗೇರು ಹಣ್ಣುಗಳು ಹಳದಿ ಹಾಗೂ ಕೆಂಪು ಬಣ್ಣದವಾಗಿದ್ದು ಒಳ್ಳೆಯ ಸುವಾಸನೆ ಹೊಂದಿರುತ್ತವೆ. ಅಂತೆಯೇ ಗೇರು ಮರದಡಿ ಸರ್ಪಗಳು ಠಾಣ್ಯ ಹಾಕಿರುತ್ತವೆ! ಎಂದು ಸಾಮಾನ್ಯ ನಂಬಿಕೆ. ಕೆಂಬಣ್ಣದವು ಅತಿ ಆಕರ್ಷವಾಗಿದ್ದರೂ ರುಚಿಯಲ್ಲಿ ಎಡಗೈ. ಅದೇ ಹಳದಿ ಹಣ್ಣುಗಳು ರಸಭರಿತವಾಗಿರುತ್ತವೆ. ಗೇರು ಬೀಜಗಳ ಉದ್ದಳತೆ ಹೆಚ್ಚಾಗಿರುವದನ್ನು ಆರಿಸಿ ಅವನ್ನು ಪೊಳ್ಳುಮಾಡಿ, ಕರಗಿಸಿದ ಸೀಸ ತುಂಬಿ ಅವನ್ನು 'ಬೆಟ್ಟೆಯ ಆಟಕ್ಕೆ' ಬಳಸುತ್ತಿದ್ದೆವು. ಭಾರವಾದ ಬೆಟ್ಟೆಯನ್ನು ಚೆನ್ನಾಗಿ ಗುರಿಯಿಟ್ಟು ಹೊಡೆಯಬಲ್ಲವನು ವಿಪುಲವಾಗಿ ಗೇರಬೀಜಗಳನ್ನು ಗೆಲ್ಲುತ್ತಿದ್ದನು. ಗೇರು ಹಣ್ಣಿನ ಶ್ರಾಯದಲ್ಲಿ ನಾವೆಲ್ಲ ಮರಹತ್ತಿ ಕೈಗೆಟುಕುವಷ್ಟು ಹಣ್ಣುಗಳನ್ನು ಪಡೆದು ಜಗಿದು, ರಸ ನುಂಗಿ, ಸಿವುಡು ಒಗೆದು, ಜೊತೆಗೆ ಬಾರದ ಗೆಳೆಯರಿಗೂ ಹಣ್ಣುಗಳನ್ನು ಸಂಗ್ರಹಿಸಿ, ಗೇರುಬೀಜಗಳ ದೊಡ್ಡ ರಾಶಿಯೊಂದಿಗೆ ಹಿಂದಿರುಗುವದು ಪರಿಪಾಠವಾಗಿತ್ತು. ಬಚ್ಚಲೊಲೆಯಲ್ಲಿ ಬೀಜಗಳನ್ನೆಲ್ಲ ಹದವಾಗಿ ಸುಟ್ಟು, ಹುರಿದ ಬೀಜಗಳು ನಮಗೆ ಅತ್ಯಂತ ಪ್ರಿಯ ತಿಂಡಿಯಾಗಿತ್ತು. ಇದೊಂದು ಮರೆಯಲಾಗದ ಬಾಲ್ಯ ಕಾಲೀನ ಅದ್ಭುತರುಚಿ!" ಕ್ರಿಶ್ ಬಾಯಿ ಚಪ್ಪರಿಸಿದರು.

"ಈ ದಿನಗಳು ಮಾಯವಾಗಿ ಅದೆಷ್ಟೋ ದಶಕಗಳು ಜಾರಿವೆ. ಅವು ನಿನ್ನ ನೆನಪಿನಂಗಳದಲ್ಲಿ ಮಾತ್ರ ಉಳಿದುಕೊಂಡಿವೆ. ವಡಗೇರಿ ಹಲವರ ಕೈಗೆ ಹಸ್ತಾಂತರವಾಯಿತು. ಅದನ್ನು ತುಂಡು ತುಂಡು ಮಾಡಿಸಿ ಖರೀದಿಸಿದವರು, ಕೆರೆಕೋಣ, ತೇಲಂಗ, ಮಂಜುನಾಯ್ಕ ಕುಟುಂಬದವರು. ಈಗ ಅಡಿಕೆ ಹಾಗೂ ತೆಂಗಿನ ತೋಟಗಳನ್ನಾಗಿ ಪರಿವರ್ತಿಸಿದ್ದಾರೆ. ಪಕ್ಕದಲ್ಲಿ ಕುಕ್ಕುಟ ಪಾಲನೆಯ ಕೇಂದ್ರವೂ ಇದೆ. ನೇರಳೆ ಮರಗಳು ತೀರ ವಿರಳವಾಗಿ ಬಿಟ್ಟಿವೆ. ನೇರಳೆ ಹಣ್ಣು ತಂದು ಪೇಟೆಯಲ್ಲಿ ಕೇ.ಜಿ.ಗೆ ನಾಲವತ್ತು ರೂಪಾಯಿಗಳಂತೆ ಮಾರುತ್ತಾರೆ. ಗೋಡಂಬಿ ಬೀಜಕ್ಕೆ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಪರೀತ ಬೇಡಿಕೆಯಿದ್ದುದರಿಂದ, ಬೆಲೆಯೂ ಅಧಿಕವಾಗಿರುವದರಿಂದ ಬೀಜಗಳನ್ನೆಲ್ಲ ಬಲಿಯುವ ಮೊದಲೇ ಬೀಳಿಸಿ, ಬಿಸಿಲಿನಲ್ಲಿ ಒಣಗಿಸಿ, ಠೋಕ ವ್ಯಾಪಾರಿಗಳಿಗೆ ಮಾರುತ್ತಾರೆ. ಒಂದು ಕೆ.ಜಿ. ಗೇರು ಬೀಜಕ್ಕೆ ಇನ್ನೂರು ರೂಪಾಯಿಗಳಿಗಿಂತ ಹೆಚ್ಚು ಬೆಲೆ ಇರುವಾಗ ಒಂದೊಂದು ಬೀಜದ ಬೆಲೆ ಎಷ್ಟಾಯ್ತು?

ಅಲ್ಲದೇ, "ಈಗ ಬೆಟ್ಟೆ ಆಟ ಆಡುವವರು ಎಲ್ಲಿದ್ದಾರೆ?" ತುಳಸು ವ್ಯಸನದಿಂದ ನುಡಿದ.

"ಈ ವಡಗೇರಿಯೆಂಬುದು ಪಶು-ಪಕ್ಷಿಧಾಮವೂ ಆಗಿತ್ತು. ಕಾಡು ಪಾರಿವಾಳಗಳು ಗುಟುರ್ ಗುಟುರ್! ಎಂದು ಪ್ರಿಯತಮೆಯನ್ನು ಕರೆಯುತ್ತ ಹಾರುತ್ತ ಇದ್ದರೆ, ಗುಟ್ರಗುಮ್ಮ, ಟೊಂಗೆಯೊಂದರ ತುತ್ತತುದಿಯಲ್ಲಿ ಅವಿತು, ಕುಟ್ರುಕ್! ಕುಟ್ರುಕ್! ಎಂದು ಗಗನದತ್ತ ಮುಖಮಾಡಿ ಪ್ರೇಮಗೀತ ಹಾಡುತ್ತಿತ್ತು. ಕಪ್ಪು-ಬಿಳೀ ರೆಕ್ಕೆಗಳ ಸಿಪಿಲೆಯ ಸಿಳ್ಳನ್ನು ಅನುಕರಿಸುವದು ಅದೆಷ್ಟು ಕಷ್ಟಕರವೆಂದು ಯತ್ನಿಸಿದಾಗಲೇ ತಿಳಿಯಬೇಕು. ಜೇನ್ನೊಣ ಹಿಡುಕ, ಕ್ಷಣಾರ್ಧದಲ್ಲಿ ಹಾರಿ, ಹುಳ ಹುಪ್ಪಡಿಗಳನ್ನು ಆಹಾರಕ್ಕಾಗಿ ಕೊಕ್ಕಿನಲ್ಲಿ ಬಂಧಿಸಿ ಸ್ವಸ್ಥಾನಕ್ಕೆ ಮರಳುವ ನೋಟ ರಮ್ಯವಾದದ್ದು. ಬುಲ್ ಬುಲ್ ಹಕ್ಕಿ, ಪೊದೆಗಳಲ್ಲಿ ಹಗುರಾದ ಗೂಡು ರಚಿಸಿ ಧ್ಯಾನಗ್ರಸ್ತವಾಗಿ ಮರಿಗೆ ಕಾವು ಕೊಡುತ್ತಿರುತ್ತದೆ. ತನ್ನ ಶಕ್ತಿ-ಸಾಮರ್ಥ್ಯಗಳಲ್ಲಿ ಅಪಾರ ವಿಶ್ವಾಸ ಇಟ್ಟುಕೊಂಡಿರುವ ಮರಕುಟಿಕ, ಎತ್ತರದ ಮರವೇರಿ, ಮರದ ಪೊಳ್ಳನ್ನು ಕುಟುಕಿ, ವಿಸ್ತರಿಸಿ ತನ್ನ ಸಂತಾನೋತ್ಪತ್ತಿಯ ಸಕಲ ವ್ಯವಸ್ಥೆಯಲ್ಲಿ ತೊಡಗಿರುತ್ತದೆ. ಗೊರವಂಕವು, ಮರದ ಆಶ್ರಯ ಪಡೆದಾಗ ನಾಶೀಪುಡಿ ಬಣ್ಣದ್ದಾಗಿ ಕಂಡರೆ, ಚಟುವಟಿಕೆಯಿಂದ ಕೂಡಿ ಭರ್ರೆಂದು ಹಾರುವಾಗ ಬಿಳಿಯ ಬಣ್ಣ ಹೊಂದಿದಂತೆ ಗೋಚರಿಸುವದರಿಂದ, ಇದೊಂದು ತೀರ ಭಿನ್ನ ಹಕ್ಕಿ ಇದ್ದಿರಲೇಬೇಕು! ಎಂಬ ಭ್ರಮೆ ಹುಟ್ಟುವಂತೆ ಆಗುತ್ತದೆ. ಪಿಕಳಾರವು ತನ್ನ ಪತ್ನಿಯೊಂದಿಗೆ ಟೊಂಗೆಯಿಂದ ಟೊಂಗೆಗೆ ಹಾರುತ್ತಲೇ ಇರುವಂತೆ ಕಂಡರೂ, ಹೆಚ್ಚಿನ ಸಮಯವನ್ನು ಶೃಂಗಾರ ಚೇಷ್ಟೆಯಲ್ಲಿಯೇ ಕಳೆಯುತ್ತದೆ!" ಕ್ರಿಶ್, ತಮ್ಮ ನೆನಪಿನ ನಂದನವನದಲ್ಲಿ ವಿಹರಿಸಹತ್ತಿದರು.

"ಓ! ಹಾಗಿದ್ದರೆ ಪಕ್ಷಿಗಳಂತೆಯೇ ನಿಮಗೆ ಅನೇಕ ಪಶುಗಳ ದೋಸ್ತಿಯೂ ಇದ್ದಿರಬೇಕಲ್ಲವೇ?" ಕಿಮ್‌ಳ ತುಂಟ ಪ್ರಶ್ನೆ.

"ಇಲ್ಲದೇ ಏನು? ಅಲ್ಲಿ-ಇಲ್ಲಿ ಹಬ್ಬಿಕೊಂಡ ಮುಳ್ಳುಗಿಡ-ಗಂಟಿಗಳ ಪೊದೆಗಳಲ್ಲಿ ಮೊಲಗಳು ಮರಿಗಳೊಂದಿಗೆ ಅವಿತಿದ್ದು, ತಮ್ಮ ವೈರಿಗಳ ಚಲನವಲನಗಳನ್ನು ವೀಕ್ಷಿಸುತ್ತಿರುತ್ತವೆ. ಕೋತಿಗಳು ಗಂಡಾಂತರ ಕಂಡು ಬಂದಾಗ, ನಾಗಾಲೋಟದಿಂದ ಕಂಬಿಕಿತ್ತು ಹೆಚ್ಚಿನ ಕಾಯಿಗಳನ್ನೂ ಕಿತ್ತು ತಿನ್ನಲು ಯತ್ನಿಸಿ ಆಗದೇ ನೆಲಕ್ಕುರುಳಿಸುವವು. ಕತ್ತಲಾಗಲಾರಂಭಿಸಿದಾಗ, ನಾನಾ ವಿಧ ಕಪಿಚೇಷ್ಟೆಗಳೆಲ್ಲ ಇನ್ನು ಸಾಕು! ಎಂದು ಎತ್ತರದ ಮರವೇರಿ, ರಾತ್ರಿಯ ಸುಖನಿದ್ರೆಯ ಏರ್ಪಾಡು ಮಾಡಿಕೊಳ್ಳುವವು. ಕತ್ತಲಾಗುವದನ್ನೆ ಕಾಯುತ್ತಿದ್ದ ನಿಶಾಚರ ನರಿಗಳು, ದಿನವೆಲ್ಲ ಅವಿತು ಕುಳಿತ ಸ್ಥಳಗಳಿಂದ 'ಹುಯ್ಯೋ! ಹುಕ್ಯೋ!' ಎಂದು ಕೂಗುತ್ತ ಹೊರ ಹೊರಡುವವು. ಕಳ್ಳ ಹಾಗೂ ಕ್ರೂರಬೇಟೆಗೆ ಹೆಸರಾದ ಕತ್ತೆಕಿರುಬ ಬರುವ ಸೂಚನೆ ಸಿಕ್ಕರೆ ಸಕಲ ಪ್ರಾಣಿಗಳೂ ಕ್ಷಣಾರ್ಧದಲ್ಲಿ ಪಲಾಯನ ಮಂತ್ರವನ್ನು ಜಪಿಸಿ ಬಿಡುವವು! ಆಗೊಮ್ಮೆ ಈಗೊಮ್ಮೆ ಮೇಯಲು ದೂರ ಹೋದ ದನಕರುಗಳು ಹುಲಿರಾಯನಿಗೆ ಆಹುತಿಯಾದ ವದಂತಿ ಕೇಳಿಬರುತ್ತಿದ್ದರೂ ಪ್ರತ್ಯಕ್ಷ ದರ್ಶನ ಆಗಿರಲಿಲ್ಲ. ಆದರೆ ಒಂದು ಸಂಜೆ, ಗೇರುಹಣ್ಣು ಕೀಳುತ್ತಿದ್ದಾಗ ಹತ್ತಿರ ಹರಿಯುತ್ತಿದ್ದ ತೊರೆಯ ಹತ್ತಿರ ಕಣ್ಣು ಹರಿಸಿದಾಗ, "ನನ್ನ ರಾಜ್ಯದಲ್ಲಿ ಅನಧಿಕೃತವಾಗಿ ಪ್ರವೇಶಿಸಿದ ಈ ಪೋರ ಯಾರು"? ಎಂದು ನೀರು ಕುಡಿಯಲು ಬಂದ

ಹೆಬ್ಬುಲಿ ಕಣ್ಣೆತ್ತಿ, ಏಕ ಪ್ರಕಾರವಾಗಿ ದಿಟ್ಟಿಸುತ್ತಿದ್ದುದು ಕಂಡಿತು. ಮುಂದೇನು ಮಾಡಬೇಕೆಂದು ತಿಳಿಯದೆ, ದಿಗ್ಭ್ರಮೆಯಿಂದ ಮರವನ್ನು ಗಟ್ಟಿಯಾಗಿ ತಬ್ಬಿಕೊಂಡಿದ್ದೆ! ಪುಣ್ಯವಶಾತ್, ಅದು ನೀರು ಕುಡಿದು, ತನ್ನ ಪಾಡಿಗೆ ತಾನು ಕಾಡಿನಲ್ಲಿ ಮರೆಯಾಯಿತು. ಆ ಬಳಿಕ ಬದುಕಿದೆಯಾ ಬಡಜೀವ! ಎಂದು ಮರ ಇಳಿದು ಬಂದು ಮನೆ ಸೇರಿದೆ, ಆ ಬಳಿಕ ಅವೇಳೆಯಲ್ಲಿ ವಡಗೇರಿಗೆ ಹೋಗುವ ಸಾಹಸವನ್ನು ಮಾಡಲಿಲ್ಲ!"

ಕ್ರಿಶ್‌ರ ವ್ಯಾಘ್ರದರ್ಶನದ ಕತೆ ಕೇಳುತ್ತಿದ್ದವರಿಗೆ ರೋಮಾಂಚನವಾಯಿತು.

"ನಮ್ಮೂರಿನಲ್ಲಿ, ವಡಗೇರಿಯಲ್ಲಿ ಹುಲಿಗಳು ಬಂದು ಹೋಗುತ್ತಿದ್ದವು, ಎಂದು ಇಂದಿನ ಪೀಳಿಗೆಗೆ ಗೊತ್ತಿಲ್ಲ. ನಾನೇನಾದರೂ ಈ ವಿಚಾರ ಹೇಳಿದರೆ ಕಟ್ಟುಕತೆ ಎಂದು ಕ್ಷಣಾರ್ಧದಲ್ಲಿ ತೀರ್ಮಾನಿಸಿ ಬಿಡುವರು" ತುಳಸು ಸಾರಿದ.

"ವಡಗೇರಿಯ ಸಮೀಪದಲ್ಲಿಯೇ ಗೋವಿಂದರಾಯ ಶೇಟರ ವಿಸ್ತಾರವಾದ 'ಗಾಳಿ'ಯೂ ಜನಸೇವೆಗೆ ಮೀಸಲಿತ್ತು. ಅದರಲ್ಲಿರುವ ಅಸಂಖ್ಯಾತ ನೆಲ್ಲಿಕಾಯಿಗಿಡಗಳು ಊರವರ ಮೆಚ್ಚಿಗೆ ಪಡೆದಿದ್ದವು. ಇವನ್ನು ತಿಂದು ಪಕ್ಕದ ರಾಮತೀರ್ಥದ ನೀರು ಕುಡಿದು ತೇಗಿದರೆ ಅದೆಲ್ಲವೂ ರಕ್ತವಾಗಿ ಪರಿವರ್ತನೆ ಹೊಂದುತ್ತದೆ! ಎಂದು ಯಾರೋ ಪಂಡಿತರು ಹೇಳಿದ್ದರಿಂದ ನಾವೆಲ್ಲ ನೆಲ್ಲಿಕಾಯಿ ತಿಂದು ನೀರು ಕುಡಿದದ್ದೇ ಕುಡಿದದ್ದು! ಇಷ್ಟಾದರೂ ನಮ್ಮ ದೇಹದ ರಕ್ತದ ಅಭಿವೃದ್ಧಿ ಆದಂತೆ ಅನಿಸುವದಿಲ್ಲ! ನೆಲ್ಲಿಕಾಯಿ ಸಣ್ಣದಾಗಿ ಹೆಚ್ಚಿ, ಉಪ್ಪು ಸೇರಿಸಿ, ಒಣಗಿಸಿ, ಅಡಿಕೆಪುಡಿಯಂತೆ ಉಪಯೋಗಿಸುತ್ತಿದ್ದರು. ನೆಲ್ಲಿಕಾಯಿ ಗುಳಂಬ ಮಾಡುತ್ತಿದ್ದರು. ತೆಂಗಿನೆಣ್ಣೆಗೆ ನೆಲ್ಲಿಕಾಯಿಗಳನ್ನು ಬೆರೆಸಿ ಕೇಶವರ್ಧಕ ತೈಲವನ್ನು ಪಡೆಯುತ್ತಿದ್ದರು. ಅಲ್ಲೊಂದು ಇಲ್ಲೊಂದು ಮುಳ್ಳುಗಳನ್ನು ಹೊತ್ತು ನಿಂತ ಕವಳಿಕಾಯಿಗಳು ಸಿಹಿ-ಹುಳಿ ರುಚಿಯಿಂದ ಮಕ್ಕಳಿಗೆ ಪ್ರಿಯವಾಗಿದ್ದವು. ಕವಳಿಕಾಯಿಯ ಉಪ್ಪಿನಕಾಯಿ ಮಾಡುತ್ತಿದ್ದರು. ಹಾಲಿನಂತಿದ್ದ ಅದರ ಸೋನೆ ಬಾಯಿಗೆ ಅಂಟಿಕೊಂಡು ಬಿಡುತ್ತಿತ್ತು" ಮುಳ್ಳು ಹಣ್ಣು, ಇತರ ಹಣ್ಣುಗಳನ್ನು ನೆನಪಿಸಿ ಕೊಂಡು ಕ್ರಿಶ್ ದುಡ್ಡು ಖರ್ಚುಮಾಡದೆಯೇ ಮಕ್ಕಳು ತಿಂದು ಆನಂದಿಸುತ್ತಿದ್ದುದನ್ನು ಹೇಳಿದರು.

"ನೀನು ಬಣ್ಣಿಸಿದ ಸ್ಥಳದಲ್ಲಿ ದೊಡ್ಡ ದೊಡ್ಡ ಗೋದಾಮುಗಳನ್ನು ಕಟ್ಟಲು ಆ ಮರಗಳನ್ನೆಲ್ಲ ಕಡಿದು ಹಾಕಿದ್ದಾರೆ! 'ಆಂವಲಾತೇಲ್;' ಹಾಗೂ ನೆಲ್ಲಿ ಉಪ್ಪಿನಕಾಯಿ ತಯಾರಕರು ಅಲ್ಲಿಯ ಬೆಳೆಯನ್ನೆಲ್ಲ ತಮ್ಮದನ್ನಾಗಿಸಿಕೊಂಡಿದ್ದರಿಂದ ಊರವರಿಗೆ ಏನೇನೂ ಉಳಿಯುವದಿಲ್ಲ!" ಸದ್ಯದ ಪರಿಸ್ಥಿತಿಯನ್ನು ತುಳಸು ಬಣ್ಣಿಸಿದ.

"ಅರಣ್ಯ ಇಲಾಖೆಯ ಬಂಗಲೆಯ ಹಿಂದೆ ಬಂಡೆಗಲ್ಲುಗಳು ಕೆಳಗಿನ ಪಾಳ್ಯದತ್ತ ಇಳಿಜಾರಾಗಿ ವಾಲಿದ್ದರಿಂದ, ಅಲ್ಲಿ ಅನೇಕಾನೇಕ ಬಗೆಯ ವೃಕ್ಷಗಳುಳ್ಳ ಊರಕಾಡು ಇತ್ತು. ಅಲ್ಲಿ ಮೇಯಲು ಹೋದ ದನಗಳು ಬಿದ್ದು ಕಾಲು ಮುರಿದುಕೊಂಡದ್ದು ಇತ್ತು. ಈ ಸ್ಥಳದಲ್ಲಿ ಕೆಲವು ಅಪರೂಪದ ಹಣ್ಣುಗಳು ಸದಾಕಾಲ ಲಭ್ಯವಿದ್ದವು. ಮುಳ್ಳಣ್ಣು ತೀರ ಚಿಕ್ಕವು. ಸುಣ್ಣದಂತೆ ಬಿಳಿ, ಸಕ್ಕರೆಯಂತೆ ಸಿಹಿ, ಬೀಜವುಳ್ಳದ್ದು. ಆದರೆ ಕೀಳಲು ಮುಳ್ಳುಗಳಿಂದ

ಪರಿಚಿಸಿಕೊಂಡೇ ಪಡೆಯಬೇಕಾಗಿತ್ತು. ಅದರಂತೆ 'ಜಾಂಪೇಡ'ಗಳು (ಸಂಪೆ, ಚಟುಕಿನ ಹಣ್ಣು) ಕುಂಟನೇರಳೆ, ಮರದ ತುಂಬ ಮುಳ್ಳುಗಳು. "ಕೆಂಬಣ್ಣದ ಹಣ್ಣುಗಳು ಹದವಾದ ಹುಳಿಸಿಹಿ ಮಿಶ್ರಣ. 'ಬೆಳಸ'ಗಳು ಕುಂಟ ನೇರಳೆ, ನೇರಿಳೆ ಹಣ್ಣಿನ ಜಾತಿ. ಆದರೆ ಜಾಸ್ತಿ ಒಗರು. ಚಿವಾರ... ಪಟಕಳಗಳು?... ಈಗ ಈ ಹಣ್ಣುಗಳು ಇರಲಿಕ್ಕಿಲ್ಲ. ಆದರೆ ಆ ಸ್ಥಳವನ್ನಾದರೂ ನೋಡಿ ಬರೋಣ ಅನಿಸುತ್ತದೆ" ಕ್ರಿಶ್ ಪೀಠಿಕೆ ಹಾಕಿದರು.

ಅದಕ್ಕೆ ಉತ್ತರವಾಗಿ ತುಳಸು "ಆ ಜಾಗ ಎಲ್ಲಿದೆ? ಎಂದು ನಿನಗೆ ಪತ್ತೆಕೂಡ ಹತ್ತಲಿಕ್ಕಿಲ್ಲ! ಅದನ್ನೆಲ್ಲ ಜನರು ಆಕ್ರಮಿಸಿ ಎಲ್ಲ ಬಗೆ ಬಗೆಯ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ" ಎಂದು ನಿಜಸ್ಥಿತಿ ವಿವರಿಸಿದ.

"ಗೋವಿಂದ ಕಾಮತ ಮತ್ತು ಸಾಂತಯ್ಯನ ಹಿತ್ತಲುಗಳಲ್ಲಿಯೂ ಅನೇಕ ಗೋವೆಹಣ್ಣಿನ ಮರಗಳಿದ್ದು, ಊರಿಗೆ ಸಮೀಪದಲ್ಲೇ ಇದ್ದವು. ಆದರೆ ಅಲ್ಲಿ ಹಣ್ಣುಗಳನ್ನು ತಿಂದು ಬೀಜಗಳನ್ನು ಒಪ್ಪಿಸಿಯೇ ಹೋಗಬೇಕು, ಎನ್ನುವ ಕಡ್ಡಾಯವಿತ್ತು. ಊರಮಧ್ಯದಲ್ಲೇ ಇದ್ದ ಕೃಷ್ಣಪ್ಪನವರ ತೋಟ, ಸುಂದರ ಉದ್ಯಾನದಂತೆಯೇ ಇತ್ತು. ಕರಿ ಇಷಾಡ, ಆಪುಸ (ಅಲ್ಫಾನ್ಸೊ), ಫರ್ನಾದ (ಫರ್ನಾಂಡಿಸ್), ನೀಲಮ್ ಜಾತಿಯ ಮಾಮರಗಳನ್ನು ಬೆಳೆಸಿದ್ದರು. ಅವುಗಳ ಬುಡದಲ್ಲಿ ಕಳೆಚೆಂಡು (ಜಾಜಿಹೂ)ಗಳ ಬಳ್ಳಿಗಳನ್ನು ಹಬ್ಬಿಸಿದ್ದರು. ಅದರ ಮಾಲಕರು ನಗರಸಭೆಯ ಸದಸ್ಯರಾಗಿದ್ದು ಜನಸೇವಾಸಕ್ತರೂ ಇದ್ದರು. ಊರಿನಿಂದ ರಾಮತೀರ್ಥಕ್ಕೆ ಹೋಗುವ ರಸ್ತೆಯನ್ನು ಪಕ್ಕಾಮಾಡಲು ಎಷ್ಟು ಹಣಬೇಕು? ಎಂದು ನಿರ್ಧರಿಸಲು ತಮ್ಮ ಕೈಯಲ್ಲಿದ್ದ ಕೊಡೆಯಿಂದ ಮಾಪನಮಾಡಿದ ಘಟನೆಯನ್ನು ಊರ ಜನ, ಅಭಿಮಾನದಿಂದ ಹೇಳುತ್ತಿದ್ದರು. ಇಂದಿನ ಒಬ್ಬ ರಾಜಕಾರಣಿಗಾದರೂ ಇಂಥ ಜನಪ್ರೇಮ ಇದೆಯೇ?" ಕ್ರಿಶ್ ನಿಟ್ಟುಸುರು ಬಿಟ್ಟರು.

"ರಾಜಕಾರಣಿಗಳ ಮಾತು ಹಾಗಿರಲಿ, ಕೃಷ್ಣಪ್ಪನವರ ಪೀಳಿಗೆಯವರ ಮನೋಭಾವ ಗೊತ್ತೆ? ಜಾಜಿಮೊಗ್ಗು ಕೊಯ್ಯಲು ಊರಜನ ನಸುಕಿನಲ್ಲಿ ಬಂದಿಳಿಯುತ್ತಾರೆಂದು ಬಳ್ಳಿಗಳನ್ನೆಲ್ಲ ಅವರ ಚಿರಂಜೀವರು ಕಿತ್ತು ಎಸೆದರು. ಈಗ ಪಟ್ಟವೇರಿದ ಮೊಮ್ಮಗ, ಮಾವಿನ ಮರಗಳನ್ನೆಲ್ಲ ಕಡಿಸಿ ಅಲ್ಲಿ ವ್ಯಾಪಾರ ಸೌಧವನ್ನು ಕಟ್ಟಿಸಿ, ಮಳಿಗೆಗಳನ್ನು ಬಾಡಿಗೆಗೆ ಇತ್ತು ಹಣದ ರಾಶಿ ಒಟ್ಟಿದ್ದಾನೆ!" ಬೇಸರದ ಧ್ವನಿಯಲ್ಲಿ ತುಳಸು ಉಸುರಿದ.

"ಧನಿಕರಾಗಲು, ನಮ್ಮವರೆಲ್ಲ ರಾಜಕಾರಣಿಗಳೊಂದಿಗೆ ಸ್ಪರ್ಧೆಗೆ ಇಳಿದಿದ್ದಾರೆ, ಅನಿಸುತ್ತದೆ" ಕ್ರಿಶ್ ತೀರ್ಮಾನಕ್ಕೆ ಬಂದರು.

೧೮. ವೃತ್ತಿಜೀವನ

"ಇಲ್ಲಿ ಒಂದೂ ಉದ್ದಿಮೆಯಿಲ್ಲವೆಂದು ವಿಕ್ ಹೇಳುತ್ತಿದ್ದ. ಹಿಂದೆಯೂ ಇರಲಿಲ್ಲವಂತೆ! ಜನರೆಲ್ಲ ಹೇಗೆ ಜೀವನೋಪಾಯ ಸಾಗಿಸುತ್ತಿದ್ದರು?" ಕಿಮ್ ಕೇಳಿದಳು.

"ಜನರ ಜೀವನಾವಶ್ಯಕತೆಗಳು ಅಲ್ಪವಾಗಿದ್ದರೆ ಅವುಗಳನ್ನು ಈಡೇರಿಸುವದು ಸುಲಭ... ಶರಾವತಿ ನದಿಯೊಂದೇ ಅಸಂಖ್ಯರಿಗೆ ವೃತ್ತಿಗಳನ್ನು ಕಲ್ಪಿಸುವ ಅನ್ನಪೂರ್ಣೆಯಾಗಿದ್ದಳು. ನದಿಯುದ್ದಕ್ಕೂ ತೇಲುತ್ತಿದ್ದ 'ಗಾಳಿ ಕುದುರೆ' ಎಂಬ ಅನ್ವರ್ಥಕ ನಾಮ ಪಡೆದ ನಾವೆಗಳನ್ನು ನಡೆಸುವ ಪರಿಣತರು, ಎಷ್ಟು ಜನ ಇದ್ದರೆಂದು ಹೇಳುವದು ಕಷ್ಟ! ದೋಣಿ, ನಾವೆಗಳಲ್ಲಿ ಅದೆಷ್ಟು ಪ್ರಕಾರಗಳು! ತೀರ ಚಿಕ್ಕದಾದದ್ದು 'ಪಾತಿ' ದೋಣಿ, ಅದರಲ್ಲಿ ಎರಡೂ ಅಂಚುಗಳನ್ನು ಹಿಡಿದು ಪಯಣಿಗ ಕುಳಿತರೆ, ಒಂಟಿ ದೋಣಿಗ, ಎಡಗೈಯಿಂದ ಹುಟ್ಟುಹಾಕುತ್ತ, ಬಲಗೈಯಿಂದ ಗಾಳ ಹಾಕುವದನ್ನು ನೋಡಿದಾಗ ವಿಸ್ಮಯವಾಗುತ್ತಿತ್ತು. ಶರಾವತಿಯ ಒಂದು ದಡದಿಂದ ಇನ್ನೊಂದಕ್ಕೆ ಸಾಮಾನು ಸರಕು, ಜನರನ್ನು ಸತತ ಸಾಗಿಸುವ ದೋಣಿಗಳಿರುತ್ತಿದ್ದವು. ಉದ್ದವಾದ ಬಿದಿರಿನ 'ಜಲ್ಲು' ನೆಲಕ್ಕೆ ಒತ್ತುತ್ತ ಓಡಿಸುವ 'ಫಡಾವ್' ನಾವೆಗಳಿದ್ದವು. ಸರಕುಗಳಿಗೆ ಅವು ಮೀಸಲಾಗಿದ್ದವು. ದಪ್ಪ ಬಟ್ಟೆಯ ಹಾಯಿಗಳನ್ನು ಹೊಂದಿ ಗಾಳಿಯ ನೆರವಿನಿಂದ ಚಲಿಸುವ ಈ ನಾವೆಗಳು ಭಾರವನ್ನು ಹೊರುವದರಲ್ಲಿ ಹೆಸರುವಾಸಿ. 'ಮಚವೆ'ಗಳು ಕೋಚಿನದಿಂದ ಕಾಂಡ್ಲಾವರೆಗೆ ಓಡುವ ಬೃಹದ್ ಹಾಯಿ ನೌಕೆಗಳಾಗಿದ್ದವು. ಅವು ದಂಡೆಯಿಂದ ದೂರದಲ್ಲಿರಬೇಕಾಗಿದ್ದರಿಂದ ಅಡಿಗೆಯ ಸರಂಜಾಮು, ಕುಡಿಯುವ ನೀರು ಮುಂತಾದವನ್ನು ಹೊಂದಿರುತ್ತಿದ್ದವು. ಮೇಲ್ವಿಚಾರಣೆಗೆ 'ತಾಂಡೇಲ'ನಿದ್ದರೆ 'ಖಲಾಸಿ'ಗಳು ಅದರ ಶ್ರಮಜೀವಿಗಳಾಗಿದ್ದರು. ಈ ಎಲ್ಲ ನಾವೆಗಳ ಚಾಲನೆಗೆ ಇಂಧನದ ಅವಶ್ಯಕತೆ ಇರಲಿಲ್ಲ. ಹೀಗಾಗಿ ಪರಿಸರ ಮಾಲಿನ್ಯ ಮತ್ತು ಪೆಟ್ರೋಲಿನ ಅಭಾವದ ಪ್ರಶ್ನೆಯೇ ಇರಲಿಲ್ಲ. ಸಾಗಾಟಕ್ಕೆ ಕೊಡಬೇಕಾಗಿದ್ದ ಶುಲ್ಕ ಅತ್ಯಲ್ಪವಾಗಿತ್ತು. ಸ್ಥಾನೀಯರೇ ಈ ನಾವೆಗಳನ್ನು ಮಾವು, ಹಲಸು ಮುಂತಾದ ಮರದಿಂದ ನಿರ್ಮಿಸುತ್ತಿದ್ದರು. ಅದಕ್ಕೆ ಗೋಡಂಬಿ ಕವಚದ ಎಣ್ಣೆಯನ್ನು ಬಳಿದು ಗಟ್ಟಿ ಮುಟ್ಟಾಗಿ ತಾಳಿಕೆ ಬರುವಂತೆ ನೋಡಿಕೊಳ್ಳುತ್ತಿದ್ದರು. ನೌಕಾನಿರ್ಮಾಣ ಇಲ್ಲಿಯ ಮಹತ್ವದ ಉದ್ದಿಮೆಯಾಗಿದ್ದು, ಅಸಂಖ್ಯರಿಗೆ ಉಪಜೀವನ ಒದಗಿಸಿತ್ತು" ಎಂದು ಕ್ರಿಶ್ ನದೀಜೀವನದ ಒಂದು ಮಹತ್ವದ ಮುಖವನ್ನು ಪರಿಚಯಿಸಿದರು.

"ಬೆಂಗಳೂರು-ಹೊನ್ನಾವರ ರಾಜ್ಯಹೆದ್ದಾರಿಯ ನಿರ್ಮಾಣದ ಬಳಿಕ ಗೇರಸೊಪ್ಪಾ ನದಿ

ಮಾರ್ಗವಾಗಿ ಸರಕು ಹಾಗೂ ಪ್ರಯಾಣಿಕರನ್ನು ಹೊತ್ತು ತರುತ್ತಿದ್ದ 'ಗಾಳಿ ಕುದುರೆ'ಗಳು ಸಂಪೂರ್ಣವಾಗಿ ಮಾಯವಾದವು. ಈಗ ಎಲ್ಲವನ್ನು ಟ್ಯಾಕ್ಸಿ, ವ್ಯಾನ್, ಬಸ್‌ಗಳ ಮೂಲಕವೇ ಸಾಗಿಸಲಾಗುತ್ತದೆ. ಪಶ್ಚಿಮ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣದ ಬಳಿಕ ಮಚವೆಗಳು ಹೊತ್ತು ತರುತ್ತಿದ್ದ ಭಾರೀ ಸರಕುಗಳು ಲಾರಿಯಿಂದ ಬರಲಾರಂಭಿಸಿವೆ. ಕೊಂಕಣ ರೇಲ್ವೆ ರೂಪಗೊಂಡ ಬಳಿಕವಂತೂ ಜಲಮಾರ್ಗಗಳು ಪೂರ್ತಿ ನಿಸ್ತೇಜಗೊಂಡವು. ಅಂತರವಿಷ್ಟೆ. ಲಾರಿಯ ಬಾಡಿಗೆ ನೂರಾರು ಪಟ್ಟು ಏರಿತು. ಪರಿಸರ ಮಾಲಿನ್ಯವಂತೂ ಅತ್ಯಧಿಕವಾಗಿದೆ!" ತುಳಸು ನಂತರದ ಬೆಳವಣಿಗೆಯ ಪರಿಚಯ ನೀಡಿದ.

"ಊರ ಹೊರಗೆ ಚಿಕ್ಕ ಗುಡಿಸಲುಗಳಲ್ಲಿ ಬೇರು ಬಿಟ್ಟ ಇಲ್ಲಿಯ ಮೂಲ ಮಣ್ಣಿನ ಮಕ್ಕಳು, ಸಕಲ ರೀತಿಯ ಶಾರೀರಿಕ ಶ್ರಮದಿಂದ ಜೀವಿಸುತ್ತಿದ್ದರು. ಹೊಲಗದ್ದೆ-ತೋಟಗಳಲ್ಲಿ ದುಡಿಯುವದಿರಲಿ, ಮನೆ, ಅಂಗಳ, ಅಂಗಡಿಗಳ ಕೆಲಸವಿರಲಿ, ಎಂಥ ಭಾರ ಹೊರುವದಿರಲಿ ಸದಾಕಾಲ ದುಡಿಮೆಗೆ ಸಿದ್ಧರು. ಅವರು ಅತ್ಯಂತ ಪ್ರಾಮಾಣಿಕರಿದ್ದುದರಿಂದ, ಯಾವುದೇ ಕೆಲಸ ಒಪ್ಪಿಸಿದರೆ, ಅದರ ಮೇಲ್ವಿಚಾರಣೆ ಮಾಡಬೇಕಾದ ಪ್ರಮೇಯವೇ ಇರಲಿಲ್ಲ." ತಮ್ಮ ಬಾಲ್ಯದ ಪರಿಶ್ರಮ ಜೀವಿಗಳನ್ನು ಕ್ರಿಶ್ ನೆನಪಿಸಿಕೊಂಡರು.

"ಇಂದು ಅವರ ಶೋಚನೀಯ ಸ್ಥಿತಿಗೆ ನನ್ನ ಮನ ಮೂಕರೋದನ ನಡೆಸಿರುತ್ತದೆ. ಪಂಪ್‌ಸೆಟ್, ಹನಿ ನೀರಾವರಿಗಳು ದೊಟ್ಟೆ ನೀರಿನ ಪದ್ಧತಿಯನ್ನು ಇಲ್ಲವಾಗಿಸಿದವು. ಆಟೊ, ಟ್ಯಾಕ್ಸಿಗಳು ಬಂದು ಎತ್ತಿನಬಂಡಿ, ದೋಣಿಗಳನ್ನು ಓಡಿಸಿದವು. ಈ ಬಡವರ ಉದರ ಪೋಷಣೆಗೆ ವಿಕಲ್ಪ ವ್ಯವಸ್ಥೆಯೇ ಇರದ್ದರಿಂದ, ಅಲ್ಪಗಳಿಕೆಯನ್ನೆಲ್ಲ ಹೆಂಡಕ್ಕೆ ಸುರಿಯಲಾರಂಭಿಸಿದರು. ಮೊದಲು ಈ ಹಾಲಕ್ಕಿ ಜನಾಂಗ ಕುಡಿತದಿಂದ ಹೊರತಾಗಿತ್ತು. ಸೇಂದಿ ಅಂಗಡಿಯವರು ಉದ್ರಿ ಹೆಂಡಮಾರಿ, ಹೊರಲಾರದ ಸಾಲವನ್ನು ಅವರ ಮೇಲೆ ಹೇರಿದರು. ಪಾಪ! ಅವರ ಕಷ್ಟ ಸಹಿಷ್ಣು ಹೆಣ್ಣುಮಕ್ಕಳೆಲ್ಲ ಅದೆಷ್ಟು ದುಡಿದರೂ ತಮ್ಮ ಮಕ್ಕಳ ಉದರ ನಿರ್ವಹಣೆ ಮಾಡಲಾಗದೇ ಕಂಗಾಲಾಗುತ್ತಿದ್ದಾರೆ" ತುಳಸು ತನ್ನೂರಿಗೆ ಆಧುನಿಕತೆ ತಂದ ಶಾಪವನ್ನು ಪರಿಚಯಿಸಿದ.

"ಇಲ್ಲಿಯ ಚರ್ಮಶಿಲ್ಪಿಗಳು ದುಡಿಮೆಯಲ್ಲಿ ವಿಶ್ವಾಸವಿಟ್ಟ ಇನ್ನೊಂದು ಜನಾಂಗ. ಬಾಂದೇಹಳ್ಳದ ಪರಿಸರದಲ್ಲಿ ವಾಸಿಸುತ್ತಿದ್ದರು. ಅವರು ಹೊಲಿದ ನಾಲ್ಕು ಅಟ್ಟೆಯ ಚಪ್ಪಲಿಗಳು ಅತ್ಯಂತ ಜನಪ್ರಿಯವಾಗಿದ್ದವು. ದೂರದ ಊರುಗಳಿಂದ ರಜಾದಿನಕ್ಕೆ ಇಲ್ಲಿ ಬರುತ್ತಿದ್ದವರೂ ಒಂದೆರಡು ಜೋಡಿಗಳನ್ನು ಹೊಲಿಸಿಕೊಂಡು, ನಾಲ್ಕೈದು ವರ್ಷದ ಬೇಜ್ಮಿ ಮಾಡಿಕೊಳ್ಳುತ್ತಿದ್ದರು" ಕ್ರಿಶ್ ನುಡಿದರು.

"ಈಗ ಕಂಪನಿಯ ಚಪ್ಪಲಿಯ ಒಂದು ಉಂಗುಷ್ಟು ಕಿತ್ತು ಬಂದರೆ ಅದನ್ನು ಜೋಡಿಸಿಕೊಡುವ ಒಬ್ಬ ಸಮಗಾರನಿಲ್ಲ! ಅದನ್ನು ಒಗೆದು ಬಿಡಬೇಕಾಗುತ್ತದೆ. ಈಗ ಎಲ್ಲಿ ನೋಡಿದರೂ ಬಾಟಾ, ಬಿ.ಎಸ್.ಸಿ,. ಇನ್ನಿತರ ಕಂಪನಿಗಳ ಚಪ್ಪಲಿಗಳೇ! ದೇಶೀ ಚರ್ಮದ

ಕೈಗಾರಿಕೆಯನ್ನು ಗ್ರಾಮ ನೆಲೆಯಲ್ಲಿ ಮಣ್ಣು ಮುಕ್ಕಿಸಿದವರಾರು? ಅವರ ಹೊಟ್ಟೆ-ಬಟ್ಟೆ-ಕುರಿತು ಯೋಚಿಸಿದವರುಂಟೇ?" ತುಳಸು ಸವಾಲು ಹಾಕಿದ.

"ಕುದುರೆಗಳಿಲ್ಲದ ಕರಾವಳಿಯಲ್ಲಿ ಎತ್ತುಗಳನ್ನೆ ಕುದುರೆಗಳಂತೆ ಪರಿಗಣಿಸಿ ಸಾಗಾಟದಲ್ಲಿ ಬಳಸಿಕೊಳ್ಳುತ್ತಿದ್ದರು. ಗುಡ್ಡಗಾಡು ಪ್ರದೇಶವಾದ್ದರಿಂದ ಏರಿಳಿತಗಳು ಸಾಕಷ್ಟು! ಎಕ್ಕಾಗಾಡಿಯ ಬದಲಾಗಿ ಜೋಡೆತ್ತುಗಳನ್ನು ಹೂಡುವ ಪದ್ಧತಿ ಬೆಳೆದು ಬಂದಿತ್ತು. ಊರಲ್ಲಿ ಐದು ಬಂಡಿಗಳನ್ನು ಪಾಂಡುರಂಗನೆಂಬ ಪ್ರತಿಷ್ಠಿತ ನಡೆಸುತ್ತಿದ್ದು, ಹತ್ತು ಎತ್ತುಗಳನ್ನು ಹೊಂದಿದ್ದ. ಕೈ ತುಂಬ ಗಳಿಸುತ್ತಿದ್ದ. ತಂದೆ, ಇಬ್ಬರು ಮಕ್ಕಳು ಸೇರಿ ಮೂರು ಗಾಡಿಗಳನ್ನು ಓಡಿಸಿದರೆ, ಉಳಿದೆರಡಕ್ಕೆ ಆಳುಗಳನ್ನು ನೇಮಿಸಿದ್ದ, ಜೊತೆಗೆ ಮನೆಯ ಸುತ್ತ ಮುತ್ತಲ ಹೊಲಗಳ ಸಾಗುವಳಿಯನ್ನೂ ಮಾಡುತ್ತಿದ್ದ. ಮೇಲು ಸಂಪಾದನೆಗೆ ಕೊರತೆಯಿರಲಿಲ್ಲ. ಕೊಟ್ಟಿಗೆಯ ಗೊಬ್ಬರ ಕೃಷಿಗೆ ಸಹಾಯಕಾರಿ ಆಗಿತ್ತು. ಬಂಡಿಯನ್ನು ಎಳೆಯುವ ಎತ್ತುಗಳು, ನೇಗಿಲನ್ನು ಹೊರಲು ಸುಲಭವಾಗಿಯೇ ಸಿದ್ಧವಿರುತ್ತಿದ್ದವು. ಇನ್ನೂ ಕತ್ತಲಿರುವಾಗಲೇ ಅವಕ್ಕೆ ತಣ್ಣೀರಿನ ಸ್ನಾನ ಹಾಕಿ, ಹಣೆಗೆ ಕುಂಕುಮದ ಬಟ್ಟು ಇಟ್ಟು ತಿನ್ನಲು ಹತ್ತಿಕಾಳು, ಕೊಬ್ಬರಿ ಹಿಂಡಿಯ ನಾಶ್ತಾ ಒದಗಿಸಿ, ಉಪ್ಪು ಸೇರಿಸಿದ ಕಲಗಚ್ಚನ್ನು ಹೀರಲು ಯಥೇಷ್ಟವಾಗಿ ಪೂರೈಸುತ್ತಿದ್ದರು. ಬಳಿಕ ಎತ್ತುಗಳ ಬೆನ್ನು ನೇವರಿಸಿ ಬಾರುಕೋಲು ಹೆಗಲಿಗೇರಿಸಿ, "ನಡಿಯೋ ಬಸಣ್ಣ ಕೆಲಸಕ್ಕೆ!" ಎಂದು ನೊಗ ಹೇರಿದಾಗ ಇವು ಕರಾವಳಿಯ ಕುದುರೆಗಳಿರಬಹುದೇ! ಎಂದು ಅನುಮಾನ ಹುಟ್ಟಿಸುವಂತೆ ಓಡುತ್ತಿದ್ದವು.

"ಬಂದರಗಳಲ್ಲಿ ಮಚವೆಯಿಂದ ಇಳಿಸಿದ ಮಾಲುಗಳನ್ನು ಆಯಾ ಮಾಲಕರಿಗೆ ಮುಟ್ಟಿಸುವದು, ರಫ್ತು ಮಾಡುವ ಸಾಮಾನನ್ನು ಬಂದರಕ್ಕೆ ಸಾಗಿಸುವದು ಅವರ ದಿನನಿತ್ಯದ ಕೆಲಸ. ಇದಲ್ಲದೇ ಗುಂಡಗಲ್ಲು, ಖಡಿ, ಸುಣ್ಣ, ಮಣ್ಣು, ರೇವೆ, ಸೌದೆ ಮೊದಲಾದವನ್ನೂ ಸಾಗಿಸುತ್ತಿದ್ದರು. ಸೂರ್ಯನು ಮುಳುಗುತ್ತಿದ್ದಂತೆ, ಎತ್ತುಗಳು ಯಾಂತ್ರಿಕವಾಗಿ ಮನೆಯ ದಾರಿ ತುಳಿಯಲಾರಂಭಿಸುತ್ತಿದ್ದವು. ಹನುಮಂತನ ಗಾಡಿಗಳು ಘಟ್ಟದ ಮೇಲಿನ ಸಿರ್ಸಿಯ ತನಕ ಓಡಿಹೋಗಿ, ರೇಲ್ವೆಖಾತೆ ಕಟ್ಟಿಸಿದ 'ಔಟ ಏಜನ್ಸಿ'ಯಲ್ಲಿ ಬಂದಿಳಿದ ಸಾಮಾನು ಸರಕುಗಳನ್ನು ಕತಗಾಲ ಮಾರ್ಗವಾಗಿ ಹೊನ್ನಾವರಕ್ಕೆ ತಂದು ಮುಟ್ಟಿಸುತ್ತಿದ್ದವು. ಈ ಪಯಣಕ್ಕೆ ಒಂದುವಾರದ ಕಾಲಾವಕಾಶ ಬೇಕಿತ್ತು. ಅಂದಿನ ದಿನಗಳಲ್ಲಿ ಎಲ್ಲರಿಗೂ ಸಾಕಷ್ಟು ಕಾಲಾವಕಾಶವಿದ್ದುದರಿಂದ ಎಲ್ಲವೂ ಸುಸೂತ್ರವಾಗಿ ನಡೆದಿತ್ತು." ನೆಮ್ಮದಿಯನ್ನು ಗುರುತಿಸಿಕೊಂಡಿದ್ದ ತಮ್ಮ ಹಿರಿಯರ ವ್ಯವಸ್ಥೆಯನ್ನು ಕ್ರಿಶ್ ನೆನಪಿಸಿಕೊಂಡರು.

"ಇಂದು ತಾಳ್ಮೆ ಯಾರಿಗಿದೆ? ಬಸ್ಸಿಗೆ ಕಾಲು, ಅರ್ಧ ಗಂಟೆ ತಾಳದೆ ಖಾಸಗೀ ಬಿರಿದು ತುಂಬುವ ಟ್ಯಾಕ್ಸಿಯಲ್ಲಿ ಜನ ನುಗ್ಗಿ ಹೊರಟರೇ! ಲಾರಿ, ಬಸ್, ರೇಲ್ವೆ ತೀರ ನಿಧಾನ! ನಾಳೆ ಹೆಲಿಕ್ಯಾಪ್ಟರ್‌ಗಳು ಬಂದರೂ, ಅವಸರ ತೀರದ ಜನ ಕಂಡಾರು!" ತುಳಸು, ಉದ್ಗರಿಸಿದ.

"ಊರ ಕಮ್ಮಾರರ ಖ್ಯಾತಿವೆತ್ತ 'ಮಾವಿನಕುರ್ವೆ' ಬೀಗಗಳ ಬಗ್ಗೆ ಹೇಳಿದ್ದೆ ಅಲ್ಲವೇ? ಅವನ್ನು ಉತ್ಪಾದಿಸುವಲ್ಲಿ ಅವರು ನಿಸ್ಸೀಮರಾಗಿದ್ದರು. ಬಳಸಿದ ಕಬ್ಬಿಣದ, ಉಕ್ಕುಗಳನ್ನೆ

ಖರೀದಿಸಿ, ದಿನವಿಡೀ ದುಡಿದು, ಕೊಯ್ದು, ಜಪ್ಪಿ, ಸಾಣೆ ಹಿಡಿದು, ರಚಿಸಿದ ಬೀಗಗಳು ಅಭೇದ್ಯವಾಗಿದ್ದವು. ಅಂತೆಯೇ ಅಂಗಡಿ, ಕಚೇರಿ, ಬ್ಯಾಂಕುಗಳಿಗೆಲ್ಲ ಅವನ್ನೆ ಜಡಿಯುತ್ತಿದ್ದರು. ಅಷ್ಟಲ್ಲದೇ ಕಳ್ಳಕಾಕರ ಹಾವಳಿ ಜೋರಾಗಿರುವ ಊರುಗಳಿಗೆ ಅವು ನಿರ್ಯಾತವಾಗುತ್ತಿದ್ದವು. ಇಂದು ಆ ಕುಶಲ ಕಮ್ಮಾರರು ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಯಾರೂ ಅರಿಯರು, ಈಗ ಎಲ್ಲರೂ "ಗೋದ್ರೆಜ್ ನವ್‌ತಾಲ್", ಗಳನ್ನೆ ಬಳಸುತ್ತಾರೆ. ಕೆಲವರು ಅಲಿಗಡ ಬೀಗಗಳನ್ನು ಉಪಯೋಗಿಸುತ್ತಾರೆ. ಗೃಹ ಉದ್ದಿಮೆಗಳು ಮಣ್ಣುಗೂಡುವದು ಹೀಗೆಯೇ! ಪರ್ಯಾಯ ವ್ಯವಸ್ಥೆಯೆಂಬುದೇ ನಮ್ಮಲ್ಲಿಲ್ಲ" ಕ್ರಿಶ್ ವಿವರಿಸಿದರು.

"ಅರಣ್ಯದ ತುಂಬ ಇಮಾರತಿ ಕಟ್ಟಿಗೆ ಇದ್ದಾಗ ಬಡಿಗರಿಗೆ ಕೈತುಂಬ ಕೆಲಸವಿರುತಿತ್ತು. ಕಟ್ಟಡಗಳಿಗೆ ಕಟಾಂಜನಗಳನ್ನು ಜೋಡಿಸುವದು. ಖಿಡಕಿ ಬಾಗಿಲುಗಳನ್ನು ನಿಲ್ಲಿಸುವದು, ಮಾಡಿಗೆ ರೀಪು, ಪಕಾಸೆಗಳನ್ನು ಹೊಡೆಯುವುದು, ಅವರದೇ ಕೆಲಸವಾಗಿತ್ತು. ಇದಲ್ಲದೇ ಇಮಾರತು ಕೆಲಸದಲ್ಲಿ ಗಾವಡಿಗಳು, ಗಾರೆ ಕುಟ್ಟುವವರು, ಹಂಚು ಹಾಸುವವರೆಲ್ಲ ಇದ್ದು ಅವರಿಗೆ ವಿಪರೀತ ಬೇಡಿಕೆ ಇರುತ್ತಿತ್ತು. ಈಗ ಅಂಥ ಕಟ್ಟಡಗಳೇ ನಿರ್ಮಾಣವಾಗುತ್ತಿಲ್ಲ. ಕಾಂಕ್ರೀಟ್ ಬಿಲ್ಡಿಂಗ್ ಏಳುತ್ತಿವೆ. ಮೊದಲಿನ ಕಾರ್ಮಿಕರೆಲ್ಲ 'ಬೇಕಾರ್' ಆಗಿ ಹೋಗಿರಬೇಕು. ಕೊರಡಿನ ಭೀಕರ ಅಭಾವದಿಂದಾಗಿ ಆರ್.ಸಿ.ಸಿ. ಕಟ್ಟಡಗಳಿಗೇ ಮೊರೆ ಹೋಗಲಾರಂಭಿಸಿದ್ದಾರೆ. ಸಣ್ಣ ಊರುಗಳಲ್ಲೂ "ಕಾಂಕ್ರೀಟ್ ಕಾಡು"ಗಳು ಕಾಣಿಸಿಕೊಂಡಿವೆ!" ತುಳಸು ಟಿಪ್ಪಣಿ ಜೋಡಿಸಿದ.

"ಹಲವಾರು ಸ್ಥಿತಿವಂತರು ಬಡಬಗ್ಗರಿಗೆ ಆಶ್ರಯದಾತರಾಗಿದ್ದರು. ಹೊರಕೆಲಸಕ್ಕೆ, ಒಳಕೆಲಸಕ್ಕೆ, ನೀರು ಎತ್ತಲಿಕ್ಕೆ, ಭಾಂಡಿ-ಒಗೆಯಾಣಕ್ಕೆ, ಮಕ್ಕಳನ್ನು ಆಡಿಸಲಿಕ್ಕೆ, ಬಾಣಂತಿಗೆ-ಮಗುವಿಗೆ ಎಣ್ಣೆ-ನೀರಿನ ಸೇವೆಗೆ ಆಳು-ಕಾಳುಗಳನ್ನು ನೇಮಿಸಿಕೊಳ್ಳುತ್ತಿದ್ದರು. ಅವರಿಗೆ ನೀಡುವ ಮಾಸಿಕ ವೇತನ ಕಡಿಮೆ ಇದ್ದರೂ, ಎರಡೂಟ, ತಿಂಡಿತೀರ್ಥ, ಬಟ್ಟೆ ಬರೆಗಳಿಗೆ ಯೋಚನೆ ಇರುತ್ತಿರಲಿಲ್ಲ. ಕೆಲವರು ಇಂಥ ಸೇವಕವರ್ಗದ ವಾಸದ ಏರ್ಪಾಡು ಕೂಡ ಮಾಡುತ್ತಿದ್ದರು. ಹಬ್ಬ, ತೇರು, ಬಂಡಿಹಬ್ಬಗಳಲ್ಲಿ, ಹೊಸಬಟ್ಟೆ, ಹಣದ ಬಕ್ಷೀಸು ಸಲ್ಲುತ್ತಿತ್ತು." ಹಣಗಳಿಕೆಯೇ ಹಿಂದಿನವರ ನೆಮ್ಮದಿಯ ನೆಲೆಯ ಕಲ್ಪನೆಯಾಗಿರಲಿಲ್ಲವೆಂದು ತಿಳಿಸಲು ಕ್ರಿಶ್ ಹವಣಿಸಿದರು.

"ಜೀತ ನಿರ್ಮೂಲನ ಮಾಡಿದರಂತೆ! ದಿಲ್ಲಿಯ, ಬೆಂಗಳೂರಿನ, ವಾತನಿಯಂತ್ರಿತ ಆಫೀಸುಗಳಲ್ಲಿ ಕುಳಿತು, ತಮ್ಮ ಕಲ್ಪನೆಯ ಸಮಾಜ ಕಲ್ಯಾಣ ಕಾನೂನುಗಳನ್ನು ರೂಪಿಸಿ ಗ್ರಾಮಜೀವನವನ್ನು ಅಲ್ಲೋಲ ಕಲ್ಲೋಲಗೊಳಿಸುವಲ್ಲಿ ನಮ್ಮ ರಾಜಕಾರಣಿಗಳು ಪರಿಣತರು. ಕೆಲಸಗಾರರಿಗೆ ಕೊಟ್ಟ ವಾಸಸ್ಥಾನ ಹಾಗೂ ಅದರ ಸುತ್ತಮುತ್ತಲ ಜಮೀನನ್ನು ಶ್ರಮಿಕರ ಹೆಸರಿಗೇ ಖಾತೆ ಹಾಕಿಕೊಡಬೇಕು! ಎಂದು ಸರಕಾರ ಆಜ್ಞೆ ಹೊರಡಿಸಿತು. ಇದೆಲ್ಲಿಯ ಗ್ರಹಚಾರವೆಂದು ಅವರ ಆಶ್ರಯದಾತರು, ನಿರ್ವಾಹವಿಲ್ಲದೇ ತೋಟದ ಕೆಲಸ-ವಾಸದ ಮನೆಗಳಿಂದ ಅವರನ್ನು, ಸರಕಾರ ಕಟ್ಟಿಸುತ್ತಿದ್ದಾಗಲೇ ಬೀಳುವಂತಾಗಿದ್ದ "ಜನತಾ ಮನೆ"ಗಳಿಗೆ

ಸಾಗ ಹಾಕಿ, ಖರ್ಚಿಗಾಗಿ ನಿಗದಿಯಾದ ಹಣಕೊಟ್ಟು ತಾವು ಬಿಡುಗಡೆ ಹೊಂದಿದರು! ಈ ಶ್ರಮಿಕರೋ ಕೈ ಬರಿದಾಗುವ ತನಕ ಕುಡಿದು ನಂತರ ಉಪವಾಸ ಮಲಗಿದರು. ಸರಕಾರ ಕನಿಷ್ಠ ವೇತನವನ್ನು ದಿನ ಒಂದಕ್ಕೆ ಅರವತ್ತು ರೂಪಾಯಿಗೆ ನಿಗದಿಗೊಳಿಸಿತು. ಅದನ್ನು ಕೊಡಲಾಗದವರೇ ಬಹು ಸಂಖ್ಯಾಕರಾಗಿ, ಹೆಚ್ಚಿನವರು ನಿರುದ್ಯೋಗಿಗಳಾದರು... ಶತಮಾನಗಳಿಂದ ನಡೆದು ಬಂದ ವ್ಯವಸ್ಥೆಯನ್ನು ಹಾಳುಗೆಡವುತ್ತಿದ್ದೆಯೇ ಹೊರತು, ಅದರ ಬದಲಿ ಕ್ರಮವನ್ನು ಜಾರಿಗೆ ತರುವದು ತನ್ನ ಆದ್ಯ ಕರ್ತವ್ಯ ಎಂದು ಸರಕಾರ ಭಾವಿಸಿಯೇ ಇಲ್ಲ!" ವ್ಯಥೆಯಿಂದ ತುಳಸು ಹೇಳಿದ.

"ದುಗ್ಗಿ, ಕಲ್ಯಾಣಿಯರಂತಹ ವಿಧವೆಯರು, ಬಡವೆಯರು ಹಿರಿಯರ ಮನೆಯಲ್ಲಿ ಚುರಮುರಿ, ಅರಳು, ಹುರಿಗಾಳು ಮಾಡಿಕೊಟ್ಟು ಹೊಟ್ಟೆ ಹೊರೆಯುತ್ತಿದರು. ಅದರಂತೆ ಭತ್ತಕುಟ್ಟಿ ಅವಲಕ್ಕಿ ಮಾಡಿ ಮನೆಮನೆಗೆ ಪೂರೈಸುತ್ತಿದ್ದರು. ರಸ್ತೆ ಅಂಚಿನಲ್ಲಿ ಬೆಳೆದ ಹೊನ್ನೆಮರಗಳಿಂದ ಉದುರಿದ ಕಾಯಿಗಳನ್ನು ಸಂಗ್ರಹಿಸಿ ಬಿಸಿಲಿಗೆ ಒಣಗಿಸಿ ಎಣ್ಣೆ ತೆಗೆದು ದೇವರ ದೀಪ ಉರಿಸಲು ಮನೆ ಮನೆಗೆ ಒಯ್ದು ಮಾರುತ್ತಿದ್ದರು. ಈ ಎಣ್ಣೆಯನ್ನು ಎತ್ತುಗಳು ತಿರುಗಿಸುವ ಗಾಣಕ್ಕೆ ಹಾಕಿ ಪಡೆಯುತ್ತಿದ್ದರು. ಮನೆ ಮನೆಯಲ್ಲಿ ಬೆಳೆಯುತ್ತಿದ್ದ ತೆಂಗಿನ ಕಾಯಿಯ ಗಿಟಕಗಳನ್ನು ಗಾಣಕ್ಕೆ ಹಾಕಿ ಉತ್ಕೃಷ್ಟ ಕೊಬರಿ ಎಣ್ಣೆಯನ್ನು ಗಾಣಿಗವರ್ಗ ಪೂರೈಸುತ್ತಿತ್ತು.... ಬೇಸಿಗೆಯಲ್ಲಿ ಬಾವಿಯ ನೀರು ಕೆಳಗಿಳಿದಾಗ ಕೆಸರು ಬಳಿದು ತೆಗೆಯುವದು, ಹಂಚು ಸರಿಪಡಿಸುವದು, ಮಳೆಗಾಲದ ಪೂರ್ವತಯಾರಿಕೆಗೆ ಮನೆಗೆ ಹೊಸ ಹುಲ್ಲಿನ ಚಾವಣಿ ಹಾಕುವದು, ತೆಂಗಿನ ಮರಕ್ಕೆ ಕಟ್ಟೆ ಕಟ್ಟಿ ಸೊಪ್ಪು ಹಾಕಿ ಮಣ್ಣಿನಿಂದ ಮುಚ್ಚುವದು, ಮಳೆನಿಂತ ನಂತರ ಗೋಡೆ ಪಾಗಾರಗಳಿಗೆ ಬೆಳೆದು ನಿಂತ ಹಾವಸೆಯನ್ನು ನಿರ್ಮೂಲಮಾಡುವದು, ಹಿತ್ತಲಿಗೆ ಕೆಮ್ಮಣ್ಣು ಪೂರೈಸುವದು, ಮುಂತಾದ ಎಷ್ಟೋ ಕೆಲಸಗಳು ನಡೆಯುತ್ತಿದ್ದವು" ಕ್ರಿಶ್ ವಿವರಿಸಿದರು.

"ನಮ್ಮ ಸರಕಾರ, ವಿಧವಾವೇತನ, ನಿರ್ಗತಿಕರಿಗೆ ಧನಸಹಾಯ ಅನಾಹುತಕ್ಕೆ ಆಹುತಿಯಾದವರಿಗೆ ವಿಮಾನೆರವು, ಎಂದು ಏನೇನೋ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ! ಆದರೆ ನಮ್ಮೂರಿನಲ್ಲಿ ಒಬ್ಬರಿಗೂ ಈ ನೆರವು ಸಿಕ್ಕಿಲ್ಲ! ಇಲ್ಲಿಯ ಎಷ್ಟೋ ಶ್ರಮಜೀವಿಗಳು ಉದ್ಯೋಗ ಅರಸಿ, ನಗರ, ಮಹಾನಗರಗಳಿಗೆ ಧಾವಿಸಿ, ಅಲ್ಲಿ ಬೂಟುಗಳಿಗೆ ಮೊಳೆಹೊಡೆದೋ, ಸಿದ್ಧ ಉಡುಪು ತಯಾರಿಸುವ "ಫ್ಯಾಕ್ಟ್ರಿ"ಗಳಲ್ಲೋ ಅತ್ಯಲ್ಪ ವೇತನಕ್ಕೆ ದುಡಿಯುತ್ತಿದ್ದಾರೆ. ಅದರಲ್ಲಿ ಅವರ ದೈನಂದಿನ ಆವಶ್ಯಕತೆಗಳನ್ನೆ ಪೂರೈಸಿಕೊಳ್ಳಲಾಗದಿದ್ದಾಗ, ನೆಮ್ಮದಿಯ ಜೀವನ ಸಾಧ್ಯವೇ? ಸಾಕಷ್ಟು ಜನ ಅರಬ್ ದೇಶಗಳಿಗೆ ಹೋಗಿ ಧನಿಕರಾಗಲು ಹಂಬಲಿಸಿದವರು, ಅಲ್ಲಿಯೂ ಇರಲಾಗದೇ ಇಲ್ಲಿಯೂ ಹಿಂದಿರುಗಲು ಸಾಧ್ಯವಾಗದೇ ತೊಳಲಾಡುತ್ತಿದ್ದಾರೆ..." ಇದ್ದುದರಲ್ಲೇ ನೆಮ್ಮದಿ ಕಾಣುತ್ತಿದ್ದ ನಮ್ಮವರ ಸಾಮಾಜಿಕ ವ್ಯವಸ್ಥೆಯೊಂದು ಮಣ್ಣುಮುಕ್ಕಿದ ವಿಧಾನವೊಂದನ್ನು ತುಳಸು ವರ್ಣಿಸಿದ.

೧೯. ಮತ್ಸ್ಯಾವತಾರ

ಪ್ರೋಟೀನ್ ಭರಿತ, ಪೌಷ್ಟಿಕವಾದ ಮತ್ಸ್ಯಾಹಾರ ಬಹುಸಂಖ್ಯಾಕರಿಗೆ ಸುಲಭದಲ್ಲಿ ಸಿಗುವಂತಿದ್ದುದರಿಂದ ನಮ್ಮೂರವರಿಗೆ ಹಾಲು, ಹೈನಿನ ಕೊರತೆ, ಅಷ್ಟಾಗಿ ಬಾಧಿಸುತ್ತಿರಲಿಲ್ಲ. ಅದು ಶುದ್ಧ ಶಾಕಾಹಾರವಲ್ಲ! ಎಂದು ಯಾರೂ ತಲೆಕೆಡಿಸಿಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ. 'ಹೊಳೆ ಬಾಳೆಕಾಯಿ', 'ಕಡಲ ಬದನೆಕಾಯಿ' ಎಂದು ವಿನೋದವಾಗಿ ಹೇಳಿಕೊಳ್ಳುವ ಪರಿಪಾಠ ಬೆಳೆದು ಬಂದಿತ್ತು. ಗೃಹಿಣಿಯರು ಭೇಟಿಯಾದಾಗೊಮ್ಮೆ ಏನಡಿಗೆ? ಎಂದು ಸಾಮಾನ್ಯವಾಗಿ ಕೇಳುವಂತೆ ನುಸ್ತೆ (ಮೀನು) ಏನು? ಎಂದು ಕೇಳುವದೇ ರೂಢಿ! ನಿತ್ಯ ತರಕಾರಿಯಾದ ಮೀನುಗಳ ವೈವಿಧ್ಯಕ್ಕನುಗುಣವಾಗಿ ಅಭಿರುಚಿ ಬೆಳೆಸಿಕೊಂಡಿದ್ದರು. ಘರ್ಜರಿಯಾಗಿ ಬಲಿತ ತೆಂಗಿನಕಾಯಿ ತುರಿಯನ್ನು ಧಾರಾಳವಾಗಿ ಬಳಸಿ, ತೇದ ಗಂಧದಂತೆ ಮಸಾಲೆ ರುಬ್ಬಿ, ತಾಜಾ ಮೀನಿನ ಆಗಮನಕ್ಕೆ ಮನೆಯೊಡತಿ ಕಾದಿರುತ್ತಿದ್ದಳು. ಬಾಂದಿಹಳ್ಳದ ಬಳಿ, ಮೀನುಪೇಟೆ ಇದ್ದರೂ ಮನೆ ಬಾಗಿಲಿಗೇ ಬರುವ ಮೀನುಗಾತಿಯರ ಹತ್ತಿರ ಕೊಳ್ಳುವದೇ ಸಾಮಾನ್ಯವಾಗಿತ್ತು. ಅವರು ಬೆತ್ತದ ಬುಟ್ಟಿಗೆ ಮೀನುಪ್ರಕಾರಗಳನ್ನೆಲ್ಲ ಸೇರಿಸಿ, ಗಗನ ವಿಹಾರಿಗಳಾದ ಕಾಗೆ, ಹದ್ದುಗಳಿಗೆ ಅವು ಗೋಚರಿಸದಂತೆ, ಎಟಕದಂತೆ, ಗೋಣಿ ತಟ್ಟಿನಿಂದ ಮುಚ್ಚಿಟ್ಟು, ಕೈಯಲ್ಲಿ ಛಡಿ ಇಟ್ಟುಕೊಂಡೇ ಬರುತ್ತಿದ್ದರು.

"ಮೀನು ಬೇಕೆನಮ್ಮ ಮೀನು! ಚಿರಪರಿಚಿತ ಧ್ವನಿ ಕೇಳಿದೊಡನೆ ಕೇರಿಯ ಮನೆಗಳಿಂದ, ಗೃಹಿಣಿಯರೆಲ್ಲ ಮಣ್ಣಿನ ಪಾತ್ರೆ, ಹಿಡಿದು ಧಾವಿಸಿಬರುವರು. ಬೆಲೆ ಖಚಿತವಿರದೇ ಅದೆಷ್ಟು ಜಿಕೇರಿ, ಮಾತು, ಚರ್ಚೆಗಳು ನಡೆಯುತ್ತಿದ್ದವೆಂದು ಹೇಳಲಾಗದು! ಅಂತೆಯೇ ಶಾಲಾ ಮಕ್ಕಳು ಮನಸ್ವಿ ಗದ್ದಲ ಹಾಕುತ್ತಿದ್ದು, ಪಾಠದತ್ತ ಗಮನ ಕೊಡದಿದ್ದರೆ, ಶಿಕ್ಷಕರು 'ಇದೇನು ಮೀನು ಪೇಟೆಯೇ?' ಎಂದು ಕೇಳುವ ನಾಣ್ಣುಡಿ ನಮ್ಮಲ್ಲಿದೆ. ಕೇರಿಯ 'ಮಿನಿ' ಮೀನ ಪೇಟೆ ಖರೀದಿಯ ಗದ್ದಲವೇ ಮುಗಿಲು ಮುಟ್ಟುತ್ತಿದ್ದರೆ ಮೀನು ಪೇಟೆಯ ಕೂಗಾಟ ಊಹಿಸಿಕೊಳ್ಳಿ!" ಕ್ರಿಶ್ ಮತ್ತೆ ತಮ್ಮ ಸ್ಮೃತಿ ಸಂಪುಟದ ಹಾಳೆಗಳನ್ನು ತಿರುವಿ ಹಾಕಲಾರಂಭಿಸಿದರು.

"ಮೀನು ಮನೆಬಾಗಿಲಿಗೆ ಬರುವ ದಿನಗಳು ಮಾಯವಾಗಿ ಯಾವ ಕಾಲವಾಯ್ತೋ!... ಮೀನಿಗೆ ಬೇಡಿಕೆ ವಿಪರೀತ ಜಾಸ್ತಿಯಾಗಿ ಎಲ್ಲರೂ ದಂಡೆಗೆ-ಬಂದರಕ್ಕೆ ಧಾವಿಸುತ್ತಾರೆ. ಇನ್ನೂ ಮೀನಿನ ದೋಣಿ ದಡ ಸೇರುವ ಮೊದಲೇ ಹರಾಜಿನ ಕೂಗು ಕೇಳಿಬರುತ್ತದೆ. ಒಬ್ಬಾತ 'ನೂರು ರೂಪಾಯಿ!' ಎಂದರೆ, ಇನ್ನೊಬ್ಬಾತ ಹತ್ತು ರೂಪಾಯಿ ಹೆಚ್ಚು!' ಎಂದು ಕೂಗುವದು ವಾಡಿಕೆ.

ಅವರೆಲ್ಲರೊಡನೆ ಸ್ಪರ್ಧಿಸಿ ಮೀನನ್ನು ಹತ್ತು ಪಟ್ಟು ಬೆಲೆಗೆ ಕೊಳ್ಳುವ ಪರಿಸ್ಥಿತಿ ಉಂಟಾಗಿದೆ!" ತುಳಸು ಉದ್ಗರಿಸಿದ.

"ಸರ್ವತಂತ್ರ ಸ್ವತಂತ್ರವಾಗಿ, ನೀರಿನಲ್ಲಿ ಜೀವಿಸುವ ಜೀವಗಳನ್ನು ಹಿಡಿದು ತನ್ನ ಉದರಕ್ಕೆ ಸೇರಿಸುವ ಮಾನವನು ಕೈಗೊಂಡ ವಿಧಾನಗಳಿಗೆ ಕೊನೆಮೊದಲಿಲ್ಲ. ಇದಕ್ಕಾಗಿ ಮತ್ಸ್ಯಜಾತಿಗಳ ವಾಸಸ್ಥಾನ, ಚಲನವಲನೆ, ನಡಾವಳಿಕೆ, ಜೀವನಕ್ರಮಗಳ ಆಳವಾದ ಪರಿಚಯ ಮೀನುಗಾರರಿಗೆ ಇದ್ದಿರಬೇಕಾದದ್ದು ಅತ್ಯಗತ್ಯ. ಏಡಿಗಳು ಕಲ್ಲು ಬಂಡೆಗಳ ಸಂದುಗಳಲ್ಲಿ ಆಶ್ರಯ ಪಡೆಯುತ್ತವೆ. ಹೀಗಾಗಿ ಅವುಗಳ ಎದುರಿಗೆ ಮಾಂಸದ ತುಂಡನ್ನು ಚತುರತೆಯಿಂದ ಹಿಡಿದಾಗ, ಅವು ಆಸೆಯಿಂದ ಓಡೋಡಿ ಬಂದಾಗ, ಏಡಿ ಹಿಡಿಯುವ ಕ್ರಮ ಚಮತ್ಕಾರಿಕವಾದದ್ದು. ಏಡಿಗಳಿಗೆ ಚೇಳಿನಂತೆ, ಇಕ್ಕಳದ ಕೊಂಡಿ ಕಾಲು ಇದ್ದು, ಅದರ ಆಘಾತ ಬಲು ತೀಕ್ಷ್ಣ! ಹೀಗಾಗಿ ಮೊಟ್ಟ ಮೊದಲು ಈ 'ಟೊಂಗೊ' ಮುರಿದು ಬುಟ್ಟಿಗೆ ಸೇರಿಸುತ್ತಾರೆ. ಕೈಕಾಲು ಮುರಿದ ಏಡಿಗಳು ಎಂಟು, ಹತ್ತು ದಿನಗಳವರೆಗೆ ಬದುಕಬಲ್ಲವು. ವಿದ್ಯುತ್ ಮತ್ಸ್ಯವನ್ನು ಗಾಳದಲ್ಲಿ ಹಿಡಿಯಲು ವಿಶೇಷ ನಿಪುಣತೆ ಬೇಕು. ಗಾಳಕ್ಕೆ ಸಿಕ್ಕಿ ಹಾಕಿಕೊಂಡ ಮೀನು, ಗಾಳವನ್ನೇ ಎಳೆದುಕೊಂಡು ಹೋಗಿ ನೀರಿನ ತಳಕ್ಕೆ ಸೇರಿಕೊಂಡರೆ 'ಬರುಮ' ದೇವರಿಂದಲೂ ಅದನ್ನು ಹೊರಗೆಳೆಯಲು ಸಾಧ್ಯವಿಲ್ಲವಂತೆ. ಅಂತೆಯೇ ಗಾಳಕ್ಕೆ ಜೋಡಿಸಿದ ಆಹಾರವನ್ನು ಅದು ಕಚ್ಚಲಾರಂಭಿಸಿದಾಗ, ನೀರಿನಲ್ಲಿಯೇ ಮೀನನ್ನು ಅತ್ತಿಂದಿತ್ತ ಓಡಾಡಿಸಿ ವಿಪರೀತ ದಣಿಯುವಂತೆ ಮಾಡುತ್ತಾರೆ. ಅದು ಕೊನೆಗೊಮ್ಮೆ ಸೋತು ಹೊಯ್ದಾಟ ನಿಲ್ಲಿಸಿದಾಗ, ನೀರ ಹೊರಗೆ ಎಳೆದು, ಅದರ ವಿದ್ಯುತ್ ಅವಯವವನ್ನು ತುಂಡರಿಸಬೇಕು.

"ವಿಪರೀತ ಬೇಡಿಕೆ ಇರುವ 'ಕಾಣೆ' (ನಗಲಿ) ಮೀನಿಗೆ, ಗಂಡಾಂತರ ಸನ್ನಿಹಿತವಾಗಿದೆ! ಎನಿಸಿದಾಗ, ರೇವಲ್ಲಿ ಹುದುಗಿಕೊಳ್ಳುವ ಅಭ್ಯಾಸವಿದೆ. ಅಂತೆಯೇ ಅವುಗಳು ಬೆಚ್ಚಿಬಿದ್ದು, ಅಡಗುವಂತೆ ಮಾಡಿ, ನಂತರ ಶೇಖರಿಸಬೇಕಾಗುತ್ತದೆ. ರುಚಿಕಟ್ಟಾದ 'ಕಲಗ' ಕಲ್ಲುಬಂಡೆಗೇ ಶಾಶ್ವತವಾಗಿ ಅಂಟಿಕೊಂಡಿರುತ್ತವೆ. ಅಂತೆಯೇ ಕೈಗೆ ಗಾಯವಾಗದಂತೆ ಕತ್ತಿಯೇಟು ಹಾಕಿ ಅವನ್ನು ಬಿಡಿಸಿಕೊಳ್ಳಬೇಕು. ಕಲಗಬಂಡೆ ಗಾಜಿನಂತೆ ಹರಿತ! ಕೆಲವು ಜಾತಿಯ ಮೀನು ದೀಪದಿಂದ ಆಕರ್ಷಿತವಾಗುತ್ತವೆ. ಕಗ್ಗತ್ತಲೆಯ ರಾತ್ರಿಯಲ್ಲಿ ಉರಿಯುವ ತೆಂಗಿನಗರಿಯ 'ಸೂಡಿ'ಯ ಬೆಳಕಿನಲ್ಲಿ ಅವನ್ನು ಹಿಡಿಯಬೇಕಾಗುತ್ತದೆ" ಕ್ರಿಶ್ ಮುಂದುವರಿಸಿದರು.

"ಓ! ಇದೊಂದು ವಿಜ್ಞಾನವೇ ಸೈ! ನೀರಿಗೆ ಬಲೆ ಬೀಸಿದರೆ ತುಂಬ ಮೀನು ಸಿಗುತ್ತದೆಯೆಂದು ತಿಳಿದಿದ್ದೆ. ಅಮೇರಿಕನ್ನರು ಕೇವಲ ಕ್ರೀಡೆಗೆಂದು ಗಾಳ ಹಾಕಿ ಮೀನು ಹಿಡಿಯುತ್ತಾರಷ್ಟೆ? ಅದೊಂದೇ ವಿಧಾನ, ಎಂದುಕೊಂಡಿದ್ದೆ" ಕಿಮ್ ತನ್ನ ಅಜ್ಞಾನ ಒಪ್ಪಿಕೊಂಡಳು.

"ಬಲೆಗಳೂ ಹತ್ತಾರು ಪ್ರಕಾರದವು ಇರುತ್ತವೆ. ಸಮಯಾನುಸಾರವಾಗಿ ಅವನ್ನು ಬಳಸಬೇಕಾಗುತ್ತದೆ... ಹತ್ತು ನಂಬರ ನೂಲಿನ ಪೆಂಡೆಗಳನ್ನು ಖರೀದಿಸಿ ಅವನ್ನು

ಉಂಡೆಗಳಾಗಿ ಸುತ್ತಿ ದಪ್ಪ ತಕಲಿಯನ್ನು ಬಳಸಿ ನೂಲಿಗೆ ಹುರಿ ಹಾಕುತ್ತ ಊರು-ಕೇರಿಗಳಲ್ಲಿ ಖಾರ್ವಿಜನ ಓಡಾಡುತ್ತಿದ್ದರು. ಹುರಿಹಾಕಿದ ನೂಲಿನಿಂದ ತಮಗೆ ಬೇಕು ಬೇಕಾದ ಗಾತ್ರದ ಬಲೆಗಳನ್ನು ತಾವೇ ಹೆಣೆದುಕೊಳ್ಳುತ್ತಿದ್ದರು. 'ಪೆಡವಾಳೆ' 'ತಾರ್ಲೆ'ಗಳಂತಹ ಬೆರಳುದ್ದದ ಮೀನುಗಳು ಜಾರಿ ಹೋಗದಂತೆ ಚಿಕ್ಕ ಛಿದ್ರಗಳ ಬಲೆ ಉಪಯೋಗಿಸಿದರೆ ಗೇಣುದ್ದವಿದ್ದರೂ ಶಕ್ತಿಯುತವಾದ ಬಂಗುಡೆ ಮೀನಿಗೆ ಹೆಚ್ಚಿನ ಹುರಿಯುಳ್ಳ ಬಲೆ ಬೇಕೆ ಬೇಕು. ಶಟ್ಲೆಮೀನು ದೊಡ್ಡ ರಾಶಿಯಲ್ಲಿ ಒಂದೇ ಸ್ಥಳಗಳಲ್ಲಿ ಲಭ್ಯವಿರುತ್ತವೆ. ಹೀಗಾಗಿ ಬೃಹತ್ ಆಕಾರದ ಬಲೆಯನ್ನು ವಿಶಿಷ್ಟವಾಗಿ ಬೀಸಿ ಅವನ್ನು ಸಿಕ್ಕಿಹಾಕಿಕೊಂಡಾಗ, ಮೇಲಕ್ಕೆತ್ತಲು ಹಲವಾರು ದೃಢಕಾಯದ ಯುವಜನರೇ ಬೇಕು. ಕೆಳಜಾತಿಯ ಮೀನುಗಳು ಆಳವಿಲ್ಲದ ಕಡಲಲ್ಲಿ ಗೋಚರಿಸಿದಾಗ, ಹತ್ತಿಪ್ಪತ್ತು ಪರಿಣತರು ಬಲೆಗಳ ಸುರುಳಿಯನ್ನು ಸಮುದ್ರದಲ್ಲಿ ಹಾಸುತ್ತ ಹೋಗುತ್ತಾರೆ. ಒಂದು ಅಂಚಿನಲ್ಲಿ ಅದಕ್ಕೆ ಬೆಂಡು ಜೋಡಿಸಿದ್ದರಿಂದ ಬಲೆಯು ತೇಲುವಂತೆ ಅನುಕೂಲವಿರುತ್ತದೆ. ಈ ಬೃಹತ್ ಬಲೆಯನ್ನು ನಿಧಾನವಾಗಿ ದಂಡೆಗೆ ಎಳೆದು ತಂದಾಗ ಅದರಲ್ಲಿ ಸಿಲುಕಿಕೊಂಡ ಕಡಲು ಜೀವಸಂಪತ್ತಿನ ದರ್ಶನವಾಗುತ್ತದೆ. ಬೆಲೆ ಬಾಳುವಂತಹವನ್ನು ಬೇಗ ಬೇಗ ವಿಂಗಡಿಸಿ ಉಳಿದವನ್ನು ತ್ಯಜಿಸಿಬಿಡುವದರಿಂದ ಕಾಗೆ, ಹದ್ದು, ನಾಯಿಗಳಿಗೆಲ್ಲ ರಸದೌತಣ ಸಿಕ್ಕಂತೆ!" ತಾವು ಕಂಡ ಮತ್ಸ್ಯಶಿಕಾರಿಯ ನೋಟವನ್ನು ಕ್ರಿಸ್ ಬಣ್ಣಿಸಿದರು.

"ಇಂದಿನ ಮೀನುಗಾರರು ನೂಲನ್ನು ಕೊಂಡು, ಹುರಿಹಾಕಿ ಬಲೆಹೆಣೆಯುವ ಕಲೆಯನ್ನು ಸಂಪೂರ್ಣವಾಗಿ ಮರೆತಿದ್ದಾರೆ! ಈಗ ನಾಯಲಾನ್ ಎಳೆಗಳಿಂದ ರಚಿಸಿದ ಸಿದ್ಧ ಬಲೆಗಳೇ ಮಾರ್ಕೆಟಿನಲ್ಲಿ ಸಿಗುವದರಿಂದ ಸಕಲರೂ ಅವುಗಳಿಗೇ ಶರಣು ಹೋಗುತ್ತಾರೆ" ಈಗಿನ ಪ್ರಗತಿಯತ್ತ ತುಳಸು ಎಲ್ಲರ ಗಮನ ಸೆಳೆದ.

"ಇಷ್ಟೆಲ್ಲ ಪ್ರಕಾರಗಳ ಮೀನುಗಳ ವ್ಯಂಜನಗಳನ್ನು ತಯಾರಿಸುವ ಬಗೆ, ಒಂದೇ ಪ್ರಕಾರದ್ದು ಇದ್ದಿರಲಿಕ್ಕಿಲ್ಲ ಅಲ್ಲವೇ?" ಮತ್ಸ್ಯಾಹಾರದ ವಿಶೇಷ ಮಮತೆ ಬೆಳೆಸಿಕೊಂಡಿದ್ದ ಕಿಮ್ ತುಹೂಲದಿಂದ ವಿಚಾರಿಸಿದಳು.

"ನಿಮ್ಮ ಆಹಾರದಲ್ಲಿ ಇರುವ ಪ್ರಕಾರಗಳಿಗೆ ಹತ್ತು ಪಟ್ಟು ವೈವಿಧ್ಯ, ಮೀನ ವ್ಯಂಜನಗಳಿಗೆ ಮೀಸಲಿದೆ! ದೊಡ್ಡ ಜಾತಿಯ ಮೀನಿನ ಭರ್ಜರಿ ಪೂರೈಕೆ ಇದ್ದಾಗ, ಅವುಗಳ ತೆಳ್ಳಗಿನ ದುಂಡನ್ನ ಹೋಳುಮಾಡಿ ಉಪ್ಪು-ಕಾರ, ಅರಿಸಿನ, ಬೆಳ್ಳುಳ್ಳಿ ಶುಂಠಿ, ಕೋತಂಬರಿ ಸೊಪ್ಪಿನ ರುಬ್ಬಿದ ಲೇಪವನ್ನು ಅವಕ್ಕೆ ತೊಡೆದು ಹದವಾದ ಉರಿಯಲ್ಲಿ ಮಿತವಾದ ಎಣ್ಣೆಬಿಟ್ಟು ಹುರಿದರೆ ಅದರ ಸುವಾಸನೆ ಕೇರಿಗೇ ಹರಡಿ, ಹಾಯ್ದಾಡುವವರ ಬಾಯನ್ನು ನೀರೂರಿಸುತ್ತದೆ! ಅದೇ ಮೀನಿನ 'ಪಳದಿ' (ಆಂಬಟ. ಪಳದ್ಯ)ಗೆ ಗಂಧದಂತೆ ನುಣ್ಣಗೆ ರುಬ್ಬಿದ ತೆಂಗಿನತುರಿ, ಮೆಣಸಿನಕಾಯಿ, ಹುಳಿ ಹಾಕಿದ ಮಸಾಲೆಗೆ 'ಜುಮ್ಮನಕಾಳು' ಅಥವಾ ಈರುಳ್ಳಿ-ಹಸಿ-ಶುಂಟಿಯ ಸೇರ್ಪಡೆ ಆಗಬೇಕು. ಧಾರಾಳವಾಗಿ ಇಂತಹುದೇ ಕಡಿಮೆ ನುಣ್ಣನೆ ರುಬ್ಬಿದ ಮಸಾಲೆಯನ್ನು ಹೋಳುಗಳಿಗೆ ಸೇರಿಸಿ, ಅರಿಸಿನ ಎಲೆಯಲ್ಲಿ ಸುತ್ತಿ ಮಂದ ಅಗ್ನಿಯ ಮೇಲೆ "ಸುಕಾ" (ದೊಡ್ಡಕ) ಮಾಡುತ್ತಾರೆ. ಬಂಗುಡೆ ಮೀನು, ಮಸಾಲೆ ಲೇಪ ಹೊಂದಿ ಹಂಚಿನ ಮೇಲೆ ಗರಿಗರಿಯಾಗಿ

ಹುರಿದಾಗ ಉತ್ಕೃಷ್ಟ ವ್ಯಂಜನವಾಗುತ್ತದೆ. ಬೆರಳುದ್ದದ ಕಿರಿಮೀನನ್ನು ಈರುಳ್ಳಿ ಪಕೋಡಾದಂತೆ ಕರಿದರೆ, ಮುಳ್ಳುಗಳನ್ನು ಬೇರ್ಪಡಿಸುವ ಗೋಜೇ ಇಲ್ಲ! ಜಗಿದು ನುಂಗಿಬಿಡಬಹುದು. ಕಲಗ, ಶಟ್ಲೆಗಳಂತೂ ಮುಳ್ಳು ಇಲ್ಲದವಾದ್ದರಿಂದ ವಡೆಗಳನ್ನು ಮಾಡಿ ಹೊಡೆಯಬಹುದು. ಚಿಪ್ಪನ್ನು ಬೇರ್ಪಡಿಸಿದ "ಖುಬ್ಬೆ"ಗಳನ್ನು ಬಸಳೆ ಸೊಪ್ಪು, ಕೆಂಪು ಹರಿವೆ ಜೊತೆ ಸೇರಿಸಿ ಪಲ್ಯ, ಪಳಿದ್ಯ ಮಾಡುತ್ತಾರೆ. ಮೀನಿನ ಕೊರತೆಯ ದಿನಗಳಲ್ಲಿ ಒಣಮೀನಿನ ದಾಸ್ತಾನು ಸಹಾಯಕ್ಕೆ ಬರುತ್ತದೆ. ಚಟ್ನಿ, ಕೋಸಂಬರಿ, ಅಂಬಟ್ (ಪಳದಿ)ಗಳಿಗೆ ಧೋಕಾ ಇಲ್ಲ!.... ವಿವಿಧ ಪಂಗಡದ ಜನ ಬೇರೆ ಬೇರೆ ಬಗೆಯಲ್ಲಿ ಈ ಪಳದಿಗಳನ್ನು ತಯಾರಿಸುವದು ನಮ್ಮವರ ವೈಶಿಷ್ಟ್ಯ! ಕ್ರಿಶ್ ಮತ್ಸ್ಯಪಾಕ ಸಂಸ್ಕೃತಿಯ ಸ್ಥೂಲ ಪರಿಚಯವನ್ನು ಸೊಸೆಗೆ ಮಾಡಿಕೊಟ್ಟರು.

ತದೇಕ ಚಿತ್ತದಿಂದ ಕೇಳುತ್ತಿದ್ದ ಬೆಳಗಾದೊಡನೆ ಮೀನಿನ ಶೋಧದಿಂದಲೇ ದಿನವನ್ನು ಪ್ರಾರಂಭಿಸುತ್ತಿದ್ದ ತುಳಸುವಿಗೆ ಅಣ್ಣನ ಮಾತು ತ್ರೇತಾಯುಗದ್ದು! ಅನಿಸಿದ್ದರೆ ಆಶ್ಚರ್ಯವಿಲ್ಲ. ನಿಟ್ಟುಸುರುಬಿಟ್ಟು ಅವನೆಂದ "ಇಂದು ಮೀನಿನೂಟ ಎಲ್ಲರಿಗೂ ಸಿಗುವದಿಲ್ಲ. ನಮ್ಮ ದೇಶದ ಮೂರೂದಿಕ್ಕಿನಲ್ಲಿ ವಿಸ್ತಾರವಾಗಿ ಚಾಚಿಕೊಂಡ ಸಾಗರಗಳಲ್ಲಿ ಅಪಾರ ಮತ್ಸ್ಯ ಸಂಗ್ರಹವಿದೆ! ಎಂದು ವಿಶ್ವ ಸಂಸ್ಥೆಯು ಹಿಂದೊಮ್ಮೆ ಸಾರಿದ್ದರಿಂದ, ರಾಜ್ಯ, ಕೇಂದ್ರ ಸರಕಾರಗಳು ಈ ಸಂಪತ್ತನ್ನು ಹೊಂದುವ ಉದ್ದೇಶದಿಂದ, ಆಳನೀರಿನ ಮತ್ಸ್ಯೋದ್ಯಮಕ್ಕೆ ಸಕಲ ಪ್ರೋತ್ಸಾಹ ನೀಡುವದಾಗಿ ಸಾರಿದವು. 'ಪರ್ಸಿನ್' ನಾವೆಗಳನ್ನು, ಸುಧಾರಿತ ಬಲೆಗಳನ್ನು ಕೊಳ್ಳುವವರಿಗೆ ಸಕಲ ಸಾಲದ ಸವಲತ್ತುಗಳು ದೊರಕಿದವು. ಇದರಿಂದ ಬಡಮೀನುಗಾರರಿಗೆ ಯಾವ ಅನುಕೂಲ ಲಭಿಸದಿದ್ದರೂ, 'ಕುಲವಂತ'ರೆನಿಸಿಕೊಳ್ಳುವ ಸಿರಿವಂತ ಉದ್ದಿಮೆದಾರರು ಪೂರ್ಣಲಾಭ ಪಡೆದುಕೊಂಡರು. ತುರುಸಿನ ಸ್ಪರ್ಧೆ ಕಾಣಿಸಿಕೊಂಡಿತು. ಮೀನಿನ ರಾಶಿ, ರಾಶಿಗಳನ್ನು ಖರೀದಿಸಲು ಕೋಚಿನ್, ಮಲ್ಪೆ, ಮುಂಬೈಗಳಿಂದ ದಲ್ಲಾಳಿಗಳ ದಾಳಿ ಪ್ರಾರಂಭವಾಯಿತು. ಖರೀದಿಸಿದ ರಾಶಿಯನ್ನು ಟ್ರಕ್ಕುಗಳಿಗೆ ತುಂಬಿ ವಾಯುವೇಗದಿಂದ ತಂತಮ್ಮ ಶೈತ್ಯಾಗಾರಕ್ಕೆ ಸಾಗಿಸಲಾರಂಭಿಸಿದರು. ಹೆದ್ದಾರಿಯಲ್ಲಿ ಸಿಗುವ ಮತ್ಸ್ಯಾಹಾರಕ್ಕಾಗಿ ಹಾತೊರೆದು ಬಂದ ನಾಯಿಗಳು ಓಡುವ ಗಾಡಿಗಳ ಚಕ್ರಗಳಿಗೆ ಆಹುತಿಯಾದವು. ಟ್ರಕ್ ಹರಿದ ದಾರಿಗುಂಟ ಬೀಳುತ್ತಿದ್ದ ಮೀನಿನ ಚೂರು-ಪಾರುಗಳಿಂದ ಊರು ಗಬ್ಬೆದ್ದು ನಾರಲಾರಂಭಿಸಿತು. ಅದೆಷ್ಟೋ ಬಾರಿ ಮೀನಿನ ಸಂಗ್ರಹವಾಗಿ ಕೊಳ್ಳುವವರು ಇಲ್ಲದೇ ಮೀನನ್ನು ಒಣಗಿಸಿಡುವ ಕ್ರಮ ಕೈಗೊಂಡರು. ಅಂಥ ದಿನಗಳಲ್ಲಿ ಸೂರ್ಯದೇವನು ಸಹಕರಿಸದಿದ್ದರೆ ಅವೂ ಕೊಳೆಯಲಾರಂಭಿಸಿ ದುರ್ಗಂಧ ತಡೆಯಲಾಗದು!" ತುಳಸು ಹೊಸ ಬೆಳವಣಿಗೆಯನ್ನು ಪರಿಚಯಿಸಿದ.

"ಹಿಂದೆ, ಹೀಗಾಗದಂತೆ ಮಾಡಲು ಯಾವುದಾದರೂ ವ್ಯವಸ್ಥಿತ ಕ್ರಮ ಇತ್ತೇ?" ಕಿಮ್, ಅರಿತುಕೊಳ್ಳಲು ಹವಣಿಸಿದಳು.

"ನಮ್ಮ ಹಿರಿಯರು ಕೇವಲ ಅನುಭವಗಳಿಂದಲೇ ಹಲವು ಕಟ್ಟುನಿಟ್ಟುಗಳನ್ನು ಆಚರಣೆಯಲ್ಲಿ ತಂದು ಅವಕ್ಕೆ ಧಾರ್ಮಿಕರೂಪ ಕೊಟ್ಟಿದ್ದರು. ಹೀಗಾಗಿ ಅವನ್ನು ಜನಸಾಮಾನ್ಯರು

ಚಾಚೂತಪ್ಪದೇ ಪಾಲಿಸುತ್ತಿದ್ದರು. ಇದರಿಂದಾಗಿ ಸಾಮಾಜಿಕ ಶಿಸ್ತು ನೆಲೆಗೊಂಡಿತ್ತು. ಕಡಲು, ಎಂಬುದು ಕುಬೇರನ ಸಾಮ್ರಾಜ್ಯ. ಕಡಲ ಜೀವಿಗಳೆಲ್ಲ ಆತನ ಸೊತ್ತು. ಅವನು ಬೇಕೆಂದಾಗ ಬರಿದು ಮಾಡುವ ಅಧಿಕಾರವನ್ನು ತಮಗೆ ಯಾರೂ ವಹಿಸಿಕೊಟ್ಟಿಲ್ಲ!" ಎಂದು ದೃಢವಾಗಿ ನಂಬಿದ್ದರು. ಅಂತೆಯೇ ಮಳೆಗಾಲ ಮುಗಿಯುತ್ತ ನೂಲುಹುಣ್ಣಿಮೆಯದಿನ ಸಮುದ್ರ ರಾಜನಿಗೂ ಜನಿವಾರ ಅರ್ಪಿಸಿ ತೆಂಗಿನಕಾಯಿ ಫಲ-ಪುಷ್ಪಾದಿಗಳೊಂದಿಗೆ ಅರ್ಚಿಸಿ ಅಭಿಷೇಕ ಏರ್ಪಡಿಸಿದ ನಂತರವೇ ಕಡಲ ಓಡಾಟ ಪ್ರಾರಂಭಿಸುತ್ತಿದ್ದರು. ವೈಜ್ಞಾನಿಕವಾಗಿಯೂ ಈ ಪದ್ಧತಿ, ಅತ್ಯಂತ ಸಮಂಜಸವಾಗಿತ್ತು. ಜೂನ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾದೊಡನೆ ಮೀನುಗಳು ಮೊಟ್ಟೆಯಿಡಲು ಪ್ರಾರಂಭಿಸಿ ಲಕ್ಷಾಂತರ ಮರಿಗಳು ಹುಟ್ಟಿಕೊಳ್ಳುತ್ತಿದ್ದವು. ಇದಾದ ಮೂರು ತಿಂಗಳ ನಂತರವೇ ನಾವೆಗಳು ನದಿ, ಸಮುದ್ರಕ್ಕೆ ಇಳಿಯುತ್ತಿದ್ದುದರಿಂದ ಮರಿಗಳು ಬೆಳೆದು ಪ್ರೌಢಾವಸ್ಥೆ ತಲುಪುತ್ತಿದ್ದವು.

"ಮೀನುಗಾರರು ಬಳಸುತ್ತಿದ್ದ ಕಿರುನಾವೆಗಳು ಹಾಗೂ ಸ್ವನಿರ್ಮಿತ ಬಲೆಗಳಾದ್ದರಿಂದ ಕಡಲು ಬರಿದಾಗುವ ಪ್ರಮೇಯವೇ ಇರಲಿಲ್ಲ. ಊರ ಜನಸಂಖ್ಯೆಯೂ ಕಡಿಮೆ ಇದ್ದು ಹಣದಾಸೆಗೆ ಮೀನರಾಶಿಯನ್ನು ರಫ್ತು ಮಾಡುವ ಪದ್ಧತಿ ಇರಲಿಲ್ಲ. ಹೀಗಾಗಿ ಊರವರಿಗೆಲ್ಲ, ಎಂಥ ಬಡಬಗ್ಗರಿಗೂ ಎಟುಕುವ ಮತ್ಸ್ಯಾಹಾರದಿಂದಾಗಿ, ಎಲ್ಲರೂ ಪೌಷ್ಟಿಕತೆ ಪಡೆಯುವಂತಾಗಿತ್ತು. ನೆಮ್ಮದಿಯ ಜೀವನಕ್ಕೆ ಹಣದ ರಾಶಿ ಬೇಕಿಲ್ಲವೆಂದು ನಂಬಿದವರು." ಅಂದಿನ ಜೀವನದ ತಿರುಳನ್ನು ತಿಳಿಸಿಕೊಡಲು ಕ್ರಿಶ್ ಹವಣಿಸಿದರು.

"ಇಂದಿನ ದಿನಗಳಲ್ಲಿ ಈ ನಂಬಿಕೆಗಳೆಲ್ಲ ಬುಡಮೇಲಾಗಿವೆ! ಪರ್ಸಿನ್ ನಾವೆಗಳು ಪೆಟ್ರೋಲ ನುಂಗುತ್ತಲೇ ಇದ್ದು ಅವನ್ನು ಓಡಾಡಿಸುವದು ತುಂಬ ಖರ್ಚಿನದ್ದಾದರಿಂದ, ಮಾಲಕರು ಹಗಲು ರಾತ್ರಿ ಕಡಲ ಮೇಲೆ ದುಡಿಸುತ್ತಲೇ ಇರುತ್ತಾರೆ. ಸೆಪ್ಟೆಂಬರ ಮೊದಲು ಮೀನುಗಾರಿಕೆ ಪ್ರಾರಂಭಿಸಕೂಡದು! ಎಂಬ ಕಾನೂನು ಯಾರೂ ಪಾಲಿಸುವದಿಲ್ಲ, ಗರ್ಭ ಧರಿಸಿದ ತಾಯಿಮೀನು, ಚಿಕ್ಕಮರಿ, ಮೊಟ್ಟೆಗಳನ್ನೆಲ್ಲ ಹಿಡಿದು ಹಾಕುತ್ತಾರೆ. ಹೀಗೆ ಮಾಡುವದರಿಂದ ಮಳೆಗಾಲದಲ್ಲಿ ಸಹ, ಇಂಧನದ, ಸಿಬ್ಬಂದಿಯ ಮತ್ತು ಮೇಲುಖರ್ಚನ್ನು ತೂಗಿಸಿಕೊಂಡು ಹೋಗಬಹುದು, ಎಂಬ ಲೆಕ್ಕಾಚಾರ!

ಇದರ ದುಷ್ಪರಿಣಾಮವೆಂದರೆ, ಮೀನುಸಂತತಿಗೇ ಬಂದ ಸಂಚಕಾರ! ನಿಸರ್ಗದ ಸಂತಾನೋತ್ಪತ್ತಿಯ ಚಕ್ರವನ್ನೇ ಅಸ್ತವ್ಯಸ್ತ ಮಾಡುವದರಿಂದ ಮೀನಿನಕ್ಷಾಮ ಬಾರದೇ ಇದ್ದೀತೇ ? ಮೀನು ಉತ್ಪನ್ನ ಕಡಿಮೆಯಾದಂತೆ ಭಕ್ಷಕರ ಸಂಖ್ಯೆ ಏರುತ್ತಲೇ ಇದೆ. ಮೀನಿಗಿರುವ ವಿಪರೀತ ಬೇಡಿಕೆಯಿಂದಾಗಿ ತುರುಸಿನ ಸ್ಪರ್ಧೆಗೆ ಆಸ್ಪದವಾಗಿದೆ. ಸ್ಥಳೀಯರಿಗೂ ಆಗಂತುಕರಿಗೂ ಆಗಾಗ ಚಕಮಕಿ ನಡೆಯುತ್ತದೆ. ಇಷ್ಟೆ ಅಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆಯುವಾಗ, ದಿನಪ್ರತಿ ಲಾಭದ ಒಂದು ಮೂರಾಂಶವನ್ನು ಬ್ಯಾಂಕಿಗೆ ಪಾವತಿ ಮಾಡಬೇಕು, ಎಂಬ ಒಪ್ಪಂದ ಆಗಿರುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಕಡಲಿನಲ್ಲಿರುವಾಗಲೇ ತಮ್ಮ ಅಂದಿನ ಸಂಗ್ರಹದ ದೊಡ್ಡಪಾಲನ್ನು ಮಾಲಕರು ಮಾರಿಬಿಡುತ್ತಾರೆ. ಹೀಗಾಗಿ

ನಾವೆಗಳು ಧಕ್ಕೆಗೆ ಬರುವಾಗಲೇ ಖಾಲಿ! ಮೀನು ಸಿಗಲೇ ಇಲ್ಲ ಎಂಬ ಹುನ್ನಾರು. ಅವರ ಈ ದುರ್ವ್ಯವಹಾರಗಳಿಗೆಲ್ಲ ಸೆಲ್‌ಫೋನ್‌ಗಳು ಎಷ್ಟು ಸಹಾಯಕಾರಿ! ಎಂದು ಬೇರೆ ಹೇಳಬೇಕೇ ?....

ನಾವೆ ಹಳೆಯದಾದಾಗ, ಲಾಭ ಕುಸಿಯಲಾರಂಭಿಸಿದಾಗ, ಎಷ್ಟೊ ಮಾಲಕರು ನಾವೆಗಳನ್ನು ಸ್ವತಃ ಸಮಾಧಿ ಮಾಡಿಸಿ, ವಿಮಾಕಂಪನಿಯ ಹಡಗು-ಮುಳುಗಡೆಯ ಲಾಭವನ್ನು ಪಡೆಯುವದು ಇಲ್ಲದಿಲ್ಲ. ಅಂತೆಯೇ ಮತ್ಸ್ಯಾವತಾರದ ಕಲ್ಯಾಣ ದಿನಗಳು ಮುಗಿದು, ಲೋಕಭಕ್ಷಕರ ಆಳುವಿಕೆಯು ಪ್ರಾರಂಭವಾಗಿದೆ!" ವಸ್ತುಸ್ತಿತಿಯ ವಿವರಣೆಯನ್ನು ತುಳಸು ನೀಡಿದ.

೨೦. ಉದ್ಯೋಗ ಪರ್ವ

"ಬ್ರಿಟಿಷ್ ಆಡಳಿತಗಾರರು ಉತ್ತರಕನ್ನಡ ಜಿಲ್ಲೆಯನ್ನು ಅರಣ್ಯ ಜಿಲ್ಲೆಯನ್ನಾಗಿಯೂ 'ಹಿರೇಹಳ್ಳಿ'ಯನ್ನು ಅರಣ್ಯಭವನವನ್ನಾಗಿಸಿಯೂ ಮುಂದುವರಿಸಿಕೊಂಡು ಹೋಗಬಹುದು. ಬೆಳವಣಿಗೆಗೆ ಯಾವ ಅವಕಾಶವನ್ನೆ ಕೊಡುತ್ತಿಲ್ಲ! ಯಾವ ಉದ್ದಿಮೆಯನ್ನೂ ಸ್ಥಾಪಿಸುವ ಗೋಜಿಗೇ ಹೋಗಿಲ್ಲ. ಆದ್ದರಿಂದ ನಮ್ಮ ಯುವಜನಾಂಗ, ನೌಕರಿಗಳನ್ನು ಹುಡುಕಿಕೊಂಡು ಪರಊರುಗಳಿಗೆ ವಲಸೆ ಹೋಗುತ್ತಿದ್ದಾರೆ!" ಎಂದು ಮನಗಂಡ ಹಿರಿಯರು, ಉದ್ದಿಮೆಗಳಿಗೆ ಅಡಿಪಾಯ ಹಾಕಲು ಕಂಕಣಬದ್ಧರಾದರು. ಇವರಲ್ಲಿ ಕಲ್ಲಾಪುರ ವಕೀಲರು ಮುಂಚೂಣಿಯಲ್ಲಿದ್ದರು. ಅವರು 'ಗ್ರಾಮೋದ್ಯೋಗ ಶಾಲೆ' ಯೊಂದನ್ನು ಪ್ರಾರಂಭಿಸಿದರು. ಗೋವಿನ ಕೋಡುಗಳಿಂದ ವಿವಿಧ ಸಾಮಾನುಗಳನ್ನು ಉತ್ಪಾದಿಸುವ ತರಬೇತಿಯನ್ನು ಊರ ಯುವಕ ಯುವತಿಯರಿಗೆ ಕೊಡಲಾರಂಭಿಸಿದರು. ಬಾಚಣಿಗೆ, ಗುಂಡಿಗಳಲ್ಲದೇ ಹಂಸ, ಮೀನು, ಬಾತುಕೋಳಿ, ಹುಲಿ ಮುಂತಾದ ಕಲಾಕೃತಿಗಳು ಉತ್ಪಾದಿತವಾಗುತ್ತಿದ್ದವು. ಕತ್ತದಿಂದ ಹುರಿ ಮಾಡಿ ಹಗ್ಗಗಳನ್ನು ಸಿದ್ಧಮಾಡಲಾರಂಭಿಸಿದರು. ದುರ್ದೈವದಿಂದ ಹೀಗೆ ತಯಾರಾದ ಸರಕುಗಳ ಯೋಗ್ಯ ಮಾರಾಟದ ಏರ್ಪಾಡು ಆಗಲಿಲ್ಲ. ಜನರಿಂದ ಬೇಡಿಕೆಯೂ ಬರಲಿಲ್ಲ. ತರಬೇತಿ ಪಡೆದವರೂ ಹೊಟ್ಟೆಪಾಡಿಗೆ ಬೇರೆಬೇರೆ ವೃತ್ತಿಗಳಿಗೆ ಶರಣು ಹೋಗಬೇಕಾಯಿತು. ಕೆಲವರು ಮಹಾರಾಷ್ಟ್ರಕ್ಕೆ ವಲಸೆ ಹೋಗಿ ಅಭಿವೃದ್ಧಿ ಹೊಂದಿದರು. ಶಿವ ವಜ್ರನಾಯ್ಕ ಎಂಬವರು ಮಾತ್ರ ಮನೆಯಲ್ಲಿಯೇ ಕೋಡಿನ ಕಲಾಕೃತಿಗಳನ್ನು ರಚಿಸಿ ಪರಊರಿನಿಂದ ಬಂದವರಿಗೆ ಮಾರಿ, ಹೇಗೋ ಜೀವನ ನಡೆಸಿದರು.

"ಇದರ ಜೊತೆಗೆ ಜೇನು-ಸಾಕಣೆ ತರಬೇತಿಯೂ ಇತ್ತು. ಆದರೆ ಅದಕ್ಕೂ ಸ್ಥಳೀಯ ಬೇಡಿಕೆ ಇರಲಿಲ್ಲ. ಅತಿ ಅಗ್ಗದಲ್ಲಿ ಜೇನುತುಪ್ಪದಂತಹ ತಿಳಿಬೆಲ್ಲ ಸಿಗುವ ಊರಿನಲ್ಲಿ ಜೇನಿನ ಬೆಲೆ ಅರಿತವರೂ, ತೆರುವವರು ಯಾರು? ಅಂತೂ ಇದೂ ಕುಂಟುತ್ತ ಕೂರುತ್ತ ಕಣ್ಣು ಮುಚ್ಚಬೇಕಾಯಿತು!" ಕ್ರಿಶ್ ಅರೆ ಶತಮಾನದ ಹಿಂದೆ ಚಿಕ್ಕ ಉದ್ಯೋಗಗಳು ಊರಲ್ಲಿ ಪ್ರಾರಂಭವಾಗಿ ಸೋತ ದಿನಗಳನ್ನು ನೆನಪಿಸಿಕೊಂಡರು.

"ಎರಡನೆ ಮಹಾಯುದ್ಧ ನಡೆದಾಗ, ಬಟ್ಟೆ-ಬರೆಗಳ ಅಭಾವ ತೀವ್ರವಾಗಿ ಕಾಣಿಸಿಕೊಂಡಿತ್ತು. ಊರಿನ ಸಾಹಸಿ ವ್ಯಾಪಾರಿಗಳಾದ ಇಡಗುಂಜಿ ರಾಮದಾಸ ಮಹಾಲೆಯವರು, ತಮಿಳುನಾಡಿನ ಸೇಲಂಗೆ ಹೋಗಿ, ಅಲ್ಲಿಯ ಕೈಮಗ್ಗದ ಉದ್ದಿಮೆಯನ್ನು ಆಳವಾಗಿ ಅಭ್ಯಸಿಸಿ, ಕೆಲವು ಪರಿಣತ

ನೇಕಾರರನ್ನೂ ಬರಮಾಡಿಕೊಂಡು ನಮ್ಮೂರಲ್ಲಿ ಮಗ್ಗಗಳನ್ನು ಹಾಕಿಸಿ, ಸೀರೆ ಧೋತರಗಳ ಉತ್ಪಾದನೆಗೆ ನಾಂದಿ ಹಾಡಿದರು. ಪ್ರಾರಂಭದಲ್ಲಿ ಅವರ "ಬಾಲಾಜಿ ಟೆಕ್ಸ್‌ಟೈಲ್ಸ್" ದಲ್ಲಿ ಉತ್ಪಾದಿತ ಸರಕುಗಳಿಗೆ ಒಳ್ಳೆಯ ಬೇಡಿಕೆ ಬಂದಿತು. ಕೈಮಗ್ಗಗಳನ್ನು ಪಾವರ್ ಲೂಮ್‌ಗಳಾಗಿ ಪರಿವರ್ತಿಸಿದರು. ಲಾಳಿಗಳನ್ನು ತುಂಬಲು, ಉಂಕಿಮಾಡಲು, ಹಾಸು ಹೊಯ್ಯಲು, ಬೆಜಗಳನ್ನು ಪೋಣಿಸಲು ಸ್ಥಳೀಯ ಹೆಣ್ಣುಮಕ್ಕಳಿಗೆ ಕೆಲಸ ಕೊಡಮಾಡಿದರು. ತಮಿಳು ನೇಕಾರರೋ, ತಂತಮ್ಮ ಕುಟುಂಬಗಳನ್ನು ಊರಲ್ಲಿ ಬಿಟ್ಟು ಬಂದವರು. ಕೆಲಸದ ಹುಡುಗಿಯರ ಜೊತೆಗೆ 'ದೋಸ್ತಿ' ಅನಿವಾರ್ಯವಾಯಿತು! ಒಬ್ಬಿಬ್ಬರು ಗರ್ಭವತಿಯರಾಗಿ, ಅದಕ್ಕೆ ಕಾರಣರಾದವರೊಡನೆ ಪಲಾಯನ ಮಾಡಿಯೂ ಆಯಿತು. ಇದರಿಂದಾಗಿ ಕೆಲವು ಮಗ್ಗಗಳು ಬಂದ್ ಬಿದ್ದವು. ಉತ್ಪಾದನೆ ಕುಸಿಯಿತು. ಸಾಲ ಏರುತ್ತಲೇ ಹೋಯಿತು. ಸ್ಥಾನೀಯರು ಈ ವೃತ್ತಿಯನ್ನು ಕಲಿಯಲೂ ಇಲ್ಲ. ಪ್ರೋತ್ಸಾಹ ನೀಡಲೂ ಇಲ್ಲ. ಈ ಸಾಹಸವೂ ಮಣ್ಣುಗೂಡಿತು. ಕವಿ, ಸಾಹಿತಿ, ರಾಜಕಾರಣಿ, ಸಮಾಜ ಸುಧಾರಕರೆಂದು ಹೆಸರುವಾಸಿಯಾದ ದಿನಕರ ದೇಸಾಯಿ ಅವರು, ನಮ್ಮವರಿಗೆ ವೃತ್ತಿಶೀಲತೆ, ಶ್ರಮಗೌರವ, ಕಲಿಸಬೇಕೆಂದು ಭಗೀರಥ ಪ್ರಯತ್ನ ನಡೆಸಿ ಸೋತರು, ಅಂಕೋಲೆಯಲ್ಲಿ ಅವರು ಬಡಿಗತನ, ಹೊಲಿಗೆ, ಇನ್ನಿತರ ಕೈಗೆಲಸಗಳನ್ನು ಕಲಿಸುವ ಏರ್ಪಾಡು ಮಾಡಿ, ಯುವಜನಾಂಗಕ್ಕೆ ಇವಾವುಗಳಲ್ಲಿ ಆಸಕ್ತಿ ಇಲ್ಲದೇ ಹತಾಶರಾಗಬೇಕಾಯಿತು" ಕ್ರಿಶ್, ಗತದಿನಗಳನ್ನು ನೆನಪಿಸಿಕೊಂಡು ವಿಷಾದಿಸಿದರು.

"ನಮ್ಮೂರಿನ ನೆರೆಹಳ್ಳಿಯಾದ ಕಾಸರಕೋಡದಲ್ಲಿ ಸಹಕಾರಿ ಹಂಚಿನ ಕಾರಖಾನೆ ಯೊಂದನ್ನು ಸ್ಥಾಪಿಸಿದಾಗ, ಊರಲ್ಲಿ ಜುಜುಬಿ ಸಂಬಳ ಪಡೆಯುತ್ತಿದ್ದ ಅನೇಕರು ಅದರಲ್ಲಿ ಸೇರಿಕೊಂಡರು. ಇದರಿಂದ ಅವರ ಗಳಿಕೆಯಲ್ಲಿ ಹತ್ತು ಪಟ್ಟು ಹೆಚ್ಚಳವಾಯಿತಲ್ಲದೇ ಸೀಮಿತ ಅವಧಿಯ ಕೆಲಸ, ವಾರದ ರಜಾ, ಅನಾರೋಗ್ಯದ ರಜಾ, ಸಮವಸ್ತ್ರ ಮುಂತಾದವು ದೊರೆಯಲಾರಂಭಿಸಿದವು. ಸರಿ 'ಯುನಿಯನ್' ಕಾಣಿಸಿಕೊಂಡಿತು! ಅದರ ಮುಖಂಡರ ಕರೆಗೆ ಓಗೊಟ್ಟು ಮುಷ್ಕರ ಪ್ರಾರಂಭವಾಯಿತು. ಕಾಡು ಬರಿದಾಗುತ್ತ ನಡೆದಿದ್ದು ಇಂಧನ ಸಿಗದಂತಾಗಿತ್ತು. ಅರಣ್ಯಖಾತೆಯವರೂ ಸಹಕಾರ ನೀಡಲು ನಿರಾಕರಿಸಿದರು. ಹಂಚು ತಯಾರಿಕೆಗೆ ಬೇಕಾಗುವ ಸೂಸುಮಣ್ಣು, ಒಕ್ಕಲಿಗರ ಹೊಲಗಳಿಂದ ತೀರ ಅಗ್ಗ ಬೆಲೆಗೆ ಪಡೆಯುತ್ತಿದ್ದರು. ಅದರಿಂದ ಜಮೀನು ಬರಡಾಗುತ್ತದೆ! ಎಂದು ಪರಿಸರವಾದಿಗಳ ಆಂದೋಲನ ಪ್ರಾರಂಭವಾಯಿತು. "ಇದ್ದ ಮಕ್ಕಳಿಗೆ ಗಂಜಿಯಿಲ್ಲ ಮತ್ತೆ ಕೊಡು ಸದಾಶಿವ!" ಎನ್ನುವಂತೆ ಖಾಸಗಿ ವಲಯದ ಇನ್ನೊಂದು ಹಂಚಿನ ಕಾರಖಾನೆ ಪ್ರಾರಂಭವಾಗಬೇಕೆ? ಇಂದಿನ ದಿನಗಳಲ್ಲಿ ಆರ್.ಸಿ.ಸಿ. ಕಟ್ಟಡಗಳೇ ಎಲ್ಲೆಲ್ಲೂ ಏಳುತ್ತಿರುವಾಗ, ಹಂಚುಗಳಿಗೆ ಬೇಡಿಕೆ ಕಡಿಮೆಯಾಗುತ್ತ ಹೋಗಿ ಹಂಚಿನ ಕಾರಖಾನೆಗಳು ಏದುಸಿರು ಬಿಡುತ್ತ ಸಾಯಲಾರದೇ, ಬದುಕಲೂ ಆಗದೇ ಉಳಿದುಕೊಂಡಿವೆ!

ಇದರಂತೆ ದಿಂಡುಗಳನ್ನು ಕ್ಷಣಾರ್ಧದಲ್ಲಿ ಸೀಳಿ ಹಾಕುವ ವಿದ್ಯುತ್ ಚಾಲಿತ ಕರಗಸ

ಕಾರ್ಖಾನೆ (ಸಾಮಿಲ್) ಕಾಸರಕೋಡಿನಲ್ಲಿಯೇ ಸ್ಥಾಪಿತವಾಯಿತು. ಅನೇಕ ಶ್ರಮಜೀವಿಗಳು ಬೆವರು ಸುರಿಸಿ ಕೊರೆಯುವ ಕೆಲಸವನ್ನು ಯಂತ್ರವು, ಐದೇ ನಿಮಿಷದಲ್ಲಿ ಮಾಡಿ ಮುಗಿಸುತ್ತಿದ್ದುದರಿಂದ, ಬಡವರಿಗೆ ಗಂಜಿ ದೊರೆಯದೇ ಹೋಯಿತು ಆದರೆ ಸಾಬೆಂಚ್ ಮಾಲಿಕರ ಜೇಬು ತುಂಬಲು ಕೊರತೆಯಾಗಲಿಲ್ಲ!

ಇನ್ನೊಂದು 'ಸಾಬೆಂಚ್' ಕಾಣಿಸಿಕೊಂಡಿತು! ಅರಣ್ಯವೆಲ್ಲ ವಾಯುವೇಗದಿಂದ ಬರಿದಾಗಲಾರಂಭಿಸಿತು. ಈಗ ಎಚ್ಚೆತ್ತುಕೊಂಡ ಅರಣ್ಯಖಾತೆ, ಹಾಗೂ ಮೊದಲೇ ಪ್ರತಿಭಟನೆಗೆ ಆರಂಭಿಸಿದ ಪರಿಸರವಾದಿಗಳಿಂದಾಗಿ ಸಾಬೆಂಚ್ ಮಾಲಿಕರ ಚಟುವಟಿಕೆಗಳಿಗೆ ಕಡಿವಾಣ ಹಾಕದೇ ನಿರ್ವಾಹವೇ ಇರಲಿಲ್ಲ!" ಸೋತ ಸಾಹಸಗಾಥೆಯನ್ನು ಕ್ರಿಶ್ ವಿವರಿಸಿದರು.

'ರಾಜ್ಯ ಸರಕಾರ, ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ನೀಡಲೆಂದು ಕಾಸರಕೋಡನ್ನು ಮತ್ಸ್ಯಬಂದರವಾಗಿ ಪರಿವರ್ತಿಸಲು ಸಾಕಷ್ಟು ಹಣವನ್ನು ವ್ಯಯಿಸಿತು. ಕಡಲನ್ನು ಬರಿದುಮಾಡಿ ಹಿಂದಿರುಗುವ ಪರ್ಸಿನ್ ನಾವೆಗಳೆಲ್ಲ ತಮ್ಮ ಮತ್ಸ್ಯರಾಶಿಯನ್ನು ಬಂದರದಲ್ಲಿ ಹರಾಜು ಮಾಡಿ ಖಾಲಿಯಾಗುತ್ತವೆ. ಅದರಲ್ಲಿಯ ಸಿಂಹಪಾಲು ಮಲ್ಪೆ, ಕೋಚಿ, ಮುಂಬೈ ವ್ಯಾಪಾರಿಗಳ ದಲ್ಲಾಳಿಗಳು ಸ್ವಾಹಾ ಮಾಡಿಕೊಳ್ಳುವದರಿಂದ, ತಮ್ಮದಾಗಬಹುದಾಗಿದ್ದ ಸೊತ್ತನ್ನೆಲ್ಲ ಇವರು ದೋಚಿಕೊಳ್ಳುತ್ತಾರಲ್ಲ! ಎಂದು ಸ್ಥಾನೀಯರಿಗೆ ಕಸಿವಿಸಿ ಪ್ರಾರಂಭವಾಯಿತು. ಅಂತೆಯೇ ಅವರೆಲ್ಲ ಒಟ್ಟಾಗಿ ಸಹಕಾರಿ ಸಂಘವನ್ನು ಸ್ಥಾಪಿಸಿ ಮತ್ಸ್ಯಪರಿಷ್ಕರಣ ಕೇಂದ್ರವನ್ನು ಸ್ಥಾಪಿಸುವದೆಂದು ತೀರ್ಮಾನಿಸಿದರು. ಮುಖಂಡರು ಬೆಂಗಳೂರಿನ ಅರಣ್ಯಾಧಿಕಾರಿಗಳನ್ನು ಕಂಡು ಕಾಸರಕೋಡಿನ ಮೀನು-ಬಂದರದ ನೆರೆಯಲ್ಲಿರುವ ವಿಸ್ತಾರವಾದ ಬಯಲನ್ನು ಪಡೆದರು. ಎದುರಿಗೆ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯಿದ್ದರೆ, ಬೆನ್ನಿಗೆ ಭೋರ್ಗರೆಯುವ ಸಮುದ್ರ, ಎಡಗಡೆಗೆ ಶರಾವತಿ ನದಿ. ಸಕಲ ರೀತಿಯಲ್ಲಿ ಇದೊಂದು ಸಾಂಘಿಕ ಕೇಂದ್ರಕ್ಕೆ ಪರಿಪೂರ್ಣ ತಾಣವಾಗಿತ್ತು. ಪರ್ಸಿನ್ ನಾವೆಗಳಲ್ಲಿ ಹಿಡಿದ ಮೀನುಗಳಲ್ಲದೇ ಆಳವಿಲ್ಲದ ನೀರಿನಲ್ಲಿ 'ಬೀಡಿನ' ನಾವೆಗಳಲ್ಲಿ ಹಿಡಿದ ಸುರ್ಮ (ಇಸವಣ) ದಂತಹ ದೊಡ್ಡ ಜಾತಿಯ ಮತ್ಸ್ಯಗಳನ್ನೂ ಖರೀದಿಸಬಹುದಾಗಿತ್ತು. ಬರ್ಫದ ತಯಾರಿಯೂ ಪ್ರಾರಂಭವಾಗಿ ಹೆಚ್ಚುವರಿ ಬರ್ಫವನ್ನು ಸಂಘವು ಇತರರಿಗೂ ಮಾರಿ ಲಾಭ ಮಾಡಿಕೊಳ್ಳಲಾರಂಭಿಸಿತು. ಹೊಸ ಹೊಸ ಯಂತ್ರೋಪಕರಣಗಳನ್ನು ಜೋಡಿಸಿದರು. ಹೊಸ ಕಟ್ಟಡ-ಶೈತ್ಯಾಗಾರಗಳು ಕಾಣಿಸಿಕೊಂಡವು. ಶಟ್ಲೆ ಸುಲಿಯುವ ನಿಪುಣ ಕೆಲಸಗಾತಿಯರನ್ನು ಕೇರಳದಿಂದ ಕರೆತಂದು, ಅವರ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಟ್ಟರು. ಆಗಿನ ದಿನಗಳಲ್ಲಿ ಊರಿಗೆ ಬಂದಿದ್ದ ನಾನು ಇದು ನಮ್ಮೂರೇ! ಎಂದು ವಿಸ್ಮಯ ಪಟ್ಟಿದ್ದೆ. ತುಂಬ ಸಂತೋಷಪಟ್ಟಿದ್ದೆ!" ಕ್ರಿಶ್ ಗೆಲುವಿನ ಧ್ವನಿಯಲ್ಲಿ ಮುಂದುವರೆಸಿದರು.

"ವಿದೇಶ ವಿನಿಮಯ ಪಡೆಯುವದಕ್ಕೆ ಈ ಕಡಲ ಸಂಪತ್ತಿಗೆ ಇರುವ ಅಪಾರ ಬೇಡಿಕೆಯನ್ನು ಗಮನಿಸಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರ್ಯಾತಕ್ಕೆ ಪ್ರೋತ್ಸಾಹ

ನೀಡಲಾರಂಭಿಸಿದವು. ಅಮೇರಿಕೆ, ಜಪಾನ್, ಯುರೋಪ್ ರಾಷ್ಟ್ರಗಳಲ್ಲಿ ಶಟ್ಲೆ (ಪ್ರಾನ್ಸ್) ಮೀನಿಗೆ ತುಂಬಾ ಬೇಡಿಕೆ! ಹೀಗಾಗಿ ಈ ಮೀನು, ಆಧುನಿಕ ಕುಬೇರರ ಸೊತ್ತಾಗಲಾರಂಭಿಸಿ ಸ್ಥಾನೀಯರಿಗೆ ದೊರೆಯದಾಯಿತು. ವ್ಯಾಪಾರಾಭಿವೃದ್ಧಿಯ ನೆಪದಲ್ಲಿ ಸಂಘದ ಪದಾಧಿಕಾರಿಗಳು ವಿದೇಶಯಾತ್ರೆ ಕೈಕೊಳ್ಳಲಾರಂಭಿಸಿದರು. ಅತಿಥಿ-ಅಭ್ಯಾಗತರ ಖರ್ಚು ಗಗನಕ್ಕೇರಿತು. ಸಾಲದ್ದಕ್ಕೆ ಇಲ್ಲಿಂದ ನಿರ್ಯಾತವಾದ ಶಟ್ಲೆ-ಪೊಟ್ಟಣಗಳು ಕಲುಷಿತವಾಗಿವೆ! ಎಂದು ವಿದೇಶಗಳು ಹಣಪಾವತಿ ಮಾಡಲೇ ಇಲ್ಲ! ಕೆಲವನ್ನು ವಾಪಸ್ ಮಾಡಿದರು.

ಸರಿ ಆರೋಪ-ಪ್ರತ್ಯಾರೋಪಗಳ ಸುರಿಮಳೆಯಾಗಲಾರಂಭಿಸಿತು. ಯಶಸ್ವಿಯಾಗುವ ಸಹಕಾರಿ ಸಾಹಸಗಳಲ್ಲಿ ಒಳಜಗಳಗಳು ಸಾಮಾನ್ಯ. ಆದರೆ ಸಕಲರಿಗೂ ಅದರಲ್ಲಿ ಲಾಭವಿದ್ದುದರಿಂದ ಮೊದಲ ವರ್ಷಗಳಲ್ಲಿ ಮುಂದುವರಿಯಲು ತೊಂದರೆಯಾಗಲಿಲ್ಲ.

ಬಂಗಾಲದ ಗಂಗಾನದಿಯ ಶಾಖೆ, ಭಾಗೀರಥಿಯು ಹರಿಯುವ ಪರಿಸರವೆಲ್ಲ ವಿಪರೀತ ಜವುಳು ಭೂಮಿ. ಇದರಲ್ಲಿ ಬೃಹತ್ ಗಾತ್ರದ ಪ್ರಾನ್ಸ್ ಕೃಷಿ ಮಾಡಿ, ಆಗರ್ಭ ಶ್ರೀಮಂತರಾಗಬಹುದು! ಎಂದು ಪತ್ತೆ ಹಚ್ಚಿದೊಡನೆ ದೇಶದಾದ್ಯಂತ, ಈ ತಂತ್ರಜ್ಞಾನವನ್ನು ತನ್ನದನ್ನಾಗಿ ಮಾಡಿಕೊಳ್ಳಲು ತುರುಸಿನ ಸ್ಪರ್ಧೆ ನಡೆಯಿತು. ಕಾಸರಕೋಡ, ಮೀನು ಕೇಂದ್ರದವರೂ ಗಝನಿ ಭೂಮಿಯನ್ನು ತಮ್ಮದನ್ನಾಗಿ ಮಾಡಿಕೊಂಡು, ಅದರಲ್ಲಿ ಹರಿ ನೀರಿನ ವ್ಯವಸ್ಥೆ ಮಾಡಿ 'ಟಾಯ್ಗರ್ ಪ್ರಾನ್' ಕೃಷಿ ಕೈಕೊಂಡರು. ಒಂದೇ ಒಂದು ಮರವನ್ನು ಬೆಳೆಸುವದಕ್ಕೂ, ಕಾಡು ಬೆಳೆಸುವದಕ್ಕೂ ಆಕಾಶ-ಪಾತಾಳಗಳ ಅಂತರವಿದೆ! ಎಂದು ಈ ಮುಖಂಡರ ಗಮನಕ್ಕೆ ಬರಲೇ ಇಲ್ಲ. ಸೀಮಿತ ಸ್ಥಳದಲ್ಲಿ ಕೈಕೊಂಡ ಜಲಕೃಷಿಯಲ್ಲಿ ಅಸಂಖ್ಯಾತ ಶೆಟ್ಲೆಗಳನ್ನು ಬೆಳೆಸಲಾರಂಭಿಸಿದ್ದಿರಂದ, ಅನೇಕ ಪ್ರಕಾರದ ರೋಗಾಣುಗಳು ಅವುಗಳನ್ನು ಬಾಧಿಸಲಾರಂಭಿಸಿದವು. ಸಾಲದ್ದಕ್ಕೆ ಅವು ಕೈಗೆ ಎಟಕುವಂತೆ ನೀರಿನಲ್ಲಿ ಸುಲಭವಾಗಿ ಸಿಗುವಂತಿದ್ದರಿಂದ ಮೀನುಗಳ್ಳರು, ದೊಡ್ಡ ಸಂಖ್ಯೆಯಲ್ಲಿ ಬೆಳೆದರು! ಒಂದು ಕಿಲೋ ಪ್ರಾನ್‌ಗೆ ಇನ್ನೂರು ರೂಪಾಯಿಗೂ ಮೀರಿ ಬೆಲೆಯಿತ್ತು. ಇದ್ದು ಬಿದ್ದುವನ್ನೆ ಪರಿಷ್ಕರಿಸಿ ವಿದೇಶಗಳಿಗೆ ನಿರ್ಯಾತ ಮಾಡಿದ್ದಾಯ್ತು. ಅವೆಲ್ಲ ಅಲ್ಲಿ ಪರೀಕ್ಷೆಗೆ ಒಳಪಟ್ಟು ರೋಗಪೀಡಿತವೆಂದು ತಿರಸ್ಕರಿಸಲ್ಪಟ್ಟವು!

ಈ ಯೋಜನೆಯಲ್ಲಿ ಸಾಕಷ್ಟು ಜನ ಸರಕಾರದಿಂದ, ಬ್ಯಾಂಕುಗಳಿಂದ ವಿಪುಲವಾಗಿ, ಧನ ಸಹಾಯ ಹಾಗೂ ಸಾಲ ಪಡೆದಿದ್ದರು. ಬಂದ ಉತ್ಪನ್ನದಿಂದ ಬಡ್ಡಿ ತೀರಿಸಲೂ ಸಾಧ್ಯವಿರಲಿಲ್ಲ. ಇದಕ್ಕೆಲ್ಲ ಹೊಣೆ ಯಾರು? ಎಂದು ಯಾದವಿ ಕಲಹ ಮತ್ತೆ ಹೆಡೆ ಎತ್ತಿತ್ತು. ಆದಾಯಕರಾಧಿಕಾರಿಗಳಿಗೆ ದೂರುಗಳು ಹೋದವು. 'ರೇಡ್' ಗಳು ನಡೆದವು. ಅಂತಃಕಲಹ, ಗಲಾಟೆಗಳಲ್ಲಿ ಪರಿಷ್ಕರಣ ಕೇಂದ್ರ ಬಂದ್ ಬಿತ್ತು! ಯಂತ್ರಗಳು ಮೂಕವಾದವು. ಕೇರಳ ಕುವರಿಯರು ನಿರುದ್ಯೋಗಿಗಳಾಗಿ ತಮ್ಮೂರಿಗೆ ಮರುಪಯಣ ಕೈಕೊಂಡರು.

ಈಗ ವರ್ಷಗಳೇ ಕಳೆದಿವೆ. ವಾಹನಗಳು, ಯಂತ್ರಗಳು ಜಂಗುತಿನ್ನುತ್ತ ಬಿದ್ದಿವೆ, ಕಟ್ಟಡಗಳು ಉಸ್ತವಾರಿ ಇಲ್ಲವೇ ಬಿಕೋ ಎನ್ನುತ್ತಿವೆ. ಇದೇ ಸಮಯವೆಂದು ಊರು ಜನ,

ಕೈಗೆ ಸಿಕ್ಕ ಕಲ್ಲು, ಕಟ್ಟಿಗೆ, ಗೇಟುಗಳನ್ನೆಲ್ಲ ಕದ್ದೊಯ್ಯಲಾರಂಭಿಸಿದ್ದಾರೆ. ನಮ್ಮ ಕಣ್ಣ ಮುಂದೆಯೇ ಜನ್ಮತಾಳಿ ಬೆಳೆದು ಗರಿಬಿಚ್ಚಿಕೊಂಡು ಹೆಸರು, ಹಣ ಗಳಿಸಿದ ಒಂದು ಉದ್ದಿಮೆ, ಇಷ್ಟು ಶೀಘ್ರದಲ್ಲಿ ಮಣ್ಣು ಮುಕ್ಕುವಂತೆ ಆಯಿತಲ್ಲ! ಎಂದು ನೆನೆದಾಗ ಕಣ್ಣು ತೇವಗೊಳ್ಳುತ್ತವೆ. ನಮ್ಮವರೆಲ್ಲ ವಿದ್ಯಾ-ಬುದ್ಧಿಗಳನ್ನು ಹೊಂದಿ ಜಾಣರಾಗಿದ್ದಾಗಲೂ, ಸ್ವಾರ್ಥಿಗಳೂ, ಇಷ್ಟೊಂದು ಸಂಕುಚಿತ ಮನೋವೃತ್ತಿಯವರೂ ಯಾಕಾಗಿದ್ದಾರೆ? ಎಂದು ಅರಿಯದೇ ಕಂಗಾಲಾಗಿದ್ದೇನೆ…” ಮುಂದೆ ಮಾತನಾಡಲಾಗದೇ ಕ್ರಿಶ್ ಮೌನವಾಗಿದ್ದುಬಿಟ್ಟರು.

“ದೂರದ ಅಮೇರಿಕೆಯಲ್ಲಿದ್ದಾಗ, ನಮ್ಮವರಿಗೆ ಮುಂದೆ ಬರಲು ಅವಕಾಶಗಳೇ ಲಭಿಸದೇ ತೀರ ಬಡವರಾಗಿ ಉಳಿದಿದ್ದಾರೆ! ಎಂದು ಭಾವಿಸಿದ್ದೆ. ಆದರೆ ನಮ್ಮ ಊರಿನ ಸಕಲ ಆಗುಹೋಗುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿದಾಗ, ಮತ್ತು ನಿಮ್ಮ ಸ್ವಾನುಭವದ, ಪರಿಣತ ಅಭಿಪ್ರಾಯಗಳನ್ನು ಪಡೆದಾಗ ಇವರ ಏಳ್ಗೆಗೆ ಮಾರಕರು ಹೊರಗಿನವರಲ್ಲ! ಇವರೇ! ಏನೂ ಯತ್ನಿಸದಿದ್ದರೆ, ಯಾರಿಂದ ಏನು ಸಾಧ್ಯ? ಬಹುಶಃ ದೇವರೆಂಬವನು ಇದ್ದರೆ ಅವನೂ ಕೈಚೆಲ್ಲಿ ಕಣ್ಣು ಮುಚ್ಚಿಕೊಂಡು ಧ್ಯಾನಗ್ರಸ್ತನಾಗಿರಲು ಸಾಕು!” ವಿಕ್, ತನ್ನ ತೀರ್ಪನ್ನಿತ್ತ.

೨೧. ಮರುಪಯಣ

“ರಾತ್ರೆಯೆಲ್ಲ ಹರಿಜಾಗರಣ ಮಾಡಿದವರಂತೆ ಕಣ್ಣು ಊದಿಕೊಂಡಿವೆಯಲ್ಲ? ನಿದ್ರಾದೇವಿ ಪ್ರತ್ಯಕ್ಷಳಾಗಲು ನಿರಾಕರಿಸಿದಳೇ?” ನಸುಕಿನಲ್ಲಿ ಎಚ್ಚರಗೊಂಡ ಜೋ, ಅಂಗಳದಲ್ಲಿ ಶತಪಥ ಹಾಕುತ್ತಿದ್ದ ಪತಿಗೆ ವಿಚಾರಿಸಿದಳು. ‘ಮಧ್ಯರಾತ್ರಿ ವಿದ್ಯುತ್ತು, ಕೈಕೊಟ್ಟು ಪಂಕ ಚಲಿಸಲೇ ಇಲ್ಲ. ವಿಪರೀತ ಸೆಕೆ. ಈ ಸದವಕಾಶ ಕಳೆದುಕೊಳ್ಳದೇ ಗುಂಗಾಡುಗಳು ಹಿಂಡು ಹಿಂಡಾಗಿ ಬಂದು ರಕ್ತಪಾನ ನಡೆಸಿದವು. ಜೊತೆಗೆ ಕಳೆದ ಒಂದು ವಾರದಲ್ಲಿ ಕಂಡುಕೊಂಡ ನಮ್ಮ ಊರಿನ ಅಧೋಗತಿಯ ವಿವಿಧ ಹಂತಗಳಿಂದ ವಿಹ್ವಲನಾಗಿ ಬಿಟ್ಟಿದ್ದೇನೆ! ಈ ಎಲ್ಲ ತಳಮಳಗಳಲ್ಲಿ ನಿದ್ರೆ ಹೇಗೆ ಬರಬೇಕು?” ಕ್ರಿಶ್ ಕೇಳಿದರು.

“ಈಗಲಾದರೂ ಕೊಂಚ ವಿರಮಿಸಿ. ಸೋತ ಶರೀರಕ್ಕೆ ವಿಶ್ರಾಂತಿ ಬೇಡವೇ? ಈಗ ಫ್ಯಾನ್ ತಿರುಗಲಾರಂಭಿಸಿದೆ!” ಜೋ ಸೂಚಿಸಿದಳು.

“ದೇಹಕ್ಕಿಂತ ಹೆಚ್ಚು ಮನಸ್ಸು, ಮ್ಲಾನವಾಗಿದೆ. ಅದನ್ನು ಸಂತೈಸುವದು ಕಷ್ಟಕ್ಕಿಟ್ಟುಕೊಂಡಿದೆ” ಎಂದು ಪೀಠಿಕೆ ಹಾಕಿ ತಮ್ಮನ್ನು ಅತಿಯಾಗಿ ಕಾಡುತ್ತಿದ್ದ ಕೆಲ ಘಟನೆಗಳನ್ನು ಸ್ವಗತ, ಎಂಬಂತೆ ಮೆಲುಧ್ವನಿಯಲ್ಲಿ ನಮೂದಿಸಲಾರಂಭಿಸಿದರು. ಈ ಜನ್ಮದಲ್ಲಿ ಅಂತೂ ನಾನು ಯಾವುದೇ ಪಾಪದ ಕೆಲಸಮಾಡಿಲ್ಲ. ಆದರೆ ಹೋದ ಜನ್ಮದಲ್ಲಿ ನನಗರಿವಿಲ್ಲದೇ ಅಂಥ ಘಟನೆ ನಡೆದುಹೋಗಿರಬೇಕು. ಅಂತೆಯೇ ಕಳೆದ ಹತ್ತು ದಿನಗಳಲ್ಲಿ, ಕನಸಿನಲ್ಲೂ ಊಹಿಸಲಾಗದ ಹಲವು ನೋಟಗಳನ್ನು ಕಡ್ಡಾಯವಾಗಿ ಕಾಣಬೇಕಾಯಿತು. ಪಾಪ-ಪುಣ್ಯದ ಪರಿವೆ ಇಲ್ಲದೇ ಅನ್ಯಾಯವಾಗಿ ಪಶು-ಪಕ್ಷಿಗಳ ವಧೆ, ಶತಮಾನಗಳಿಂದ ಜೀವಕೋಟಿಗೆ ಅನ್ನ, ಆಶ್ರಯ, ಆಚ್ಛಾದನೆಗಳನ್ನು ಏಕಪ್ರಕಾರವಾಗಿ ನೀಡುತ್ತ ಬಂದಿದ್ದ ಶರಾವತಿಯನ್ನು ಬಲಹೀನ ಮಾಡಿದ ದುಷ್ಕೃತ್ಯಗಳು, ಹಣದಾಸೆಯಿಂದ ಮಾಡಿದ ಪುರಾತನ ಹಾಗೂ ಐತಿಹಾಸಿಕ ಸ್ಮಾರಕಗಳ ಧ್ವಂಸ, ರಾಜಕಾರಣಿಗಳ ಹಸ್ತಕ್ಷೇಪದಿಂದ ಎಲ್ಲೆಡೆ ಹರಡಿಕೊಂಡ ಅರಾಜಕತೆ, ಆಧುನಿಕತೆಯ ಹಪಾಹಪಿಯಿಂದ ಹಳೆಯದೆಲ್ಲವನ್ನೂ ಹೋಳಿಯಾಡುವ ಆತುರ, ಪರಿಸರದ ಪ್ರಜ್ಞೆಯೇ ಇಲ್ಲದೇ ನೀರಿನ ಸೆಲೆಗಳನ್ನೆಲ್ಲ ನಾಶಪಡಿಸುತ್ತ ಹೊರಟಿರುವದು ನೋಡಿ ಕಂಗಾಲಾಗಿದ್ದೇನೆ.

ಎಲ್ಲೆಡೆ ಕದೀಮರ, ಗೂಂಡಾಗಳದ್ದೇ ಮೇಲುಗೈ! ಆದರ್ಶಗ್ರಾಮದಂತಿದ್ದ ‘ಹಿರೇಹಳ್ಳಿಯ’ ಎಂಥ ಅಧೋಗತಿ! ಎಷ್ಟೊಂದು ಕರಕುಶಲ ಕಲೆಗಳ, ಕಾರ್ಮಿಕರು ಕಣ್ಮರೆಯಾಗಿ ಹೋದರು.

ಶುಭ್ರವಾಗಿದ್ದ ಶರಾವತಿಯ ಮಡಿಲು, ಮಾನವಮಲ, ಕೊಳೆತ ಮೀನಿನ ವಾಸನೆಯಿಂದ ಗಬ್ಬೆದ್ದು ಬಿಟ್ಟಿದೆ. ಅನೇಕಾನೇಕ ಜಲ ವಿದ್ಯುತ್ ಯೋಜನೆಗಳಿಂದ ನದಿಯ ರಭಸ ಕಡಿಮೆಯಾಗಿ, ಎಲ್ಲೆಡೆ ದಿನ್ನೆ, ದ್ವೀಪಗಳು ತಲೆಯೆತ್ತಿ ಆಕ್ರಮಣಕ್ಕೆ ತುತ್ತಾಗಿವೆ. ರಾಷ್ಟ್ರೀಯ ಹೆದ್ದಾರಿ, ಕೊಂಕಣ ರೇಲು ಮಾರ್ಗಗಳು, ಕಳ್ಳಕಾಕರಿಗಾಗಿಯೇ ನಿರ್ಮಾಣವಾದಂತೆ, ಕಳ್ಳತನ ದರೋಡೆಗಳು ಹೆಚ್ಚಿವೆ!

ಒಳಚರಂಡಿಯೋಜನೆ, ನಿರ್ಮಿಸದೆಯೇ ಕೊಳಾಯಿ ನೀರು ಸರಬರಾಜು ಪ್ರಾರಂಭಿಸಿದ್ದರಿಂದ ಊರೆಲ್ಲ ಹೊಲಸು. ಹಿತ್ತಲಲ್ಲಿ ಬೆಳೆಯುತ್ತಿದ್ದ ಸಸ್ಯಗಳಿಂದಲೇ ಸ್ವಯಂಚಿಕಿತ್ಸೆ ಮಾಡಿಕೊಳ್ಳುತ್ತಿದ್ದವರಿಗೆ ಆರೋಗ್ಯ ರಕ್ಷಣೆಯ ಹೆಸರಿನಲ್ಲಿ ಸಾವಿರಾರು ರೂಪಾಯಿ ಕಿತ್ತುಕೊಳ್ಳುವ ಹೊಸ ಯೋಜನೆಗಳು. ನಿಸರ್ಗದತ್ತವಾಗಿ ಬಂದ ಶ್ರೀಮಂತ ವನರಾಜಿಯ ನಾಶ, ಆಧುನಿಕತೆಯ ಹಪಾಹಪಿಯಲ್ಲಿ ಅಸ್ತಿತ್ವದಲ್ಲಿದ್ದ ಹಲವು ಕೈಗಾರಿಕೆಗಳನ್ನು ಮಣ್ಣುಗೂಡಿಸಿ, ಉದ್ಯೋಗಪತಿಗಳಿಗೆ ಅವಕಾಶ ನೀಡಿದ್ದು, ಸಕಲರಿಗೂ ಸಾಲುವಂತೆ ದೊರೆಯುತ್ತಿದ್ದ ಮತ್ಸ್ಯಾಹಾರ ಕಣ್ಮರೆಯಾದದ್ದು, ಬಡವರ ಗಂಜಿಗೆ ಗತಿಯಾಗಲಿ! ಎಂದು ಕನಸು ಕಟ್ಟಿ, ಅನೇಕ ಕುಶಲ ಕೈಗಾರಿಕೆಗಳನ್ನು ಪ್ರಾರಂಭಿಸಿ ಅವೆಲ್ಲ ಮಣ್ಣುಮುಕ್ಕಿದ್ದು ಎಲ್ಲವೂ ಕಣ್ಣೆದುರು ಹಾಯ್ದು ಹೋಗುತ್ತಿವೆ! ನಮ್ಮ ಕನಸುಗಳೆಲ್ಲ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತಾದವು." ತಮ್ಮೂರಿನ ಸರ್ವತೋಮುಖ ಅಧೋಗತಿಯನ್ನು ನೆನೆದುಕೊಂಡು ಕ್ರಿಶ್ ಅತಿಯಾಗಿ ನೊಂದರು.

"ಊರವರ ಸ್ಥಿತಿ-ಗತಿಗೆ ನೀವೇಕೆ ಇಷ್ಟು ಕೊರಗಬೇಕು? ನಮಗೆ ನೆಮ್ಮದಿ ಸಿಗುವ ಜೀವನ ನಾವು ರೂಢಿಸಿಕೊಂಡರೆ ಸಾಲದೇ?" ಜೋ ಸಾಂತ್ವನಗೊಳಿಸಲೆಂಬಂತೆ ನುಡಿದಳು.

"ಪರಿಸ್ಥಿತಿಯನ್ನು ಅರಿತುಕೊಳ್ಳಲು ನೀನು ಯತ್ನಿಸಿದಂತೆ ತೋರುವದಿಲ್ಲ! ನಾವು ಅಪರೂಪದ ಅತಿಥಿಗಳೆಂದು ಆಪ್ತೇಷ್ಟರೆಲ್ಲ ಕರೆಕರೆದು, ತಿಂಡಿ-ತೀರ್ಥ, ಊಟೋಪಚಾರಗಳನ್ನು ಯಥೇಷ್ಟವಾಗಿ ಪೂರೈಸಿದ್ದರಿಂದ, ಇಷ್ಟೊಂದು ದಿನಗಳನ್ನು ತುಂಬ ನೆಮ್ಮದಿಯಿಂದ ಕಳೆಯುವಂತೆ ಆಯಿತು. ನಾವು ಶಾಶ್ವತವಾಗಿ ಇಲ್ಲಿ ತಳ ಊರಿದರೆ ಇವೆಲ್ಲ ಸದಾಕಾಲ ಸುಲಭ ಲಭ್ಯವೆಂದು ಬಗೆದೆಯಾ? ಕಣ್ಣು, ಕಿವಿ, ಬುದ್ಧಿಗಳನ್ನು ಚುರುಕಾಗಿ ಇಟ್ಟುಕೊಂಡರೆ, ಇಲ್ಲಿಯ ಆಗುಹೋಗುಗಳನ್ನು ಅರ್ಥೈಸಿಕೊಳ್ಳಬಹುದು. ಮೂರುದಿನದ ಹಿಂದೆ, ನಮಗೆ ಪೂರಿ-ಭಾಜಿ, ಶಿರಾಗಳ ಆತಿಥ್ಯವಾಯಿತಲ್ಲ-ಪಂಡ-ಹೆಗ್ಡೇರ ಹಾಟೇಲಿನಲ್ಲಿ? ಅದರ ಕಾರಣ ಹುಡುಕಲು ಯತ್ನಿಸಿದಿಯಾ? ಕರೆಂಟ್ ಕೈಕೊಟ್ಟಿತ್ತು. ಮಿಕ್ಸಿ ಮೌನವಾಗಿತ್ತು. ರಿಫ್ರಿಜಿರೇಟರಿನಲ್ಲಿಟ್ಟಿದ್ದ ಹಾಲು ಕೆಟ್ಟು ಹೋಗಿತ್ತು. ಡೈರಿಯ ಹುಡುಗನೂ ಕೈ ಕೊಟ್ಟಿದ್ದ. ಬಂದ ನಾಲ್ಕನೆಯದಿನ 'ಹೊಟೇಲ್ ಸ್ವಾಗತ'ದಲ್ಲಿ ಮುರ್ಗಿಮಸಾಲಾ, ಬಿರಿಯಾನಿ ತಿನ್ನಿಸಲು ಇದೇ ಕಾರಣ. ಮನೆಯಲ್ಲಿ ಸಿಲಿಂಡರ್ ಗ್ಯಾಸ್ ಕೊನೆಯುಸುರು ಬಿಟ್ಟಿತ್ತು. ಇವರಿಗೆ ಸಿಲಿಂಡರ್ ತಂದುಕೊಡುವ ಹುಡುಗ, ಹಣ ಪಡೆದು ಬೇರೊಬ್ಬರಿಗೆ ಸಪ್ಲೈ ಮಾಡಿದ್ದ. ಹಿತ್ತಿಲು ತುಂಬ ಮರಗಳಿವೆ. ಅವುಗಳಿಂದಾಗಿ ಇಂಧನಕ್ಕೆ ಕೊರತೆ ಏನೇನೂ ಆಗಲಾರದು. ಆದರೆ ಅತ್ಯಾಧುನಿಕ ಗ್ಯಾಸ್ ಒಲೆ, ಗ್ರಿಲ್‌ಗಳಿಗೆ ಈ ಉರುವಲು ಬಳಸುವದಾದರೂ ಹೇಗೆ? ಅಂತೆಯೇ ಅಡಿಗೆ ರದ್ದಾಗಿ ನಮಗೆ" ಹೊಟೇಲ್‌ದ

ಭರ್ಜರಿ ಮೇಜವಾನಿ ಸಿಕ್ಕಿತು! ಇನ್ನೊಂದುದಿನ ನಮಗೆಲ್ಲ ನಸುಕಿನಲ್ಲೆ "ರಾಮತೀರ್ಥಕ್ಕೆ ಹೋಗೋಣ ಬಟ್ಟೆ ಬರೆ ತನ್ನಿ! ಸ್ನಾನ ಅಲ್ಲೆ ಎಂದು ಕಾರಿನಲ್ಲಿ ಕರೆದೊಯ್ದ ನೆನಪಿದೆಯೇ? ಒಂದಿನ ರಾತ್ರಿ ನೀರಿನ ಪಂಪ್ ಪ್ರಾರಂಭಿಸಲು ಮರೆತದ್ದರಿಂದ ಹೌದು ಬರಿದಾಗಿತ್ತು. ಕಕ್ಕಸ ಬಳಕೆಗೂ ನೀರನ್ನು ನೆರೆ ಮನೆಯ ಪೈಪ್‌ದಿಂದ ಪಡೆಯಬೇಕಾಯಿತು. ರಾಮತೀರ್ಥದ ಪುಣ್ಯಸ್ನಾನಕ್ಕೆ ಕಾರಣ ತಿಳಿಯಿತೇ? ಇಲ್ಲಿ ವಾಸವಾಗಿದ್ದವರಿಗೆ ಇವೆಲ್ಲ ಪ್ರತಿನಿತ್ಯ ಎದುರಿಸಬೇಕಾದ ಸಮಸ್ಯೆಗಳು" ಕ್ರಿಶ್ ದೈನಂದಿನ ಬವಣೆಗಳನ್ನು ನೆನಪಿಸಿದರು.

"ಬಾಪ್ಪ-ಅಮ್ಮ ಏನೋ ಗಹನವಾದ ಚರ್ಚೆಯಲ್ಲಿ ತೊಡಗಿದಂತಿದೆ!..." ಅಲ್ಲಿಗೆ ಬಂದ ವಿಕ್ ವಿಚಾರಿಸಿದ. "ನಿಮ್ಮಪ್ಪ ತನ್ನ ಹುಟ್ಟೂರಿಗೆ ಬಂದ ದುರ್ಗತಿಯನ್ನು ಕಂಡು ತುಂಬ ಕಸಿವಿಸಿಪಡುತ್ತಿದ್ದಾರೆ. ಮುಂದೇನು ಗತಿ? ಎಂದು ಕಂಗಾಲಾಗಿದ್ದಾರೆ" ಎಂದು ಜೋ, ಸಂಕ್ಷಿಪ್ತವಾಗಿ ಕ್ರಿಶ್‌ರ ವ್ಯಥೆಯ ಕಾರಣ ವಿವರಿಸಿದಳು.

"ಓ! ಹೀಗೋ? ನಾನೂ ಇದೇ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಕೊಡೋಣವೆಂದೇ ಎದ್ದು ಬಂದೆ. ಸಾಫ್ಟ್‌ವೇರ್ ಕೇಂದ್ರ ಒಂದನ್ನು ಪ್ರಾರಂಭಿಸುವ ಉದ್ದೇಶದಿಂದ ಇಲ್ಲಿ ಸಿಗಬಹುದಾದ ಸೌಲಭ್ಯ-ಸೌಕರ್ಯಗಳನ್ನು ತಿಳಿದುಕೊಳ್ಳುವದಕ್ಕಾಗಿ ನನ್ನ ಶಾಲಾ ದಿನಗಳ ಪರಮಮಿತ್ರ ಉಮೇಶನನ್ನು ಹುಡುಕಿಕೊಂಡು ಹೋಗಿದ್ದೆ. ಇಲ್ಲಿಂದಲೇ ಕಂಪ್ಯೂಟರ್ ಸಾಫ್ಟ್‌ವೇರ್ ವ್ಯಾಪಾರ ಪ್ರಾರಂಭಿಸುವ ಯೋಚನೆಯಿದೆ ಎಂದಾಗ ತನ್ನ ಪರಿಚಯದ ನಾಲ್ವರನ್ನು ಯುವಕರನ್ನು, ಪರಿಚಯಿಸಿದ. ಅವರೆಲ್ಲ ಗುಂಡಿಗಳನ್ನು ಒತ್ತಲು, 'ಇಲಿ'ಯನ್ನು ಓಡಿಸಲು, ವಿಶೇಷ ತರಬೇತಿ ಪಡೆದವರೆಂದು ಹೇಳಲಾಯಿತು. ಅದನ್ನು ಬಿಟ್ಟರೆ ಇನ್ನೇನೂ ಸಾಫ್ಟ್‌ವೇರ್ ಕಲ್ಪನೆಯೇ ಅವರಿಗಿರಲಿಲ್ಲ! ಆದರೆ ಅವರೆಲ್ಲರ ನಿರೀಕ್ಷೆ, ಪ್ರತಿಫಲಗಳು ಅಚ್ಚರಿಯುಂಟುಮಾಡಿದವು! ಇಂದಿನ ದಿನಗಳಲ್ಲಿ ಅವರಂಥ 'ಕಂಪ್ಯೂಟರ್' ತಜ್ಞರಿಗೆ ಅಮೇರಿಕೆಯ ಸಿಲಿಕಾನ್ ಕೊಳ್ಳದಲ್ಲಿ ವಿಪರೀತ ಬೇಡಿಕೆಯಂತೆ! ಆದರೂ, ಅವರಂಥ ಇನ್ನೂ ಕೆಲವರು, ಅಮೇರಿಕೆಗೆ ಕರೆದೊಯ್ದು ನೌಕರಿ ಕೊಡಿಸುವ ಏಜಂಟರಿಗೆ ೫೦೦೦೦ ದಿಂದ ೧ ಲಕ್ಷದ ಹಣ ತೆತ್ತು ತಮ್ಮ ಸರದಿಗಾಗಿ ದಾರಿಕಾಯುತ್ತಿದ್ದಾರೆ. ಅವರೆಲ್ಲ ಎಗ್ಗಿಲ್ಲದೇ ವೇತನದ ವಿಚಾರವನ್ನು ಮೊದಲು ಎತ್ತಿದರು. ಕೆಲಸ ಏನು? ಎಂತಹದು? ಎಂದು ವಿಚಾರಿಸದೇ! ೩೦ ರಿಂದ ೩೫ ಸಾವಿರ ಮಾಸಿಕ ಸಂಬಳ ಕೇಳುತ್ತಿದ್ದಾರೆ ಈ ಕಗ್ಗಹಳ್ಳಿಯಲ್ಲಿ! ಇಷ್ಟಾಗಿ ಯಾರಿಗೂ ಇಲ್ಲಿರುವ ಮನಸ್ಸಿಲ್ಲ. ಅಮೇರಿಕೆಯ ಕರೆ ಬರುವ ತನಕ ಮಾತ್ರವಂತೆ. ಬೇಕಾದಾಗ ಅವರೇ ಬಿಟ್ಟು ಹೋಗುವ ನೌಕರಿ ಬೇಕಂತೆ.... ಅಮೇರಿಕೆಯಲ್ಲಿ ಗಂಟೆಗೆ ಅರವತ್ತು ಡಾಲರ್ ತೀರ ಕನಿಷ್ಠವೇತನ ಇದೆಯಂತೆ. ಎಂಟೇ ತಾಸು ದುಡಿದರೂ ದಿನ ಒಂದತ್ತು ಇಪ್ಪತ್ತು ನಾಲ್ಕು ಸಾವಿರ ರೂಪಾಯಿಗಳನ್ನು ಪ್ರತಿ 'ತಜ್ಞ' ಸುಲಭವಾಗಿ ಗಳಿಸಬಹುದಂತೆ. ಇಲ್ಲಿಯ ಸಂಬಳಕ್ಕೂ ಅಲ್ಲಿಯದಕ್ಕೂ ಏನಾದರೂ ಹೋಲಿಕೆ ಇದೆಯೇ? ಎಂದು ನನಗೇ ಗೊತ್ತಿರದ ವಿಚಾರಗಳನ್ನು ತಿಳಿಸಿದರು. ಕೆಲವರು ನನ್ನನ್ನೆ ತರಾಟೆಗೆ ತೆಗೆದುಕೊಂಡರು.

ಬಾಲು ಎಂಬಾತ ಅಮೇರಿಕೆಯಲ್ಲಿ ದೊರೆಯುತ್ತಿರುವ ಸೌಕರ್ಯಗಳ ಬಗ್ಗೆ ತಾನೇ

ಪರಿಣತನಂತೆ ಮಾತನಾಡಿದ. "ಅಮೇರಿಕೆಯಲ್ಲಿ ಮುಖ್ಯವಾಗಿ ಇರುವದು ವಾಸದ ತೊಂದರೆ! ಆ ಏರ್ಪಾಡು ಮಾಡಿಕೊಂಡು ಬಿಟ್ಟರೆ ನೌಕರಿ ಸಿಗಲು ಏನೇನೂ ತೊಂದರೆ ಇಲ್ಲ. ಆ ದೇಶದಲ್ಲಿ ಕಂಪ್ಯೂಟರ್ ಪರಿಣತರೇ ಇಲ್ಲ! ಆದ್ದರಿಂದಲೇ ದೊಡ್ಡ ಸಂಖ್ಯೆಯಲ್ಲಿ ನಮ್ಮಂಥವರನ್ನು ಬರಮಾಡಿಕೊಂಡು ಕೇಳಿದಷ್ಟು ಸಂಬಳ ಕೊಡುತ್ತಾರೆ ಎಂದು ಹೇಳಿದಾಗ ಮೂರ್ಖತನದ ಪರಮಾವಧಿ ಅನಿಸದೇ ಇದ್ದೀತೇ? ಹೆಚ್ಚು ಕಡಿಮೆ ಎಲ್ಲರೂ ಇಂಥ ಅಧಿಕ ಪ್ರಸಂಗಿಗಳೇ! ಇಂಥವರನ್ನು ನೇಮಿಸಿಕೊಂಡು ವ್ಯವಹರಿಸುವದು ಸಾಧ್ಯವೇ?" ಎಂದು ದಿಗಿಲಾಯಿತು, ವಿಕ್ ತನ್ನ ತಳಮಳವನ್ನು ತೋಡಿಕೊಂಡ.

"ಇಲ್ಲಿ ನೆಲೆಸಲು ಮನೆಯೊಂದನ್ನು ಹುಡುಕುತ್ತಿದ್ದಿ. ಬಾಡಿಗೆಗೆ ಅಥವಾ ಕ್ರಯಕ್ಕೆ ಅಲ್ಲವೇ? ಏನಾದರೂ ಪ್ರಗತಿಯಾಯಿತೇ?" ಕ್ರಿಶ್ ಕೇಳಿದರು.

"ನಮ್ಮವರ ವರ್ತನೆ ತೀರ ವಿಚಿತ್ರ ಮತ್ತು ವಕ್ರವಾಗಿದೆ ಅನಿಸಿತು. ಸುಬ್ರಾಯ ನಾಯ್ಕರ ಮನೆ ಐದುಲಕ್ಷಕ್ಕೆ ಮಾರಾಟಕ್ಕಿದೆ! ಎಂದು ಕೇಳಿ ಅಲ್ಲಿಗೆ ಹೋದೆ. ಅವರ ಪತ್ನಿಯೇ ಮುಂದಾಗಿ ವ್ಯವಹಾರದ ಮಾತು ಪ್ರಾರಂಭಿಸಿದಳು. "ನಿಮ್ಮಪ್ಪ, ಪ್ರಾಥಮಿಕ ಶಾಲಾ ದಿನಗಳಿಂದಲೂ ನನಗೆ ತುಂಬ ಪರಿಚಿತ... ನೀನಂತೂ ನನ್ನ ತೊಡೆಯ ಮೇಲೆ ಆಡಿದವನಲ್ಲವೆ? ಜೀವನದಲ್ಲಿ ನೀನು ಸಾಧಿಸಿದ ಯಶಸ್ಸಿನಿಂದ ನನ್ನ ಮನಸ್ಸು ಸಂತೋಷದಿಂದ ಬಿರಿಯುತ್ತಿದೆ. ಬೇರಾರಿಗೂ ಕೊಡದೇ ಮನೆಯನ್ನು ನಿನಗೆಂದೇ ಕಾದಿರಿಸಿದ್ದೇನೆ... ಹತ್ತು ಲಕ್ಷಕ್ಕಿಂತ ಒಂದು ಪೈ ಜಾಸ್ತಿ ಕೊಡಬೇಡ!" ಎಂದು ಆಗ್ರಹದಿಂದ ಕರೆದೊಯ್ದು, ಕತ್ತಲೆಯ ಗವಿಯಂತಿದ್ದ ಮನೆ, ಹಿತ್ತಿಲು, ಕೊಟ್ಟಿಗೆ, ಸಂಡಾಸುಗಳನ್ನು ತೋರಿಸಿದಳು. ಹಿಂದಿನಿಂದ ತಿಳಿಸುತ್ತೇನೆಂದು ಜಾರಿಕೊಂಡು ಬರಲು ಕಲಿತ ವಿದ್ಯೆಯನ್ನೆಲ್ಲ ಬಳಸಬೇಕಾಯಿತು. ಇನ್ನೂ ಎರಡು ಮೂರು ಕಡೆ ಇದೇ ಹಾಡು. ಕಟ್ಟುತ್ತಿರುವ ಹೊಸ ಮನೆಯನ್ನೇ ಬಾಡಿಗೆಗೆ ಹಿಡಿಯೋಣವೆಂದು ವಿಚಾರಿಸಿದೆ. ಆದರೆ ಅವರು ನಿರೀಕ್ಷಿಸುವ ಠೇವಣಿ ಮೊತ್ತ ಮತ್ತು ಅಡ್ವಾನ್ಸ್ ಬಾಡಿಗೆಯ ಹಣ, ಬೆಂಗಳೂರು, ಬರ್ಮಿಂಗ್ ಹ್ಯಾಂಗಳಿಗಿಂತ ಅಧಿಕವಾದದ್ದು! ಎಂದು ಹೇಳಿದರೆ ನಂಬುತ್ತೀಯಾ? ಅವಕಾಶ ಸಿಕ್ಕರೆ, ವಿವೇಚನೆಯೇ ಇಲ್ಲದೇ ಇನ್ನಿತರರನ್ನು ಸುಲಿಯುವದೇ ತಮ್ಮ ಧರ್ಮವೆಂದು ಈ ನಮ್ಮ ಜನ ನಂಬಿದಂತಿದೆ!" ವಿಕ್ ಅತ್ಯಂತ ನಿರಾಶೆಯಿಂದ ತನ್ನ ವರದಿಯನ್ನು ಒಪ್ಪಿಸಿದ.

"ನಾವು ನಮ್ಮೂರಲ್ಲಿಯೇ ನೆಲೆಸುವದಾದರೆ, ಕೆಲಸದಾಕೆಯ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಬಹುದು. ಎಂದು ನಂಬಿದ್ದಿಯಲ್ಲ? ನಿನ್ನ ಸಮಸ್ಯೆಗೆ ಏನಾದರೂ ಪರಿಹಾರ ದೊರೆಯುವಂತಿದೆಯೇ?" ಕ್ರಿಶ್ ಪತ್ನಿಗೆ ವಿಚಾರಿಸಿದಾಗ, ಜೋ ಮುಖ, ಜೋಲುಬಿತ್ತು! ತನ್ನ ಅನುಭವವನ್ನು ವಿವರಿಸಲಾರಂಭಿಸಿದಳು. "ಜೈಪುರಕ್ಕೆ ಬಂದಿದ್ದ ತಾರಾಳಿಗೆ, ತುಳಸು ಮೂಲಕ ನಾವು ಊರಿಗೆ ಬಂದ ಸಮಾಚಾರ ತಿಳಿಸಿದೆ. ಪಾಪ! ಭೇಟಿಗಾಗಿ ಓಡೋಡಿ ಬಂದಳು. ತಾನು ಆಡಿಸಿ ಬೆಳೆಸಿದ ವಿಕಾಸನು ಸುಂದರ ತರುಣನಾಗಿ, ವಿವಾಹಿತನಾಗಿ, ಬೆಳೆದು ನಿಂತಿದ್ದು ನೋಡಿ ಹಿರಿಹಿರಿ ಹಿಗ್ಗಿದಳು. ಕಿಮ್‌ಳ ಕಾಲು ಮುಟ್ಟಿ ನಮಸ್ಕರಿಸಿದಳು. ಅವಳ ಕೈಗೆ ಐದುನೂರು ರೂಪಾಯಿ ಹಾಕಿದಾಗ, ಅವಳ ಸಂತಸಕ್ಕೆ ಮೇರೆಯೇ ಇರಲಿಲ್ಲ. ಎರಡು ವರ್ಷಗಳ

ಜೈಪುರವಾಸ, ತನ್ನ ಜೀವನದಲ್ಲೆ ಅತ್ಯಾನಂದದ ದಿನಗಳು! ಎಂದು ಉದ್ಗರಿಸಿದಳು. "ಚಿಕ್ಕ ವಯಸ್ಸಿನಲ್ಲೇ ಮದುವೆಯಾಯಿತು. ಗಂಡ, ಮೇಸ್ತ್ರಿ, ಕೆಲಸದಿಂದ ದಿನಕ್ಕೆ ೬೦ ರೂಪಾಯಿ ಗಳಿಸಿದರೂ ಅದರಲ್ಲಿ ಹದಿನಾರರಿಂದ ಇಪ್ಪತ್ತು ರೂಪಾಯಿ ಅವನ ಕುಡಿತಕ್ಕೇ ಮೀಸಲು! ನಾಲ್ವರು ಹೆಣ್ಣುಮಕ್ಕಳು, ಒಬ್ಬ ಹುಡುಗನನ್ನು ಬೆಳೆಸುವದರಲ್ಲಿ ಹಣ್ಣಾಗಿ ಹೋದೆ. ನಾಲ್ವರಲ್ಲಿ ಒಬ್ಬಳ ಮದುವೆಯಾಗಿದೆ. ಮೂವರಲ್ಲಿ ಒಬ್ಬಳನ್ನು ಖಂಡಿತ ಕರೆದೊಯ್ಯಿರಿ. ನನ್ನಂತೆ, ನಿಮ್ಮ ಮಗಳಾಗಿ ಬೆಳೆಯುತ್ತಾಳೆ" ಎಂದು ಗೆಲುವಿನಿಂದ ಹೇಳಿ ಹಿಂದಿರುಗಿದ್ದಳು. ಆದರೆ ಈ ಪ್ರಸ್ತಾಪ ಮಕ್ಕಳ ಮುಂದೆ ಇಟ್ಟಾಗ ಪ್ರತಿಕ್ರಿಯೆಯೇ ಬೇರೆ! ಯಾವ ಮಕ್ಕಳೂ ಮೆಟ್ರಿಕ್ ಪಾಸಾಗಿಲ್ಲ. ಆದರೆ ಶಾಲೆ ಕಲಿತಿದ್ದೇವೆ, ಎಂದು ಮಹಾ ಜಂಬ. "ತಮ್ಮಂಥ ವಿದ್ಯಾವಂತರು ಮನೆಗೆಲಸ ಮಾಡಿ ಇನ್ನೊಬ್ಬರ ಆಳಾಗಿ ಜೀವನ ನಡೆಸಲೇಕೂಡದಂತೆ. ಮೂರು ದಶಕಗಳ ಹಿಂದೆ ನಾನು ನಿಮ್ಮೊಡನೆ ಹೋಗಿದ್ದಕ್ಕೆ ಈಗ ತರಾಟೆಗೆ ತೆಗೆದುಕೊಳ್ಳಲಾರಂಭಿಸಿದ್ದಾರೆ. ಕಾಲ ತುಂಬ ಬದಲಾಗಿದೆಯಮ್ಮಾ !" ಎಂದು ಕಣ್ಣೀರು ಹಾಕಿದಳು.

"ಈ ನಿನ್ನ ಕಿರು ಆಸೆಯೂ ಈಡೇರಲಿಲ್ಲವೇ? ಅಂದರೆ ನಮ್ಮೂರಿನ ಯಾವ ಆಕರ್ಷಣೆಯೂ ಇಲ್ಲವೆಂದಾಯಿತು!" ಕ್ರಿಶ್ ಮುಕ್ತಾಯದ ಮಾತನಾಡಿದರು.

ಬೆಳಿಗ್ಗೆಯೇ ಅಂಗಡಿಗೆ ಹೋಗಿದ್ದ ತುಳಸು ಅನಿರೀಕ್ಷಿತವಾಗಿ ಕಾರಿನಿಂದ ಬಂದಿಳಿದ. ಏನೋ ಅಚಾತುರ್ಯ ನಡೆದಿರಬೇಕೆನಿಸಿತು. "ಅಣ್ಣ, ಹಿಂದೆ ಊರ ಹುದ್ದರಿಯಾಗಿದ್ದ ಜಾಡಾ ಗೋವಿಂದನು ಅನಿರೀಕ್ಷಿತವಾಗಿ ಯಮಧರ್ಮರಾಯನ ಊರಿಗೆ ತಲುಪಿದ. ಪ್ರಸಿದ್ಧ 'ಮ್ಹಾಲಕರಿ'ಯಲ್ಲವೇ? ಯೌವನದಲ್ಲಿ ಕಲಿತ ಗುಮಟೆ ಪದಗಳನ್ನು ಯಕ್ಷಗಾನದ ಹಾಡುಗಳನ್ನು ಹಾಡುತ್ತ ಹೋಟೇಲುಗಳಲ್ಲಿ ರುಚಿಕಟ್ಟಾದ ತಿಂಡಿಗಳನ್ನು ಮಾಡಿಕೊಡುತ್ತಿದ್ದ. ಇಷ್ಟಾಗಿಯೂ ಜೀವನದಲ್ಲಿ ಅವನು ಪಟ್ಟ ಬವಣೆಗಳು ಕಡುವೈರಿಗೂ ಬೇಡ! ಮನೆತುಂಬ ಮಕ್ಕಳು, ಮೈ ತುಂಬ ಸಾಲ, ಸಾಲದ್ದಕ್ಕೆ ಹೆಂಡತಿ ಬೇಗನೇ ಪರಲೋಕಕ್ಕೆ ತೆರಳಿದಳು. ಬೆಳೆಯುವ ಮಕ್ಕಳು ಅಲ್ಲಿ ಇಲ್ಲಿ ದುಡಿದರೂ ಹೊಟ್ಟೆ ಹೊರೆದುಕೊಳ್ಳಲಾಗದೇ ಕೊನೆಗೆ ಮುಂಬೈ ಮಹಾನಗರವನ್ನು ಸೇರಿದ. ಗೋವಿಂದ ಅಷ್ಟೇನೂ ವಯಸ್ಸಾಗದಿದ್ದರೂ ಅಬಲನಾಗಿ ಒಂಟಿಯಾಗಿ, ಗೋವಿಂದಾ! ಗೋವಿಂದಾ! ಎಂದು ಕಾಲ ಹಾಕಬೇಕಾಯಿತು. ಎರಡು ಹೊತ್ತು ಊಟಕ್ಕೂ ಪರದಾಡಬೇಕಾದ ಪ್ರಸಂಗ ಬಂದಿತು. ಅಂಥಲ್ಲಿ ಕಾಯಿಲೆ ಬಿದ್ದ. ಔಷಧೋಪಚಾರಕ್ಕೆ ಹಣವೆಲ್ಲಿಂದ ಬರಬೇಕು? ನಿನ್ನೆ ರಾತ್ರಿ ಇಹಲೋಕಕ್ಕೆ ಯಾತ್ರೆ ಮುಗಿಸಿದನಂತೆ. ಆದರೂ ಬಡಪಾಯಿಯ ಸಮಸ್ಯೆ ಬಗೆಹರಿಯಲಿಲ್ಲ. ಅಂತಿಮ ಸಂಸ್ಕಾರಕ್ಕೆ ಸರಕಾರ ಕೊಡಮಾಡುವ ಪಡಿತರ ಚೀಟಿಯ ಸೌದೆ ಏನೇನೂ ಸಾಲದು! ಉಳ್ಳವರು ಹೆಚ್ಚಿನ ಹಣ ತೆತ್ತು ಉರುವಲ ತಂದಾರು! ಗೋವಿಂದಗೆಲ್ಲಿಂದ ಸಿಕ್ಕೀತು? ನಾನೇ ಹೋಗಿ ಅವರಿವರಿಂದ ಬೆರಣಿ, ಕಟ್ಟಿಗೆ ಹೆಡೆ ಪೆಂಟೆಗಳನ್ನು ಕೇಳಿ ಪಡೆದು ಮನೆಗೆ ತಲುಪಿಸಿದೆ. ಇದೀಗ ಹಿಂತಿರುಗುತ್ತಿದ್ದೇನೆ" ಊರಿನಲ್ಲಿ ಜಾತಿ ಬಾಂಧವರ, ದಾನಿಗಳ ಸ್ವಭಾವ ಪರಿಚಯ ಹೇಳಿ ತುಳಸು ಸ್ನಾನಕ್ಕೆ ಹೋದ.

"ಹಿರೇಪಳ್ಳಿಯ ಹೊಸ ಸಂಸ್ಕೃತಿ ಅರಿತು ಹೌಹಾರುವಂತೆ ಆಗಿದೆ. ಅಮೇರಿಕೆಯಲ್ಲಿ

ವಿದ್ಯುತ್ ಪೂರೈಕೆ ಎಂದರೆ ಹವೆ-ನೀರುಗಳು ಇದ್ದಂತೆ. ಬೆಂಗಳೂರಿನಲ್ಲಿ ಆಗೀಗ ವಿದ್ಯುತ್ತಿಗೆ ವ್ಯತ್ಯಯ ಬರುವದುಂಟು. ಇಲ್ಲಿ-ಶರಾವತಿಯ ಮಡಿಲಲ್ಲಿ-ವಿದ್ಯುನ್ಮಾತೆಯ ಊರಲ್ಲಿ, ದಿನಕ್ಕೆ ೭ ರಿಂದ ೯ ಗಂಟೆ ಕಾಲ ವಿದ್ಯುತ್ತು ಇರುವುದಿಲ್ಲರಂತೆ. ನಾವೇ ಕಣ್ಣಾರೆ ಕಂಡಿದ್ದೇವಲ್ಲ? ನಿದ್ದೆಗೆಟ್ಟಿದ್ದೇವಲ್ಲ? ಸಾಲದ್ದಕ್ಕೆ ಅಧಿಕೃತ, ಅನಧಿಕೃತ ಕಡಿತಗಳು ಬೇರೆ. ವಿಚಾರಿಸಿದಾಗೆಲ್ಲ ಒಂದೇ ಉತ್ತರ ಸಿದ್ಧ! “ಮೂಲದಲ್ಲಿಯೇ ಹೋಗಿಬಿಟ್ಟಿದೆ ಸರ್!” ಆ ಮೂಲ ಬೆಂಗಳೂರು ಎಂದು ಹೇಳಬೇಕೆ?

ವಿದ್ಯುತ್ ಪೂರೈಕೆ ನಿಂತೊಡನೆ ಬಾವಿಯಿಂದ ನೀರೆತ್ತುವ ಪಂಪ್ ಸ್ತಬ್ಧವಾಗಿ ಬಿಡುತ್ತದೆ. ವಾಶಿಂಗ್ ಮಶೀನ್ ನಡೆಸಲು ನೀರ ಅಭಾವದಿಂದಾಗಿ ಹೊರ ಕೆಲಸದವಳು ಹಾಗೆಯೇ ಹೋಗಿ ಬಿಡುತ್ತಾಳೆ. ಫ್ರಿಜ್, ಕೆಲಸಮಾಡದ್ದರಿಂದ ಅದರಲ್ಲಿಟ್ಟ ಆಹಾರ ಪದಾರ್ಥಗಳೆಲ್ಲ ಕೆಟ್ಟುನಿಂತು, ಅವನ್ನು ಹೊರಗೆಸೆದು ಸ್ವಚ್ಛಗೊಳಿಸುವದೇ ಒಂದು ಮಹಾ ಸಾಧನೆಯಾಗಿ ಬಿಡುತ್ತದೆ! ಮಿಕ್ಸಿ ತಿರುಗಿಸಲು ಸಾಧ್ಯವಿಲ್ಲ. ಬಾವಿಯ ನೀರು ಎತ್ತುವದಾಗಲಿ, ಅರೆಯುವ ಕಲ್ಲಿನ ಮೇಲೆ ರುಬ್ಬುವುದಾಗಲಿ, ರೂಢಿ ತಪ್ಪಿಹೋಗಿ ವರ್ಷಗಳೇ ಉರುಳಿವೆ! ಹೊಟೇಲಿಗೆ ಶರಣು ಹೋಗದೇ ಗತಿಯಿಲ್ಲ.

“... ಈ ಊರಿನಲ್ಲಿ ಸುಖವಾಗಿ ಸಾಯಲು ಸಹ ಅವಕಾಶವಿಲ್ಲ. ಇನ್ನು ಬದುಕುವ ಬಗೆ ಹೇಗೆ? ಬೆಂಗಳೂರಿನಲ್ಲಿ ಬೇರೆ ಏನೂ ಸರಿಯಾಗಿ ಇಲ್ಲದಿದ್ದರೂ ಫೋನುಮಾಡಿದರೆ ಶವ ಎತ್ತಲು ನಗರ ಪಾಲಿಕೆಯ ಅಥವಾ ಇತರ ಸಂಸ್ಥೆಗಳ ಶವವಾಹಕ ವ್ಯಾನ್ ಕಳಿಸುವ ವ್ಯವಸ್ಥೆ ಇದೆ ಎಂದು ಕೇಳಿದ್ದೇನೆ.... ವಿದ್ಯುದಾಗರದಲ್ಲಿ ಕ್ಯೂ ನಿಂತರೂ ಕ್ಷಣಾರ್ಧದಲ್ಲಿ ಕಳೇಬರ ಬೂದಿಮಾಡಿ ಬಿಡುವ ಏರ್ಪಾಡಾಗಿದೆ. ಮಹಾನಗರದ ಆಕರ್ಷಣೆ ಏನೂ ಉಳಿದಿಲ್ಲವಾದರೂ, ಈ ಊರಿನ ಅಧೋಗತಿಯಿಂದ ಜಿಗುಪ್ಸೆಗೊಂಡು, ಇಲ್ಲಿಂದ ಕಾಲು ಕಿತ್ತು ಹೋಗುವದೇ ಕ್ಷೇಮವೆಂದು ಅನಿಸುತ್ತದೆ. ಇಲ್ಲಿ ನೆಲೆ ನಿಲ್ಲುವದಂತೂ ದೂರವೇ ಉಳಿಯಿತು!” ಕ್ರಿಶ್ ಮಾತು ಮುಗಿಸುವ ಪೂರ್ವದಲ್ಲಿಯೇ ಈ ಠರಾವನ್ನು ಕುಟುಂಬದ ಮೂವರೂ ಒಟ್ಟಿಗೇ ಅನುಮೋದಿಸಿದರು.

ತುಳಸು, ಅಣ್ಣ ಹೇಳಿದ್ದನ್ನು ಕೇಳುತ್ತ ನಿಂತಿದ್ದ. “ನಾವು ಅನೇಕ ವರ್ಷಗಳ ಕಾಲ ಬೆನ್ನು ಮುರಿದು ದುಡಿದು ಸಂಪಾದಿಸಿದ ಹಣದ ಉಳಿತಾಯ ಮಾಡಿದೆವು. ಅದನ್ನು ಬಳಸಿ ನಮ್ಮವರೊಂದಿಗೇ ನಮ್ಮೂರಿನಲ್ಲಿಯೇ ನೆಮ್ಮದಿಯಿಂದ ದಿನ ಕಳೆಯಬೇಕೆಂದು ನಿರ್ಧರಿಸಿ ಬಂದಿದ್ದೆವು. ಈ ಊರಿನಲ್ಲಿ ವಸತಿ ವಾಸ ಎರಡೂ ಅಸಾಧ್ಯ! ಎಂದು ಅರಿವಾಗಿದೆ. ಇನ್ನುಳಿದ ರಜಾ ದಿನಗಳನ್ನು ಬೆಂಗಳೂರಿನಲ್ಲಿ ಕಳೆಯೋಣ ಅಲ್ಲವೇ?” ಎಂದು ವಿಕ್ ರಾಗ ಎಳೆದು ಹೆಂಡತಿಯ ಮುಖ ನೋಡಿದ. ಆಕೆ ಸಮ್ಮತಿ ಸೂಚಿಸಿದಳು.

* * *

ಬೀಳ್ಕೊಳ್ಳಲು ಕಾರಿನೊಂದಿಗೆ ತುಳಸು ಬಸ್‌ಸ್ಟ್ಯಾಂಡಿಗೆ ಬಂದಿದ್ದ. ತುಂಬ ಉದಾಸನಾಗಿ

ಕಂಡ "ನಿಮಗಾದರೋ ಹಿಂದಿರುಗಲು ಬೆಂಗಳೂರು, ಬರ್ಮಿಂಗ್‌ಸಹ್ಯಾಂಗಳು ಅನುಕೂಲವಾಗಿವೆ. ಆದರೆ ನನಗೇನಿದೆ? ವ್ಯಾಪಾರ, ಹೆಂಡತಿ, ಮಕ್ಕಳು, ಎಲ್ಲರನ್ನೂ ಕಟ್ಟಿಕೊಂಡು ಹೋಗುವದಾದರೂ ಎಲ್ಲಿಗೆ? ಪಾಲಿಗೆ ಬಂದದ್ದೇ ಪಂಚಾಮೃತವೆಂದು ಈ ನೆಲವನ್ನು ಕಚ್ಚಿಕೊಂಡು ಜೀವಿಸಬೇಕಾಗಿದೆ!" ಎಂದು ಹೇಳಿಯೇ ಬಿಟ್ಟ, ಹೆಚ್ಚಿನ ಹತಾಶೆಯಿಂದ.

* * *

ಮಗ-ಸೊಸೆಯರನ್ನು ಅಮೇರಿಕೆಗೆ ಬೀಳ್ಕೊಳ್ಳಲು ವಿಮಾನ ನಿಲ್ದಾಣಕ್ಕೆ ಹೋದಾಗ, "ಬಿಳಿಯರ ದೇಶದಲ್ಲಿ ನಾವು ಪ್ರಥಮ ದರ್ಜೆಯ ಪ್ರಜೆಗಳು ಆಗಲಾರೆವು ಎಂಬ ಮಾತಿನಲ್ಲಿ ಸತ್ಯಾಂಶ ಇಲ್ಲದೇ ಇಲ್ಲ. ಆದರೆ ಅಲ್ಲಿ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವ ತನಕ ಪ್ರತಿಯೊಂದು ಚಿಕ್ಕ ಅವಶ್ಯಕತೆಗೂ ಪರದಾಡುವ ಪ್ರಸಂಗ ಬರುವದಿಲ್ಲ... ನೀವಿಬ್ಬರೂ ಅಮೇರಿಕೆಗೆ ಬಂದು ನಮ್ಮೊಂದಿಗೆ ಇರುವಂತಾದರೆ ಅದಕ್ಕೂ ಹೆಚ್ಚಿನ ನೆಮ್ಮದಿ ಬೇರೆಯಿಲ್ಲ ಎಂದು, ವಿಕ್, ಪುನಃ ಉದ್ಗರಿಸಿದ. "ನೀವು ಮುಂದಿನಬಾರಿ ಬೆಂಗಳೂರಿಗೆ ಬಂದಾಗ, ಬೆಂಗಳೂರು, ಸಿಂಗಪುರ್ ಮಾದರಿಯಲ್ಲಿ ಬೆಳೆಯುತ್ತದೋ ಅಥವಾ ಕೊಳಚೆ ಪ್ರದೇಶವಾಗಿ ಪರಿವರ್ತನೆ ಹೊಂದುತ್ತದೋ ಎಂದು ಕಾದು ನೋಡೋಣ. ಇಲ್ಲಿಯೂ ಜೀವನ ತೀರ ಅಸಹನೀಯವಾದಾಗ ನಿಮ್ಮ ಆಮಂತ್ರಣ ಇದ್ದೇ ಇದೆಯಲ್ಲ?" ಕ್ರಿಶ್, ಮಗನನ್ನು ಬಿಗಿದಪ್ಪಿದರು.

[illegible]

[illegible]

[illegible]

* * *

[illegible]





ಈ ಭೂಮಂಡಲದಲ್ಲಿ ಜೀವೋತ್ಪತ್ತಿಯಾಗಿ 279,000,000 ವರ್ಷಗಳು ಜಾರಿಕೊಂಡವು... ಇದ
ಹೋಲಿಸಿದಾಗ ಮಾನವನು ಮೊನ್ನೆ ಮೊನ್ನೆ ಅಂದರೆ ಕೇವಲ ಐವತ್ತು ಲಕ್ಷ ವರ್ಷಗಳ ಈಚೆಗೆ ಅವತರಿ
ಬಂದವನು. ಆದರೆ ತನ್ನ ಅಪ್ರತಿಮ ಬುದ್ಧಿಮತ್ತೆಯಿಂದ ಅಸಾಧ್ಯವೆನಿಸಿದ್ದನ್ನೆಲ್ಲ ಸಾಧಿಸಿ ತೋರಿಸಿದ್ದಾ
ಲೇಸರ್, ಸೆಟೆಲ್ಯಾಟ್, ಬಾಹ್ಯಾಕಾಶ ಉಡ್ಡಾಣ! ಜೊತೆಗೆ ತನ್ನ ಅಳಿಗಾಲಕ್ಕೂ ಎಡೆಮಾಡಿಕೊಳ್ಳುತ್ತಿದ್ದಾ
ಎಂಬುದನ್ನು ಮರೆಯುವಂತಿಲ್ಲ... ಜಗತ್ತಿನಲ್ಲಿ ಅತಿ ಅತೃಪ್ತ ಜೀವಿಯೆಂದರೆ ಮಾನವನೊಬ್ಬನೇ ಏನೋ
ಆತನ ಸಕಲ ಸಮಸ್ಯೆಗಳು ತನ್ನ ಹಾಗೂ ತನ್ನ ಪೀಳಿಗೆಯ ಸುಖಲೋಲುಪತೆ ಮತ್ತು ವಿಶ್ವವನ್ನೇ ತ
ಸಂತತಿಯಿಂದ ತುಂಬಿಸುವ ಹೆಬ್ಬಯಕೆಯಿಂದ ಉತ್ಪನ್ನವಾದವುಗಳು... ಅಧಿಕ ಧನದಾಸೆ, ಕಾರ್ಖಾನೆ
ಕಲುಷಿತ ವಾತಾವರಣದಿಂದಾಗಿ ಪರಿಸರ ಮಾಲಿನ್ಯ ವಿಪರೀತ ಹರಡುತ್ತಿದೆ. ಇನ್ನು ಸಂತ
ಸಂಖ್ಯೆಯಂತೂ ದಿಗಿಲು ಪಡಿಸುವಂತೆ ವರ್ಷವರ್ಷ ಹೆಚ್ಚುತ್ತ ಹೋಗಿದೆ... ಪ್ರತಿಯೊಬ್ಬ ವ್ಯಕ್ತಿಯೂ ತ
ಆಹಾರ, ಆಚ್ಛಾದನೆ, ಆಶ್ರಯಗಳಿಗಾಗಿ ನೇರವಾಗಿ ಅಥವಾ ಪರೋಕ್ಷವಾಗಿ ನಿಸರ್ಗಮಾತೆಯ
ಉದಾರವಾಗಿ ಕೊಡಮಾಡುವ ಸಂಪತ್ ಮೂಲಗಳನ್ನೇ ಅವಲಂಬಿಸಬೇಕಾಗುತ್ತದೆ. ನಿಸರ್ಗದ
ಕೊಡುಗೆಗಳಿಂದ ಅತಿ ಹೆಚ್ಚೆಂದರೆ, ಎಂಟೂವರೆ ಶತಕೋಟಿ ಜನರನ್ನಷ್ಟೆ ಸಾಕಿ ಸಲಹಬಹುದಾಗಿದೆ ಎಂ
ಪರಿಣತರು ಲೆಕ್ಕಾಚಾರ ಹಾಕಿದ್ದಾರೆ. ಆದ್ದರಿಂದ ಜನಸಂಖ್ಯೆ ಬೆಳೆದಂತೆ, ಅನೇಕಾನೇಕ ಕೊರತೆಗಳ
ಅನುಭವಿಸದೇ ಬೇರೆ ಮಾರ್ಗವೇ ಇಲ್ಲ.

ಈ ಕೃತಿ ಕೇವಲ ನಡೆದ ಘಟನೆಗಳ ವರದಿಯಲ್ಲ. ಕಾಲ್ಪನಿಕ ಕಥನವೂ ಅಲ್ಲ. ನಡೆಯುತ್ತಲೇ ಇರು
ಜೀವನ–ವ್ಯಾಪಾರಗಳ ಮೌಲ್ಯಮಾಪನದ ಪ್ರಯತ್ನವಾಗಿದೆ. ಮುಂದೆ ನಾವೆಲ್ಲ ಎದುರಿಸಬೇಕಾ
ಬರಲಿರುವ ಪೇಚುಗಳ ಎಚ್ಚರಿಕೆಯ ಮಾತಾಗಿದೆ. ಇವನ್ನು ಗಮನದಲ್ಲಿಟ್ಟುಕೊಂಡು ವ್ಯಕ್ತಿಗಳು, ಸಮಾ
ಸರಕಾರಗಳೆಲ್ಲ ಒಟ್ಟಾಗಿಯೇ ಯೋಚಿಸಿ ನಿವಾರಣೋಪಾಯಗಳನ್ನು ಕೈಕೊಳ್ಳದಿದ್ದರೆ, ತಕ್ಷಣವಲ್ಲದಿದ್ದರ
ಮುಂಬರುವ ತಲೆಮಾರಿನವರು, ಎಡೆಬಿಡದೇ ನಡೆದು ಬಂದಿರುವ ಪರಿಸರನಾಶಕ್ಕಾಗಿ ಪ್ರಾಯ
ಅನುಭವಿಸಲೇಬೇಕಾಗಿ ಬರಬಹುದು.

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 22443996
email: info@vasanthaprakashana.com
website : www.vasanthaprakashana.com

ಪರಿಸರ / **Environment**

ISBN 93-83052-61-9
9 789383 052615 05

ಬೆಲೆ : ₹ 80